# ದತ್ತಿ ಕಾರ್ಯಕ್ರಮಗಳ ವರದಿ ನೋಟ

೧. **ಡಾ. ಜಿನದತ್ತ ದೇಸಾಯಿ ದತ್ತಿ** : ದಾನಿಗಳು, ಶ್ರೀ ವರ್ಧಮಾನ ದೇಸಾಯಿ

ನಿಸರ್ಗದ ಸವಿಯನ್ನು ಸವಿಯದೇ ಯಾರೂ ಕೂಡ ಕವಿಯಾಗಲು ಸಾಧ್ಯವಿಲ್ಲ. ನಿಸರ್ಗವನ್ನು ಆಶ್ರಯಿಸಿ, ಮುಕ್ತ ಮನಸ್ಸಿನಿಂದ, ತೆರೆದ ಕಣ್ಣುಗಳಿಂದ ನೋಡಿ ಆಹ್ಲಾದಿಸಿದವರು ಮಾತ್ರ ಕವಿಯಾಗಲು ಸಾಧ್ಯ. ಮನುಷ್ಯ ನಿಸರ್ಗ ಮತ್ತು ಪರಿಸರದ ಕೂಸು. ನಾಗರಿಕ ಸಮಾಜ ಎಂಬುದು ನಿಸರ್ಗ ಆಶ್ರಯಿಸಿ ಬೆಳೆದು ಬಂದ ಸಮಾಜ. ಸೂರ್ಯನ ಕೆಳಗಿನೆಲ್ಲದನ್ನೂ ನಿಸರ್ಗ ಎಂದು ವ್ಯಾಖ್ಯಾನಿಸಲಾಗಿದೆ. ಗ್ರಾಮೀಣ ಸೊಗಡು, ಜಾನಪದದ ಅನುಭವ ಹಾಗೂ ನಿಸರ್ಗವನ್ನು ಅತ್ಯಂತ ಪ್ರೀತಿಯಿಂದ ನೋಡು ನೋಡುತ್ತಲೇ ಪ್ರಾಯದಲ್ಲಿಯೇ ಕವಿಯಾದವರು ಜಿನತದತ್ತ ದೇಸಾಯಿಯವರು. ಜಿನದತ್ತ ದೇಸಾಯಿಯವರ ಕಾವ್ಯಗಳಲ್ಲಿ ಅವರು ಅಂತರಮುಖಿ, ಸಮಾಜಮುಖಿ ಮತ್ತು ನಿಸರ್ಗಮುಖಿಯಾಗಿರುವ ವ್ಯಕ್ತಿತ್ವವನ್ನು ಹೊಂದಿದ್ದಾರೆ ಎಂಬ ವಾಸನೆ ಕಂಡು ಬರುತ್ತದೆ ಎಂದು ಹಿರಿಯ ವಿದ್ವಾಂಸರು ಬೆಳಗಾವಿಯ ಲಿಂಗರಾಜ ಕಾಲೇಜಿನ ನಿವೃತ್ತ ಪ್ರಾಚಾರ್ಯರೂ ಆದ ಡಾ. ಬಸವರಾಜ ಜಗಜಂಪಿ ಹೇಳಿದರು.

ಆಧುನಿಕತೆಯಲ್ಲಿ ಬಂದಿರುವ ವಿದ್ಯುನ್ಮಾನ ಉಪಕರಣಗಳಿಂದಾಗಿ ಸೆಲ್ಫಿ ಎಂಬ ಪ್ರವೃತ್ತಿ ಹುಟ್ಟಿದ್ದನ್ನು ನಾವು ನೋಡುತ್ತಿದ್ದೇವೆ. ಈ ಸೆಲ್ಫಿ ಯುಗದಲ್ಲಿ ಯುವಜನಾಂಗ ತನ್ನ ಸುತ್ತಮುತ್ತ ಇರುವ ಪರಿಸರ, ಆಗು ಹೋಗುಗಳು ಮತ್ತು ನಿಸರ್ಗದ ಸವಿ ಸವಿಯದನ್ನೇ ಮರೆತು ಬಿಟ್ಟಿದ್ದಾನೆ. ಆದ್ದರಿಂದ ಮನುಷ್ಯ ವ್ಯಕ್ತಿ ಕೇಂದ್ರಿಕೃತ ಆಗಿ ಹೊರಹೊಮ್ಮಿದ್ದಾನೆ. ಪರಿಸರ–ನಿಸರ್ಗ–ಸುತ್ತಮುತ್ತ ಗಮನಿಸದೇ ಸಮಾಜ ಮತ್ತು ನಿಸರ್ಗ ಕೇಂದ್ರಿಕೃತವಾಗಿರಬೇಕಾಗಿದ್ದ ಮನುಷ್ಯ ವ್ಯಕ್ತಿ ಕೇಂದ್ರಿಕೃತವಾಗಿರುವುದು ಒಳ್ಳೆಯ ಬೆಳವಣಿಗೆ ಅಲ್ಲ, ಈ ಹಿನ್ನೆಲೆಯಲ್ಲಿ ಕಾವ್ಯ ಕೃಷಿಗೆ ದೊಡ್ಡ ಏಟು ಬಿದ್ದಿದೆ ಎಂದು ಡಾ. ಜಗಜಂಪಿ ಹೇಳಿದರು. ಅದೇ ರೀತಿ ಮಕ್ಕಳು ನಿಸರ್ಗದಿಂದ ದೂರ ಸರಿಯುತ್ತಿರುವುದನ್ನು ಪಾಲಕರು ತಪ್ಪಿಸಿ, ಮಕ್ಕಳ ನಿಸರ್ಗದ ಸಖ್ಯ ಬೆಳೆಸುವಂತೆ ನೋಡಿಕೊಳ್ಳಬೇಕು ಎಂದು ಕೂಡಾ ಹೇಳಿದರು.

ಡಾ. ಜಗಜಂಪಿ ಮುಂದುವರೆದು ಮಾತನಾಡುತ್ತಾ, ಜಿನದತ್ತ ದೇಸಾಯಿಯವರ ಕಾವ್ಯದಲ್ಲಿ ನಿಸರ್ಗವೇ ಕಾವ್ಯದ ದಿವ್ಯಚೇತನ, ಕಾವ್ಯ ಆನಂದಪರವಶ ಮತ್ತು ಭಾವಪರವಶ ಹಾಗೂ ಸಂಸ್ಕೃತಿ ಹಾಗೂ ಪ್ರಕೃತಿಯ ಸಮ್ಮಿಲನಗಳೇ ಜಿನದತ್ತ ದೇಸಾಯಿ ಅವರ ಕಾವ್ಯ ಸ್ಫೂರ್ತಿ ಎಂದು **'ಜಿನದತ್ತ ದೇಸಾಯಿ ಅವರ ಕಾವ್ಯದಲ್ಲಿ ನಿಸರ್ಗ'** ಎಂಬ ವಿಷಯದ ಮೇಲೆ ಕವಿ ಶ್ರೀ ಜಿನದತ್ತ ದೇಸಾಯಿ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೩–೪–೨೦೧೮** ರಂದು ಕ.ವಿ.ವ. ಸಂಘದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಾ ಹೇಳಿದರು.

ಶ್ರೀ ಜಿನದತ್ತ ದೇಸಾಯಿ ಅವರಿಗೆ ಸಾಹಿತ್ಯ ಲೋಕದಲ್ಲಿ ಯಾವ ಸ್ಥಾನಮಾನ ದೊರಕಬೇಕಾಗಿತ್ತೋ, ಆ ಸ್ಥಾನಮಾನಗಳು ದೊರಕದೇ ಇರುವುದು ವಿಷಾದನೀಯ, ಇನ್ನು ಮುಂದೆ ಜಿನದತ್ತ ದೇಸಾಯಿಯವರಿಗೆ ಧಕ್ಕಬೇಕಾದ ನ್ಯಾಯಯುತ ಸ್ಥಾನಮಾನಗಳನ್ನು ದೊರಕಬೇಕು ಎಂದು ದತ್ತಿ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿಯವರು ಶ್ರೀ ಜಿನದತ್ತ ದೇಸಾಯಿ ಅವರ ೮೬ ನೇ ಜನ್ಮದಿನದ ಅಂಗವಾಗಿ ಸಂಘದ ಪರವಾಗಿ ಸನ್ಮಾನಿಸಿ, ಶ್ರೀ ಜಿನದತ್ತ ದೇಸಾಯಿಯವರು ನ್ಯಾಯಾಂಗ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಅಪರೂಪದ ಶ್ರೇಷ್ಠ ವ್ಯಕ್ತಿ ಎಂದು ಹೇಳಿದರು.

ವೇದಿಕೆ ಮೇಲೆ ದತ್ತಿ ದಾನಿಗಳಾದ ಶ್ರೀ ವರ್ಧಮಾನ ದೇಸಾಯಿ ಮತ್ತು ಕುಸುಮಾ ದೇಸಾಯಿ ಅವರು ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪರಿಚಯಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಏಪ್ರಿಲ್ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಎಸ್.ಬಿ. ಗಾಮನಗಟ್ಟಿ ನಿರೂಪಿಸಿದರು.

೨. **ಡಾ. ದೇವೇಂದ್ರಕುಮಾರ ಹಕಾರಿ ಸಂಸ್ಮರಣ ದತ್ತಿ :** ದಾನಿಗಳು, ಶ್ರೀ ಆರ್. ಡಿ. ಹಕಾರಿ.

ಗುರು ಪರಂಪರೆಯಲ್ಲಿ ಗುರು–ಶಿಷ್ಯರನ್ನು ನೆನೆದುಕೊಂಡು ಡಾ. ದೇವೇಂದ್ರಕುಮಾರ ಹಕಾರಿಯವರು ಹೈದರಾಬಾದ ಕರ್ನಾಟಕದಲ್ಲಿ ಉರ್ದು ಮಾಧ್ಯಮದಲ್ಲಿ ಓದಿ ಕನ್ನಡ ಭಾಷೆಯ ಬೆಳವಣಿಗೆಗೆ ಅಪಾರವಾದ ಸಾಹಿತ್ಯ ರಚಿಸಿ ಜಾನಪದ ಲೋಕದ ದಿಗ್ಗಜರಾಗಿ ಮೆರೆದವರು. ಕರ್ನಾಟಕದ ವಿಶ್ವವಿದ್ಯಾಲಯದಲ್ಲಿ ಅಪಾರ ಶಿಷ್ಯ ಬಳಗವನ್ನು ಬೆಳೆಸಿದವರು ಎಂದು ಹುಬ್ಬಳ್ಳಿಯ ಜಾನಪದ ತಜ್ಞ ಡಾ. ರಾಮು ಮೂಲಗಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ. ದೇವೇಂದ್ರಕುಮಾರ ಹಕಾರಿ ದತ್ತಿ ಉಪನ್ಯಾಸ ಕಾರ್ಯಕ್ರಮ ಅಂಗವಾಗಿ ದಿನಾಂಕ **೭–೪–೨೦೧೮** ರಂದು ಆಯೋಜಿಸಿದ್ದ **'ಆಧುನಿಕತೆಯಲ್ಲಿ ಜಾನಪದ ಉಳಿವು'** ವಿಷಯದ ಮೇಲೆ ಮಾತನಾಡುತ್ತಿದ್ದರು.

"ಯಾವುದು ಜನಪದ, ಯಾವುದು ಜನಪ್ರಿಯ, ಯಾವುದು ಕೋಟಾ ಜಾನಪದ ಎಂಬುದು ಇಂದು ಗೊತ್ತಾಗುತ್ತಿಲ್ಲ. ಕೋಟಾ ಜಾನಪದಗಳನ್ನೇ ಜನಪದ ಅಂದುಕೊಂಡು ಮೆರೆಯುತ್ತಿರುವುದನ್ನು ಕಂಡು ವ್ಯಥೆಯಾಗಿದೆ.

ಈಗಿನ ಜನಪದ ಸಂಸ್ಕೃತಿಯನ್ನು ಹಾಳು ಮಾಡುತ್ತಿದೆ. ತಲೆ ಕೆಡಿಸಿ ನಮ್ಮ ಮನೆಯಿಂದ ಪರಾರಿಯಾಗುವಂಥಹ ಹಾಡು, ಸಾಹಿತ್ಯಗಳು ನಮ್ಮ ಪೀಳಿಗೆಗೆ ಮಾರಕವಾಗಿವೆ. ಕೋಟಾ ಜಾನಪದ ಹಾಡುಗಳು ಜನಪದ ಹಾಡುಗಳೇ ಅಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ನಿಜವಾದ ಗ್ರಾಮೀಣ ಸೊಗಡಿನ ನಮ್ಮ ತಾಯಂದಿರ, ಸಹೋದರರ ಗೀಗೀ ಪದ, ಸೋಬಾನಪದ, ಲಾವಣಿಪದ, ಹಂತಿ ಪದ ಹಲವಾರು ರೀತಿಯಲ್ಲಿ ನಮ್ಮ ನಿಜ ಸಂಸ್ಕೃತಿಯನ್ನು ಜನಪದದ ಹಾಡುಗಳಲ್ಲಿ ಮೆರೆದಿದ್ದಾರೆ. ಇತ್ತಿಚಿನ ಆಧುನಿಕತೆಯಲ್ಲಿ ಟಿ.ವಿ. ಸಿನೆಮಾ ಮಾಧ್ಯಮಗಳಿಂದ ಮೂಲ ಜನಪದಕ್ಕೆ ಧಕ್ಕೆಯಾಗುತ್ತಿದ್ದು, ಅದನ್ನು ಸಂರಕ್ಷಿಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳುತ್ತಾ, ತಮ್ಮದೇ ಜಾನಪದ ಸೊಗಡಿನ ಆಶು ಕವಿಗಳಾಗಿ ಸಂಗೀತ ಸುಧೆ ಹರಿಸಿ ಸಭಿಕರನ್ನು ರಂಜಿಸಿದರು. ಬೇಂದ್ರೆ ಕಾವ್ಯಗಳಲ್ಲಿಯ ಗೀತೆ, ಡಾ. ಸೋಮಶೇಖರ ಇಮ್ರಾಪೂರ, ಹಕಾರಿ, ಬೆಟಗೇರಿ ಕೃಷ್ಣ ಶರ್ಮ ಅವರನ್ನು ನೆನೆದು ಅವರು ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಧಾರವಾಡ ಕ.ವಿ.ವಿ. ಪ್ರಸಾರಾಂಗ ನಿರ್ದೇಶಕರಾದ ಡಾ. ಹರಿಲಾಲ ಪವಾರರು ಸಹ ಡಾ. ದೇವೇಂದ್ರಕುಮಾರ ಹಕಾರಿ ಅವರ ಶಿಷ್ಯಂದಿರಾಗಿ ಅವರ ನೆನಪಿನಲ್ಲಿ ಪುಸ್ತಕ ಪ್ರಕಟಣೆ ಮಾಡಿದ್ದನ್ನು ವಿವರಿಸುತ್ತಾ ಜಾನಪದ ಲೋಕದ ಶಿಷ್ಯರನ್ನು ಸಂಘಟಿಸಿ ಬೆಳೆಸುವಲ್ಲಿ ಅವರ ಪಾತ್ರ ಹಿರಿದಾದದ್ದು ಎಂದು ಸ್ಮರಿಸಿದರು.

ವೇದಿಕೆ ದತ್ತಿ ದಾನಿ ರವಿಶಂಕರ ಡಿ. ಹಕಾರಿ ಉಪಸ್ಥಿತರಿದ್ದರು.

ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ಸ್ವಾಗತಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಏಪ್ರಿಲ್ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕ ಶಾಂತೇಶ ಗಾಮನಗಟ್ಟಿ ನಿರೂಪಿಸಿದರು.

೩. **ಆದ್ಯ ವಚನಕಾರ ದೇವರ ದಾಸೀಮಯ್ಯ ದತ್ತಿ :** ದಾನಿಗಳು, ಶ್ರೀ ಪ್ರಸನ್ನ ರಾಮಚಂದ್ರ ಗೆದ್ದೆಣ್ಣವರ

ಆದ್ಯ ವಚನಕಾರರೆಂದು ನಾವು ದೇವರ ದಾಸಿಮಯ್ಯ ಅವರನ್ನು ನೆನಪಿಸಿಕೊಳ್ಳುತ್ತೇವೆ. ವಚನಗಳನ್ನು ಹೇಳುವಾಗ, ಜಯಂತಿಗಳ ಆಚರಣೆಯಲ್ಲಿ ಭೇದ-ಭಾವ ಮಾಡಬಾರದು. ಶಿವ ದಾಸಿಮಯ್ಯ, ಶಂಕರ ದಾಸಿಮಯ್ಯ, ದೇವರ ದಾಸಿಮಯ್ಯ ಇವರು ಸಮಕಾಲೀನರು. ಶರಣರು ತಮ್ಮ ಒಂದೊಂದು ವೃತ್ತಿ ಕಾಯಕದಲ್ಲಿ ತೊಡಗಿಸಿಕೊಂಡು, ಶರಣ ತತ್ವದಲ್ಲಿ ಅನುಸರಿಸಿಕೊಂಡು ಬಂದ ಇವರನ್ನು ಅವರವರ ಸಮಾಜಕ್ಕೆ ಸೀಮಿತಗೊಳಿಸುತ್ತಿರುವುದು ವಿಷಾದನೀಯ ಎಂದು ಹುಬ್ಬಳ್ಳಿಯ ಪ್ರಸಿದ್ಧ ಉದ್ದಿಮೆದಾರರಾದ ಮಹಾದೇವ ಕರಮರಿ ಅವರು ಅಸ್ಪೃಶ್ಯತೆ, ಸಾಮಾಜಿಕ ವ್ಯವಸ್ಥೆ, ದೇವರ ಕುರಿತು ವಚನ ಸಾಹಿತ್ಯದ ಬಗ್ಗೆ ವಿವರಿಸುತ್ತಾ, ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೮-೪-೨೦೧೮** ರಂದು ಆಯೋಜಿಸಿದ್ದ **'ದೇವರ ದಾಸಿಮಯ್ಯ ಜಯಂತ್ಯೋತ್ಸವ'** ದತ್ತಿ ಕಾರ್ಯಕ್ರಮದಲ್ಲಿ 'ಮಹಾತ್ಮಾ ಕಬೀರದಾಸರು' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಾತ್ಮಾ ಕಬೀರದಾಸರು ಎಂಬ ವಿಷಯದ ಮೇಲೆ ಪ್ರೊ. ಶೈಲಜಾ ಅಗಡಿ ಅವರು ಮಾತನಾಡುತ್ತಾ, 'ಸಂತ ಕಬೀರದಾಸರ ಜೀವನ ವೃತ್ತಾಂತ ತಿಳಿಸುತ್ತಾ, ಇವರೊಬ್ಬ ಜಾತ್ಯಾತೀತ ಮನೋಭಾವದ ಧರ್ಮಸುಧಾರಕರಾಗಿ ಜಾತಿ ಭೇದವ ಮರೆತು 'ರಾಮ ನಾಮ'ದ ನಾಥ ಪಂಥದ ಆರಾಧಕರಾಗಿದ್ದರೂ ಕೊನೆಗೆ ಇಸ್ಲಾಂ ಧರ್ಮ ಸ್ವೀಕರಿಸಿದರು. ಹಿಂದೂ ಧರ್ಮದಲ್ಲಿ ಅಚಲ ವಿಶ್ವಾಸವಿಟ್ಟು 'ರಾಮ ಬೇರೆ ಅಲ್ಲ. ರಹೀಮ ಬೇರೆ ಅಲ್ಲ' ಅನ್ನುವ ಬೀಜಮಂತ್ರ ಪಠಿಸಿ, ದೇವರು ಒಬ್ಬನೆ ಅನ್ನುವುದನ್ನು ಪ್ರತಿಪಾದಿಸಿದರು. ಸಮಾಜದಲ್ಲಿಯ ಜಾತಿ ವ್ಯವಸ್ಥೆಯ ಸುಧಾರಣೆ, ಜೀವನದ ಅನುಭವಗಳಾಧಾರದಲ್ಲಿ ತಮ್ಮ ಕವನ, ಗ್ರಂಥ, ಕೀರ್ತನೆ, ದೋಹೆಗಳಲ್ಲಿ ಉಲ್ಲೇಖಿಸಿದ್ದಾರೆ. ದೇವರ ದಾಸಿಮಯ್ಯನವರು ನೇಯ್ಗೆ ಕಾರ್ಯ ಮಾಡುತ್ತಾ ಆದ್ಯ ವಚನಕಾರರಾಗಿ ಪ್ರಸಿದ್ಧಿಯಾದರೆ, ಅವರಂತೆ ಮಹಾತ್ಮಾ ಕಬೀರದಾಸರು ನೂಲು ಬಟ್ಟೆ ತಯಾರಿಸುವ ಕಾಯಕದಲ್ಲಿ ನಿರತರಾಗಿ ಕಾಯಕವೇ ಕೈಲಾಸವೆನ್ನುವಂತೆ ತಮ್ಮ ಹಠಯೋಗ ಮತ್ತು ಕೀರ್ತನೆ, ಭಜನ್‌ಗಳ ಮೂಲಕ ಜನಾನುರಾಗಿಯಾಗಿದ್ದರು. ಹಿಂದಿ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. ಉತ್ತರ ಭಾರತದಲ್ಲಿ ಸೂಫಿ ಸಂತರ ಪರಂಪರೆಯಲ್ಲಿ ಬಡವ, ದಲಿತ, ಅಸ್ಪೃಶ್ಯ ಜನಾಂಗಗಳನ್ನು ಸನ್ಮಾರ್ಗಕ್ಕೆ ಕೊಂಡೊಯ್ಯುವುದರಲ್ಲಿ ಇವರು ಕೂಡ ಒಬ್ಬರು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಾಗರಾಜ ಹಳ್ಳಿ, ಕನ್ನಡ ಸಾಹಿತ್ಯ ಲೋಕಕ್ಕೆ ವಚನಗಳೇ ಧರ್ಮ ಗ್ರಂಥಗಳು ಎಂದು ಶರಣರ ಪ್ರತಿಪಾದನೆಯಾಗಿದ್ದು, ಇತ್ತಿಚೆಗೆ ೯೯ ಜಾತಿಗಳನ್ನು ಲಿಂಗಾಯತ ಧರ್ಮಕ್ಕೆ ಸೇರಿಸಿಕೊಂಡಿದ್ದು ವಿಶೇಷ. ಯಾವುದೇ ವಚನಕಾರರನ್ನು ಕಡೆಗಣಿಸಬಾರದು. ದೇವರ ದಾಸಿಮಯ್ಯನವರ ವಚನ, 'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸೂಳಿದು ಬೀಸುವ ಗಾಳಿ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳೆನೆನೆಂಬೆ ರಾಮನಾಥ' ಎಂಬ ವಚನದ ಸಾರವನ್ನು ಎಲ್ಲರು ಅರ್ಥೈಸಿಕೊಳ್ಳಬೇಕು. ಅದರಂತೆ ದಾಸಿಮಯ್ಯನವರ ಕಾಲ ತಿಳಿದು ಅವರ ಅನುಯಾಯಿಗಳು, ಸಮಾಜ ಚಿಂತಕರು ಅವರ ವಚನ ಸಾಹಿತ್ಯದ ಬಗ್ಗೆ ಮಹತ್ವದ ಬೆಳಕು ಚೆಲ್ಲವಂತಾಗಬೇಕು. ಸರಕಾರವು ವಿವಿಧ ವಚನಕಾರರ ಜಯಂತ್ಯೋತ್ಸವ ಆಚರಿಸುವುದನ್ನು ಪ್ರಶ್ನಿಸಿ, ಶರಣರೆಂದರೆ ಜಾತಿಯನ್ನು ಮೀರಿದವರು. ೧೨ ನೇ ಶತಮಾನದಲ್ಲಿಯ ಜಾತಿ ವ್ಯವಸ್ಥೆ ಮತ್ತೆ ಮರುಕಳಿಸಿ ಮುಂದಿನ ಪೀಳಿಗೆಗೆ ಜಾತಿಯ ವಿಷಬೀಜ ಬಿತ್ತುವಂತಾಗಬಾರದು. ಸಾರ್ವಜನಿಕ ಹಣ ವ್ಯರ್ಥವಾಗದೆ ಸರ್ವಧರ್ಮದ ಶರಣರ ಜಯಂತಿ

ಆಚರಣೆ ಮಾಡಿದಲ್ಲಿ ಅದಕ್ಕೊಂದು ಅರ್ಥ ಬರುತ್ತದೆ ಎಂದ ಅವರು, ಸೂಫಿ ಸಂತರು, ಶರಣರು ಸಮಾಜದ ಒಳಿತಿಗಾಗಿ, ಶಾಂತಿ ಸುವ್ಯವಸ್ಥೆಯ ಬದುಕಿಗಾಗಿ ಬಾಳಿದ ಅಂಥವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು. ಎಂದು ಅಭಿಪ್ರಾಯಪಟ್ಟರು. ಸಂಘದಿಂದ ಆಯೋಜಿಸಲ್ಪಡುವ ಕಾರ್ಯಕ್ರಮಗಳಲ್ಲಿ ಸಂತರ, ವಚನ ಸಾಹಿತ್ಯ, ಗಾಯನ, ಸ್ಪರ್ಧೆಗಳನ್ನು ಶಾಲೆ, ಕಾಲೇಜು, ಜನ ಸಮುದಾಯಗಳಲ್ಲಿ ಆಯೋಜಿಸಿ ಬೆಳಕು ಚೆಲ್ಲಲು ಸೂಚಿಸಿದರು.

ಪ್ರಾರಂಭದಲ್ಲಿ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಸಮರ್ಪಿಸಿ, ಗೌರವ ಸಲ್ಲಿಸಲಾಯಿತು. ವೇದಿಕೆ ಮೇಲೆ ದತ್ತಿದಾನಿ ಪ್ರಸನ್ನ ರಾಮಚಂದ್ರ ಗೆದ್ದಣ್ಣವರ ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೪. **ಶ್ರೀಮತಿ ಕುಸುಮ ವಿಠ್ಠಲರಾವ ದೇಶಪಾಂಡೆ ಸ್ಮರಣಾರ್ಥ ದತ್ತಿ :** ದಾನಿಗಳು, ಡಾ. ರಾಜನ್ ದೇಶಪಾಂಡೆ.

ಪ್ರಾಚೀನ ರಾಮಾಯಣ, ಮಹಾಭಾರತ ಕಾಲದಿಂದಲೂ ತಾಯಿಗೆ ವಿಶೇಷವಾದ ಸ್ಥಾನಮಾನ, ಗೌರವ ಇದೆ. ಸ್ತ್ರೀ ಮತ್ತು ಪುರುಷ ಪರಂಪರೆಯಲ್ಲಿ ಸಾಮಾಜಿಕವಾಗಿ ಒಟ್ಟಾಗಿ ಗೌರವಿಸುವದು ಅನಿವಾರ್ಯ. ಅದಾಗ್ಯೂ ತಾಯಿ ಸ್ಥಾನ ಅಮೂಲ್ಯವಾದದ್ದು. ತಾಯಿ ಎಂಬುದೇ ನಮ್ಮ ಸಂಸ್ಕೃತಿಯ ಪ್ರತೀಕ. ತಾಯಿ ಗರ್ಭದಿಂದಲೇ ಮಗುವಿನ ಅವಿನಾಭಾವ ಸಂಬಂಧ ಹೊಂದಿರುತ್ತದೆ ಎಂದು ಇಲ್ಲಿಯ ವಿದ್ಯಾರಣ್ಯ ಪ.ಪೂ. ಕಾಲೇಜಿನ ಪ್ರಾಂಶುಪಾಲರಾದ ಡಾ. ಶರಣಮ್ಮ ಗೋರೆಬಾಳ ಹೇಳಿದರು ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೫-೪-೨೦೧೮** ರಂದು ಶ್ರೀಮತಿ ಕುಸುಮ ವಿಠಲರಾವ್ ದೇಶಪಾಂಡೆ ಸ್ಮರಣಾರ್ಥ ದತ್ತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ **'ತಾಯಿ'** ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ತಾಯಿ ತ್ಯಾಗಮಯಿ, ಕರುಣಾಮಯಿ, ವಾತ್ಸಲ್ಯಮಯಿ. ತನ್ನ ಎಲ್ಲ ಆಶೋತ್ತರಗಳನ್ನು ಬದಿಗಿಟ್ಟು ಮಗುವಿನ ಲಾಲನೆ, ಪಾಲನೆ ಮಾಡುತ್ತಾ ಮೌಲ್ಯಗಳನ್ನು ಮಗುವಿನಲ್ಲಿ ಬೆಳೆಸುವವಳೆ ತಾಯಿ. ನಮ್ಮ ಜನಪದದಲ್ಲಿ ತಾಯಿ ಇದ್ದರ ತವರು ಹೆಚ್ಚು, ತಂದೆ ಇದ್ದರ ಬಳಗ ಹೆಚ್ಚು, ತಂದೆ ನೆನೆದರ ತಂಗಳು ಬಿಸಿಯಾತು, ಗಂಗಾದೇವಿ ನೆನಸಿದರ ಮಾಸಿದ ತಲೆ ಹಸಿಯಾತು ಎಂದು ತಾಯಿಯ ಮಮತೆ, ಬಾಂಧವ್ಯದ ಕುರಿತು ಅನೇಕ ವಿದ್ವಾಂಸರ ಬರವಣಿಗೆಯನ್ನು ಉಲ್ಲೇಖಿಸಿದರು.

ಮಹಾಪುರಷರಾದ ವಿವೇಕಾನಂದ, ಶಿವಾಜಿ, ಥಾಮಸ್ ಅಲ್ವಾ ಎಡಿಸನ್ ಮುಂತಾದವರ ಜೀವನ ಚರಿತ್ರೆ ನೋಡಿದಾಗ ತಾಯಿಯ ಪ್ರೇರಣೆಯೇ ಅವರ ಶ್ರೇಷ್ಠ ವ್ಯಕ್ತಿತ್ವಕ್ಕೆ ಕಾರಣವಾಗಿದ್ದನ್ನು ಕಾಣುತ್ತೇವೆ. ಕೆಟ್ಟ ಮಕ್ಕಳು ಹುಟ್ಟಬಹುದು, ಆದರೆ ಜಗತ್ತಿನಲ್ಲಿ ಕೆಟ್ಟ ತಾಯಿ ಹುಟ್ಟುವುದಿಲ್ಲ. ಅವಳನ್ನು ಮಾತೃದೇವೋಭವ ಎಂದು ಪೂಜಿಸುತ್ತೇವೆ. ಮಕ್ಕಳಿಗಾಗಿ ಅಂಗಾಂಗ ದಾನ ಮಾಡುವ ತಾಯಂದಿರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀಯರನ್ನು ಶೋಷಣೆ ಮಾಡುವ ಪರಿಪಾಠ, ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸುವ, ಮೋಸದಿಂದ ಅವರ ನಿವೃತ್ತಿವೇತನ, ಆಸ್ತಿ ಲಪಟಾಯಿಸುವ ಮಕ್ಕಳನ್ನು ಕಾಣುತ್ತಿದ್ದೇವೆಂದು ತಮ್ಮ ವಿಷಾದ ವ್ಯಕ್ತಪಡಿಸಿದರು.

ತಾಯಿಗೆ ತಾಯಿಯೆ ಸಾಟಿ. ತಾಯಿ ಕಾಯಾ-ವಾಚಾ-ಮನಸಾ ಮಕ್ಕಳ, ಕುಟುಂಬದ ಶ್ರೇಯೋಭಿವೃದ್ಧಿಗೆ ಹಗಲಿರುಳು ಜೀವ ಸವೆಸುವ ತಾಯಿ ಕ್ಷಮಯಾಧರಿತ್ರಿಯಾಗಿದ್ದಾಳೆ ಎಂದ ಡಾ. ಶರಣಮ್ಮ ಗೋರೆಬಾಳ ಅವರು ತಮ್ಮ ತಾಯಿ ನೆನೆದು ತಮ್ಮ ಕವಿತೆ ಓದಿ 'ಅವ್ವ ನೀ ಪಾಠ ಕಲಿತಿಲ್ಲ, ಪದವಿ ಪಡೆದಿಲ್ಲ, ಅದೆಂಥ ಜ್ಞಾನ ನಿನ್ನಲ್ಲಿ, ನೀ ಕಲಿಸಿದ ಅನುಭವ ಇಂದು ಪಥ್ಯವಾಗಿದೆ ನನಗೆ, ನನ್ನ ಕಷ್ಟವೆಲ್ಲ ದೂರವಾಗುವದು ಅವ್ವ ಎಂದಾಗ.... ಎಂದು ತಾಯಿಯನ್ನು ಹೃದಯ ತುಂಬಿ ನೆನೆದು ಭಾವುಕರಾದರು.

ದತ್ತಿ ಅಂಗವಾಗಿ ಶ್ರೀಮತಿ ಗಂಗಮ್ಮ ಶಿ. ರಾಮನಗೌಡರ, ಟ್ರಸ್ಟಿಗಳು, ರಾಮನಗೌಡರ ಆಸ್ಪತ್ರೆ, ಧಾರವಾಡ ಅವರಿಗೆ ಶ್ರೇಷ್ಠ ತಾಯಿ ಗೌರವ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಮಾತನಾಡಿ, ಶ್ರೇಷ್ಠ ತಾಯಿ ಗೌರವ ಪ್ರಶಸ್ತಿ ಪಡೆದ ಬಹುಮುಖಿ ವ್ಯಕ್ತಿತ್ವದ ಶ್ರೀಮತಿ ಗಂಗಮ್ಮ ಶಿ. ರಾಮನಗೌಡರ ಕುಟುಂಬದವರನ್ನು ನೆನೆಯುತ್ತ, ನೂಲಿನಂತೆ ದಾರ, ತಾಯಿಯಂತೆ ಮಕ್ಕಳು ಎಂಬ ಗಾದೆ ಮಾತಿನಂತೆ, ತಾಯಿ ದೇವರೆಂದು ವೇದವೂ ಹೇಳುತ್ತದೆ. ತಾಯಿ ಒಬ್ಬಳಿದ್ದರೆ ಸಾಕು, ನೂರು ದೇವರ ನೂಕಾಚೆ ಎಂಬುದನ್ನು ಸ್ವಾರಸ್ಯವಾಗಿ ತಿಳಿಸುತ್ತಾ ಸಮಾಜದಲ್ಲಿ ಆದರ್ಶಮಯವಾದ ಶ್ರೇಷ್ಠತೆ ತಾಯಿಗೆ ಬಿಟ್ಟರೆ ಮತ್ಯಾರಿಗೂ ಸ್ಥಾನ ಇಲ್ಲ ಎಂದ ಅವರು, ದೇಶಪಾಂಡೆ ಹಾಗೂ ರಾಮನಗೌಡರ ಕುಟುಂಬ ಸದಸ್ಯರಲ್ಲಿ ವೈದ್ಯರೇ ಆಗಿ ವೈದ್ಯೋ ನಾರಾಯಣ ಹರಿಯಾಗಿ ಸಮಾಜ ಸೇವೆ ಮಾಡುತ್ತಿರುವುದನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ದಿ. ಶ್ರೀಮತಿ ಕುಸುಮ ವಿಠಲರಾವ್ ದೇಶಪಾಂಡೆ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ದತ್ತಿದಾನಿ ಡಾ. ರಾಜನ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿ, ಕುಸುಮಾತಾಯಿ ವಿಠಲರಾವ ದೇಶಪಾಂಡೆಯವರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮನ್ನು ಚಾಲನೆ ಮಾಡುತ್ತಾ, ತಮ್ಮ ಕುಟುಂಬ ಪರಿವಾರದವರನ್ನು, ಬಾಲ್ಯದ ಸ್ನೇಹಿತರನ್ನು, ಓದನ್ನು ನೆನೆದು, ತಾಯಿ ಮತ್ತು ಶ್ರೇಷ್ಠ ತಾಯಿ ವ್ಯತ್ಯಾಸವನ್ನು ತಿಳಿಸುತ್ತಾ, ಶ್ರೇಷ್ಠ ತಾಯಿ ಮಕ್ಕಳಲ್ಲಿ ಉದಾತ್ತ ವಿಚಾರಗಳನ್ನು, ಒಳ್ಳೆಯ ಮನುಷ್ಯನಾಗಿ ಬೆಳೆಯುವ, ಕಲಿಯುವ, ಜನಸೇವೆ ಮಾಡುವ,

ಜೀವನದಲ್ಲಿ ಸವಾಲುಗಳನ್ನು ಎದುರಿಸುವ ಕೌಶಲ್ಯಗಳನ್ನು ತಿಳಿಸಿಕೊಡುವವಳೇ ಶ್ರೇಷ್ಠ ತಾಯಿ ಎಂದು ಅಭಿಪ್ರಾಯಪಟ್ಟ ಅವರು ತಮ್ಮ ತಾಯಿಯ ಸ್ಮರಣೆಗಾಗಿ ಶ್ರೇಷ್ಠ ತಾಯಂದಿರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಮಾಡುತ್ತಿದ್ದೇವೆಂದು ಹೇಳಿದರು.

ವಂದಿಸಿದರು. ಕಾರ್ಯಕ್ರಮದಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ವೇದಿಕೆಯಲ್ಲಿ ಇದ್ದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಸ್ವಾಗತಿಸಿದರು. ಎಸ್. ಬಿ. ಗಾಮನಗಟ್ಟಿ ನಿರೂಪಿಸಿ, ವಂದಿಸಿದರು.

೫. **ಡಾ. ಪಂಡಿತ ಅವಳೀಕರ ದತ್ತಿ ಅಂಗವಾಗಿ ಆನಂದ ಕಂದ (ಡಾ. ಬೆಟಗೇರಿ ಕೃಷ್ಣಶರ್ಮ) ಪ್ರಶಸ್ತಿ.**

ದೇವರ ದಾಸೀಮಯ್ಯನವರ ಕನ್ನಡ ವಚನಗಳನ್ನು ಮರಾಠಿ ಭಾಷೆಗೆ ಅನುವಾದ ಮಾಡಿ, ಕನ್ನಡ ಹಾಗೂ ಮರಾಠಿ ಭಾಷಾ ಬಾಂಧವ್ಯದ ಕೊಂಡಿಯಾಗಿ ಕಾರ್ಯಮಾಡಿದ ಕಲಬುರ್ಗಿಯ ಪ್ರಾ. ವಿಜಯಕುಮಾರ ಚೌದರಿ ಅವರ ಕಾರ್ಯ ಶ್ಲ್ಯಾಘನೀಯ ಎಂದು ಸಾಹಿತಿ ಪ್ರೊ. ಹರ್ಷ ಡಂಬಳ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕನ್ನಡ ಮತ್ತು ಮರಾಠಿ ಭಾಷಾ ಬಾಂಧವ್ಯ ಬಲಪಡಿಸಲೆಂದು ಪ್ರೊ. ಪಂಡಿತ ಡಿ. ಎನ್. ಅವಳೀಕರ ಅವರು ಕೊಡಮಾಡಿದ ದತ್ತಿ ಅಂಗವಾಗಿ ದಿನಾಂಕ **೧೬-೪-೨೦೧೯** ರಂದು ಆಯೋಜಿಸಿದ್ದ **'ಆನಂದಕಂದ-೨೦೧೮' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ** ಕಲಬುರ್ಗಿಯ ಸಾಹಿತಿ ಪ್ರಾ ವಿಜಯಕುಮಾರ ಚೌಧರಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಪ್ರೊ. ಡಂಬಳ ಅವರು, ಕವಿಭೂಷಣ ಡಾ. ಬೆಟಗೇರಿ ಕೃಷ್ಣಶರ್ಮ ಅವರು ಕಾವ್ಯಾಭಿವ್ಯಕ್ತಿಯ ಹೊಸ ಮಾರ್ಗಗಳನ್ನು ಹುಡುಕುವಲ್ಲಿ ಕ್ರಿಯಾಶೀಲವಾದ ಪ್ರಯೋಗಗಳನ್ನು ನಡೆಸಿದರು. ಜಾನಪದ ಸಂಸ್ಕೃತಿಯ ಅತ್ಯಂತ ನಿಕಟವಾದ ಸಂಸ್ಕಾರವಿದ್ದ ಬೆಟಗೇರಿ ಅವರು, ಕಾವ್ಯ ನಿರ್ಮಿತಿಯಲ್ಲಿ ಜಾನಪದ ಸಂಸ್ಕೃತಿಯ ಪ್ರೇರಣೆಗಳ ಬಗ್ಗೆ ಸೃಜನಶೀಲ ಪ್ರಯೋಗ ನಡೆಸಿದ್ದರು. ಈ ದಿಕ್ಕಿನಲ್ಲಿ ಇವರ 'ನಲ್ವಾಡುಗಳ' ಕೃತಿಯಲ್ಲಿಯ ಕವನಗಳು ಮಹತ್ವ ಪಡೆದಿವೆ. ಇವರ 'ಮಾತನಾಡುವ ಕಲ್ಲು' ಸಂಕಲನದ ಕಥೆಗಳು ಕನ್ನಡದಲ್ಲಿ ಮಾತ್ರ ಕಂಡು ಬರುವಂತಹ ವಿಶಿಷ್ಠ ಕಥೆಗಳಾಗಿವೆ. ಆನಂದಕಂದರು ಆದರ್ಶ ಪತ್ರಕರ್ತರಾಗಿದ್ದರು. ಪತ್ರಿಕೋದ್ಯಮದ ಮೂಲಕ ಉತ್ತರ ಕರ್ನಾಟಕದಲ್ಲಿ ಸಾಂಸ್ಕೃತಿಕ ಪುನರುತ್ಥಾನದ ಕಾರ್ಯ ಕೈಗೊಂಡವರಾಗಿದ್ದರು ಎಂದರು.

೧೯೫೦ ರ ಸಂಕ್ರಮಣ ಕಾಲದಲ್ಲಿ ಧಾರವಾಡಲ್ಲಿ ಆಕಾಶವಾಣಿಗೆ ನಾಟಕ, ಲೇಖನ, ಗದ್ಯ, ಪದ್ಯ, ಭಾಷಣಗಳು ಇತ್ಯಾದಿಗಳನ್ನು ನೀಡುತ್ತಾ ಭದ್ರ ನೆಲೆ ಒದಗಿಸಿಕೊಡುವಲ್ಲಿ ಶ್ರಮಿಸಿದ ಪ್ರಮುಖರಲ್ಲಿ ಇವರೂ ಒಬ್ಬರಾಗಿದ್ದರು. 'ಮಾತೃಭೂಮಿ' ಮತ್ತು 'ಜಯಂತಿ ಪತ್ರಿಕೆ'ಗಳನ್ನು ಹುಟ್ಟುಹಾಕಿದರು. ಕಷ್ಟದ ಜೀವನ ನಿರ್ವಹಣೆಯಲ್ಲಿಯೂ ಪತ್ರಿಕೆಗಳ ಪ್ರಕಟಣೆ ಕೈಬಿಡಲಿಲ್ಲ. ಆದರೆ ಇಂದಿನ ಪತ್ರಿಕಾ ಮಾಧ್ಯಮ ಶ್ರೀಮಂತವಾಗಿದೆ ಈ ಅನುಕೂಲತೆ ಆಗ ಅವರಿಗೆ ಇರಲಿಲ್ಲ ಎಂದರು.

ಕನ್ನಡ, ಕನ್ನಡಿಗ, ಕರ್ನಾಟಕತ್ವ ಎಂಬುದು ಅವರ ಕಾವ್ಯದಲ್ಲಿ ಒಡಮೂಡಿತ್ತು. ಡಾ .ದ. ರಾ. ಬೇಂದ್ರೆ, ಹುಕ್ಕೇರಿಕರ, ಶ್ರೀರಂಗರು ಇನ್ನೂ ಅನೇಕ ಸಾಹಿತ್ಯ ಲೋಕದ ದಿಗ್ಗಜರು ಹಾಗೂ ಎನ್ಕೆ ಕುಲಕರ್ಣಿ ಅವರೊಂದಿಗಿದ್ದರು. ಇವರ ಕಾವ್ಯ ಪ್ರಪಂಚವೇ ಬೇರೆ ಆಗಿತ್ತು. ಹಳಗನ್ನಡದಲ್ಲಿ ಕುಮಾರವ್ಯಾಸ ಭಾರತ, ಪಂಪಭಾರತ ಕಾವ್ಯಗಳನ್ನು ಓದಿ ವಿಶ್ಲೇಷಿಸುವುದರಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದ್ದರು. ಕೇವಲ ಮುಲ್ಕಿ ಪರೀಕ್ಷೆ ಪಾಸಾದ ಇವರಿಗೆ ಅವರ ಅಪಾರ ಜ್ಞಾನ, ಸಂಶೋಧನಾತ್ಮಕ ಚಿಂತನೆ ವಿದ್ವತ್ತಿಗೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಅವರ ಕಾವ್ಯದಲ್ಲಿ ಬರುವ ಮಧುರತ್ವ, ಗೇಯತೆ ವಿಶೇಷತೆಯಿಂದ ಕೂಡಿದ್ದವು. ಅವರ ಪ್ರಥಮ ಕಾವ್ಯ ಭಕ್ತಿ ಕುಸುಮಾಂಜಲಿ, ಭಾಮಿನಿ ಷಟ್ಪದಿಯಲ್ಲಿ ಪ್ರಕಟವಾಯಿತು. ಸಮಾಜದ ಓರೆಕೋರೆಗಳನ್ನು ತಿದ್ದುವಲ್ಲಿ ಅವರ ಕಾವ್ಯಗಳು ಇಂದಿಗೂ ಚಿರಪರಿಚಿತ. ಇವರು ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಲಬುರ್ಗಿಯ ಪ್ರಾ. ವಿಜಯಕುಮಾರ ಚೌಧರಿ ಅವರು, ಬೇರೆ ಬೇರೆ ಸಾಹಿತ್ಯಗಳನ್ನು ತಿಳಿಯಬೇಕಾದರೆ ಭಾಷಾಂತರ ಮಾಡುವುದು ಅನಿವಾರ್ಯ. ಇದು ಕಠಿಣ ಕಾರ್ಯ. ಅನುವಾದ ಭಾವಾನುವಾದ ಮೂಲ ಕೃತಿಯ ಭಾವಕ್ಕೆ ಧಕ್ಕೆಯಾಗದಂತೆ ಅನುವಾದ ಮಾಡಬೇಕೆಂದು ಹೇಳಿದರು. ದಾಸ ಸಾಹಿತ್ಯ, ಸಂತ ಸಾಹಿತ್ಯಗಳ ಬಗ್ಗೆ ಬೆಳಕು ಚೆಲ್ಲುತ್ತ ಜೀವನ ಮೌಲ್ಯ ಮುಕ್ತಿ, ಭಕ್ತಿ, ವೈರಾಗ್ಯ, ಯೋಗ ಇವುಗಳ ಸರಳ ರೂಪವೆ ಭಕ್ತಿ ಮಾರ್ಗ ಎಂದು ಹೇಳಿ, ಸಂಘವು ನನ್ನ ಕಾರ್ಯವನ್ನು ಗುರುತಿಸಿ ಆನಂದಕಂದ ಪ್ರಶಸ್ತಿ ನೀಡಿ ಗೌರವಿಸಿದಕ್ಕೆ ಸಂತೋಷ ವ್ಯಕ್ತಪಡಿಸಿ, ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಭಾಷಾ ದ್ವೇಷ ಬೇಡ ಎಲ್ಲಾ ಭಾಷೆಗಳನ್ನು ಕಲಿಯುವ ಮೊದಲು ಪ್ರಾದೇಶಿಕ ಮಾತೃ ಭಾಷೆಯನ್ನು ಸ್ಪಷ್ಟವಾಗಿ ಕಲಿತು ಶಿಕ್ಷಣ ಪಡೆದರೆ ಎಲ್ಲಾ ಭಾಷೆಗಳನ್ನು ನಾವು ಸರಳವಾಗಿ ಕಲಿಯಬಹುದು ಎಂದು ಹೇಳುತ್ತಾ, ಮುಂಬೈ ಪ್ರಾಂತದ ಮರಾಠಿ ಮತ್ತು ಕನ್ನಡದ ಪ್ರಭಾವದ ಕುರಿತು ವಿವರಿಸಿದರು. ಹಾಗೂ ಬೆಟಗೇರಿ ಕೃಷ್ಣಶರ್ಮರ ಒಡನಾಟವನ್ನು ಮೆಲುಕು ಹಾಕಿ, ಐತಿಹಾಸಿಕ ಕಾದಂಬರಿಗಳನ್ನು, ನೈಜ ಕಾವ್ಯಗಳನ್ನು ರಚಿಸುತ್ತಿದ್ದ ಆನಂದಕರಂದರ ಬಗ್ಗೆ ಪ್ರಶಂಸಿ, ಅವರ ಪಾಂಡಿತ್ಯಕ್ಕೆ ಸಿಗಬೇಕಾದ ಗೌರವ, ಮನ್ನಣೆ ಅವರಿಗೆ ದೊರೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಆನಂದಕಂದರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಲಾಯಿತು. ರಾಜು ಕುಲಕರ್ಣಿ ಹಾಗೂ ತಂಡದವರು ಸೊಗಸಾಗಿ ಆನಂದಕಂದರ ಗೀತಗಾಯನ ನಡೆಸಿಕೊಟ್ಟರು.

ಆನಂದ ಕಂದರ ಮೊಮ್ಮಗ ಶ್ರೀನಾಥ ಸುರೇಶ ಬೆಟಗೇರಿ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್. ಬಿ. ಗಾಮನಗಟ್ಟಿ ನಿರೂಪಿಸಿ, ವಂದಿಸಿದರು.

೬. **ಪ್ರೊ. ಎಂ. ಆರ್. ಕುಂಭಾರ ದತ್ತಿ :** ದಾನಿಗಳು, ಪ್ರೊ. ಎಂ.ಆರ್. ಕುಂಭಾರ ಅವರ ವಿದ್ಯಾರ್ಥಿಗಳು

ಭಾರತ ಪ್ರಾಚೀನ ಮಧ್ಯಕಾಲೀನ ಮತ್ತು ಇತ್ತೀಚಿನ ಕೃತಿಗಳಲ್ಲಿ ಅಪಾರ ಜ್ಞಾನವು ಅಡಕವಾಗಿರುವುದನ್ನು ಕಾಣುತ್ತೇವೆ, ಗಣಿತಶಾಸ್ತ್ರ, ಖಗೋಲಶಾಸ್ತ್ರ, ಶಿಲ್ಪಕಲೆ, ವೈದ್ಯಕೀಯ, ಔಷಧ ಶಾಸ್ತ್ರ, ವಿಶ್ವಕ್ಕೆ ಸೊನ್ನೆ ಕಲ್ಪನೆ ನೀಡಿದ ರಾಮಾನುಜ, ಆರ್ಯಭಟರಂಥ ಮೇಧಾವಿಗಳನ್ನು ನೆನೆಯಬೇಕಾಗುತ್ತದೆ. ಆಧುನಿಕ ಭಾರತದಲ್ಲಿ ಈ ಜ್ಞಾನ ವಲಯಗಳ ಉಲ್ಲೇಖಗಳು ಲಕ್ಷಾಂತರವಿದ್ದು, ತಾಳೆಗೆರೆ, ಹಸ್ತಪ್ರತಿಗಳು, ಸಾವಿರಾರು ವರ್ಷಗಳ ಹಿಂದೆ ಬರೆದ ಬರಹಗಳನ್ನು ಸಂಗ್ರಹಿಸಿ ಅವುಗಳನ್ನು ಗ್ರಂಥಭಾಷೆಗಳಲ್ಲಿ ಬರೆದು ಗ್ರಂಥಾಲಯಗಳಲ್ಲಿ ಸಂರಕ್ಷಿಸಿಟ್ಟ ಭಾರತದಲ್ಲಿ ವೇದ ಉಪನಿಷತ್ತ ಕಾಲಗಳಲ್ಲಿ ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಎತ್ತಿ ಹಿಡಿಯುತ್ತ ಬಂದಿವೆ ಎಂದು ಬೆಂಗಳೂರು ವಿ.ವಿ. ನಿವೃತ್ತ ಪ್ರಾಧ್ಯಾಪಕ ಡಾ. ಎ. ವಾಯ್. ಅಸುಂಡಿ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು, ಪ್ರೊ. ಎಂ. ಆರ್. ಕುಂಬಾರ ದತ್ತಿ ಉಪನ್ಯಾಸ ಮಾಲೆ–೩ ರ ಅಂಗವಾಗಿ ದಿನಾಂಕ **೧೭–೪–೨೦೧೮** ರಂದು ಆಯೋಜಿಸಿದ್ದ **'ಭಾರತೀಯ ಜ್ಞಾನ ದರ್ಶನ ಮತ್ತು ಮೀಮಾಂಸೆ'** ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಎ. ಎಲ್. ಬಾಷಮ್, ಆಸ್ಟ್ರೇಲಿಯಾದ ಇತಿಹಾಸಕಾರ ಭಾರತ ದೇಶದಲ್ಲಿ ಜ್ಞಾನ ಸಂಗ್ರಹದ ಉಲ್ಲೇಖವನ್ನು ಅವರು ರಚಿಸಿದ 'ವಿಸ್ಮಯ ಭಾರತ' (ವಂಡರ್ ದ್ಯಾಟ್ ವಾಸ್ ಇಂಡಿಯಾ) ಗ್ರಂಥದಲ್ಲಿ ವಿವರಿಸಿದ್ದಾರೆ. ಪಂಚಾಂಗ, ರಸಾಯನ, ಶರೀರ, ವೈದ್ಯ, ತರ್ಕ, ತೂಕ ಅಳತೆ, ನಾಣ್ಯ, ಲಿಪಿಶಾಸ್ತ್ರ, ಉಚ್ಚಾರ, ಚಂದಸ್, ಜಿಪ್ಸಿ, ಗಣಿತ, ಭೌತಶಾಸ್ತ್ರ, ಮುಂತಾದ ವಿಷಯಗಳ ಜ್ಞಾನ ಸಂಪತ್ತನ್ನು ಪಾಶ್ಚಿಮಾತ್ಯರು ಪೌರ್ವಾತ್ಯದ ಜ್ಞಾನ ಪಡೆದವರಲ್ಲಿ ಜರ್ಮನಿಯ ಮ್ಯಾಕ್ಸಮುಲ್ಲರ, ೫೦ ಸಂಪುಟಗಳಲ್ಲಿ ದಾಖಲಿಸಿದ್ದಾರೆ. ಈ ಕಾರ್ಯವನ್ನು ಮಾಡುವಲ್ಲಿ ನಮ್ಮವರು ಪ್ರಯತ್ನ ನಡೆದಿಲ್ಲ ಎಂದು ಡಾ. ಅಸುಂಡಿ ವಿವರಿಸಿದರು.

ಒಂದು ದಶಲಕ್ಷ ತಾಳೆಗೆರೆಯಲ್ಲಿಯ ಗ್ರಂಥಗಳು, ಉಲ್ಲೇಖಗಳಲ್ಲಿ ಕೇವಲ ಶೇ ೧೫ ರಿಂದ ೨೦ ರಷ್ಟು ಮಾತ್ರ ಲಭ್ಯವಾಗಿವೆ. ಇನ್ನೂ ಹೆಚ್ಚಿನ ಜ್ಞಾನ ಗ್ರಂಥಗಳನ್ನು ಪ್ರಾಚೀನ ವಿದೇಶಿ ಪ್ರವಾಸಿಗರು ಕೊಂಡ್ಯೊಯ್ದ ಬಗ್ಗೆ ಉಲ್ಲೇಖಗಳಿವೆ. ನಮ್ಮ ಜ್ಞಾನ ಸಂಪತ್ತು ಅಪಾರ. ಅದನ್ನು ಸೂಕ್ತವಾಗಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ದೊರೆಯುವಂತೆ ಮಾಡಬೇಕೆಂದರು.

ಗ್ರಂಥಗಳ ಸಂಗ್ರಹಣೆ, ವರ್ಗೀಕರಣ, ಜೋಡಣೆ, ನಿರ್ವಹಣೆ ಇತ್ಯಾದಿ ಅನಾದಿಕಾಲದಿಂದಲೂ ಬಂದಿದ್ದು, ಇತ್ತೀಚೆಗೆ ಪ್ರವರ್ಧಮಾನವಾಗಿ ಬೆಳೆದು ಅಭಿವೃದ್ಧಿ ಪಥದಲ್ಲಿ ಮುನ್ನುಗ್ಗುತ್ತಿದೆ ಎಂದರು. ಗ್ರಂಥಾಲಯ ಪುಸ್ತಕ ಸಂಸ್ಕೃತಿ ಪ್ರಾರಂಭವಾಗಿ ನಮ್ಮ ಜ್ಞಾನದ ಹರಿವು ಹೆಚ್ಚಾಗುತ್ತಿದೆ. ಅವುಗಳ ಸೂಕ್ತ ಉಪಯೋಗ ಪಡೆದುಕೊಂಡು ಜ್ಞಾನ ಪಡೆಯುವದು ಅವಶ್ಯವಾಗಿದೆ ಎಂದರು.

ಭಾಷಾ ಸಂಪತ್ತು ಕಂಡು ಹಿಡಿದ, ಕನ್ನಡ ನಿಘಂಟು ರಚಿಸಿದ ಕಿಟೆಲ್ ಹಾಗೂ ಜಿಗ್ಲುರ್ ಅವರ ಕೊಡುಗೆ ಅಪಾರ. ಬ್ರಿಟಿಷ್ ಆಡಳಿತದಲ್ಲಿ ಗೆಜೆಟೇರಿಯನ್ ಚಾಲ್ತಿಗೆ ತಂದದ್ದು, ಅವುಗಳೆಲ್ಲ ಗ್ರಂಥಗಳಾಗಿ ಐತಿಹಾಸಿಕ ದಾಖಲೆಗಳಾಗಿ ಮೆರೆಯುತ್ತಿವೆ. ಅವರು ಮಾಡಿದ ಕೆಲಸ ನಾವು ಮಾಡಲು ಸಾದ್ಯವಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ವೇದ, ಉಪನಿಷತ್ತು, ಪುರಾಣ, ಉಪದೇಶಗಳು, ವೇದಾಂತ, ಬ್ರಹ್ಮವಿಜ್ಞಾನ, ಬ್ರಹ್ಮಾಂಡಸೃಷ್ಠಿ, ನಿಗೂಢತೆ ತಿಳಿಯಲು ಓದು ಮುಖ್ಯ. ಓಂ ಪಠಣ ಸಂಸ್ಕೃತದಲ್ಲಿ ಇದ್ದು, ಸಂಸ್ಕೃತ ಕಲಿಯುವದು ಅವಶ್ಯವಿದೆ, ಇದು ಕೇವಲ ಬ್ರಾಹ್ಮಣ ಭಾಷೆಯಲ್ಲ. ಸ್ಪಷ್ಟ ಉಚ್ಚಾರ ಹಾಗೂ ಭಾಷಾ ಶುದ್ದತೆಗೆ ಇದು ಸಹಕಾರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ಹಿರಿಯ ಗ್ರಂಥಪಾಲಕ ಡಾ. ಎಸ್. ಆರ್. ಶೆಟ್ಟಿ ಮಾತನಾಡಿ, ತಮ್ಮ ಗುರುಗಳನ್ನು ನೆನೆದು ತಮ್ಮ ಅವರ ಗ್ರಂಥಾಲಯದ ಒಡನಾಟ, ಸೇವೆ ಸ್ಮರಿಸುತ್ತಾ, ಭಾಷೆ ಬೆಳವಣಿಗೆಗೆ ಓದು ಮುಖ್ಯ. ಇದಕ್ಕೆ ಪೂರಕವಾಗಿರುವ ಗ್ರಂಥಾಲಯಗಳ ಅಭಿವೃದ್ಧಿಯನ್ನು ನಾವು ಮಾಡುತ್ತಿಲ್ಲ. ಬೇರೆ ದೇಶಗಳಲ್ಲಿ ಅದು ಅಚ್ಚುಕಟ್ಟಾಗಿ ನಡೆದಿದೆ. ನಾವು ಸಂಸ್ಕೃತ ಕಲಿಯಬೇಕು ಆಳವಾದ ವೇದಪುರಾಣ, ಉಪನಿಷತ್ ಜ್ಞಾನವನ್ನು ನಾವು ಅರಗಿಸಿಕೊಂಡು ಸತ್ವಯುತ ಭಾರತೀಯ ಜ್ಞಾನ ಸಂಪತ್ತನ್ನು ಬೆಳೆಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ. ಎಂ. ಆರ್. ಕುಂಭಾರ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ದತ್ತಿದಾನಿಗಳ ಪರವಾಗಿ ಪ್ರೊ. ಎಸ್. ಎಲ್. ಸಂಗಮ ಇದ್ದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾ.ಕಾ. ಸಮಿತಿ ಸದಸ್ಯ ಎಸ್. ಬಿ. ಗಾಮನಗಟ್ಟಿ ನಿರೂಪಿಸಿ, ವಂದಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾ.ಕಾ. ಸಮಿತಿ ಸದಸ್ಯ ಸತೀಶ ತುರಮರಿ ಹಾಗೂ ಎಸ್. ಡಿ. ರತ್ನಾಕರ ಅತಿಥಿಗಳನ್ನು ಗೌರವಿಸಿದರು.

೭. **ಮಾತೋಶ್ರೀ ಗೌರಮ್ಮ ಗುರಪ್ಪ ಬೆಲ್ಲದ ದತ್ತಿ :** ದಾನಿಗಳು, ಚಂದ್ರಕಾಂತ ಬೆಲ್ಲದ. ಧಾರವಾಡ.

೧೨ ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಬೋಧಿಸಿದ ಸತ್ಯ, ವಿನಯ, ಸಜ್ಜನಿಕೆ ಇವುಗಳನ್ನು ಪ್ರಾಥಮಿಕ ಹಂತದಿಂದಲೇ ನಮ್ಮ ವಿದ್ಯಾರ್ಥಿಗಳಿಗೆ ಕಲಿಸಬೇಕು. ನೈತಿಕ, ಆಧ್ಯಾತ್ಮಿಕ, ಚಾರಿತ್ರ ಗುಣಗಳ ನಿರ್ಮಾಣಕ್ಕಾಗಿ ಹಾಗೂ ಶಕ್ತಿಶಾಲಿ ಆದರ್ಶ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಣವನ್ನು ನೀಡಬೇಕು. ಈ ಮಹತ್ವದ ಹೊಣೆ ಶಿಕ್ಷಕರ ಮೇಲಿದೆ. ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ವ್ಯಕ್ತಿಗಳು ಸಮಾಜದಲ್ಲಿ ಇದ್ದರೆ ಆ ಸಮಾಜವು ಬಲಾಢ್ಯವಾಗುತ್ತದೆ ಎಂದು ಕ.ವಿ.ವಿ.ಯ ಶ್ರೀ ಬಸವೇಶ್ವರ ಪೀಠದ ಸಂಯೋಜಕ ಡಾ. ಸಿ. ಎಂ. ಕುಂದಗೋಳ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾಜಿ ಶಾಸಕ, ಉದ್ಯಮಿ ಚಂದ್ರಕಾಂತ ಬೆಲ್ಲದ ಅವರು ತಮ್ಮ ತಾಯಿ ಮಾತೋಶ್ರೀ ಗೌರಮ್ಮ ಗುರಪ್ಪ ಬೆಲ್ಲದ ಸ್ಮರಣಾರ್ಥ ಇರಿಸಿದ ದತ್ತಿ ಕಾರ್ಯಕ್ರಮದಲ್ಲಿ ದಿನಾಂಕ **೧೮-೪-೨೦೧೮** ರಂದ **'ಬಸವಣ್ಣನವರು ಮತ್ತು ಮೌಲ್ಯಾಧಾರಿತ ವ್ಯಕ್ತಿತ್ವ ನಿರ್ಮಾಣ'** ಎಂಬ ವಿಷಯದ ಬಗ್ಗೆ ಅವರು ಉಪನ್ಯಾಸ ನೀಡುತ್ತಿದ್ದರು.

ಸಮಾಜ ಸುಧಾರಣೆಯಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತಿದ್ದು, ಈಗ ಶಿಕ್ಷಣದ ಬದಲಾವಣೆಗೆ ಚಿಂತನೆ ಮಾಡುವುದು ಅವಶ್ಯವಾಗಿದೆ. ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ ಎಂದು ಬೋಧಿಸಿದ ಮಹಾಮಾನವತಾವಾದಿ ಬಸವಣ್ಣನವರು ವಚನಗಳ ಮೂಲಕ ಸಮಾಜದಲ್ಲಿಯ ಅಂಕುಡೊಂಕುಗಳನ್ನು ತಿದ್ದಿದರು. ಮನಸ್ಸಿನಲ್ಲಿರುವ ಮಾಲಿನ್ಯವನ್ನು ನಾವೇ ಕಿತ್ತು ಹಾಕಬೇಕು. ಚಂಚಲ ಮನಸನ್ನು ನಿಯಂತ್ರಣದಲ್ಲಿ ಇಟ್ಟುಕೊಂಡರೆ ಏನೆಲ್ಲಾ ಸಾಧಿಸಬಹುದು ಎಂದು ಪ್ರೊ. ಕುಂದಗೋಳ ಹೇಳಿದರು. ಇಂದು ನಮಗೆ ಸೌಕರ್ಯಗಳು ಹೆಚ್ಚಾಗುತ್ತಿದ್ದು, ನೆಮ್ಮದಿ ಕಡಿಮೆಯಾಗುತ್ತಿದೆ. ನೆಮ್ಮದಿಯ ಬದುಕಿಗಾಗಿ ವಚನಗಳನ್ನು ಅರ್ಥಮಾಡಿಕೊಂಡು ಜೀವನ ನಡೆಸಬೇಕೆಂದರು.

ಎರಡನೇ ಮಹಾಯುದ್ಧದಲ್ಲಿ ಸರ್ವನಾಶವಾಗಿದ್ದ ಜಪಾನೀಯರು ಇಂದು ಎಲ್ಲ ರಂಗಗಳಲ್ಲಿ ಸಾಧನೆಯನ್ನು ಸಾಧಿಸಿದ್ದಕ್ಕೆ ಅವರಲ್ಲಿಯ ತಾಳ್ಮೆ ಹಾಗೂ ಪರಿಶ್ರಮಗಳೇ ಕಾರಣ. ವಾರದಲ್ಲಿ ಒಂದು ದಿನವೂ ರಜೆ ಪಡೆಯದೇ ಕಾರ್ಯ ಮಾಡುತ್ತಿರುವ ಜಪಾನಿಯರು ಕಾಯಕವೇ ಕೈಲಾಸ ಎಂಬ ಬಸವಣ್ಣನವರ ವಾಣಿಗೆ ಗೌರವವನ್ನು ಕೊಟ್ಟವರಲ್ಲಿ ಪ್ರಥಮರಾಗಿದ್ದಾರೆ. ಜಪಾನಿಯರ ತಾಳ್ಮೆ, ಕರ್ತವ್ಯ ನಿಷ್ಠೆ, ಸಮಯ ಪ್ರಜ್ಞೆಯನ್ನು ಭಾರತೀಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡದ್ದೇ ಆದರೆ ಭಾರತವೂ ಕೂಡ ಜಗತ್ತಿನ ಬಲಾಢ್ಯ ರಾಷ್ಟ್ರವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಸವಶಾಂತಿ ಮಿಷನ್ ಅಧ್ಯಕ್ಷ ಹಾಗೂ ಭಾರತ ಏಕತಾ ಆಂದೋಲನದ ನೇತಾರ ಮಹಾದೇವ ಹೊರಟ್ಟಿ ಅವರು ಮಾತನಾಡಿ, ಕಬೀರ, ಜ್ಞಾನೇಶ್ವರ, ಸಂತತುಕಾರಾಮ, ಅನೇಕ ಶರಣರು, ದಾಸರು, ಸಂತರು, ಮೌಲ್ವಿಗಳು, ವಚನ, ಅಭಂಗ, ದೋಹೆಗಳ ಮೂಲಕ ತತ್ವಗಳನ್ನು ಬೋಧಿಸಿ ಸಮಾಜಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಬಸವಣ್ಣನವರನ್ನು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸದೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಸವಣ್ಣನವರ ವಚನಸಾಹಿತ್ಯಗಳು ಪ್ರಸಾರಗೊಳ್ಳುವಂತೆ ಕಾರ್ಯಮಾಡಬೇಕಾಗಿದೆ ಎಂದರು.

ದತ್ತಿದಾನಿ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಮಾತನಾಡಿ ದತ್ತಿ ಆಶಯ ವಿವರಿಸಿದರು. ಕ.ವಿ.ವ. ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆ ಮೇಲಿದ್ದರು. ಕು. ರೀಚಾ ಮಹೇಶ ಬೆಲ್ಲದ ಪ್ರಾರ್ಥಿಸಿದರು. . ಕಾ.ಕಾ. ಸಮಿತಿ ಸದಸ್ಯ ಎಸ್. ಬಿ. ಗಾಮನಗಟ್ಟಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾ.ಕಾ. ಸಮಿತಿ ಸದಸ್ಯ ಶಂಕರ ಕುಂಬಿ ನಿರೂಪಿಸಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೮. **ಶ್ರೀ ಬಿ. ಕೆ. ಹೊಂಗಲ ದತ್ತಿ :** ದಾನಿಗಳು, ಶ್ರೀ ಎಸ್. ಬಿ. ಹೊಂಗಲ

ಗದಗ, ಲಕ್ಕುಂಡಿಯ ಐತಿಹಾಸಿಕ ಉತ್ಸವ ಧಾರವಾಡ ಆಕಾಶವಾಣಿಯ ಪ್ರೇರಣೆಯಿಂದ ತಮ್ಮ ಶಾಲಾ ದಿನಗಳಿಂದಲೇ ಶಿಶು ಸಾಹಿತ್ಯ ರಚನೆಯನ್ನು ಕೈಕೊಂಡು ಪ್ರಥಮವಾಗಿ 'ಚಿಂವ್ ಚಿಂವ್ ಗುಬ್ಬಿ' ಎಂಬ ಶಿಶುಗೀತೆ ತರಂಗ ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ನೆನೆದು ಶಿವರಾಮ ಕಾರಂತ, ಹಾ. ಮಾ. ನಾಯಕ, ಶ್ಯಾಮಸುಂದರ ಬಿದರಕುಂದಿ, ಶಿಶುಸಂಗಮೇಶ ಇವರಿಂದ ಪ್ರಭಾವಿತರಾಗಿ ಶಿಶುಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡ ಅನುಭವವನ್ನು ಹಂಚಿಕೊಂಡು ಶಿಶುಸಾಹಿತ್ಯ ವಿಶಿಷ್ಠತೆಯಿಂದ ಕೂಡಿದೆ ಎಂದು ಮಕ್ಕಳ ಸಾಹಿತಿ ಗದಗಿನ ಡಾ. ರಾಜೇಂದ್ರ ಎಸ್. ಗಡಾದ ಹೇಳಿದರು. ಅವರು ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨೦-೪-೨೦೧೮** ರಂದು ಕವಿ. ಬಿ. ಕೆ. ಹೊಂಗಲ ದತ್ತಿ ಅಂಗವಾಗಿ ಕೊಡಮಾಡುವ **'ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿ-೨೦೧೮'** ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಿದ್ದರು.

ವಿಜ್ಞಾನ ಪದವೀಧರರಾಗಿ ಮಕ್ಕಳ ಸಾಹಿತ್ಯ ರಚನೆಗೆ ಒಲವು ಇಟ್ಟುಕೊಂಡ ತಾವು ಮಕ್ಕಳ ಸಾಹಿತ್ಯ ಕೃತಿಗಳೊಂದಿಗೆ ಪ್ರೌಢಸಾಹಿತ್ಯದ ಬಗ್ಗೆ ಒಲವನ್ನು ಹೊಂದಿರುವುದಾಗಿ ತಿಳಿಸಿದರು. ಸ್ವತಂತ್ರ ಕೃತಿಗಳು, ಪ್ರೌಢಸಾಹಿತ್ಯ, ಸಂಪಾದಿತ ಸಾಹಿತ್ಯ ಹೀಗೆ ವಚನ, ಒಗಟು, ಕವನ, ಬಂಡಾಯ ಗೀತೆ, ಚಿಂತನೆ, ಚುಟುಕು, ಮುಂತಾದ ಹಲವಾರು ಶಿಶುಸಾಹಿತ್ಯದ ಬಗೆಯಲ್ಲಿ ಕೃಷಿಗೈದು ತಮ್ಮ ಅನುಭವ ಎಳೆಎಳೆಯಾಗಿ ಬಿಚ್ಚಿಟ್ಟು, 'ಮಕ್ಕಳ ಸಾಹಿತ್ಯ ಮತ್ತು ಶಿಶು ಸಂಗಮೇಶ' ಎಂಬ ತಮ್ಮ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದನ್ನು ಸ್ಮರಿಸಿಕೊಂಡರು.

ಮಕ್ಕಳ ಕಲೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾಗುವಂತೆ ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ ಕರ್ನಾಟಕ ಬಾಲವಿಕಾಸ ಅಕಾಡೆಮಿ ಸ್ಥಾಪನೆಗೊಂಡಿದ್ದು ಅದರ ಶ್ರೇಯಸ್ಸು ನಾಡೋಜ ಡಾ. ಪಾಟೀಲ ಪುಟ್ಟಪ್ಪ, ನಾಡೋಜ ಡಾ. ಚೆನ್ನವೀರ ಕಣವಿ ಮುಂತಾದ ಸಾಹಿತಿ, ಕಲಾವಿದರಿಗೆ, ಹೋರಾಟಗಾರರಿಗೆ ಸಲ್ಲುತ್ತದೆ. ಬಾಲವಿಕಾಸ ಅಕಾಡೆಮಿಯಿಂದ ಇನ್ನೂ ಹೆಚ್ಚಿನ ರೀತಿಯಿಂದ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗುವಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಸಂಘಟಿಸುವಂತಾಗಬೇಕು. ಮಕ್ಕಳ ಸಾಹಿತ್ಯದ ಹೆಸರಿನಲ್ಲಿ, ಪಠ್ಯಕ್ರಮದಲ್ಲಿ ಕಳಪೆ ಸಾಹಿತ್ಯಗಳು ಸೇರ್ಪಡೆಯಾಗಿ ಮಕ್ಕಳ ಕಲಿಕೆಗೆ ಮುದ ನೀಡಲು ಸಾಧ್ಯವಾಗುತ್ತಿಲ್ಲ ಎಂದರು.

ತಮ್ಮ 'ಗುಡ್ ಬಾಯ್' ಹಾಗೂ 'ಹಿಂದಿನ ಸಾಲಿನ ಮಕ್ಕಳು' ಎಂಬ ಕವಿತೆಗಳನ್ನು ವಾಚಿಸಿ, ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿರುವ ಮಗು ತನಗೆ ಭಾರವಾದ ಪುಸ್ತಕ ಚೀಲ ಬೇಡ ಎಂಬ ಆಶಯ ವ್ಯಕ್ತಪಡಿಸುವ 'ಹಚ್ಚಿರಿ ನನ್ನನ್ನು ಕಡಿಮೆ ಪುಸ್ತಕ ಒಯ್ಯುವ ಕನ್ನಡ ಶಾಲೆಗೆ, ಆ ಶಾಲೆ ಇರಬೇಕು ಮನಿ ಹತ್ರ, ಅಂದ್ರ ಮಾತ್ರ ಹೋಗ್ತೆನೆ ಶಾಲೆಗೆ, ಇಲ್ಲಾಂದ್ರೆ ಹೇಳುತ್ತೇನೆ ಗುಡ್ ಬೈ' ಎಂದು ಮಗುವಿನ ಅಳಲನ್ನು ತಾಯಿಯ ಮುಂದೆ ಅವಲತ್ತುಕೊಳ್ಳುವ ಮಾರ್ಮಿಕ ಕವಿತೆ ವಾಚಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಪ್ರಾಚಾರ್ಯ ರಾಮದುರ್ಗದ ಪ್ರಿ. ಜಿ. ಎಸ್. ಮೋಹಿತೆ ಮಾತನಾಡಿ, ಒಳ್ಳೆಯ ಬೀಜದಿಂದ ಒಳ್ಳೆಯ ಸಸಿ ಪಡೆಯಲು ಸಾಧ್ಯ. ಪಾಲನೆ ಪೋಷಣೆ ಸರಿಯಾದಲ್ಲಿ ನಿರೀಕ್ಷಿತ ಉತ್ತಮ ಫಲ ಪಡೆಯಬಹುದು. ಮಕ್ಕಳ ಮನಸ್ಸು ಮಲ್ಲಿಗೆ ಹೂವಿನಂತೆ ಮೃದು ಹಾಗೂ ಕೋಮಲವಾಗಿರುತ್ತದೆ. ಮಕ್ಕಳ ಮನಸ್ಸನ್ನು ವಾತ್ಸಲ್ಯದಿಂದ ಅರಿತು ಉತ್ತಮ ಸಂಸ್ಕಾರ ನೀಡಬೇಕು. ಶಿಶುಪದ್ಯಗಳು, ಕಥೆ, ಇವುಗಳನ್ನು ಮಕ್ಕಳಿಗೆ ರೂಢಿಸಬೇಕು ಎಂದರು. ಸರಿಯೋ ತಪ್ಪೋ ಆಸ್ತಿಕ-ನಾಸ್ತಿಕ ಜಿಜ್ಞಾಸೆಯನ್ನು ಕಂಡು ಹಿಡಿದು ಮಗುವಿನಲ್ಲಿರುವ ಸೂಪ್ತ ಜ್ಞಾನವನ್ನು ಜಾಗೃತಗೊಳಿಸುವುದೇ ಶಿಕ್ಷಕನ ನಿಜವಾದ ಕೆಲಸ ಎಂದ ಅವರು, ಎಲ್ಲಿಯೋ ಇರುವ ದೇವರನ್ನು ಹುಡುಕುವದಕ್ಕಿಂತ ಮಕ್ಕಳಲ್ಲಿರುವ ದೇವರನ್ನು ಹುಡುಕಬೇಕು. ಮಕ್ಕಳ ಪ್ರಶ್ನೆಗಳಿಗೆ ಬೆದರಿಸದೇ ಪ್ರೀತಿಯಿಂದ ವೈಜ್ಞಾನಿಕ, ವೈಚಾರಿಕವಾಗಿ ಸಮರ್ಪಕ ಉತ್ತರಗಳನ್ನು ನೀಡಿ ಅವರ ಜ್ಞಾನ ತೃಷೆ ಹಿಂಗುವಂತೆ ಮಾಡಬೇಕು ಎಂದ ಅವರು ನಮ್ಮ ನಡೆ, ನುಡಿ ವೃತ್ತಿ ಜೀವನದಲ್ಲಿ ಒಂದಾಗಬೇಕು, ಅಂದಾಗ ಶಿಕ್ಷಣ ಫಲಪ್ರದವಾಗಿ ಮಗುವಿನ ಕಲಿಕೆ ಮುದವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಶಾಲೆಗಳು ಆಕರ್ಷಕವಾಗಿ ಇರಬೇಕು, ಮಕ್ಕಳು ಉತ್ಸಾಹ, ಸಂತೋಷದಿಂದ ಶಾಲೆಗೆ ಹೋಗುವಂತಾಗಬೇಕೆಂದ ಅವರು ತಮ್ಮ ಬಾಲ್ಯದ ಶಾಲಾ ದಿನಗಳನ್ನು ಮೆಲುಕು ಹಾಕಿ, ಶಾಲೆಗೆ ಚಕ್ಕರ ಹೊಡೆದು ದನಗಾಹಿಯಾಗಿ ತುಂಟಾಟ ಮಾಡಿದ್ದನ್ನು ಸ್ಮರಿಸಿ ಹಾಸ್ಯ ಚಟಾಕಿ ಹಾರಿಸಿದರು. ಮಕ್ಕಳ ಬರಹ ಕೈಬರಹ ಶುದ್ದತೆಯಾಗಬೇಕು. ತಂದೆ-ತಾಯಿಗಳಿಗೆ ಶುದ್ದ ಬರಹ ಗೊತ್ತಿಲ್ಲದಿದ್ದರೆ ಮಕ್ಕಳಿಗೆ ಹೇಗೆ ಕಲಿಸಿಯಾರು ? ಎಂದರು. ಉತ್ತರ ಕರ್ನಾಟಕದಲ್ಲಿ ಮಕ್ಕಳ ಸಾಹಿತಿಗಳು ಹೆಚ್ಚು ಇದ್ದು, ಕೇವಲ ದಕ್ಷಿಣ ಕರ್ನಾಟಕದವರು ಎಂಬುದು ತಪ್ಪು. ಅವರನ್ನು ಪ್ರೋತ್ಸಾಹಿಸಿ ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು. ಶಿಶುಸಾಹಿತ್ಯಕ್ಕೆ ಕೊಡುಗೆ ನೀಡಿದ ಬಿ.ಎಂ.ಶ್ರೀ ಹಾಗೂ ಪಂಜೆಮಂಗೇಶರಾಯರನ್ನು ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಕ್ಕಳ ಸಾಹಿತಿ ಈಶ್ವರ ಕಮ್ಮಾರ, ಸಾಹಿತಿ, ಸಂಪಾದಕ ಮಾರ್ಕಂಡೇಯ ದೊಡಮನಿ, ಕವಿ ಬಿ. ಕೆ. ಹೊಂಗಲ ಅವರು ಮಾತನಾಡಿದರು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾ.ಕಾ. ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ನಿರೂಪಿಸಿ, ವಂದಿಸಿದರು.

೯. **ಡಾ. ವಿಜಯರಾಜ ನಾಡಗೌಡ ದತ್ತಿ ಕಾರ್ಯಕ್ರಮ :**

ಕರ್ನಾಟಕ ವಿದ್ಯಾವರ್ಧಕ ಸಂಘದ ರಾ. ಹ. ದೇಶಪಾಂಡೆ ಸಭಾಭವನ .... ಸಂಗೀತಾಸಕ್ತರಿಂದ ಕಿಕ್ಕಿರಿದು ತುಂಬಿದೆ.. ಇಬ್ಬರು ಪುಣಾಣಿ ಕಲಾವಿದರು ವೇದಿಕೆಯನ್ನು ಏರುತ್ತಲೇ ಚಪ್ಪಾಳೆಯ ಸುರಿಮಳೆಯೇ ಸುರಿಮಳೆ.

ಡಾ. ವಿಜಯರಾಜ ನಾಡಗೌಡ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨೮-೪-೨೦೧೮** ರಂದು ಆಯೋಜಿಸಿದ್ದ **ವಚನ ಗಾಯನ**ದಲ್ಲಿ ತಮ್ಮ ಸುಶ್ರಾವ್ಯ ಕಂಠದಿಂದ ಎಲ್ಲರ ಶಹಭಾಶಗಿರಿಗೆ ಪಾತ್ರರಾದವರು ಹುಬ್ಬಳ್ಳಿಯ ಕು. ಪ್ರಭುದೇವ ಹುಗ್ಗಿಶೆಟ್ಟರ ಹಾಗೂ ಶ್ರೇಯಾ ಅರ್ಕಸಾಲಿ.

ಉಳ್ಳವರು ಶಿವಾಲಯ ಮಾಡುವರಯ್ಯ ... ಹಿರಿಯರಾದರೇನು, ಕಿರಿಯರಾದರೇನು ? ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ ... ನಡೆಚೆನ್ನ, ನುಡಿಚೆನ್ನ.. ಬಾರೆ ಭಾಗ್ಯದ ನಿಧಿಯೇ.. ಕರವೀರ ನಿವಾಸಿ... ಮತ್ತಿತರ ವಚನಗಳನ್ನು ಕೇಳಿದ ಸಭಿಕರು ಸಂತಸ ವ್ಯಕ್ತಪಡಿಸಿದರು. ಇವರಿಗೆ ಕೃಷ್ಣಾ ಬಡಿಗೇರ, ಬಸವರಾಜ ಹಿರೇಮಠ ಹಾಗೂ ವಿಜಯಕುಮಾರ ಅರ್ಕಸಾಲಿ ಸಾಥ್ ನೀಡಿದರು.

ಮಡಿವಾಳ ಮಾಚಯ್ಯ, ವಿಶ್ವಗುರು ಬಸವಣ್ಣನವರು, ಅಲ್ಲಮಪ್ರಭು, ಪುಟ್ಟರಾಜ ಗವಾಯಿಗಳು ರಚಿಸಿದ ವಚನಗಳನ್ನು ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಮಕ್ಕಳ ಸಾಹಿತಿ ಕ.ವಿ.ವ.ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ಮಾತನಾಡಿ, ನಶಿಸುತ್ತಿರುವ ವಚನ ಸಾಹಿತ್ಯವನ್ನು ಉಳಿಸಿ, ಬೆಳೆಸಿಕೊಳ್ಳಬೇಕು. ವಚನಗಳನ್ನು ಸಂಗೀತಕ್ಕೆ ಅಳವಡಿಸಿ ಭವ್ಯತೆಯನ್ನು ತಂದುಕೊಟ್ಟವರು ಪಂ. ಮಲ್ಲಿಕಾರ್ಜುನ ಮನಸೂರರಾಗಿದ್ದಾರೆ ಎಂದು ಅವರನ್ನು ಸ್ಮರಿಸಿದರು. ವಚನಗಳನ್ನು ನೃತ್ಯದಲ್ಲಿಯೂ ಕೂಡಾ ಅಳವಡಿಸಲಾಗುತ್ತಿರುವುದು ಸಂತಸ ಎಂದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ, ಕಾ.ಕಾ. ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಹಾಗೂ ಶಂಕರ ಕುಂಬಿ ಮಾತನಾಡಿ, ಕಲಾಕಾರರಿಗೆ ಸಂಘವು ನೀಡುತ್ತಿರುವ ಪ್ರೋತ್ಸಾಹ, ಬೆಂಬಲಗಳ ಬಗ್ಗೆ ವಿವರಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವೇದಿಕೆಯಲ್ಲಿದ್ದರು. ಕಾ.ಕಾ. ಸಮಿತಿ ಸದಸ್ಯ ಎಸ್. ಬಿ. ಗಾಮನಗಟ್ಟಿ ನಿರೂಪಿಸಿ, ವಂದಿಸಿದರು.

೧೦. **ಶ್ರೀ ಶಂ. ವಿ. ಬಿಳಿಅಂಗಡಿ ದತ್ತಿ :**

ಬಿಳಿಯಂಗಡಿಯವರು ಉತ್ತಮ ಶಿಕ್ಷಕರಾಗಿ, ಅಪ್ಪಟ ಗಾಂಧಿವಾದಿಗಳಾಗಿ ಸರ್ ಸಿದ್ಧಪ್ಪ ಕಂಬಳಿ ಅವರ ಸಮಕಾಲೀನರಾಗಿದ್ದು, ಅಧ್ಯಯನಶೀಲತೆ, ಪುಸ್ತಕ ಪ್ರೇಮಿ, ಇತಿಹಾಸ ಪ್ರಜ್ಞೆಯ ಕಳಕಳಿ ಉಳ್ಳವರಾಗಿದ್ದನ್ನು ಸ್ಮರಿಸುತ್ತಾ, ಹಿರಿಯರ ಆದರ್ಶ ಜೀವನಗಳು ನಮ್ಮ ಬಾಳಿಗೆ ಬೆಳಕಾಗಬೇಕೆಂದು ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಲಿಂಗರಾಜ ಆರ್. ಅಂಗಡಿ ಹೇಳಿದರು. ಅವರು ಸಂಘವು ದಿನಾಂಕ **೩೦-೪-೨೦೧೮** ರಂದು ಆಯೋಜಿಸಿದ್ದ ದಿ. ಶಂಭುಲಿಂಗಪ್ಪ ವೀ. ಬೀಳಿಅಂಗಡಿ **ದತ್ತಿ ಉದ್ಘಾಟನಾ ಸಮಾರಂಭ**ದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಲಿಂಗರಾಜ ಅಂಗಡಿ, ಇಂದಿನ ಯಾಂತ್ರಿಕ ಜೀವನದಲ್ಲಿ ಆರೋಗ್ಯ ಕಾಪಾಡಿಕೊಂಡು ಒತ್ತಡದ ಜೀವನದಿಂದ ಮುಕ್ತಿ ಪಡೆಯಲು ಬೌದ್ಧಿಕ, ಮಾನಸಿಕ, ದೈಹಿಕ ಶಕ್ತಿ ವೃದ್ಧಿಸಿಕೊಳ್ಳಬೇಕಾದದ್ದು ಅನಿವಾರ್ಯತೆ ಇದೆ. ನಾವು ಭಾವ ಶುದ್ಧಿಯೊಂದಿಗೆ ಯೋಗದಿಂದ ಬಿ.ಪಿ, ಶುಗರ್ ರೋಗಗಳನ್ನು ದೂರ ಇಡಬಹುದು. ಈ ಹಿನ್ನೆಲೆಯಲ್ಲಿ ಪೌಷ್ಟಿಕ ಮಿತ ಆಹಾರ ಸೇವನೆ, ನೈತಿಕತೆ, ಭಾವಶುದ್ಧಿ, ಆಧ್ಯಾತ್ಮಿಕ ಕ್ರಿಯಾಶಕ್ತಿ ರೂಢಿಸಿಕೊಳ್ಳಬೇಕು. ದೈಹಿಕವಾಗಿ ಯೋಗದ ಮಹತ್ವವನ್ನು ಅರಿತು ಸರಳ ವ್ಯಾಯಾಮದ ಆಸನಗಳನ್ನು ಮಾಡಿ, ದೇಹ ಶುದ್ಧತೆ, ದೈಹಿಕ ಸದೃಢತೆಗೆ ಪ್ರಯತ್ನಿಸಲು ಕರೆ ನೀಡಿದರು. ಅದರಂತೆ ವೇದಿಕೆಯ ಮೇಲೆಯೇ ಸೂರ್ಯ ನಮಸ್ಕಾರಗಳೊಂದಿಗೆ ಶಿರ್ಷಾಸನ, ಧನುರಾಸನ ಇತ್ಯಾದಿ ಆಸನಗಳನ್ನು ಮಾಡಿ ಪ್ರಾತ್ಯಕ್ಷಿಕೆಯನ್ನು ನೀಡಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಮುಖ್ಯ ಅತಿಥಿಗಳಾಗಿ ಧಾರವಾಡ ಗಣಪತಿ ಸುಗಮ ಸಂಗೀತ ವಿದ್ಯಾಲಯದ ಅಧ್ಯಕ್ಷರಾದ ಡಾ. ಶ್ರೀಧರ ಕುಲಕರ್ಣಿ ಅವರು 'ಸಂಗೀತದಿಂದ ಆರೋಗ್ಯ' ಎಂಬ ವಿಷಯ ಕುರಿತು ಮಾತನಾಡುತ್ತಾ, ದೈಹಿಕ ಮಾನಸಿಕ ಒತ್ತಡಗಳನ್ನು ದೂರ ಮಾಡಲು ಸಂಗೀತವೂ ಸಹ ಮುಖ್ಯ ಪಾತ್ರ ವಹಿಸುತ್ತದೆ. ಏಕಾಗ್ರತೆ, ಮೌನ ವ್ರತ ಆಚರಣೆಗಳಿಂದ ಕೌಟುಂಬಿಕ ಸಮಸ್ಯೆಗಳನ್ನು ದೂರ ಮಾಡಬಹುದು ಎಂದರು.

ಸಂಗೀತದಿಂದ ಆರೋಗ್ಯ ಭಾಗ್ಯ ಲಭಿಸುತ್ತದೆ ಎನ್ನುವುದರಲ್ಲಿ 'ಬೃಂದಾವನಿ ಸಾರಂಗ ಯಮನ್ ರಾಗ' ಮಾನಸಿಕ ಒತ್ತಡ ಕಡಿಮೆ ಮಾಡುತ್ತದೆ. ಗರ್ಭಿಣಿ ಸ್ತ್ರೀಯರು ಈ ರಾಗ ಸಂಗೀತ ಆಲಿಸಿದಲ್ಲಿ ಪರಿಣಾಮಕಾರಿ. 'ಚಂದ್ರಕೌಂಸ' ರಾಗ ಶೀತ ನೆಗಡಿ ಪರಿಹಾರ, 'ದರ್ಬಾರಿ' ರಾಗ ಹೃದಯ ಕಾಯಿಲೆಗೆ, 'ಬಹಾರ' ರಾಗ ನಿದ್ರಾಹೀನತೆ ನಿವಾರಣೆ, 'ಮಾಲಕೌಂಸ' ರಾಗ ಲೋ ಬಿ.ಪಿ. ನಿವಾರಣೆ ಹೀಗೆ ಸಂಗೀತ ಆಲಿಸುವುದರಿಂದ ಮಾನಸಿಕ, ದೈಹಿಕ ಬದಲಾವಣೆ ಕಂಡುಕೊಳ್ಳಬಹುದು ಎಂದರು.

ಸಂಗೀತದಲ್ಲಿಯ 'ಓಂ' ಪಠಿಸುವ ರಾಗ ಸೂರ ಹಿಡಿಯುವ ಕೌಶಲ ಪರಿಚಯಿಸಿ, ಅವರೇ ಸಂಯೋಜಿಸಿದ ವಚನಗಳನ್ನು, ದೇಶ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ, ಸಂಗೀತದ ರಸದೌತಣ ನೀಡಿದರು.

ಕ.ವಿ.ವ. ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ ಮಾತನಾಡಿ, ವ್ಯಕ್ತಿತ್ವ ಬೆಳವಣಿಗೆಯಲ್ಲಿ ಯೋಗ ಸಂಗೀತಗಳ ಸಂಸ್ಕಾರಗಳೊಂದಿಗೆ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಅದರಂತೆ ಸಂಗೀತವನ್ನು ಪ್ರಾಣಿ, ಸಸ್ಯಗಳು ಆಲಿಸುತ್ತವೆ, ಪ್ರತಿಕ್ರಿಯಿಸಿ ಬೆಳೆಯುತ್ತವೆ ಎಂಬ ಅಂಶವನ್ನು ತಿಳಿಯಪಡಿಸಿದರು. ದಿ. ಶಂ. ವೀ. ಬಿಳಿಅಂಗಡಿಯವರು ಅಪ್ಪಟ ಗಾಂಧಿವಾದಿಗಳಾಗಿ 'ಪುಸ್ತಕ ಸಂಸ್ಕೃತಿ' ಯನ್ನು ಬೆಳೆಸಿದ ಸಮರ್ಪಣಾ ಭಾವದ ಶಿಕ್ಷಕರಾಗಿದ್ದನ್ನು ಸ್ಮರಿಸಿದರು.

ಶಿಕ್ಷಕ ಮಹಾಂತೇಶ ನರೇಗಲ್ ಪ್ರಾರ್ಥಿಸಿದರು. ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಅತಿಥಿಗಳನ್ನು ಪರಿಚಯಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

೧೧. **ಶ್ರೀಮತಿ ಲಲಿತಾಬಾಯಿ ಉರ್ಫ ಲಕ್ಷ್ಮೀಬಾಯಿ ಜೀವಣ್ಣಗೌಡ ಪಾಟೀಲಕುಲಕರ್ಣಿ**: ದಾನಿಗಳು, ಶ್ರೀ ಮನೋಜ ಪಾಟೀಲ, ಧಾರವಾಡ

ಪ್ರತಿವರ್ಷ ಮೇ ೨ ರಂದು ಕವಿಯಿತ್ರಿಯೊಬ್ಬರಿಗೆ ಸನ್ಮಾನ ಹಾಗೂ ಕವಿಗೋಷ್ಠಿ ಏರ್ಪಡಿಸಲು ದತ್ತಿ ಸ್ಥಾಪಿಸಿದ್ದಾರೆ.

೧೨. **ಪ್ರೊ. ಕೆ. ಎಸ್. ದೇಶಪಾಂಡೆ ದತ್ತಿ** : ದಾನಿಗಳು, ಪ್ರೊ. ಕೆ. ಎಸ್. ದೇಶಪಾಂಡೆ ದತ್ತಿ ಸಮಿತಿ, ಬೆಂಗಳೂರು

ಪುಸ್ತಕಗಳು ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕಗಳು. ಮಾನವ ಜನಾಂಗದ ಬದುಕಿನ ಸಂಗಾತಿಗಳು. ಪುಸ್ತಕ ಸಂಸ್ಕೃತಿಯಿಂದ ಜ್ಞಾನ ಹಾಗೂ ಲೋಕಾನುಭವ ನಮ್ಮಲ್ಲಿ ಉಂಟಾಗಲು ಸಾಧ್ಯ ಎಂದು ಹಿರಿಯ ಸಾಹಿತಿ ಡಾ. ಶ್ಯಾಮಸುಂದರ ಬಿದರಕುಂದಿ ಅಭಿಪ್ರಾಯಪಟ್ಟರು.

ಅವರು ಧಾರವಾಡದ ಕ.ವಿ.ವ. ಸಂಘದಲ್ಲಿ ದಿನಾಂಕ **೫-೫-೨೦೧೮** ರಂದು ಆಯೋಜಿಸಿದ ಪ್ರೊ. ಕೆ.ಎಸ್. ದೇಶಪಾಂಡೆ ದತ್ತಿ ಕಾರ್ಯಕ್ರಮದಲ್ಲಿ **'ಪುಸ್ತಕ ಸಂಸ್ಕೃತಿ'** ಕುರಿತು ಉಪನ್ಯಾಸ ನೀಡಿ, ಲೇಖಕ, ಪ್ರಕಾಶಕ ಹಾಗೂ ಶ್ರದ್ಧಾಪೂರ್ವಕವಾಗಿ ಓದುವ ವಾಚಕರು ಪುಸ್ತಕ ಸಂಸ್ಕೃತಿಯ ಮೂಲಾಧಾರಗಳು. ಪುಸ್ತಕಗಳೇನು ಮನುಷ್ಯರಲ್ಲ. ಆದರೂ ಅವು ಜೀವಿಸಿರುತ್ತವೆ. ನಮಗೆ ಜೀವನಕ್ಕಿಂತ ಪುಸ್ತಕ ವಾಚನವೇ ಶ್ರೇಷ್ಠ. ಪುಸ್ತಕಗಳನ್ನು ಬೇಕಾದ ಹೊತ್ತಿನಲ್ಲಿ, ಬೇಕಾದ ಸ್ಥಳದಲ್ಲಿ ಓದಬಹುದು. ನಮ್ಮ ಸಂಸ್ಕೃತಿ ಹಾಗೂ ನಾಗರೀಕತೆಯ ಬೆಳವಣಿಗೆಗೆ ಪುಸ್ತಕಗಳೇ ಕಾರಣ. ಪುಸ್ತಕ ಓದುವ ಸಮಾಜವನ್ನು ನಾವಿಂದು ಸೃಷ್ಠಿಸಬೇಕಾಗಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ಪುಸ್ತಕ ಪ್ರೇಮವಿಲ್ಲದವನು ಹಣವಂತನಾಗಿದ್ದರೂ ಸಹ ದರಿದ್ರನೆ. ಪುಸ್ತಕ ಓದುವ ಹವ್ಯಾಸವುಳ್ಳವರು ಎಲ್ಲಿ ಹೋದರೂ ಸಂತೋಷವಾಗಿರಬಲ್ಲರು. ಪುಸ್ತಕಗಳು ನಮ್ಮ ಮುಂದಿನ ಯುವಪೀಳಿಗೆಗೆ ದಾರಿದೀಪವಾಗಿ, ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಬುನಾದಿಯಾಗಲಿ ಎಂದು ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಮಾತನಾಡಿ, ಪುಸ್ತಕಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹದಂತೆ. ಪುಸ್ತಕ ಪ್ರೀತಿಸುವವನಿಗೆ ಸ್ನೇಹಿತರ ಅಗತ್ಯವಿಲ್ಲ. ಪುಸ್ತಕ ಸಂಸ್ಕೃತಿಯಿಂದ ನಮ್ಮ ಬದುಕು ಶ್ರೀಮಂತವಾಗುತ್ತದೆ. ಪುಸ್ತಕಗಳು ನಮ್ಮನ್ನು ಚಿಂತನೆ ಮಾಡಿಸುವ ಯಂತ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಇಂದಿನ ಯುವಪೀಳಿಗೆ ಪುಸ್ತಕ ಓದುವ ಹಾಗೂ ರಚಿಸುವ ಕಾರ್ಯದಲ್ಲಿ ಕಾರ್ಯೋನ್ಮುಖವಾಗುವಂತೆ ಸಲಹೆ ನೀಡಿದರು.

ಪ್ರೊ. ಕೆ.ಎಸ್. ದೇಶಪಾಂಡೆ ಅವರು ೯೫ ವಸಂತಗಳನ್ನು ಪೂರೈಸಿದ್ದಕ್ಕಾಗಿ ಸಂಘದ ಪರವಾಗಿ ಆತ್ಮೀಯವಾಗಿ ಸನ್ಮಾನಿಸಿ, ಶುಭಕೋರಲಾಯಿತು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಹಾಗೂ ದತ್ತಿ ದಾನಿಗಳ ಪರವಾಗಿ ಜಿ.ಬಿ. ಹೊಂಬಳ ಇದ್ದರು. ಪ್ರಾರಂಭದಲ್ಲಿ ಶ್ರೀಮತಿ ಆಶಾ ಸಯ್ಯದ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಶ್ರೀನಿವಾಸ ವಾಡಪ್ಪಿ ಕೆ. ಎಸ್. ದೇಶಪಾಂಡೆ ಅವರ ಜೀವನ ಹಾಗೂ ಸಾಧನೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಮೇ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಂಕರ ಕುಂಬಿ ನಿರೂಪಿಸಿದರು. ನಿವೃತ್ತ ಶಿಕ್ಷಕ ವೀರಣ್ಣ ಒಡ್ಡೀನ ವಂದಿಸಿದರು.

೧೩. **ಕೀರ್ತಿಶೇಷ ಪ್ರಹ್ಲಾದ ನರೇಗಲ್ ದತ್ತಿ:** ದಾನಿಗಳು, ಶ್ರೀ ಶ್ರೀನಿವಾಸ ಕೃ. ದೇಸಾಯಿ, ಬೆಂಗಳೂರು

ಗ್ರಾಮೀಣ ಭಾಗದಲ್ಲಿ ಜನಿಸಿ ಸ್ವಪ್ರತಿಭೆಯಿಂದ ನರೇಗಲ್ಲ ಮಾಸ್ತರ ಎಂದು ಖ್ಯಾತನಾಮರಾದವರು ದಿ. ಪ್ರಹ್ಲಾದ ಬ. ನರೇಗಲ್ಲರವರು. ಸಾಧನೆಗೆ ಬಡತನ ಎಂದೂ ಅಡಚಣೆಯಲ್ಲ ಎಂದು ಅಪಾರ ಸಾಧನೆ ಮಾಡಿ ತೋರಿಸಿದ ಜ್ವಲಂತ ಉದಾಹರಣೆ ಮತ್ತು ಆದರ್ಶಪ್ರಾಯರು ನರೇಗಲ್ಲ ಮಾಸ್ತರರು. ನರೇಗಲ್ಲ ಮಾಸ್ತರರು ಅಂಬಿಕಾತನಯದತ್ತರ ಹಾಡುಗಳನ್ನು ನಾಡಿನ ಉದ್ದಗಲಕ್ಕೂ ಸುಶ್ರಾವ್ಯವಾಗಿ ಹಾಡಿ, ಬೇಂದ್ರೆಯವರ ಕಾವ್ಯಗಳನ್ನು ಜನತೆಗೆ ಪರಿಚಯ ಮಾಡಿದ ಮಹಾಕಾರ್ಯ ಮಾಡಿದ್ದಾರೆ. ಗುರುದೇವ ಡಾ. ರವೀಂದ್ರನಾಥ ಟ್ಯಾಗೋರ ಹಾಗೂ ಡಾ. ದ.ರಾ. ಬೇಂದ್ರೆರವರ ನೇರ ಶಿಷ್ಯರಾಗಿದ್ದ ನರೇಗಲ್ಲ ಮಾಸ್ತರರು ಕನ್ನಡ ಸಾಹಿತ್ಯ ರಚನೆ ಮತ್ತು ಹಾಡುಗಾರಿಕೆ ಮೂಲಕ ಈ ಭಾಗದ ಜನತೆಗೆ ಚಿರಪರಿಚಿತರು ಎಂದು ಹಿರಿಯ ಸಾಹಿತಿ ಪ್ರೊ. ಕೆ. ಎಸ್. ಕೌಜಲಗಿ ಅವರು ಹೇಳಿದರು.

ಗುರು-ಶಿಷ್ಯ ಪರಂಪರೆಯ ಶ್ರೇಷ್ಠ ಹರಿಕಾರರಾದ ನರೇಗಲ್ಲ ಮಾಸ್ತರರು ಬಂಗಾಲಿ ಭಾಷೆ ಆಳವಾಗಿ ಅಧ್ಯಯನ ಮಾಡಿ ಬಂಗಾಲಿ, ಇಂಗ್ಲೀಷ ಮತ್ತು ಕನ್ನಡ ಭಾಷೆಯಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ಡಾ. ರವೀಂದ್ರನಾಥ ಟ್ಯಾಗೋರರ 'ಗೀತಾಂಜಲಿ'ಯನ್ನು ಕನ್ನಡಕ್ಕೆ ಅನುವಾದಿಸಿದ ಮಹಾಸಾಧಕ ನರೇಗಲ್ಲ ಮಾಸ್ತರರು ಎಂದು ಮುಂದುವರೆದು ಮಾತನಾಡಿದ ಪ್ರೊ. ಕೌಜಲಗಿ ಹೇಳಿದರು.

ಪ್ರೊ. ಕೌಜಲಗಿ ದಿ. ಪ್ರಹ್ಲಾದ ನರೇಗಲ್ಲ ಮಾಸ್ತರರ ಹೆಸರಿನಲ್ಲಿ ಅವರ ಶಿಷ್ಯರಾದ ಶ್ರೀ ಶ್ರೀನಿವಾಸ ಕೃ. ದೇಸಾಯಿ ನಿವೃತ್ತ ಅಭಿಯಂತರರು ಸಂಘದಲ್ಲಿ ಇರಿಸಿದ ದತ್ತಿ ಕಾರ್ಯಕ್ರಮ ದಿನಾಂಕ **೭-೫-೨೦೧೮** ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಪ್ಪಟ ಗ್ರಾಮೀಣ ಪ್ರತಿಭೆಯಾದ ನರೇಗಲ್ಲ ಮಾಸ್ತರರು ಶಾಂತಿನಿಕೇತನದ ವಿದ್ಯಾರ್ಥಿ ಎಂಬುದು ನಮ್ಮೆಲ್ಲರ ಹೆಮ್ಮೆಯ ಸಂಗತಿ ಎಂದು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹೇಳಿದರು.

ದತ್ತಿ ದಾನಿಗಳಾದ ಶ್ರೀನಿವಾಸ ಕೃ ದೇಸಾಯಿ, 'ಗುರು-ಶಿಷ್ಯ' ಪರಂಪರೆ ತಮ್ಮ ಮೇಲೆ ಅಪಾರ ಪ್ರಭಾವ ಬೀರಿದೆ. ತನ್ನ ಗುರು ನರೇಗಲ್ಲ ಮಾಸ್ತರರ ಸ್ವಭಾವದಿಂದಾಗಿ ನನ್ನ ವ್ಯಕ್ತಿತ್ವ ವಿಕಸನವಾಗಲು ಸಾಧ್ಯವಾಯಿತು ಎಂದು ತಮ್ಮ ದತ್ತಿ ಆಶಯ ನುಡಿಗಳನ್ನಾಡುತ್ತಾ ಹೇಳಿದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ನಿರೂಪಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು.

೧೪. **ಶತಾಯುಷಿ ದಿ. ಸಂಗಮ್ಮ ಗುರಪ್ಪ ಇಮ್ರಾಪೂರ ಸಂಸ್ಮರಣ ದತ್ತಿ** : ದಾನಿಗಳು, ಪ್ರೊ. ಶಾಂತಾ ಹಾಗೂ ಪ್ರೊ. ಸೋಮಶೇಖರ ಇಮ್ರಾಪೂರ

ತಾಯಿ ಎಂಬ ಪದವು ಭೂಮಿ–ಆಕಾಶದ ಉದ್ದಗಲವನ್ನೂ ಮೀರಿ ವಿಸ್ತೃತವಾದದ್ದು. ಮನೆಯ ತಾಯಿಯಿಂದ ಪ್ರಾರಂಭಿಸಿ ನಾಡತಾಯಿ, ರಾಷ್ಟ್ರಮಾತೆ, ಭೂಮಾತೆ, ಆಕಾಶಮಾತೆ, ನೀರುಮಾತೆ ಮತ್ತು ಜೀವಮಾತೆಯಾಗಿ ಮಾತೃದೇವತೆಯನ್ನು ಆರಾಧನೆ ಮಾಡುತ್ತಾ ಬಂದಿರುವುದು ಭಾರತೀಯ ಭವ್ಯ ಸಂಸ್ಕೃತಿಯಾಗಿದೆ. ಯಾವುದೇ ಸಾಹಿತ್ಯದ ಪ್ರಕಾರವನ್ನು ಓದಿದಾಗ ತಾಯಿಯ ಮಹತ್ವವನ್ನು ಕೊಂಡಾಡುವ ಸಾಹಿತ್ಯ ಮೇಲ್ಪಂಕ್ತಿಯ ಸಾಹಿತ್ಯವಾಗಿ ಕಂಡುಬರುವುದು. ಜನಪದ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಮಾತೃತ್ವವನ್ನು ಕೇಂದ್ರೀಕರಿಸಿ ಸಾಹಿತ್ಯ ರಚನೆ ಮಾಡಿರುವುದು, ನಮ್ಮ ಸಂಸ್ಕೃತಿಯಲ್ಲಿ ತಾಯಿಗಿರುವ ಮಹತ್ವವನ್ನು ಮತ್ತೆ ಮತ್ತೆ ಒತ್ತಿಹೇಳುತ್ತದೆ. ತಾಯಿಯನ್ನು ಕೇವಲ ವರ್ಣಿಸುವ ಸಾಹಿತ್ಯ ನಮ್ಮದಾಗಿರದೇ, ತಾಯಿಯನ್ನು ವರ್ಣಿಸುತ್ತಾ, ತಾಯಿಯ ಆರಾಧನೆ ನಮ್ಮ ಸಂಸ್ಕೃತಿ ಮತ್ತು ಸಾಹಿತ್ಯದ ಪ್ರಮುಖ ಘಟ್ಟವಾಗಿ ಕಾಣುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಮಾತೃಆರಾಧನೆ ಮಾಡುವ ನಾವು ನಿಸರ್ಗದ ಪ್ರತಿಯೊಂದು ವಸ್ತುವಿನಲ್ಲಿ ತಾಯಿ ಸಾಕ್ಷಾತ್ಕಾರವನ್ನು ಕಾಣುತ್ತಾ, ಅನುಭವಿಸುತ್ತಾ ಬಂದಿರುತ್ತೇವೆ. ಹೀಗಾಗಿ ನಾವು ಮಾತೃ ಆರಾಧನೆಯ ಪ್ರಮುಖ ಪ್ರತಿಪಾದಕರಾಗಿ ಜಗತ್ತಿನಲ್ಲಿ ಗುರುತಿಸುವ ಹಾಗೆ ಆಗಿರುತ್ತೇವೆ. ನಾವು ಮಣ್ಣು, ಕಲ್ಲು, ಗಿಡಮರ, ಜಲ, ಭೂಮಿ, ಆಕಾಶಗಳೆಲ್ಲದರಲ್ಲಿಯೂ ದೇವತೆಯನ್ನು ಕಂಡು ಅವುಗಳನ್ನು ಮಾತೃದೇವಿಯೆಂದು ಆರಾಧಿಸುತ್ತಾ ಬಂದಿರುತ್ತೇವೆ. ನಮ್ಮ ಮಾತೃದೇವತೆ ನಮಗೆ ಕ್ಷಮಾಧಾರಿತ್ರಿಯಾಗಿ ಕಾಣುತ್ತಾಳೆ. ಹಾಗಾಗಿ ನಾವು ಆ ತಾಯಿಗೆ, ತಾಯಿ ನಾನು ಏನು ತಪ್ಪು ಮಾಡಿದ್ದೇನೆ ಎಂಬುದು ನನಗೆ ಗೊತ್ತಿಲ್ಲ, ನಮ್ಮ ತಪ್ಪನ್ನು ಮನ್ನಿಸಿ, ಕ್ಷಮಿಸಿ ಉದ್ಧರಿಸು ತಾಯೆ ಎಂದು ಪ್ರಾರ್ಥಿಸಿ, ನಮ್ಮನ್ನು ಹಡೆದ ತಾಯಿಯ ಜೊತೆಗೆ ನಿಸರ್ಗದಲ್ಲಿರುವ ಎಲ್ಲ ತಾಯಂದಿರು ಕ್ಷಮಿಸಿ ನಮ್ಮನ್ನು ಉದ್ಧರಿಸುತ್ತಾರೆ ಎಂಬ ಬಲವಾದ ನಂಬಿಕೆಯುಳ್ಳ ಸಂಸ್ಕೃತಿ ನಮ್ಮದು. ಈ ಅರಿವು ನಮಗೆ ಅಕ್ಷರ ಜ್ಞಾನದಿಂದ ಬಂದ ಅರಿವಾಗಿರದೇ, ಅನುಭವಜನ್ಯವಾದ ಅರಿವಾಗಿದೆ ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಪ್ರಜ್ಞಾ ಮತ್ತಿಹಳ್ಳಿ ಅವರು ಹೇಳಿದರು.

ಪ್ರೊ. ಶಾಂತಾ ಇಮ್ರಾಪೂರ ಮತ್ತು ಪ್ರೊ. ಸೋಮಶೇಖರ ಇಮ್ರಾಪೂರ ದಂಪತಿಗಳು ಇರಿಸಿದ ಶತಾಯುಷಿ ದಿ. ಸಂಗಮ್ಮ ಇಮ್ರಾಪೂರ ಸಂಸ್ಮರಣ **ದತ್ತಿ ಉದ್ಘಾಟನಾ** ಮತ್ತು ಪ್ರಥಮ ದತ್ತಿ (ದಿನಾಂಕ: **೨೦–೫–೨೦೧೮)** ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ **"ಭಾರತೀಯ ಸಂಸ್ಕೃತಿಯಲ್ಲಿ ಮಾತೃ ದೇವತೆಯ ಆರಾಧನೆ"** ಎಂಬ ವಿಷಯದ ಮೇಲೆ ಮಾತನಾಡಿದ ಡಾ. ಪ್ರಜ್ಞಾ ಮತ್ತಿಹಳ್ಳಿ ಅವರು, ಜಗತ್ತಿನ ಎಲ್ಲ ನಾಗರಿಕ ಸಂಸ್ಕೃತಿಗಳಲ್ಲಿ ಮಾತೃ ಆರಾಧನೆಯನ್ನು ನಾವು ಕಂಡರೂ ಕೂಡ, ಭಾರತೀಯ ಸಂಸ್ಕೃತಿಯಲ್ಲಿ ಮಾತೃಆರಾಧನೆ ಜಗತ್ತಿನಾದ್ಯಂತ ಅತ್ಯಂತ ವಿಶಿಷ್ಟ, ವಿಶೇಷ ಹಾಗೂ ಮಹತ್ವದ ಮಾತೃಆರಾಧನೆ ಎಂದು ಪ್ರಸಿದ್ಧಿ ಪಡೆದಿದೆ. ನಾಗರಿಕತೆಯ ಆರಂಭದಿಂದಲೂ ತಾಯಿಯ ಮಹತ್ವವನ್ನು ಅರಿತು, ಪ್ರತಿಯೊಂದರಲ್ಲಿಯೂ ತಾಯಿಯನ್ನು ದೇವತೆಯನ್ನಾಗಿಸಿ, ಮಾತೃದೇವತೆ ಎಂಬ ಆರಾಧನೆಯನ್ನು ಮಾಡಿಕೊಂಡು ಬರುತ್ತಿರುವ ಶ್ರೀಮಂತ ಪರಂಪರೆ ನಮ್ಮದು ಮತ್ತು ಇದು ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಅವರು ಮುಂದುವರೆದು ಮಾತನಾಡುತ್ತಾ ಹೇಳಿದರು.

ದತ್ತಿದಾನಿಗಳ ಪರವಾಗಿ ಮಾತನಾಡಿದ ಪ್ರೊ. ಸೋಮಶೇಖರ ಇಮ್ರಾಪೂರ ಅವರು, ತಮ್ಮ ತಾಯಿಯಾದ ಸಂಗಮ್ಮ ಇಮ್ರಾಪೂರ ಇವರು ನಿರಕ್ಷರಿಯಾದರೂ ಕೂಡ, ತನ್ನ ಎಲ್ಲ ಮಕ್ಕಳು ಎತ್ತರಕ್ಕೆ ಬೆಳೆಯಲು ಅರಿವನ್ನು ನೀಡಿ ಗುರುವಾಗಿ ಸಾಕಷ್ಟು ಕಲಿಸಿಕೊಟ್ಟಿದ್ದಾಳೆ, ಅವಳು ಅಸಂಖ್ಯಾತ ತ್ರಿಪದಿಗಳನ್ನು ಹಾಡುತ್ತಿದ್ದುದು, ನನ್ನ ಮೇಲೆ ಪರಿಣಾಮ ಬೀರಿ, ನನಗೆ ಜಾನಪದಲೋಕದ ಕಡೆಗೆ ವಿಶೇಷ ಒಲವು ಹುಟ್ಟಿ, ಆ ಕಡೆಗೆ ನನ್ನನ್ನು ಎಳೆದೋಯಿತು, ಸಂಗಮ್ಮ ಇಮ್ರಾಪೂರ ರಜಾಕರ ಹಾವಳಿಯನ್ನು ಗಟ್ಟಿಯಾಗಿ ವಿರೋಧಿಸಿ ಹೋರಾಡಿದ ಧೀರ ಮಹಿಳೆ, ಅಕಾಲಿಕ ಗಂಡನ ಮರಣದಿಂದ ದಿಕ್ಕೆಡದೇ ಸಂಸಾರದ ನೊಗವನ್ನು ಹೊತ್ತು ಸಂಸಾರವನ್ನು ಆದರ್ಶಪ್ರಾಯವಾಗಿ ನಡೆಸಿ ಯಶಸ್ವಿ ಸುದೀರ್ಘ ನೂರು ವರ್ಷಗಳ ಜೀವನ ಮಾಡಿದ ಮಹಾತಾಯಿ ಸಂಗಮ್ಮ ಇಮ್ರಾಪೂರ ಎಂದು ಅವರು ತಮ್ಮ ತಾಯಿ ಸಂಗಮ್ಮ ಇಮ್ರಾಪೂರ ಅವರ ವ್ಯಕ್ತಿ ಚಿತ್ರಣ ಬಿಡಿಸಿಟ್ಟರು.

ತಾಯಿಯಿಂದ ಎಲ್ಲವನ್ನೂ ಪಡೆಯುವ ನಾವು ಆ ಮಹಾತಾಯಿಗೆ ಶಾಶ್ವತ ಸ್ಥಾನ ದೊರಕುವಂತೆ ಮಾಡಬೇಕು, ಹಾಗೇ ನಾವು ಮಾಡದೆ ಇರುವುದರಿಂದ ತಾಯಿಯ ಬಗ್ಗೆ ಎಷ್ಟೇ ಮಾತನಾಡಿದರೂ ಪ್ರಯೋಜನವಾಗಲಾರದು, ಮಾತನಾಡಿದ್ದು ಗಾಳಿಯಲ್ಲಿ ತೇಲಿಹೋಗದೇ, ತಾಯಿ ಮಾಡಿದ ಸಾರ್ಥಕ ಬದುಕು ಅಜರಾಮರವಾಗಿ ಉಳಿಯುವಂತೆ ನಾವು ಏನಾದರೂ ಮಾಡಿದರೆ ಒಳ್ಳೆಯದು, ಈ ದಿಶೆಯಲ್ಲಿ ಡಾ. ಇಮ್ರಾಪೂರ ದಂಪತಿಗಳು ತಮ್ಮ ತಾಯಿ ಅಜರಾಮರವಾಗಿ ಉಳಿಯುವಂತೆ ಮಾಡಿರುವುದು ಶ್ಲಾಘನೀಯ, ಸಂಗಮ್ಮ ಇಮ್ರಾಪೂರ ಅವರ ಸೊಸೆಯಾದರೂ ಕೂಡ ಡಾ. ಶಾಂತಾ ಇಮ್ರಾಪೂರ ತಮ್ಮ ಅತ್ತೆಯವರ ಸ್ಮರಣಾರ್ಥ ಸಂಘದಲ್ಲಿ ಈ ದತ್ತಿ ಸ್ಥಾಪಿಸಿರುವುದು ಇತರರಿಗೂ

ಮಾದರಿ ಮತ್ತು ಇದು ಈ ದತ್ತಿಯ ವಿಶೇಷವೆಂದು ದತ್ತಿಯನ್ನು ಉದ್ಘಾಟಿಸಿದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಉದ್ಘಾಟನಾ ಪರ ನುಡಿಗಳನ್ನಾಡುತ್ತಾ ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಧಾರವಾಡದ ಸಮನ್ವಯ ಟ್ರಸ್ಟಿನ ಶ್ರೀಮತಿ ಗಿರಿಜಾ ಹಿರೇಮಠ ಮತ್ತು ಸುಂದರಮ್ಮ ಮಾದರ ತಂಡದ ಕಲಾವಿದರು ಜಾನಪದ ಸಾಂಪ್ರದಾಯಿಕ ಗೀತೆಗಳನ್ನು ಹಾಡಿ ಸಭೀಕರಿಗೆ ರಸದೌತಣ ನೀಡಿದರು.

ವೇದಿಕೆ ಮೇಲೆ ದತ್ತಿದಾನಿಗಳ ಕುಟುಂಬದ ಹಿರಿಯರಾದ ಶ್ರೀ ಶಿವಪ್ಪ ಇಮ್ರಾಪೂರ ಹಾಗೂ ಸೋಮಶೇಖರ ಇಮ್ರಾಪೂರ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ದಿ. ಶ್ರೀಮತಿ ಸಂಗಮ್ಮ ಇಮ್ರಾಪೂರ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾ.ಕಾ.ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಸ್ವಾಗತಿಸಿದರು ಮತ್ತು ಶಂಕರ ಕುಂಬಿ ನಿರೂಪಿಸಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಅವರು ವಂದಿಸಿದರು.

೧೫. **ಶ್ರೀಮತಿ ಚನ್ನಮ್ಮ ಬಸಲಿಂಗಪ್ಪ ಹೊಸಕೋಟಿ ದತ್ತಿ :** ದಾನಿಗಳು, ದಿ. ಶ್ರೀ ಚನಬಸಪ್ಪ ಬ. ಹೊಸಕೋಟಿ

ಸಾಹಿತ್ಯ ಲೋಕದಲ್ಲಿ ಐತಿಹಾಸಿಕ ಮಹಾನ್ ವ್ಯಕ್ತಿಗಳ ಕುರಿತು ಜಾಗತಿಕ ಮಟ್ಟದಲ್ಲಿ ಸಾಕಷ್ಟು ಕೃತಿಗಳು ರಚನೆಯಾಗಿವೆ. ಜಾಗತಿಕ ಸಾಹಿತ್ಯ ಲೋಕದಲ್ಲಿ ಮಹಾತ್ಮಾ ಗಾಂಧೀಜಿಯವರ ಕುರಿತಾಗಿ ಅತೀ ಹೆಚ್ಚು ಸಾಹಿತ್ಯ ರಚನೆಯಾಗಿದೆ ಎಂಬುದು ಹೆಮ್ಮೆಯ ಸಂಗತಿ. ಗಾಂಧೀಜಿಯ ಕುರಿತಾಗಿ ಇರುವ ಸಾಹಿತ್ಯವನ್ನು ಅಭ್ಯಸಿಸಿದಾಗ ಗಾಂಧೀಜಿ ವಿಶ್ವದಲ್ಲಿಯೇ ಸರ್ವಶ್ರೇಷ್ಠ ದಾರ್ಶನಿಕರಾಗಿ ತೋರುತ್ತಾರೆ. ಗಾಂಧೀಜಿಯ ತತ್ವ ಸಿದ್ಧಾಂತಗಳು ಆದರ್ಶ ಪ್ರಾಯವಾಗಿ ಇಂದಿಗೂ ಪ್ರಸ್ತುತ ಮಾರ್ಗದರ್ಶಕವಾಗಿವೆ. ಗಾಂಧೀಜಿಯ ಕುರಿತಾದ ಪುಸ್ತಕಗಳನ್ನು ನೋಡಲಾಗಿ, ಗಾಂಧೀಜಿಯ ಮೇಲೆ ಅವರ ತಾಯಿಯಾದ ಪುತಲೀಬಾಯಿಯವರ ಪ್ರಭಾವ ಕಂಡು ಬರುತ್ತದೆ. ವಿಶ್ವವಿಖ್ಯಾತ ಮಟ್ಟಕ್ಕೆ ಗಾಂಧೀಜಿ ಏರಲು, ಗಾಂಧೀಜಿಯವರು ತಮ್ಮ ತಾಯಿ ಪುತಲೀಬಾಯಿಯವರು ನಡೆಸಿರುವ ಆದರ್ಶಪ್ರಾಯ ಜೀವನದ ಪ್ರಭಾವವೇ ಕಾರಣ. ಪಾಪು ಗಾಂಧಿಯಾಗಿದ್ದವರನ್ನು ಗಾಂಧಿ ಬಾಪುವಾಗಿಸುವಲ್ಲಿ ಅವರ ತಾಯಿ ಬದುಕಿ ಬಾಳಿದ ಆದರ್ಶವೇ ಕಾರಣ. ಗಾಂಧೀಜಿಯ ಜೀವನ ಚರಿತ್ರೆಯನ್ನು ಓದುವಾಗ ಅವರ ತಾಯಿಯವರ ಆದರ್ಶಗಳನ್ನು ಕೊಂಡಾಡುತ್ತಾ, ಆ ಆದರ್ಶ ಚೌಕಟ್ಟುಗಳನ್ನು ಪಾಲಿಸುವ ಶ್ರದ್ಧೆ ತನಗರಿವಿಲ್ಲದಂತೆ ಹುಟ್ಟಿಕೊಂಡಿದ್ದು ಮತ್ತು ಚೌಕಟ್ಟಿನ ಎಲ್ಲೆಗಳನ್ನು ಮೀರುವ ಧೈರ್ಯ ಗಾಂಧೀಜಿಯವರ ಜೀವನದುದ್ದಕ್ಕೂ ಬರಲೇ ಇಲ್ಲ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ಶಿವಾನಂದ ಶೆಟ್ಟರ **'ಗಾಂಧಿ ಮತ್ತು ಮಾತೃತ್ವ'** ಎಂಬ ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ನುಡಿದರು.

ಶ್ರೀಮತಿ ಚನ್ನಮ್ಮ ಬಸಲಿಂಗಪ್ಪ ಹೊಸಕೋಟಿ ದತ್ತಿ ಅಂಗವಾಗಿ ದಿನಾಂಕ **೨೨-೫-೨೦೧೮** ರಂದು ಆಯೋಜಿಸಿದ ಕಾರ್ಯಕ್ರಮದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡಿದ ಡಾ. ಶಿವಾನಂದ ಶೆಟ್ಟರ, ಗಾಂಧೀಜಿಯವರು ತಮ್ಮ ಮೇಲೆ ತಾವೇ ವಿಧಿಸಿಕೊಂಡಿರುವ ಕಟ್ಟಳೆಗಳ ಬೇರು ಎಲ್ಲಿವೆಯೆಂದು ಸೂಕ್ಷ್ಮವಾಗಿ ಶೋಧಿಸಿದಾಗ, ಅದು ಅವರ ತಾಯಿಯಿಂದ ಬಂದವು ಎಂದು ಕಂಡು ಬರುತ್ತದೆ. ತಾಯಿಯ ಮೇಲಿನ ಶ್ರದ್ಧೆ, ತಾಯಿಗಿತ್ತ ವಚನ ಗಾಂಧೀಜಿಯವರನ್ನು ಹಲವಾರು ಸಂಕಷ್ಟಗಳಿಂದ ಪಾರು ಮಾಡಿ ಅವರನ್ನು ಮಹಾತ್ಮರನ್ನಾಗಿಸಿವೆ. ಗಾಂಧೀಜಿ ತಪ್ಪು ಮಾಡಿದಾಗ ಆಕ್ಷೇಪಿಸದೇ, ಆಕ್ರೋಶ ವ್ಯಕ್ತಪಡಿಸದೇ, ಸಿಟ್ಟಿಗೇಳದೇ, ಬೈಯದೇ, ಬಡಿಯದೇ ಇರುವುದು ಗಾಂಧೀಜಿಯ ಹುಟ್ಟುಗುಣಗಳಲ್ಲಿ ಪರಿವರ್ತನೆಗೆ ನಾಂದಿಯಾಯಿತು. ಮಹಾತ್ಮಾ ಗಾಂಧೀಜಿಯವರು ಮಹಿಳೆಯರಿಗೆ ಅಪಾರ ಗೌರವ ನೀಡುವ ವಿಚಾರಧಾರೆಗಳು ಗಾಂಧೀಜಿಯವರಲ್ಲಿರುವ ಮಾತೃತ್ವವನ್ನು ಸಾರಿ ಹೇಳುತ್ತವೆಂದು ಮುಂದುವರೆದು ಮಾತನಾಡುತ್ತಾ ಅವರು ಹೇಳಿದರು.

ಆಧುನಿಕ ಕಾಲದ ಮನೆಗಳು ಮಾತೃಮಯೀಯಾಗಲಿ, ತನ್ನ ಸ್ವಾರ್ಥ ಬಯಸದೇ ಹತ್ತಾರು ಮಕ್ಕಳ ಹೆತ್ತು-ಹೊತ್ತು, ಸಾಕಿ-ಸಲುಹಿ ಬೆಳೆಸಿದ ತಾಯಿಯನ್ನು ಜೋಪಾನ ಮಾಡಲಾರದಷ್ಟು ಅಧೋಗತಿಗೆ ಮನುಷ್ಯ ಬಂದು ತಲುಪಿದ್ದು ಖೇದಕರ. ಒಬ್ಬ ಮಗನಾದರು ಹೆತ್ತ ತಾಯಿ ಸಾಕದೇ ವೃದ್ಧಾಶ್ರಮಕ್ಕೆ ಬಿಟ್ಟು, ತಿರಗಿಯೂ ನೋಡದೇ ಕೈ ತೊಳೆದುಕೊಳ್ಳುವಂತಹ ದಿನಗಳು ಬಂದಿರುವುದು ತೀರಾ ದುರದೃಷ್ಟಕರ ಮತ್ತು ನೋವಿನ ಸಂಗತಿಯೆಂದು ಅಧ್ಯಕ್ಷೀಯ ಸಮಾರೋಪ ಮಾತುಗಳನ್ನಾಡುತ್ತಾ ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ತುಂಬಾ ನೋವಿನಿಂದ ಹೇಳಿದರು.

ದತ್ತಿ ದಾನಿಗಳಾದ ಚನ್ನಬಸಪ್ಪ ಹೊಸಕೋಟಿ, ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ದತ್ತಿ ಆಶಯದ ಪರ ಮಾತನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೀರಣ್ಣಾ ಒಡ್ಡೀನ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ನಿರೂಪಿಸಿದರು. ಕು. ಪ್ರಿಯದರ್ಶಿನಿ ಶೆಟ್ಟರ, ಶಿವಕುಮಾರ ಹಾಗೂ ದ್ಯಾಮವ್ವಾ ಪ್ರಾರ್ಥನೆಗೈದರು.

೧೬. **ಶ್ರೀ ಚಂದಪ್ಪ ಗೋಗಿ ದತ್ತಿ :** ದಾನಿಗಳು, ಶ್ರೀಮತಿ ಹನುಮಾಕ್ಷಿ ಗೋಗಿ, ಹುಬ್ಬಳ್ಳಿ.

ಅನುಭವ ಮಂಟಪ ನಮ್ಮ ಮುಂದಿರುವ ಪ್ರಜಾಪ್ರಭುತ್ವದ ಸ್ಪಷ್ಟ ಕಲ್ಪನೆಯಾಗಿದೆ. ನಾವು ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯ  ಭಾಗವಾಗಿದ್ದೇವೆ. ಅನುಭವ ಮಂಟಪದ ಅನುಭವಗಳ ಶೇಕಡಾ ಒಂದರಷ್ಟಾದರೂ ನಮ್ಮ ರಾಜಕಾರಣಿಗಳು ಪಾಲಿಸಿದಲ್ಲಿ, ನಮ್ಮ ರಾಜ್ಯ ಮತ್ತು ನಮ್ಮ ದೇಶ ನಂದನ ವನದಂತ್ತಿರುತ್ತಿತ್ತು. ರಾಜ್ಯಭವನದಲ್ಲಿ ತಟಸ್ಥ ನಿಲುವುಳ್ಳ ಪ್ರಾಮಾಣಿಕ ವ್ಯಕ್ತಿ ರಾಜ್ಯಪಾಲರಾಗಿ ಕಾರ್ಯನಿರ್ವಹಿಸುಂತಾಗಬೇಕು ಅಂದಾಗ ಮಾತ್ರ ಕೇಂದ್ರ ಮತ್ತು ರಾಜ್ಯಸರಕಾರಗಳ ಮಧ್ಯ ಸೌಹಾರ್ಧದ ಸೇತುವೆ ಬೆಳೆದು, ರಾಜ್ಯದಲ್ಲಿ ಕಲ್ಯಾಣರಾಜ್ಯದ ಕನಸು ನನಸಾದೀತು. ರಾಜಕೀಯದಲ್ಲಿ ದಕ್ಷರು, ಪ್ರಾಮಾಣಿಕರು, ಸಜ್ಜನರಿಗೆ ಜನಸಾಮಾನ್ಯರಿಂದ ಗೌರವ ಸಿಕ್ಕು, ಅಂಥವರು ರಾಜ್ಯವನ್ನಾಳಿದರೆ ನೀತಿನೆಲೆಗಟ್ಟಿನ ಮೇಲೆ ಸಮರ್ಪಕ ಆಡಳಿತ ಸಾಧ್ಯ. ಇಂತಹ ನೀತಿನೆಲೆಗಟ್ಟಿನ ಮೇಲೆ ರಾಜ್ಯ ನಡೆಸುವವರು ರಾಜ್ಯಪಾಲರಾದರೆ ಆ ಸ್ಥಾನಕ್ಕೆ ಗೌರವ ಸಂದಾಯವಾಗುವುದು. ರಾಜ್ಯಪಾಲರ ಹುದ್ದೆ ಅತ್ಯಂತ ಪವಿತ್ರವಾದ ಹುದ್ದೆ ಮತ್ತು ಸಾಕಷ್ಟು ಪ್ರಮುಖವಾದ ಸಂವಿಧಾನಿಕ ಜವಾಬ್ದಾರಿ, ಅಧಿಕಾರ ಮತ್ತು ಕರ್ತವ್ಯ ಹೊಂದಿರುವ ಹುದ್ದೆಯಾಗಿದೆ. ಇಂತಹ ಹುದ್ದೆಯಲ್ಲಿ ಅರ್ಹರು ಇರಬೇಕು ಎಂದು ಬಯಸುವ ಜನಸಾಮಾನ್ಯರು, ಜನಪ್ರತಿನಿಧಿಗಳನ್ನು ಆರಿಸುವಾಗ   ಜಾಗೃತ ಹೆಜ್ಜೆ ಇಟ್ಟು ಯಾವುದೇ ಪ್ರಭಾವಕ್ಕೆ ಒಳಗಾಗದೇ ಪ್ರಾಮಾಣಿಕರನ್ನು ಆಯ್ಕೆ ಮಾಡಿದಾಗ ಉತ್ತಮ ಆಡಳಿತಗಾರರು ಮತ್ತು ರಾಜ್ಯಪಾಲರನ್ನು ನಿರೀಕ್ಷಿಸಬಹುದಾಗಿದೆ. ಇಲ್ಲಿ ಜನಸಾಮಾನ್ಯ ತಪ್ಪು ಹೆಜ್ಜೆ ಇಡುತ್ತಿರುವುದರಿಂದ ಪ್ರಜಾಪ್ರಭುತ್ವದ ವಿಪರ್ಯಾಸಗಳುಳ್ಳ ಸನ್ನಿವೇಶ ಮತ್ತು ಸಂದರ್ಭಗಳನ್ನು  ನಾವು ನೋಡುವಂತಾಗಿದೆ ಎಂದು ಖ್ಯಾತ ನ್ಯಾಯವಾದಿಗಳಾದ ಶ್ರೀ ಎಂ. ಸಿ ಬಂಡಿಯವರು ಹೇಳಿದರು.

ಸಂಘದಲ್ಲಿ ದಿ. ಚಂದಪ್ಪ ಗೋಗಿ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨೪–೫–೨೦೧೮** ರಂದು ನಡೆದ **'ಸಂವಿಧಾನದಡಿಯಲ್ಲಿ ರಾಜ್ಯಪಾಲರ ಪಾತ್ರ'** ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ  ಶ್ರೀ ಎಂ. ಸಿ. ಬಂಡಿ ಅವರು ರಾಜ್ಯಪಾಲರು ರಾಜ್ಯದೊಳಗೆ ಯಾವುದೇ ತರದ ಅಶಾಂತಿ, ಕಿಡಿಗೇಡಿತನ ಮತ್ತು ಕುಚೋದ್ಯದ ಸನ್ನಿವೇಶಗಳು ಉಂಟಾದಾಗ ಅಂಥವುಗಳನ್ನು ನಿಗ್ರಹಿಸುವ ವಿಶೇಷ ಅಧಿಕಾರ ಹೊಂದಿರುತ್ತಾರೆ. ಆದರೆ ರಾಜ್ಯಪಾಲರು ಇಂಥ ವಿಶೇಷ ಅಧಿಕಾರಗಳನ್ನು ಬಳಸಿಕೊಳ್ಳದೇ ಇರುವುದು ರಾಜ್ಯಗಳ ದೌರ್ಭಾಗ್ಯವೆಂದು ಮುಂದುವರೆದು ಮಾತನಾಡುತ್ತಾ ಅವರು ಹೇಳಿದರು.

ರಾಜ್ಯಪಾಲರ ಹುದ್ದೆ ಸಾಂವಿಧಾನಿಕವಾಗಿ ಅತ್ಯಂತ ಪ್ರಾಮುಖ್ಯ ಹುದ್ದೆ. ರಾಜ್ಯಪಾಲರು ಸಂವಿಧಾನ ಹೇಳುವ ಪ್ರಕಾರ ಒಂದು ರಾಜ್ಯದ ಸಂವಿಧಾನಿಕ ಮುಖ್ಯಸ್ಥರು. ರಾಜ್ಯಪಾಲರಿಗೆ ಸಂವಿಧಾನವು ಸಾಕಷ್ಟು ಅಧಿಕಾರವನ್ನು ನೀಡಿದೆ. ಈ ಅಧಿಕಾರವನ್ನು ರಾಜ್ಯಪಾಲರು ನಿಷ್ಪಕ್ಷಪಾತವಾಗಿ  ಬಳಸಿಕೊಳ್ಳದೇ ಇರುವುದರಿಂದ ಇಂದು ರಾಜ್ಯಪಾಲ ಮತ್ತು ರಾಷ್ಟ್ರಪತಿ ಹುದ್ದೆಗಳು ಆಳುವ ಸರ್ಕಾರಗಳ ರಬ್ಬರ ಸ್ಟ್ಯಾಂಪ್ ಎಂಬ ಕುಖ್ಯಾತಿಗೆ ಪಾತ್ರವಾಗಿವೆ. ಸಾಂವಿಧಾನಿಕ ಮುಖ್ಯಸ್ಥರಾದ ಗೌರವಾನ್ವಿತ ರಾಜ್ಯಪಾಲರು ಅತ್ಯಂತ ಗೌರವಯುತವಾಗಿ ಸಂವಿಧಾನದ ಕಟ್ಟಳೆಗಳನ್ನು ಎತ್ತಿಹಿಡಿದು ಪವಿತ್ರ ಹೆಜ್ಜೆಯನ್ನಿಡಬೇಕಾಗುತ್ತದೆ. ರಾಜಭವನಕ್ಕೆ ಬಂದ ಸೇರಿದ ರಾಜ್ಯಪಾಲರು ನಂತರದಲ್ಲಿ ಪಕ್ಷಾತೀತರಾಗಿ ಉಳಿಯಬೇಕು. ಪೂರ್ವಾಶ್ರಮದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ್ದರೂ, ಆ ಪಕ್ಷದ ತತ್ವ, ಸಿದ್ಧಾಂತ ಮತ್ತು ಅನತಿಗಳಿಗೆ ಮಣೆಹಾಕದೇ ಸಂಪೂರ್ಣ ಸ್ವತಂತ್ರವಾಗಿರಬೇಕು. ಅಂದಾಗ ಮಾತ್ರ ಆ ಸ್ಥಾನದ ಘನತೆ, ಗೌರವಗಳನ್ನು ಮತ್ತು ಈ ದೇಶದ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದಂತಾಗುವುದು. ರಾಜ್ಯಪಾಲರು  ಸಂವಿಧಾನಕ್ಕೆ ಮಾತ್ರ ವಿಧೇಯಕರಾಗಿರಬೇಕು ವಿನಃ ಯಾವುದೇ ರಾಜಕೀಯ ಪಕ್ಷಕ್ಕಾಗಲಿ ಅಥವಾ ಅವರನ್ನು ನೇಮಿಸಿದ ಕೇಂದ್ರ ಸರಕಾರಕ್ಕಾಗಲಿ ಅಲ್ಲ ಎಂದು ಸಂವಿಧಾನದ ಇಚ್ಛೆಯಾಗಿದೆ. ಸಂವಿಧಾನ ಕೊಡಮಾಡಿದ ಅಧಿಕಾರವನ್ನು ಚಲಾಯಿಸುವಲ್ಲಿ ರಾಜ್ಯಪಾಲರು ಖಂಡಿತವಾಗಿ ವಿವೇಚನಾಧಿಕಾರ ಹೊಂದಿದ್ದಾರೆ ಎಂದ ಮಾತ್ರಕ್ಕೆ, ಅವರು ತಮ್ಮ ಮನಸೋ ಇಚ್ಛೆ ಕಾರ್ಯನಿರ್ವಹಿಸುವಂತಿಲ್ಲ. ರಾಜ್ಯಸರಕಾರಗಳ ರಚನೆ ಮತ್ತು ಅವುಗಳ ಅಧಿಕಾರಾವಧಿಯಲ್ಲಿ ಮುಂದುವರೆಸುವಲ್ಲಿ ರಾಜ್ಯಪಾಲರ ಪಾತ್ರ ಬಹಳ ಪ್ರಾಮುಖ್ಯವಾದದ್ದು. ಇಂಥ ಸಂದರ್ಭದಲ್ಲಿ ರಾಜ್ಯಪಾಲರ ನಡೆ ಹೇಗಿರಬೇಕು ಎಂಬುವ ಕುರಿತು ಶ್ರೀ ಎಸ್. ಆರ್. ಬೊಮ್ಮಾಯಿ ಪ್ರಕರಣದಲ್ಲಿ ಈ ದೇಶದ ಸರ್ವೋಚ್ಚ ನ್ಯಾಯಾಲಯ, ರಾಜ್ಯಪಾಲರ ವಿವೇಚನಾಧಿಕಾರ ಮತ್ತು  ಸಂವಿಧಾನದತ್ತವಾದ ಅಧಿಕಾರಗಳ ಬಗ್ಗೆ ಸುದೀರ್ಘವಾಗಿ ವಿಶ್ಲೇಷಿಸಿ ನೀಡಿದ ತೀರ್ಪು ಇಂದಿಗೂ ಐತಿಹಾಸಿಕ ಮತ್ತು ಮೈಲುಗಲ್ಲಾದ ತೀರ್ಪಾಗಿದೆ. ಈ ಪ್ರಕರಣದಿಂದ ಹೊರಸೂಸಿದ ತತ್ವಗಳ ಪ್ರಕಾರ ರಾಜ್ಯಪಾಲರ ನಡೆ ಒಂದು ಸರಕಾರದ ಪರ ಇರುವ ಬಹುಮತವನ್ನು ವಿಧಾನಸೌಧದಲ್ಲಿ ಪರೀಕ್ಷೆಗೊಳಪಡಿಸಿ ತೀರ್ಮಾನಿಸುವಂತಿರಬೇಕು, ಹೊರತು ರಾಜ್ಯಪಾಲರ ಮನೆಯಂಗಳದಲ್ಲಿ ಶಾಸನ ಸಭೆಯ ಸದಸ್ಯರ ತಲೆ ಎಣಿಸುವ ಮೂಲಕ ಅಲ್ಲ ಎಂಬುದಾಗಿದೆ. ರಾಜ್ಯಪಾಲರು ಈ ತತ್ವ ನಿರ್ದೇಶನಗಳನ್ನು ಪಾಲಿಸಬೇಕಾಗುತ್ತದೆ. ಇದೇ ನಮ್ಮ ದೇಶದ ಸಂವಿಧಾನದ ಸೌಂದರ್ಯ. ಈ ಸಂವಿಧಾನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ರಾಜ್ಯಪಾಲರು ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳಬಾರದು, ರಾಜ್ಯಪಾಲರು ಪಕ್ಷಾತೀತರಾಗಿರಬೇಕು, ಸೇಡಿನ ಮನೋಭಾವ ಇರಬಾರದು ಎಂದು ಸೂಚ್ಯವಾಗಿ ಸಾರಿ ಹೇಳುವುದು ಕಂಡುಬರುತ್ತದೆ ಎಂದು ನ್ಯಾಯವಾದಿ ಕೆ. ಎಸ್. ಕೋರಿಶೆಟ್ಟರ ಅವರು ಚಂದಪ್ಪ ಗೋಗಿ ದತ್ತಿ ಕಾರ್ಯಕ್ರಮದ ಸಂವಿಧಾನದಡಿಯಲ್ಲಿ ರಾಜ್ಯಪಾಲರ ಪಾತ್ರ ಎಂಬ ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ತಮ್ಮ ಅಭಿಪ್ರಾಯ ಪ್ರಸ್ತುತಪಡಿಸಿದರು.

ಪ್ರಾರಂಭದಲ್ಲಿ ದಿ. ಚಂದಪ್ಪ ಗೋಗಿಯವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ದತ್ತಿದಾನಿಗಳಾದ ಶ್ರೀಮತಿ ಹನುಮಾಕ್ಷಿ ಗೋಗಿ ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ನಿರೂಪಿಸಿದರು.

೧೭. **ಶ್ರೀಮತಿ ಶಾಂತಕ್ಕ ಮಠದ ದತ್ತಿ :**

ಇತ್ತೀಚೆಗೆ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಪುಸ್ತಕಗಳು ಮನುಷ್ಯನ ಅತ್ಯಂತ ಶ್ರೇಷ್ಠ ಗೆಳೆಯ ಎಂಬ ಮಾತು ಪುಸ್ತಕಗಳ ಓದುವಿನ ಮಹತ್ವವನ್ನು ಸಾರಿ ಹೇಳುತ್ತಿದೆ. ಓದುವ ಹವ್ಯಾಸ ಕುಟುಂಬದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ. ಓದು ಮಹಿಳೆಗೆ ಶಕ್ತಿ ತುಂಬುತ್ತದೆ. ಮಹಿಳೆಯಲ್ಲಿನ ಓದುವ ಹವ್ಯಾಸ ಇನ್ನೂ ಪರಿಣಾಮಕಾರಿ. ಮಕ್ಕಳಿಗೆ ತಾಯಿ ಮೊದಲ ಗುರುವಾಗಿರುವುದರಿಂದ, ಓದುವ ತಾಯಿ ಮಕ್ಕಳಿಗೆ ಭವಿಷ್ಯದ ಭದ್ರ ಬುನಾದಿ ಹಾಕಬಲ್ಲವಳಾಗಿದ್ದಾಳೆ. ಈ ಜಗದಿ ತಾಯಿಗೆ ಕೊಡುವಷ್ಟು ಗೌರವವನ್ನು ಮಕ್ಕಳು ಇತರರಿಗೆ ನೀಡುವುದಿಲ್ಲ ಅನ್ನುವುದು ನಾವು ಒಪ್ಪಲೇಬೇಕಾದ ಸತ್ಯ. ಈ ಗೌರವ ಹೀಗೆಯೇ ನಿತ್ಯ ನಿರಂತರವಾಗಿರಬೇಕಾದರೆ ಮಹಿಳೆ ಓದುವ ಹವ್ಯಾಸವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇಂದಿನ ಪರಿಸರ ನೋಡಿದರೆ ದೂರದರ್ಶನದ ಧಾರಾವಾಹಿಗಳು ಮಹಿಳೆಯನ್ನು ಗಟ್ಟಿಯಾಗಿ ಹಿಡಿದಿಟ್ಟು, ಮಹಿಳೆಯಲ್ಲಿಯ ಕ್ರೀಯಾಶೀಲತೆಯನ್ನು ಹಂತ ಹಂತವಾಗಿ ಕೊಂದು ಹಾಕುತ್ತಿವೆ. ಇದೇ ಕಾರಣದಿಂದ ಮಹಿಳೆಯರಲ್ಲಿ ಓದುವ ಹವ್ಯಾಸ ಕುಂಠಿತಗೊಂಡಿದೆ. ಓದು ಕಡಿಮೆಯಾದಲ್ಲಿ ಜ್ಞಾನಾರ್ಜನೆ ಸಹಜವಾಗಿ ಕಡಿಮೆಯಾಗುತ್ತದೆ. ಜ್ಞಾನ ಕಡಿಮೆಯಾದಲ್ಲಿ ಹೊರ ಜಗತ್ತಿನಲ್ಲಿ ಅರ್ಥಪೂರ್ಣ ಅಥವಾ ಪರಿಣಾಮಕಾರಿಯಾಗಿ ಮಾತನಾಡಲು ಸಾಧ್ಯವಾಗದು. ಕಾರಣ ಮಹಿಳೆಯರು ಸದಾ ಸದಾಭಿರುಚಿಯ ಸಾಹಿತ್ಯವನ್ನು ಓದುವ ಮತ್ತು ಆಳವಾಗಿ ಅಭ್ಯಸಿಸುವ ಅಭಿರುಚಿ ಬೆಳೆಸಿಕೊಳ್ಳಿ ಎಂದು ಮಕ್ಕಳ ಸಾಹಿತಿಗಳಾದ ಶ್ರೀ ಕೆ.ಎಚ್. ನಾಯಕ ಮಹಿಳೆಯರಿಗೆ ಕರೆ ನೀಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೨೭-೫-೨೦೧೮** ರಂದು ಶ್ರೀಮತಿ ಶಾಂತಕ್ಕಾ ಮಠದ ದತ್ತಿ ಕಾರ್ಯಕ್ರಮದ ಅಂಗವಾಗಿ **'ನಾನು ಓದಿದ ಅತ್ಯುತ್ತಮ ಕನ್ನಡ ಪುಸ್ತಕ'** ಎಂಬ ವಿಷಯದ ಮೇಲೆ ಮಹಿಳಾ ಮಂಡಳದ ಸದಸ್ಯರಿಗಾಗಿ ನಡೆದ ಭಾಷಣ ಸ್ಪರ್ಧೆಯ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳ ಸ್ಥಾನದಿಂದ ಮಾತನಾಡಿದ ಶ್ರೀ ಕೆ.ಎಚ್. ನಾಯಕ ಅವರು ಶಾಂತಕ್ಕಾ ಮಠದ ದತ್ತಿ ಆಶಯ ಅರಿತುಕೊಂಡು ಮಹಿಳೆಯರು ಭಾಷಣ ಮಾಡುವ ಕಲೆಯನ್ನು ವೃದ್ಧಿಸಿಕೊಳ್ಳುವಂತೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಮಂಡಳಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತಾಗಲಿ ಎಂದು ಅವರ ಹೇಳಿದರು.

ಮಹಿಳೆಯರಿಗೆ ಅವಕಾಶಗಳು ಸಿಗುವುದೇ ಅಪರೂಪ. ಕರ್ನಾಟಕ ವಿದ್ಯಾವರ್ಧಕ ಸಂಘ ಮಹಿಳಾ ಮಂಡಳದ ಸದಸ್ಯರಿಗಾಗಿ ಮುಕ್ತ ಭಾಷಣ ಸ್ಪರ್ಧೆ ಏರ್ಪಡಿಸಿರುವುದು ಶ್ಲಾಘನೀಯ. ಮಹಿಳೆಯರಿಗಾಗಿಯೇ ಇರುವ ಇಂಥ ಅವಕಾಶಗಳನ್ನು ಮಹಿಳೆಯರು ಬಳಸಿಕೊಳ್ಳದೇ ದೂರ ಉಳಿಯುತ್ತಿರುವುದು ಸರಿಯಲ್ಲ, ಆದ್ದರಿಂದ ಮಹಿಳೆಯರು ಸಿಗುವ ಇಂಥ ಅವಕಾಶಗಳನ್ನು ಬಳಸಿಕೊಳ್ಳಲೇಬೇಕೆಂದು ಕಾರ್ಯಕ್ರಮದ ಇನ್ನೊಬ್ಬ ಶ್ರೀಮತಿ ಪ್ರಮೀಳಾ ಜಕ್ಕಣ್ಣವರ ಮಹಿಳೆಯರಿಗೆ ಕರೆ ನೀಡಿದರು.

ಸ್ಪರ್ಧಾ ಮನೋಭಾವನೆ ಯಶಸ್ವಿ ಜೀವನದ ಗುಟ್ಟು. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಮಾತನಾಡುವ ಕಲೆಯನ್ನು ವ್ಯಕ್ತಪಡಿಸಿದಲ್ಲಿ ಮಹಿಳೆಯರ ಮನೋಬಲ ಗಟ್ಟಿಗೊಳ್ಳುವುದು. ಇತ್ತೀಚಿನ ಸಾರ್ವಜನಿಕ ಸಭೆ-ಸಮಾರಂಭ ಮತ್ತು ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗೃಹಿಣಿಯರು ತುಂಬಾ ಆಸಕ್ತಿವಹಿಸಿ ಭಾಗವಹಿಸುವುದನ್ನು ನೋಡುತ್ತೇವೆ. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾದ ಯುವಜನಾಂಗ ಇಂಥ ಕಾರ್ಯಕ್ರಮಗಳಿಂದ ವಿಮುಖರಾಗುತ್ತಿರುವುದು ದುರದೃಷ್ಟಕರ. ಯುವತಿಯರು ಮತ್ತು ಶಾಲಾ ಕಾಲೇಜಿನ ವಿದ್ಯಾರ್ಥಿನಿಯರು ಸೈಲೆಂಟ್ ಮೋಡಿಗೆ ಜಾರಿ ಇಂಥ ಬಹುಮುಖ್ಯ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರದೆ ಇರುವುದು ನಮ್ಮ ಯುವಜನಾಂಗ ಎತ್ತ ಸಾಗಿದೆ ಎಂದು ಚಿಂತಿಸುವಂತೆ ಮಾಡಿದೆ. ಯುವತಿಯರು ಸೈಲೆಂಟ್ ಮೋಡಿನಿಂದ ಹೊರಬಂದು ಸಮಾಜಮುಖಿಯಾಗಬೇಕು. ಸದೃಢ ಮತ್ತು ಆರೋಗ್ಯಕರ ಸಮಾಜ ನಿರ್ಮಿಸುವಲ್ಲಿ ತಮ್ಮ ಕೊಡುಗೆಯನ್ನು ನೀಡಬೇಕು. ಉತ್ತಮ ಸಾಹಿತ್ಯ ಓದುವ ಹವ್ಯಾಸ ಮತ್ತು ಮಾತನಾಡುವ ಕಲೆಯನ್ನು ಬೆಳೆಸಿಕೊಳ್ಳಬೇಕು. ಅಂದರೆ ಅವರಲ್ಲಿ ಅಡಗಿರುವ ಪ್ರತಿಭೆ ಹೊರಹೊಮ್ಮಲು ಸಾಧ್ಯ. ಆಸಕ್ತಿ ಬೆಳೆಸಿಕೊಂಡಾಗ ಮಾತ್ರ ಸಾಹಿತ್ಯ ಲೋಕದಲ್ಲಿ ಹೊಸ ಮುಖಗಳು ಮೂಡಿಬರುವ ಮತ್ತು ಸಾಹಿತ್ಯ ಲೋಕದಲ್ಲಿ ಹೊಸ ಮಹಿಳಾ ಮುಖಗಳು ಮೂಡಿಬರುತ್ತಿಲ್ಲ ಎಂಬ ಆತಂಕ ದೂರವಾಗುವುದು. ಕಾರಣ ಮಹಿಳಾ ವರ್ಗದಿಂದ ಚಿಂತನೆ ನಿತ್ಯನಿರಂತರವಾಗಬೇಕೆಂದು ಹಾಗೆಯೇ ಓದುವ ಸಾಹಿತ್ಯದಲ್ಲಿರುವ ಜಾತಿ ಪ್ರಜ್ಞೆಯನ್ನು ನೋಡದೆ, ಸಾಹಿತ್ಯ ಮತ್ತು ನೀತಿ ಪ್ರಜ್ಞೆಯನ್ನು ಮಾತ್ರ ನೋಡಬೇಕೆಂದು ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಉಪನ್ಯಾಸಕರಾದ ಪಿ.ಕೆ. ಯಾವಗಲ್ಲ ಹೇಳಿದರು.

ಭಾಷಣ ಸ್ಪರ್ಧೆಯಲ್ಲಿ ಮಂದಹಾಸ ಮಹಿಳಾ ಮಂಡಳ ಹುಬ್ಬಳ್ಳಿಯ ಶ್ರೀಮತಿ ಪದ್ಮಜಾ ಉಮರ್ಜಿಯವರು ಪ್ರಥಮ ಸ್ಥಾನ ಪಡೆದರು. ಸುವರ್ಣ ಮಹಿಳಾ ಮಂಡಳ ಧಾರವಾಡದ ಶ್ರೀಮತಿ ಮಂಜುಳಾ ರಾಮಡಗಿ ದ್ವಿತೀಯ ಸ್ಥಾನ ಪಡೆದರೆ, ಶ್ರೀಮತಿ ಅರುಣಾ ಶಾನಭಾಗ ಹುಬ್ಬಳ್ಳಿ ಇವರು ತೃತೀಯ ಸ್ಥಾನಕ್ಕೆ ಭಾಜನರಾದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಮೇ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶಂಕರ ಕುಂಬಿ ಅವರು ಕಾರ್ಯಕ್ರಮ ನಿರೂಪಿಸಿ, ವಂದನಾರ್ಪಣೆಗೈದರು.

೧೮. **ಪಂ. ಯಲ್ಲಪ್ಪ ಗ. ಅಮರಗೋಳಕರ ಸ್ಮರಣಾರ್ಥ ದತ್ತಿ :** ದಾನಿಗಳು, ಶ್ರೀ ದೇವಾನಂದ ಯ. ಅಮರಗೋಳಕರ.

ಧಾರವಾಡ ಹಿಂದುಸ್ತಾನಿ ಸಂಗೀತದ ಕಾರ್ಯಾಗಾರ ಎಂದು ವಿಶ್ವವಿಖ್ಯಾತಿ ಹೊಂದಿದೆ, ಸಂಗೀತದ ಪುಣ್ಯ ಕ್ಷೇತ್ರವಾಗಿದೆ. ಭಾರತೀಯರು ಧಾರವಾಡವನ್ನು ಹಿಂದುಸ್ತಾನಿ ಸಂಗೀತದ ತವರೂರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಎಂದು ಪ್ರಸಿದ್ಧ ಹಿಂದುಸ್ತಾನಿ ಸಂಗೀತಗಾರ ಡಾ. ಶಾಂತಾರಾಮ ಹೆಗಡೆ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಪಂಡಿತ ಯಲ್ಲಪ್ಪ ಗ. ಅಮರಗೋಳಕರ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨೮-೫-೨೦೧೮** ರಂದು ಆಯೋಜಿಸಿದ **'ಕಲಾಪ್ರಶಸ್ತಿ-೨೦೧೮'** ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಡಾ. ಶಾಂತಾರಾಮ ಹೆಗಡೆ ಉತ್ತರ ಭಾರತದಿಂದ ಕರ್ನಾಟಕಕ್ಕೆ ಹಿಂದುಸ್ತಾನಿ ಸಂಗೀತ ಬಂದು ಕೇವಲ ನೂರರಿಂದ ನೂರಾ ಹತ್ತು ವರ್ಷಗಳಾಗಿವೆ. ಪಂಡಿತ ಪಂಚಾಕ್ಷರಿ ಗವಾಯಿಗಳ ಸಂಗೀತ ಪರಂಪರೆಯಿಂದಾಗಿ, ನಂತರ ಅವರ ಶಿಷ್ಯವೃಂದ ಈ ಪರಂಪರೆಯನ್ನು ಶ್ರದ್ಧೆಯಿಂದ ಮುಂದುವರೆಸಿಕೊಂಡು ಹೋಗುತ್ತಿರುವುದರಿಂದ ಇಷ್ಟು ಅಲ್ಪಾವಧಿಯಲ್ಲಿ ಧಾರವಾಡಕ್ಕೆ ಸಂಗೀತ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಬಂದಿದೆ ಎಂದು ಅವರು ಹೇಳಿದರು. ಹಿಂದುಸ್ತಾನಿ ಸಂಗೀತ ಗಾಯನದ ಜೊತೆಗೆ, ಸೀತಾರ, ಶಹನಾಯಿ, ವಾಯಲಿನ್, ಹಾರ್ಮೋನಿಯಂ ಮತ್ತು ತಬಲಾ ವಾದಕರುಗಳ ಕೊಡುಗೆಯಿಂದ ಸಂಗೀತ ಕ್ಷೇತ್ರದಲ್ಲಿ ಧಾರವಾಡದ ಹೆಸರು ಸ್ಥಿರಸ್ಥಾಯಿ ಆಗಿದೆ ಎಂದು ಡಾ. ಶಾಂತಾರಾಮ ಹೇಳಿದರು.

ಧಾರವಾಡದ ಪರಿಸರ, ಮುಂದುವರೆದ ಸಂಗೀತ ಪರಂಪರೆ ಹಾಗೂ ಸಂಗೀತದ ಸೆಲೆ ವಿದ್ಯಾಭ್ಯಾಸಕ್ಕಾಗಿ ಧಾರವಾಡಕ್ಕೆ ಬರುವ ಸಂಗೀತಾಸಕ್ತರನ್ನು ಧಾರವಾಡ ತನ್ನ ಒಡಲಿನಲ್ಲಿ ಉಳಿಸಿಕೊಂಡು ಖ್ಯಾತ ಸಂಗೀತಗಾರರನ್ನಾಗಿ ಮಾಡುತ್ತಿದೆ ಎಂದು ಖ್ಯಾತ ವಾಯಲಿನ ಕಲಾವಿದರಾದ ಪಂ. ಬಿ. ಎಸ್. ಮಠ ಅಮರಗೋಳಕರ ದತ್ತಿ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹೇಳಿದರು. ಪಂ. ಯಲ್ಲಪ್ಪ ಅಮರಗೋಳಕರ ಕರ್ನಾಟಕದ ಬಿಸ್ಮಿಲ್ಲಾಖಾನ ಎಂದು ಖ್ಯಾತಿ ಪಡೆದ ಪ್ರಸಿದ್ಧ ಶಹನಾಯಿವಾದಕರಾಗಿದ್ದರು. ಶಹನಾಯಿ ವಾದನದ ಕ್ಷೇತ್ರದಲ್ಲಿ ಬಿಸ್ಮಿಲ್ಲಾಖಾನರ ನಂತರದ ಸ್ಥಾನ ಅವರ ಶಿಷ್ಯರಾದ ಪಂ. ಯಲ್ಲಪ್ಪ ಅಮರಗೋಳಕರ ಪಡೆದಿದ್ದರು ಎಂಬುವದು ನಮ್ಮ ಹೆಮ್ಮೆಯ ಸಂಗತಿಯಾಗಿದೆ. ಬಹುಮುಖ ಪ್ರತಿಭೆಯ ಪಂ. ಯಲ್ಲಪ್ಪ ಅಮರಗೋಳಕರ ಅವರು ಸಂಗೀತ ಶಿಕ್ಷಕರಾಗಿ ಅಮೋಘ ಸೇವೆ ನೀಡಿ ಅಪಾರ ಶಿಷ್ಯರನ್ನು ತಯಾರು ಮಾಡಿದ ಚಿರಸ್ಮರಣೀಯರು ಎಂದು ಅವರು ಹೇಳಿದರು.

ಪಂ. ಯಲ್ಲಪ್ಪ ಗ. ಅಮರಗೋಳಕರ 'ಕಲಾಪ್ರಶಸ್ತಿ-೨೦೧೮' ನೇದ್ದನ್ನು ಖ್ಯಾತ ಅಂತಾರಾಷ್ಟ್ರೀಯ ತಬಲಾ ವಾದಕರಾದ ಗುರ್ಲಹೊಸೂರ-ಸವದತ್ತಿಯ ಅಲ್ಲಮಪ್ರಭು ಕಡಕೋಳ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅಲ್ಲಮಪ್ರಭು ಕಡಕೋಳ ಅವರು, ಎಲ್ಲ ಸಂಗೀತ ಕಚೇರಿಗಳಲ್ಲಿ ತಬಲಾ ಸಾಥಿದಾರರು ಬೇಕು, ಆದರೆ ತಬಲಾ ಸಾಥಿದಾರರಿಗೆ ಸಿಗಬೇಕಾದ ಸೂಕ್ತ ಮಾನ್ಯತೆ ದೊರೆಯದಿರುವದು ವಿಷಾದನೀಯ, ಕರ್ನಾಟಕ ವಿದ್ಯಾವರ್ಧಕ ಸಂಘ ನೀಡಿದ ಈ ಪ್ರಶಸ್ತಿಯನ್ನು ಅತ್ಯಂತ ಪ್ರೀತಿಯಿಂದ ಆಶೀರ್ವಾದ ಎಂದು ಸ್ವೀಕರಿಸಿದ್ದೇನೆ ಎಂದರು.

ಕಾರ್ಯಕ್ರಮದ ಅಂಗವಾಗಿ ಡಾ. ಅರ್ಜುನ ವಠಾರ ಇವರ ಸುಗಮ ಸಂಗೀತ ಕಾರ್ಯಕ್ರಮ ಮತ್ತು ಪಂ. ಬಸವರಾಜ ಹೆಡಿಗ್ಗೊಂಡ ಇವರ ಶಹನಾಯಿ ಕಾರ್ಯಕ್ರಮ ಜರುಗಿದವು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಮೇ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶಂಕರ ಕುಂಬಿ ಅವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರೆ, ಡಾ. ಶ್ರೀಧರ ಕುಲಕರ್ಣಿ ವಂದಿಸಿದರು.

೧೯. **ಶ್ರೀ ಎಸ್. ಎಂ. ಹೊಳೆಯಣ್ಣವರ ದತ್ತಿ :** ದಾನಿಗಳು, ಶ್ರೀ ಕುಮಾರೇಶ್ವರ ಗೃಹ ನಿರ್ಮಾಣ ಅಭಿವೃದ್ಧಿ ಸಹಕಾರಿ ಸಂಘ, (ನಿ), ಧಾರವಾಡ

ಸಹಕಾರಿ ಚಳುವಳಿಯ ಬುನಾದಿ ಶಿಥಿಲಗೊಳ್ಳುತ್ತಿರುವ ಕಾರಣಗಳೇನು ? ಎಂದು ಆತ್ಮವಿಮರ್ಶೆ ಮಾಡಿಕೊಂಡು, ಸಹಕಾರ ಚಳುವಳಿಗೆ ಗತಕಾಲದ ಮೆರಗು ಪುನಃ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾದ ಸಂದಿಗ್ಧ ಸನ್ನಿವೇಶದಲ್ಲಿ ಇಂದು ನಾವಿದ್ದೇವೆ ಎಂದು ನ್ಯಾಯವಾದಿ ಶಿವಾನಂದ ಭಾವಿಕಟ್ಟಿ ಹೇಳಿದರು.

ಕರ್ನಾಟಕ ವಿದ್ಯಾವರ್ದಕ ಸಂಘವು ದಿ. ಶ್ರೀ ಎಸ್. ಎಂ. ಹೊಳೆಯಣ್ಣವರ ದತ್ತಿ ಅಂಗವಾಗಿ ದಿನಾಂಕ **೧-೬-೨೦೧೮** ಆಯೋಜಿಸಿದ್ದ **'ಸಹಕಾರ-ಪ್ರಸ್ತುತತೆ'** ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದ ಶಿವಾನಂದ ಭಾವಿಕಟ್ಟಿಯವರು, ಶೈಕ್ಷಣಿಕ ಕ್ಷೇತ್ರ ಮೊದಲಾಗಿ ಎಲ್ಲ ಕ್ಷೇತ್ರಗಳಲ್ಲಿ ಸಹಕಾರ ಚಳುವಳಿ ಬಲವರ್ಧನೆಗೊಂಡಾಗ ಮಾತ್ರ ಜನಸಾಮಾನ್ಯರಿಗೆ ಅದರ ಲಾಭ ಸಿಗುವುದು, ಇಲ್ಲದೆ ಹೋದಲ್ಲಿ ಆ ಲಾಭವು ಕೆಲವೇ

ಕೆಲ ಹಿತಾಸಕ್ತಿಗಳ ಕೈಗಳಿಗೆ ಸೇರಿ ಸಂಪತ್ತು ಒಂದೆಡೆ ಕ್ರೂಢೀಕರಣವಾಗುವ ಅಪಾಯವಿದೆ ಎಂದರು. ಜಾಗತಿಕರಣ ಮತ್ತು ಉದಾರೀಕರಣ ಎಂಬ ಮಹಾಮಾಯೆಯು ಸಹಕಾರ ಚಳುವಳಿಯನ್ನು ಮೆಲ್ಲ-ಮೆಲ್ಲಗೆ ಕ್ಷೀಣ ಮಾಡಿ, ಸಹಕಾರ ಚಳುವಳಿ ನಲುಗಿ ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತಿರುವುದನ್ನು ನೋಡಿ ನಾವು ಸುಮ್ಮನಿರದೆ ಸಹಕಾರ ಚಳುವಳಿಯಲ್ಲಿ ಯುವ ಪೀಳಿಗೆಯನ್ನು ತೊಡಗಿಸಿ, ಪ್ರಾಮಾಣಿಕವಾಗಿ ದುಡಿದು ಸಹಕಾರ ಚಳುವಳಿಯನ್ನು ಗಟ್ಟಿಗೊಳಿಸಬೇಕಾದ ಅವಶ್ಯಕತೆ ನಮ್ಮೆದುರು ಸವಾಲಾಗಿದೆ, ಈ ಸವಾಲನ್ನು ಗೆಲ್ಲುವತ್ತ ಎಲ್ಲರೂ ಸೇರಿ ಪ್ರಯತ್ನಿಸೋಣ ಎಂದು ಶಿವಾನಂದ ಭಾವಿಕಟ್ಟಿ ಕರೆ ನೀಡಿದರು.

ಶ್ರೀ ಕು.ಗೃ.ನಿ.ಅ. ಸಹಕಾರಿ ಸಂಘ, ನಿ, ಧಾರವಾಡ ಅಧ್ಯಕ್ಷರಾದ ಪ್ರೊ. ಎಸ್. ಎಸ್. ದೇಸಾಯಿ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ನೆಮ್ಮದಿ ನೀಡುವ ಮತ್ತು ಅತೀ ಹೆಚ್ಚು ಉಪಯುಕ್ತವಾಗುವ ಚಳುವಳಿ ಎಂದರೆ ಸಹಕಾರಿ ಗೃಹ ನಿರ್ಮಾಣ ಚಳುವಳಿ. ಈ ಚಳುವಳಿ ಬಹು ಉಪಯೋಗಿ ಚಳುವಳಿಯಾಗಿದೆ. ಸಹಕಾರಿ ಗೃಹ ನಿರ್ಮಾಣ ಸಂಘಗಳು ಭೂಸ್ವಾಧೀನ ಪಡಿಸಿಕೊಳ್ಳುವಲ್ಲಿ ಸರಕಾರಿ ಯಂತ್ರ ಅನುಸರಿಸುತ್ತಿರುವ ನಿಧಾನಗತಿ, ವಿಳಂಬ ನೀತಿ, ಅನವಶ್ಯಕ ಕಠಿಣ ಕ್ರಮಗಳಿಂದಾಗಿ ಈ ಚಳುವಳಿಗೆ ಹಿನ್ನೆಡೆಯಾಗಿ ಜನಸಾಮಾನ್ಯರು ಸೂರುಗಳಿಲ್ಲದೆ ವಂಚಿತರಾಗುತ್ತಿದ್ದಾರೆ. ಸಹಕಾರಿ ಸಂಸ್ಥೆಯ ಧ್ಯೇಯ ಲಾಭಗಳಿಕೆಯಲ್ಲ ಬದಲಿಗೆ ಸದಸ್ಯರಿಗೆ ಹೆಚ್ಚಿನ ಲಾಭ ತಂದುಕೊಡುವ ಸೇವೆಯಾಗಿದೆ. ಸಹಕಾರಿ ಸಂಘಗಳು ಜನಸಾಮಾನ್ಯರ ಹಿತಬಯಸುತ್ತವೆ. ಸರ್ಕಾರಕ್ಕೆ ತನ್ನ ಪ್ರಜೆಗಳಿಗೆ ಸಹಾಯ ಮಾಡುವ ಇಚ್ಛಾಶಕ್ತಿ ಕೊರತೆಯಿರುವುದರಿಂದ, ಸಹಕಾರಿ ರಂಗದ ಜೀವಸೆಲೆ ಬತ್ತಿ ಹೋಗುತ್ತಿದೆ. ಸಹಕಾರಿ ಚಳುವಳಿ ಬಲವಾಗಿ ಉಳಿದುಕೊಂಡಿದ್ದರೆ ಜನಸಾಮಾನ್ಯರಿಗೆ ಸುಲಭ ಮತ್ತು ಕೈಗೆಟಕುವ ದರದಲ್ಲಿ ನಿವೇಶನಗಳು ಮತ್ತು ಮನೆಗಳು ದೊರಕುತ್ತಿದ್ದವು. ಪರಿಸ್ಥಿತಿಯ ವಿಪರ್ಯಾಸದಿಂದಾಗಿ ರೀಯಲ್ ಎಸ್ಟೇಟರ್‌ಗಳು ಮತ್ತು ಭೂಮಾಫಿಯಾದವರು ತಲೆಎತ್ತಿ ನಿಲ್ಲಲು ರಾಜಮಾರ್ಗ ಸೃಷ್ಟಿಯಾಗಿಬಿಟ್ಟಿದೆ. ಇದೇ ಕಾರಣಕ್ಕೆ ನಿವೇಶನಗಳ ಬೆಲೆ ಗಗನಕ್ಕೇರಿವೆ. ಪ್ರಜ್ಞಾವಂತರು ಸಹಕಾರಿ ಚಳುವಳಿಯಿಂದ ದೂರ ಉಳಿದಿರುವುದು ಸಹಕಾರಿ ರಂಗದ ಬಹುದೊಡ್ಡ ನ್ಯೂನ್ಯತೆಯಾಗಿದೆ. ಸರಕಾರ ಸಹಕಾರಿ ಚಳುವಳಿಯ ಮೇಲೆ ಭರವಸೆ ಇರಿಸಿದರೆ ಜನಸಾಮಾನ್ಯರಿಗೆ ನ್ಯಾಯ ಸಿಗುವುದು, ನ್ಯಾಯ-ನೀತಿ-ಧರ್ಮ-ಪ್ರೀತಿ-ಅನುಕಂಪ-ಅಭಿಮಾನ ಸಹಕಾರಿಯ ಮೌಲ್ಯಗಳು ಎಂದು ಹೇಳಿದರು.

ಸಭೆಯು ದಿ. ಎಸ್. ಎಂ. ಹೊಳೆಯಣ್ಣವರಲ್ಲಿದ್ದ ಸಂಘಟನಾ ಚತುರತೆ, ಸಹಕಾರ ಮನೋಭಾವನೆ ಅವರನ್ನು ಖ್ಯಾತ ಸಹಕಾರಿಯಾಗಿ ಬೆಳೆಸಿತು ಎಂದು ಅವರನ್ನು ಸ್ಮರಿಸಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಅರ್ಪಿಸಿತು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯರಾದ ಕೃಷ್ಣ ಜೋಶಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಮತ್ತು ಜೂನ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ಅವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

೨೦. **ಶ್ರೀ ಎಂ.ಸಿ. ಬಂಡಿ ವಕೀಲರ ದತ್ತಿ :** ದಾನಿಗಳು, ಶ್ರೀ ಬಂಡಿ ವಕೀಲರ ಅಮೃತ ಮಹೋತ್ಸವ ಅಭಿನಂದನಾ ಸಮಿತಿ, ಧಾರವಾಡ

ಭಾರತದ ಸಂವಿಧಾನ ವಕೀಲ ವೃತ್ತಿಗೆ ವಿಶೇಷ ಸ್ಥಾನವನ್ನು ನೀಡಿದೆ. ಸಂವಿಧಾನದಲ್ಲಿ ವಕೀಲ ವೃತ್ತಿಯ ಹೊರತಾಗಿ ಬೇರೆ ವೃತ್ತಿಗಳ ಬಗ್ಗೆ ಉಲ್ಲೇಖವಿಲ್ಲ. ಅಂತಹ ಶ್ರೇಷ್ಠ ವೃತ್ತಿ ವಕೀಲ ವೃತ್ತಿ. ಸಂವಿಧಾನ ವಕೀಲ ವೃತ್ತಿಯ ಮೇಲೆ ಇರಿಸಿದ ಭರವಸೆ ಉಳಿಯಬೇಕಾದಲ್ಲಿ ವಕೀಲರು ವೃತ್ತಿಯ ಬಗ್ಗೆ ಬದ್ಧತೆ ಹಾಗೂ ನೈಪುಣ್ಯತೆ ಹೊಂದಿರಬೇಕು ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಡಾ. ಚಿದಾನಂದರೆಡ್ಡಿ ಎಸ್. ಪಾಟೀಲ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನ್ಯಾಯ ನಿಷ್ಠುರಿ ಶ್ರೀ ಎಂ.ಸಿ.ಬಂಡಿ ವಕೀಲರ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨-೬-೨೦೧೮** ರಂದು ಆಯೋಜಿಸಿದ **'ವಕೀಲಿ ವೃತ್ತಿಯ ಬದ್ಧತೆ ಹಾಗೂ ನೈಪುಣ್ಯತೆ'** ಎಂಬ ವಿಷಯದ ಬಗ್ಗೆ ಮಾತನಾಡಿದ ಡಾ. ಚಿದಾನಂದರೆಡ್ಡಿ ಎಸ್. ಪಾಟೀಲ, ನಾವು ಮಾಹಿತಿ ತಂತ್ರಜ್ಞಾನ ಎಂಬ ತಾಂತ್ರಿಕ ಯುಗದಲ್ಲಿ ಇದ್ದೇವೆ. ಮಾಹಿತಿಯ ಬೊಜ್ಜು ಬೃಹದಾಕಾರವಾಗಿ ಬೆಳೆದು ನಿಂತಿದೆ. ಆ ಬೊಜ್ಜಿನಲ್ಲಿಯ ನಮಗೆ ಬೇಕಾದುದನ್ನು ಉಪಯೋಗಿಸುವ ಚಾಕಚಕ್ಯತೆ ಬೆಳೆಸಿಕೊಳ್ಳಬೇಕು. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಂಡು ವೃತ್ತಿ ಕೌಶಲ್ಯ-ಪರಿಣತಿ ಬೆಳೆಸಿಕೊಳ್ಳುವುದು ಮಾತ್ರ ಬದ್ಧತೆಯಲ್ಲ. ಬದಲಾಗಿ ಇತ್ತೀಚಿನ ಕ್ಷಣದ ಜ್ಞಾನವನ್ನು ಕೂಡ ಹಾಸೀಲು ಮಾಡಿಕೊಳ್ಳುವುದು ವಕೀಲಿ ವೃತ್ತಿಯ ಬದ್ಧತೆ ಮತ್ತು ನೈಪುಣ್ಯತೆಯಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಕೆಲವು ವೃತ್ತಿಗಳಿಗೆ ಧಕ್ಕೆ ಉಂಟಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ವಕೀಲಿ ವೃತ್ತಿ ಇದಕ್ಕೆ ಹೊರತಾಗಿದೆ, ಬರುವ ದಿನಗಳಲ್ಲಿ ವಕೀಲರ ಅವಶ್ಯಕತೆ ಅನಿವಾರ್ಯ ಮತ್ತು ವಕೀಲರಿಲ್ಲದ ಯಾವುದೇ ಕ್ಷೇತ್ರ ಇರಲು ಸಾಧ್ಯವೇ ಇಲ್ಲ ಎಂಬುದು ಕೂಡಾ ತಜ್ಞರ ಅಭಿಪ್ರಾಯವಾಗಿದೆ. ಆದ್ದರಿಂದ ವೃತ್ತಿ ಪರಿಣಿತಿ, ಹೊಸ ಹೊಸ

ಮಾಹಿತಿ, ಹೊಸ ತಂತ್ರಜ್ಞಾನಗಳ ಬಳಕೆ, ಹೊಸ ತಂತ್ರಜ್ಞಾನಕ್ಕೆ ತಕ್ಕಂತೆ ತರಬೇತಿ ಹೊಂದಿ ಶ್ರೇಷ್ಠತೆಯೆಡೆಗೆ ವಕೀಲರ ನಡಿಗೆಯಾಗಬೇಕಿದೆ ಎಂದು ಡಾ. ಪಾಟೀಲ ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶ್ರೀ ಎಂ.ಸಿ. ಬಂಡಿ ವಕೀಲರು ಮಾತನಾಡಿ, ಯುವ ಪೀಳಿಗೆ ವಕೀಲ ವೃತ್ತಿಯನ್ನು ಲಘುವಾಗಿ ಪರಿಗಣಿಸದೇ, ಕಠಿಣ ಪರಿಶ್ರಮ ಮತ್ತು ಸತತ ಅಭ್ಯಾಸವನ್ನು ಮಾಡಿ, ಪಕ್ವತೆ, ಪರಿಪಕ್ವತೆ ಹೊಂದಿ ಜ್ಞಾನದಲ್ಲಿ ಶ್ರೀಮಂತರಾಗಿ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು, ಸ್ವಾತಂತ್ರ್ಯ ಚಳುವಳಿಯ ನೇತಾರರಲ್ಲಿ ಬಹುಸಂಖ್ಯಾತರು ಶ್ರೇಷ್ಠ ವಕೀಲರು ಆಗಿದ್ದರು ಎಂದು ನಮ್ಮ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಹೇಳುತ್ತಿದೆ. ಇದು ವಕೀಲರಲ್ಲಿಯ ಸಾಮಾಜಿಕ ಕಳಕಳಿ ಮತ್ತು ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಇಂದು ಕೂಡಾ ಸಾಮಾಜಿಕ ಪಿಡುಗುಗಳನ್ನು ಹೊಡೆದೊಡಿಸಲು ಮತ್ತು ದೇಶವನ್ನು ಬಲಿಷ್ಠವಾಗಿ ಕಟ್ಟುವಲ್ಲಿ ವಕೀಲರ ಪಾತ್ರ ಮಹತ್ವಾಗಿದೆ. ಕಾರಣ, ವಕೀಲರಿಗೆ ವೃತ್ತಿ ಬದ್ಧತೆಯ ಜೊತೆಗೆ ಸಾಮಾಜಿಕ ಬದ್ಧತೆಯೂ ಇರಬೇಕು ಎಂದರು.

ಶ್ರೀ ಬಂಡಿ ವಕೀಲರ ಜನ್ಮದಿನದ ನಿಮಿತ್ತ ಅವರನ್ನು ಅಭಿನಂದಿಸಲಾಯಿತು. ವೇದಿಕೆ ಮೇಲೆ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಎಸ್.ಜಿ. ಪಾಟೀಲ ಪ್ರಾಸ್ತಾವಿಕ ನುಡಿಗಳನ್ನಾಡಿದರೆ, ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ವಂದನಾರ್ಪಣೆಗೈದರು. ಕ.ವಿ.ವ. ಸಂಘದ ಕಾರ್ಯಕಾರಿ ಸದಸ್ಯೆ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.

೨೧. **ಡಾ. ಮಲ್ಲಿಕಾರ್ಜುನ ಪಾಟೀಲ ದತ್ತಿ** : ದಾನಿಗಳು: ಡಾ. ನಂದಾ ಪಾಟೀಲ

ಜಾಗತಿಕ ಕೆಲ ಹಿತಾಸಕ್ತಿಗಳು ಶಿಕ್ಷಣ ಕ್ಷೇತ್ರದಲ್ಲಿ ಭ್ರಮೆಗಳನ್ನು ಸೃಷ್ಟಿ ಮಾಡಿವೆ. ಆಳವಾಗಿ ಅಧ್ಯಯನಶೀಲತೆಯಿಂದ ಅಭ್ಯಾಸ ಮಾಡಬೇಕಾದ ಮಕ್ಕಳನ್ನ ಭ್ರಮಾಲೋಕದಲ್ಲಿ ತೇಲುವಂತೆ ಈ ಭ್ರಮೆಗಳು ಮಾಡಿವೆ. ಹಾಗಾಗಿ ಮಕ್ಕಳಲ್ಲಿಯ ಚಿಕಿತ್ಸಕ ಬುದ್ಧಿ ವೃದ್ಧಿಯಾಗುತ್ತಿಲ್ಲ. ಈ ಭ್ರಮಾಲೋಕ ಭಯಂಕರ ಅಪಾಯಕಾರಿ ಮತ್ತು ಮಕ್ಕಳ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಮಾರಕವಾಗಿವೆ. ಕಲಿಕೆ ಅಥವಾ ಓದು ಒಂದು ಜ್ಞಾನ ಶಾಸ್ತ್ರವಾಗಿ ವೃದ್ಧಿಯಾಗಬೇಕಿದೆ. ನನಗೇನೂ ಗೊತ್ತಿಲ್ಲ, ಇನ್ನೂ ಕಲಿಯುವುದು ಬಹಳ ಇದೆ ಎಂಬುದನ್ನು ಮಕ್ಕಳ ಮನಸ್ಸಿನಲ್ಲಿ ಹುಟ್ಟಿಸಿದರೆ, ಮಕ್ಕಳು ಎಲ್ಲವನ್ನೂ ಪರಿಕ್ಷಿಸಿ ನೋಡಿ ಸತ್ಯಾಸತ್ಯತೆಯನ್ನು ಅರಿತುಕೊಂಡು ಬದುಕಿಗೆ ಬೇಕಾದ ಜ್ಞಾನವನ್ನು ವೃದ್ಧಿಮಾಡಿಕೊಳ್ಳುತ್ತಾರೆ, ಮಕ್ಕಳು ಕಲಿಯುವ ವಿಷಯದ ಮೇಲೆ ಪ್ರೀತಿ ಹುಟ್ಟುವಂತೆ ಮಾಡುವುದು ಶಿಕ್ಷಕನ ಜವಾಬ್ದಾರಿ ಎಂದು ಲಂಡನ್ನಿನಲ್ಲಿ ಅಭ್ಯಸಿಸುತ್ತಿರುವ ಅಂತರಾಷ್ಟ್ರೀಯ ಶಿಕ್ಷಣ ತಜ್ಞರಾದ ಎ.ಎಚ್. ಸಾಗರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಡಾ. ಮಲ್ಲಿಕಾರ್ಜುನ ಪಾಟೀಲ ದತ್ತಿ ಕಾರ್ಯಕ್ರಮದಲ್ಲಿ ದಿನಾಂಕ **೩-೬-೨೦೧೮** ರಂದು **'ಸಾಹಿತ್ಯ, ಶಿಕ್ಷಣ, ಭಾಷಾ ವಿಜ್ಞಾನ ಮತ್ತು ಸಾಮಾಜಿಕ ಬದಲಾವಣೆಗಳು'** ಎಂಬ ವಿಷಯದ ಮೇಲೆ ಅತಿಥಿ ಉಪನ್ಯಾಸಕರಾಗಿ ಉಪನ್ಯಾಸ ನೀಡಿದ ಸಾಗರ ಮುಂದುವರೆದು, ಸಮಾಜದಲ್ಲಿ ಬದಲಾವಣೆಗಳು ಆಗುತ್ತಲೇ ಇರುತ್ತವೆ, ಸಮಾಜದ ಬದಲಾವಣೆಯ ಗತಿಗನುಗುಣವಾಗಿ ವಿದ್ಯಾಭ್ಯಾಸದ ಕ್ರಮಕೂಡಾ ಬದಲಾಗುತ್ತಾ ಹೋಗಬೇಕು ಎಂದು ಹೇಳಿದರು.

ದತ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರೊ. ಎಚ್.ಎ. ಬಿಕ್ಷಾವರ್ತಿಮಠ, ಇಂಗ್ಲೀಷ ಭ್ರಮೆಯಿಂದ ತಾಯಂದಿರು ಮೊದಲು ಹೊರಬರಬೇಕಿದೆ, ಇಂಗ್ಲೀಷ ಭಾಷೆಯ ಜೊತೆಗೆ ಇಂಗ್ಲೀಷ ಸಂಸ್ಕೃತಿಯು ನಮಗೂ ಮತ್ತು ಮಕ್ಕಳಿಗೂ ಅರಿವಿಲ್ಲದಂತೆ ಮಕ್ಕಳ ಮನಸ್ಸನ್ನು ಆವರಿಸಿ, ಮಕ್ಕಳ ಮನಸ್ಸನ್ನು ಗೊಂದಲದ ಗೂಡಾಗಿಸಿವೆ ಎಂದು ಹೇಳಿದರು.

ಕ.ವಿ.ವಿ. ಧಾರವಾಡ ಕುಲಸಚಿವರಾದ ಡಾ. ಮಲ್ಲಿಕಾರ್ಜುನ ಪಾಟೀಲ ಹಾಗೂ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರೆ, ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ವಂದನಾರ್ಪಣೆಗೈದರು. ಕ.ವಿ.ವ. ಸಂಘದ ಕಾರ್ಯಕಾರಿ ಸದಸ್ಯೆ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.

೨೨. **ಶ್ರೀಮತಿ ಲೂಸಿ ಕೆ. ಸಾಲ್ಡಾನಾ ದತ್ತಿ :**

ಧಾರವಾಡ : ಸಮಾನ ಶಿಕ್ಷಣ ನೀತಿ ಜಾರಿಗೆ ಬರಬೇಕು. ಶಿಕ್ಷಕರಿಗೆ ಸ್ವಾತಂತ್ರ್ಯ ಬೇಕು. ಅಂದಾಗ ಶೈಕ್ಷಣಿಕ ಕ್ಷೇತ್ರದಲ್ಲಿ ಅಮೂಲಾಗ್ರ ಶೈಕ್ಷಣಿಕ ಕ್ರಾಂತಿಯಾಗುವುದು ಎಂದು ಧಾರವಾಡ ಜಿಲ್ಲಾ ಮಹಿಳಾ ವೇದಿಕೆ ಪ್ರಧಾನ ಸಂಚಾಲಕರು ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀಮತಿ ಲತಾ ಮುಳ್ಳೂರ ಅಭಿಪ್ರಾಯ ಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೪-೬-೨೦೧೮** ರಂದು ಆಯೋಜಿಸಿದ್ದ ಶ್ರೀಮತಿ ಲೂಸಿ ಕೆ. ಸಾಲ್ಡಾನ ದತ್ತಿ ಕಾರ್ಯಕ್ರಮದಲ್ಲಿ **'ಪ್ರಾಥಮಿಕ ಹಂತದಲ್ಲಿ ಗುಣಮಟ್ಟದ ಶಿಕ್ಷಣ'** ವಿಷಯದ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಶ್ರೀಮತಿ ಲತಾ ಮುಳ್ಳೂರ, ಪ್ರಸ್ತುತ ಸಂದರ್ಭದಲ್ಲಿ ಮಕ್ಕಳ ರಕ್ಷಣೆ, ಶಿಕ್ಷಣದ ಬಲವರ್ಧನೆ ಆಗಬೇಕು. ಗುಣಮಟ್ಟದ ಶಿಕ್ಷಣಕ್ಕೆ ಬಾಲಕರು, ಪಾಲಕರು, ಶಿಕ್ಷಕರು ಜೊತೆಗೆ ಸರಕಾರ ಕೂಡ ಒಟ್ಟಾಗಿ ಕೆಲಸ ಮಾಡಬೇಕು ಎಂದರು. ಬರೀ ಭೋಧನೆಯಿಂದ ಮಾತ್ರ ಗುಣಮಟ್ಟದ ಶಿಕ್ಷಣ ಸಾಧ್ಯವಿಲ್ಲ. ಮಕ್ಕಳನ್ನು ಆಕರ್ಷಿಸುವ ವಿಧಾನಗಳನ್ನು ಹುಡುಕಿ ಶಿಕ್ಷಣ ನೀಡಬೇಕಿದೆ ಎಂದರು. ಸಮಾನ ಶಿಕ್ಷಣ ನೀತಿ ಎಲ್ಲ ಶಾಲೆಗಳಲ್ಲೂ ಜಾರಿಗೆ ಬರಬೇಕು. ಸರಕಾರಿ ಶಾಲೆಗಳಲ್ಲಿ ಇರುವ ಮೂಲಭೂತ ಕೊರತೆಗಳನ್ನು ನೀಗಿಸಬೇಕಿದೆ. ಮಕ್ಕಳಿಗೆ ಪ್ರಾಥಮಿಕ ಹಂತವೇ ಬಹಳ ಮುಖ್ಯ. ಇದಕ್ಕೆ ಪಾಲಕರು ಕೂಡ ಮಕ್ಕಳ ಮಾನಸಿಕ ಹಾಗೂ ದೈಹಿಕ ಸ್ಥಿತಿ ಬಗ್ಗೆ ಕಾಳಜಿ ವಹಿಸಬೇಕು. ಆರೋಗ್ಯ ಕುರಿತು ಕಾಳಜಿ ವಹಿಸಬೇಕಿದೆ ಎಂದರು. ಬುನಾದಿಯನ್ನು ಗಟ್ಟಿಗೊಳಿಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕ.ವಿ.ವ. ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ ಮಾತನಾಡಿ, ದೇಶದಾದ್ಯಂತ ಪ್ರಾಥಮಿಕ ಹಂತದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಕುರಿತೇ ಚರ್ಚೆ ನಡೆದು ಅದಷ್ಟು ತೀವ್ರ ಜಾರಿಗೆ ಬರಬೇಕಾಗಿದೆ. ಇಂದು ಒಬ್ಬ ಪ್ರಾಥಮಿಕ ಶಿಕ್ಷಕನಾದವನು ಕವಿ ಆಗಿರಬೇಕು, ವೈದ್ಯನಾಗಿರಬೇಕು, ಕಲಾವಿದನಾಗಿರಬೇಕು ಜೊತೆಗೆ ಒಳ್ಳೆ ಭಾಷಾ ತಜ್ಞನೂ ಆಗಿರಬೇಕೆಂದರು.

ದತ್ತಿ ದಾನಿಗಳಾದ ಶ್ರೀಮತಿ ಲೂಸಿ ಕೆ. ಸಾಲ್ಡಾನ ಮಾತನಾಡಿ, ಶಿಕ್ಷಣಕ್ಕೆ ಪ್ರಾಥಮಿಕ ಶಿಕ್ಷಕರ ಕೊಡುಗೆ ಬಹಳ ಮಹತ್ವದ್ದು. ತಾವು ಶಿಕ್ಷಕರಾಗೋದಕ್ಕೆ ಕಾರಣೀಕರ್ತರನ್ನು ನೆನೆದು ಮಕ್ಕಳನ್ನು ಪ್ರೀತಿಯಿಂದ ಗೆಲ್ಲಬೇಕು. ನೈತಿಕತೆ, ಧೈರ್ಯ ತುಂಬಿ ಸಂಸ್ಕಾರವಂತರನ್ನಾಗಿ ಮಾಡುವ ಜವಾಬ್ದಾರಿ ಶಿಕ್ಷಕರದ್ದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಶಂಕರ ಕುಂಬಿ ಹಾಗೂ ಡಾ. ವಿಶ್ವನಾಥ ಚಿಂತಾಮಣಿ, ಜಯಶ್ರೀ ಕರಗುದರಿ, ಮಧುಮತಿ ಸಣಕಲ್ಲ ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜೂನ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು.

೨೩. **ಶ್ರೀಮತಿ ಸುಲಭಾ ದತ್ತ ನೀರಲಗಿ ದತ್ತಿ :** ಶ್ರೀಮತಿ ಅಶ್ವಿನಿ ಚಂದ್ರಶೇಖರ ನಾಡಿಗೇರ, ಬೆಂಗಳೂರು,
ಶ್ರೀಮತಿ ಅರ್ಚನಾ ಅವಿನಾಶ ದೇಶಪಾಂಡೆ, ಜರ್ಮನಿ

"ಸಂಗೀತಕ್ಕೆ ಅಪಾರ ಶಕ್ತಿ ಇದ್ದು, ಕಲೆಯು ಒಂದು ತಪಸ್ಸಾಗಿದೆ. ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಇದಕ್ಕೆ ಛಲ ಹಾಗೂ ಕಠಿಣ ಪರಿಶ್ರಮ ಬೇಕು. ಛಲದಿಂದಲೇ ಎಲ್ಲ ಸಂಗೀತಗಾರರು ಪ್ರಖ್ಯಾತರಾಗಿದ್ದಾರೆ. ಹಿಂದಿನ ದಿನಗಳಲ್ಲಿ ಸಂಗೀತ ಕಾರ್ಯಕ್ರಮಗಳು ಅಹೋರಾತ್ರಿ ನಡೆಯುತ್ತಿದ್ದವು. 'ಪದ್ಮಶ್ರೀ' ಯಿಂದ 'ಭಾರತ ರತ್ನ' ಪ್ರಶಸ್ತಿಗಳನ್ನು ಪಡೆದ ಸಂಗೀತಗಾರರು ನಮ್ಮ ಕ್ಷೇತ್ರದವರಾಗಿದ್ದು, ನಮಗೆ ಹೆಮ್ಮೆ ಹಾಗೂ ಗೌರವವನ್ನು ತಂದುಕೊಡುವ ವಿಷಯವಾಗಿದೆ. ಸವಾಯಿ ಗಂಧರ್ವರು, ಪಂ. ಭೀಮಸೇನ ಜೋಶಿ, ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು, ಪಂ. ಪಂಚಾಕ್ಷರಿ ಗವಾಯಿಗಳು, ಪಂ. ಮಾಧವ ಗುಡಿ, ಸಿತಾರ ರತ್ನ ಖಾನ್ ಸಾಹೇಬರು, ಬಸವರಾಜ ಬೆಂಡಿಗೇರಿ, ಪಂ. ರಘುನಾಥ ನಾಕೋಡ, ಬಾಲೇಖಾನ್‌ರಂಥ ಸಂಗೀತ ಕ್ಷೇತ್ರದ ದಿಗ್ಗಜರು ತಮ್ಮ ಅಪೂರ್ವ ಕೊಡುಗೆಯಿಂದ ಧಾರವಾಡಕ್ಕೆ ಕೀರ್ತಿ ತಂದಿದ್ದಾರೆ" ಎಂದು ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿ ಡಾ. ಪ್ರಮೋದ ಗಾಯಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಡಾ. ಸುಲಭಾ ದತ್ತ ನೀರಲಗಿ ಅವರು ಕ.ವಿ.ವ ಸಂಘದಲ್ಲಿ ಇರಿಸಿದ ದತ್ತಿ ಕಾರ್ಯಕ್ರಮದ ಅಂಗವಾಗಿ ಗುರು ಪದ್ಮವಿಭೂಷಣ ಗಂಗೂಬಾಯಿ ಹಾನಗಲ್ ಸ್ಮರಣೋತ್ಸವದ ಅಂಗವಾಗಿ ದಿನಾಂಕ **೫-೬-೨೦೧೮** ರಂದು ನಡೆದ **"ಸಂಗೀತ ಸಂಜೆ"** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

"ಸಮಯದ ಅಭಾವ, ಆಸಕ್ತ ಜನರು ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದರಿಂದ ಶಾಸ್ತ್ರೀಯ ಸಂಗೀತ ದಿನೇ ದಿನೇ ಕಡಿಮೆಯಾಗುತ್ತಿದೆ, ಸಂಗೀತ ಕಲೆ ಕುಂಠಿತವಾಗುತ್ತಿದೆ. ಸಂಗೀತದ ಗಾಳಿ ಕಡಿಮೆಯಾಗುತ್ತಿದ್ದು, ಸಂಗೀತಕ್ಕೆ ಸಾರ್ವತ್ರಿಕ ಬೆಂಬಲ ಅಗತ್ಯವಾಗಿದೆ". ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭದ ಹಂತದಲ್ಲಿಯೇ ಸಂಗೀತವನ್ನು ಒಂದು ವಿಷಯವನ್ನಾಗಿ ಕಲಿಸುವ ವ್ಯವಸ್ಥೆಯಾಗಬೇಕೆಂದು ಸೂಚಿಸಿದರು'.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಮಾಜಿ ಮಹಾಪೌರ ಹಣಮಂತರಾವ ಡಂಬಳ, 'ಸಂಗೀತ ಕ್ಷೇತ್ರಕ್ಕೆ' ಕಲಾಶ್ರೀ ಸಂಸ್ಥೆಯು ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ತಾವುಗಳು ವೈಯಕ್ತಿಕವಾಗಿ ಐದು ಲಕ್ಷ ರೂಪಾಯಿ ದೇಣಿಗೆ ನೀಡುವುದಾಗಿ ಘೋಷಿಸಿ, ಇದರಿಂದ ಬರುವ ಬಡ್ಡಿಯ ಹಣವನ್ನು ಸಂಗೀತ ಕಾರ್ಯಕ್ರಮಗಳಿಗೆ ಬಳಸಬೇಕೆಂದರು. ವಿವಿಧ ಕಲೆಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ವಿದ್ಯಾವರ್ಧಕ ಸಂಘವು ಹಮ್ಮಿಕೊಳ್ಳುತ್ತಿರುವ ಕಾರ್ಯವನ್ನು ಅವರು ಪ್ರಶಂಸಿದರು.

ಈ ಬಾರಿಯ ಪ್ರತಿಷ್ಠಿತ 'ಚೌಡಯ್ಯ ಪ್ರಶಸ್ತಿ' ಪುರಸ್ಕೃತ, ಪ್ರಖ್ಯಾತ ತಬಲಾ ವಾದಕ ಪಂ. ರಘುನಾಥ ನಾಕೋಡ ಹಾಗೂ ರಾಜಗುರು ಸಂಗೀತ ಸಭಾ ಸಂಸ್ಥೆಯ ಸಂಸ್ಥಾಪಕ ನಿಜಗುಣಿ ರಾಜಗುರು ಅವರನ್ನು ಈ ಸಂದರ್ಭದಲ್ಲಿ 'ಕಲಾಗೌರವ ಪ್ರಶಸ್ತಿ' ಹಾಗೂ 'ವರ್ಷದ ಪ್ರೋತ್ಸಾಹ' ಗಳನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕಲಾಶ್ರೀ ಸಂಗೀತ ಸಭಾದ ವಿನ್ಯಾಸಕ ಅರ್ಜುನ ಮುತ್ತಳ್ಳಿ ಅವರನ್ನೂ ಗೌರವಿಸಲಾಯಿತು.

ಡಾ. ವಿ.ಆರ್. ಹೂಗಾರ, ಡಾ. ಮಲ್ಲಕಾರ್ಜುನ ತರ್ಲಗಟ್ಟಿ, ಡಾ. ಸುಲಭಾ ದತ್ತ ನೀರಲಗಿ ಹಾಗೂ ಡಾ. ಮೃತ್ಯುಂಜಯ ಅಗಡಿ ಅವರು ಸೊಗಸಾಗಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಅಪಾರ ಸಂಖ್ಯೆಯಲ್ಲಿ ಸೇರಿದ್ದ ಸಂಗೀತ ಪ್ರೇಮಿಗಳ ಮನ ತಣಿಸಿದರು. ಪಂ. ರಘುನಾಥ ನಾಕೋಡ, ನಿಜಗುಣಿ ರಾಜಗುರು ಹಾಗೂ ಬಾಬೂರಾವ ಹಾನಗಲ್ ಅವರು ಮಾತನಾಡಿ, ನೀರಲಗಿ, ಡಂಬಳ ಮನೆತನದವರು ಸಾಮಾಜಿಕ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯನ್ನು ಪ್ರಶಂಶಿಸಿ, ಶುಭ ಹಾರೈಸಿದರು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆಯಲ್ಲಿದ್ದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಲಾಶ್ರೀ ಸಂಸ್ಥೆಯ ಕಾರ್ಯದರ್ಶಿ ದತ್ತ ನೀರಲಗಿ ವಂದಿಸಿದರು. ಆಕಾಶವಾಣಿಯ ಮಾಯಾ ರಾಮನ್ ಕಾರ್ಯಕ್ರಮ ನಿರೂಪಿಸಿದರು.

೨೪. **ಶ್ರೀ ಎನ್. ಕೆ. ಜೋಗಳೇಕರ ಸ್ಮರಣಾರ್ಥ ದತ್ತಿ:** ದಾನಿಗಳು, ಶ್ರೀ ಸುಹಾಸ ಜೋಗಳೇಕರ

೨೫. **ಶ್ರೀಮತಿ ಅನ್ನಪೂರ್ಣಮ್ಮ ಸಿದ್ಧಲಿಂಗಶಾಸ್ತ್ರಿ ಹಿರೇಮಠ ದತ್ತಿ :** ದಾನಿಗಳು, ದಿ. ಶ್ರೀಮತಿ ಲೀಲಾವತಿ ಸಿ. ಹಿರೇಮಠ.

'ವೈದ್ಯ ವೃತ್ತಿಯು ಪವಿತ್ರ ಕಾರ್ಯವಾಗಿದ್ದು ಬಹಳೇ ಹೊಣೆಗಾರಿಕೆಯ ಕಾರ್ಯವೂ ಆಗಿದೆ. ರೋಗಿಗಳಲ್ಲಿಯೇ ಭಗವಂತನನ್ನು ಕಂಡು, ರೋಗಿಗಳ ಸೇವೆಯೇ ಭಗವಂತನ ಸೇವೆ ಎಂದು ತಿಳಿದುಕೊಂಡು ವೈದ್ಯರೆಲ್ಲ ಸೇವೆ ಸಲ್ಲಿಸಬೇಕು. ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಗಳಿಂದ ಸೇವೆ ಸಲ್ಲಿಸಿದರೆ, ನಮ್ಮ ಮರಣದ ನಂತರವೂ ಜನರು ನಮ್ಮನ್ನು ಸ್ಮರಿಸುತ್ತಾರೆ, ಜನರು ಸ್ಮರಿಸುವಂತೆ ಕಾರ್ಯ ಮಾಡಬೇಕು ಎಂದು ಪ್ರಖ್ಯಾತ ನೇತ್ರ ತಜ್ಞ ಪದ್ಮಶ್ರೀ ಡಾ. ಎಂ. ಎಂ. ಜೋಶಿ ಹೇಳಿದ್ದಾರೆ'.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ 'ಶ್ರೀಮತಿ ಅನ್ನಪೂರ್ಣಮ್ಮ ಸಿದ್ಧಲಿಂಗಶಾಸ್ತ್ರಿ ಹಿರೇಮಠ ದತ್ತಿ' ಕಾರ್ಯಕ್ರಮದ ಅಂಗವಾಗಿ ದಿನಾಂಕ **೧೫-೬-೨೦೧೮** ರಂದು ವೈದ್ಯಕೀಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ನಗರದ ಖ್ಯಾತ ವೈದ್ಯ ಡಾ. ಎಸ್. ಆರ್. ಹೆಬ್ಬಾಳ ರವರಿಗೆ **'ಆರೋಗ್ಯ ಸೇವಾರತ್ನ ಪ್ರಶಸ್ತಿ'** ಯನ್ನು ಪ್ರದಾನ ಮಾಡಿ ಅವರು ಮಾತನಾಡುತ್ತಿದ್ದರು.

ಸಮಾಜದಲ್ಲಿ ಶ್ರೇಷ್ಠ ಕಾರ್ಯಗಳನ್ನು ಮಾಡುತ್ತಿರುವವರನ್ನು ಗುರುತಿಸಿ, ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸುತ್ತಿರುವ ಕ.ವಿ.ವ.ಸಂಘದ ಕಾರ್ಯವನ್ನು ಪ್ರಶಂಸಿಸಿದ ಅವರು, ಇಂಥ ಅಪರೂಪದ ಅರ್ಥಪೂರ್ಣ ಕಾರ್ಯಕ್ರಮಗಳು ಉಳಿದವರಿಗೆ ಪ್ರೇರಣೆ ನೀಡುತ್ತಿವೆ, ಎಲೆ ಮರೆಯ ಕಾಯಿಯಾಗಿ ಅನುಪಮ ಸೇವೆಯನ್ನು ಸಲ್ಲಿಸುತ್ತಿರುವ ಡಾ. ಎಸ್. ಆರ್. ಹೆಬ್ಬಾಳ ರವರಿಗೆ 'ಸೇವಾರತ್ನ ಪ್ರಶಸ್ತಿ' ನೀಡಿ ಗೌರವಿಸಿದ್ದು ಸ್ತುತ್ಯ ಹಾಗೂ ಶ್ಲಾಘನೀಯ ಎಂದು ಹೇಳಿ ಇಂಥ ಕಾರ್ಯಗಳು ಸಮಾಜದಲ್ಲಿ ಇನ್ನೂ ಹೆಚ್ಚಾಗಿ ನಡೆಯಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಮಹಾಪೌರ ಸುಧೀರ ಸರಾಫ್ ರವರು ಮಾತನಾಡಿ, 'ಆರ್ಥಿಕವಾಗಿ ಸದೃಢರಾದವರು ದತ್ತಿಗಳನ್ನು ಇರಿಸಿ, ಸಮಾಜ ಸೇವೆಯನ್ನು ಮಾಡುವವರಿಗೆ ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ' ಎಂದು ಹೇಳಿ, ನಮ್ಮ ಗಳಿಕೆಯ ಸ್ವಲ್ಪ ಭಾಗವನ್ನಾದರೂ ಸಮಾಜ ಸೇವೆಗಾಗಿ ಮೀಸಲಾಗಿರಿಸಬೇಕು' ಎಂದರು.

ಅವಳಿ ನಗರದ ಸ್ವಚ್ಚತೆಯ ಬಗ್ಗೆ ಮಾತನಾಡಿದ ಮಹಾಪೌರರು 'ಕಸದ ವಿಲೇವಾರಿಗೆಂದೇ ೬೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ನಿರೂಪಿಸಲಾಗಿದ್ದು, ಅದರ ಅಂಗವಾಗಿ ನಿಮ್ಮ ಮನೆಗೆ ಬಂದು ಕಸ ಸಂಗ್ರಹಿಸಲಾಗುವದು. ನಿಮ್ಮ ಮನೆಯ ಕಸವನ್ನು ಬೀದಿಗೆ ಎಸೆದು ಪರಿಸರವನ್ನು ಹಾಳು ಮಾಡಬೇಡಿರಿ ಎಂದು ವಿನಂತಿಸಿ, 'ಕಸ ರಹಿತ ನಗರ' ನಮ್ಮ ಗುರಿಯಾಗಿದ್ದು ಸಾರ್ವಜನಿಕರ ಸಹಕಾರ ಇದಕ್ಕೆ ಅವಶ್ಯವಾಗಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರದ ಪ್ರಖ್ಯಾತ, ಹಿರಿಯ ವೈದ್ಯ ಡಾ. ಎಸ್. ಆರ್. ಕೌಲಗುಡ್ಡ ರವರು ಮಾತನಾಡಿ, ತಮ್ಮ ಸುಸಜ್ಜಿತ ಆಸ್ಪತ್ರೆಯಲ್ಲಿ, ದಿನವಿಡೀ ಉತ್ತಮ ಚಿಕಿತ್ಸೆ ದೊರೆಯುವಂತೆ ಮಾಡುವುದರಲ್ಲಿ ಡಾ. ಹೆಬ್ಬಾಳರು ಅವಳಿನಗರಗಳಲ್ಲಿ ಮೊದಲಿಗರಾಗಿದ್ದಾರೆ. ಅವರಿಂದ ಉಪಚಾರ ಪಡೆದು, ಗುಣಮುಖರಾದ ಸಹಸ್ರಾರು ರೋಗಿಗಳಲ್ಲಿ ನಾನೂ ಸಹ ಒಬ್ಬನಾಗಿದ್ದೇನೆ ಹಾಗೂ ಗಟ್ಟಿ ಮುಟ್ಟಾಗಿಯೇ ಇದ್ದೇನೆ ಎಂದು ತಮ್ಮ ಶಿಷ್ಯ ಡಾ. ಹೆಬ್ಬಾಳರ ಕೈ ಗುಣವನ್ನು ಮನಸಾರೆ ಹೊಗಳಿದರು.

'ಆರೋಗ್ಯ ಸೇವಾರತ್ನ' ಪ್ರಶಸ್ತಿಯನ್ನು ಸ್ವೀಕರಿಸಿ, ವಿನೀತ ಭಾವದಿಂದ, ತುಂಬಿದ ಹೃದಯದಿಂದ ಮಾತನಾಡಿದ ಡಾ. ಎಸ್. ಆರ್. ಹೆಬ್ಬಾಳ ೮೦ ರ ದಶಕದಲ್ಲಿ ಈಗಿರುವಷ್ಟು ವೈದ್ಯಕೀಯ ಸೌಲಭ್ಯಗಳು ನಗರದಲ್ಲಿ ದೊರೆಯುತ್ತಿರಲಿಲ್ಲ. ತುರ್ತು ಚಿಕಿತ್ಸೆಗಳಿಗಾಗಿ ಪರವೂರುಗಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಧಾರವಾಡ ನಗರದಲ್ಲೇ ಸುಸಜ್ಜಿತ ದವಾಖಾನೆಯನ್ನು ಪ್ರಾರಂಭಿಸಿ ಅದರ ಮೂಲಕ ರೋಗಿಗಳಿಗೆ ದಿನವಿಡಿ ಉತ್ತಮ ಚಿಕಿತ್ಸೆ ದೊರೆಯುವಂತೆ ಮಾಡಲು ಹಿರಿಯ ವೈದ್ಯರ ಮಾರ್ಗದರ್ಶನ, ಸಹಾಯಗಳಿಂದ 'ಸ್ಪಂದನ' ದವಾಖಾನೆಯನ್ನು ಸ್ಥಾಪಿಸಿದ್ದಾಗಿ ತಿಳಿಸಿ, ಪಂ. ಮಲ್ಲಿಕಾರ್ಜುನ ಮನಸೂರ, ಪಂ. ಬಸವರಾಜ ರಾಜಗುರು, ಬಾಲೇಖಾನ, ವೆಂಕಟೇಶ ಗೋಡಖಿಂಡಿ, ಪಂ. ಪಂಚಾಕ್ಷರಿ ಮತ್ತಿಗಟ್ಟಿ ಮುಂತಾದ ನಾಡಿನ ಗಣ್ಯರಿಗೆ ಫಿಜಿಶಿಯನ್ ಆಗಿ ಸೇವೆ ಮಾಡುವ ಭಾಗ್ಯ ನನ್ನದಾಗಿತ್ತು ಎಂದು ಹೇಳಿದರು. ಹಿತಮಿತ ಆಹಾರ ಸೇವನೆ, ಅವಶ್ಯವಿದ್ದಷ್ಟು ವ್ಯಾಯಾಮ, ಒತ್ತಡಗಳಿಗೆ ಬಲಿಯಾಗದೇ ಪ್ರಶಾಂತ ಮನಸ್ಸಿನಿಂದ ಜೀವನ ನಡೆಸಿದರೆ ವೈದ್ಯರಿಂದ ದೂರವಿರಲು ಸಾಧ್ಯವಾಗುತ್ತದೆ ಎಂದು ಸಲಹೆ ಮಾಡಿದರು.

ಆಸ್ಪತ್ರೆಗಳಿಗಾಗಿ ಬಹುದೊಡ್ಡ ಕಟ್ಟಡ ಇದ್ದರೆ ಸಾಲದು, ಅದರಲ್ಲಿ ಆಧುನಿಕ ಯಂತ್ರೋಪಕರಣಗಳು, ತಜ್ಞ ವೈದ್ಯರು ಸೇವಾ ಮನೋಭಾವನೆಯಿಂದ ಸೇವೆ ಸಲ್ಲಿಸುವ ಸಿಬ್ಬಂದಿ ವರ್ಗ ಅವಶ್ಯವೆಂದು ಹೇಳಿ, ತಮ್ಮ ಯಶಸ್ಸಿಗೆ ಸಹಕರಿಸಿದ ಎಲ್ಲರನ್ನು ಸ್ಮರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು. ಇತ್ತೀಚೆಗೆ ನಿಧನ ಹೊಂದಿದ ದತ್ತಿದಾನಿ ಅನ್ನಪೂರ್ಣಮ್ಮ ಹಿರೇಮಠರವರಿಗೆ ಶ್ರದ್ಧಾಂಜಲಿ ಸಮರ್ಪಿಸಲಾಯಿತು.

೨೬. **ಶ್ರೀಮತಿ ರಶ್ಮಿ ಮಂಜುನಾಥ ನಾಯಕ ದತ್ತಿ :** ದಾನಿಗಳು, ಶ್ರೀ ಕೆ.ಎಚ್. ನಾಯಕ

ಸಮಾಜ ಸೇವೆ ಶಿಕ್ಷಣ ಸಾಹಿತ್ಯ, ರಾಷ್ಟ್ರ ರಕ್ಷಣೆ, ಪರಿಸರ, ಮಕ್ಕಳ ಹಾಗೂ ದೀನದಲಿತರು ಕುರಿತು ವಿಶೇಷ ಸಾಧನೆ ಮಾಡಿದ ವ್ಯಕ್ತಿ ಒಬ್ಬರ ಸನ್ಮಾನ ಮತ್ತು ಕಾಲಕಾಲಕ್ಕೆ ಸಂಭವಿಸುವ ಸಾಮಾಜಿಕ ರಾಷ್ಟ್ರೀಯ ವಿದ್ಯಮಾನಗಳ ಕುರಿತು ವಿಚಾರಗೋಷ್ಠಿ ಏರ್ಪಡಿಸಲು ದತ್ತಿ ಸ್ಥಾಪಿಸಿದ್ದಾರೆ.

೨೭. **ಪ್ರೊ. ಸಂಪಿಗೆ ತೋಂಟದಾರ್ಯ ದತ್ತಿ :** ದಾನಿಗಳು, ತೋಂಟದಾರ್ಯ ಅಭಿನಂದನೆ ಸಮಿತಿ, ಧಾರವಾಡ.

ಆಧುನಿಕ ರಂಗಭೂಮಿ ಪ್ರೇಕ್ಷಕರಿಂದ ಬದುಕುತ್ತಿಲ್ಲ. ಅದು ಪ್ರೇಕ್ಷಕರಿಂದ ದೂರವಾಗಿದೆ ಎಂದು ಧಾರವಾಡ ರಂಗಾಯಣ ನಿರ್ದೇಶಕ ಪ್ರಮೋದ ಶಿಗ್ಗಾಂವ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರೊ. ಸಂಪಿಗೆ ತೋಂಟದಾರ್ಯ ದತ್ತಿ ಅಂಗವಾಗಿ ದಿನಾಂಕ **೧೮-೬-೨೦೧೮** ರಂದು ಆಯೋಜಿಸಿದ್ದ **'ರಂಗ ಗೀತೆಗಳು'** ಗಾಯನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಪ್ರಮೋದ ಶಿಗ್ಗಾಂವ ಅವರು, ೭೦ ರ ದಶಕದಲ್ಲಿ ಹಣದ ಕೊರತೆ ಇತ್ತು. ಆದರೂ ಕಲಾವಿದರಲ್ಲಿ ಬದ್ಧತೆ ಇತ್ತು. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಅನುದಾನವಿದ್ದು ರಂಗಭೂಮಿಗೆ ಸಾಕಷ್ಟು ಹಣವಿದೆ. ಆದರೆ, ಕಲಾವಿದರಲ್ಲಿ ಬದ್ಧತೆಯ ಕೊರತೆ ಕಾಣುತ್ತಿದೆ ಎಂದು ಒಬ್ಬ ಕಲಾವಿದನಾಗಿ ಮತ್ತು ರಂಗಭೂಮಿಯ ಕಾರ್ಯಕರ್ತನಾಗಿ ಅನುಭವಕ್ಕೆ ಬಂದ ಮಾತನ್ನು ಹೇಳುತ್ತಿದ್ದೇನೆ ಎಂದರು. ಕರ್ನಾಟಕದಲ್ಲಿರುವ ಸಾಂಸ್ಕೃತಿಕ ಸವಲತ್ತುಗಳು ಯಾವುದೇ ರಾಜ್ಯದಲ್ಲೂ ಇಲ್ಲ. ರಂಗಶಾಲೆಗಳಿವೆ, ರಂಗಾಯಣಗಳಿವೆ, ತಿರುಗಾಟಗಳಿವೆ ಆದರೆ, ಉತ್ತಮ ನಟ-ನಟಿಯರ ಕೊರತೆ ಎದ್ದು ಕಾಣುತ್ತಿದ್ದು, ಒಳ್ಳೆಯ ನಟನನ್ನು ಹುಟ್ಟು ಹಾಕಬೇಕಿದೆ ಎಂದರು.

ಆಧುನಿಕ ರಂಗಭೂಮಿಯಲ್ಲಿ ನಾಟಕ ಬರಹಗಾರರು ಕೂಡ ರಂಗಭೂಮಿಯ ಪ್ರೇಕ್ಷಕರಿಗಾಗಿ ಮನಸೆಳೆಯುವ ನಾಟಕಗಳನ್ನು ಬರೆಯುತ್ತಿಲ್ಲ. ಬದಲಾಗಿ ಪ್ರಶಸ್ತಿಗಳನ್ನು ಬಾಚಿಕೊಳ್ಳುವ ದೃಷ್ಟಿಕೋನದಿಂದ ಮಾತ್ರ ನಾಟಕಗಳನ್ನು ಬರೆಯುತ್ತಿದ್ದಾರೆ. ಹೀಗಾಗಿ ಪ್ರೇಕ್ಷಕರನ್ನು ಸೆಳೆಯಬಲ್ಲ ನಾಟಕಗಳು ಬರುತ್ತಿಲ್ಲ. ಅಂತೆಯೇ ರಂಗಭೂಮಿಗೆ ಪ್ರೇಕ್ಷಕನ ದೃಷ್ಟಿಯಲ್ಲಿ ಕೊಂಚ ಹಿನ್ನೆಡೆಯಾಗಿದೆ. ನಮ್ಮ ರಂಗಭೂಮಿಗೆ ಪ್ರೇಕ್ಷಕನೇ ಮಹಾಪ್ರಭು ಆಗಿದ್ದ ಕಾಲವೊಂದಿತ್ತು. ಪ್ರೇಕ್ಷಕನ ಅಭಿರುಚಿಗೆ ತಕ್ಕಂತೆ ನಾಟಕಗಳ ಪ್ರಯೋಗಗಳಾಗುತ್ತಿದ್ದವು. ಕಲಾವಿದ ಪ್ರಸಿದ್ಧನಾಗಿ ಆ ಕಲಾವಿದನಿಂದಲೇ ನಾಟಕಗಳು ಸತತ ಪ್ರಯೋಗವಾಗುವ ಕಾಲ ನಮ್ಮ ರಂಗಭೂಮಿಯದಾಗಿತ್ತು. ಇಂದು ಪ್ರಸಿದ್ಧ ಕಲಾವಿದನಾಗಿ ಹೊರಹೊಮ್ಮಿದವರ ಸಂಖ್ಯೆ ವಿರಳವಾಗಿದ್ದರಿಂದ ನಾಟಕಕ್ಕೆ ಮಾರುಕಟ್ಟೆ ಇಲ್ಲದಂತಾಗಿದೆ. ವೃತ್ತಿ ರಂಗಭೂಮಿಯಲ್ಲಿ ಧುತ್ತರಗಿ ಹೂಗಾರರಂತ ನಾಟಕ ಕೃತಿಕಾರರಿದ್ದು, ಅವರ ನಾಟಕಗಳು ಸಾಕಷ್ಟು ಪಸಿದ್ಧಿಯನ್ನು ಹೊಂದಿ ಜನರನ್ನು ಆಕರ್ಷಿಸಿ ರಂಗಭೂಮಿಗೆ ಖ್ಯಾತಿ ತಂದುಕೊಟ್ಟಿದ್ದವು ಎಂದು ಕಳೆದ ಹೋದ ದಿನಗಳನ್ನೂ ನೆನಪಿಸಿಕೊಂಡರು. ಆ ಕಳೆದ ಹೋದ ದಿನಗಳನ್ನೊ ಪುನಃಸ್ಥಾಪಿಸಲು ರಂಗಭೂಮಿಯ ಕರ್ಮಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಮತ್ತು ಪ್ರೇಕ್ಷಕನನ್ನೇ ಪ್ರಭುವಾಗಿಸಬೇಕಿದೆ. ಸಿನಿಮಾ, ಸೀರಿಯಲ್, ಮೋಬೈಲ್‌ಗಳ ಹಾವಳಿಯಲ್ಲಿ ನಾಟಕ ನೋಡುವ ಪ್ರೇಕ್ಷಕರ ಸಂಖ್ಯೆ ಕಡಿಮೆ ಆಗಿದೆ ಎನಿಸಿದರೂ ಉತ್ಕೃಷ್ಟ ನಾಟ್ಯಪ್ರಯೋಗಗಳನ್ನು ಮಾಡಿ, ಜನರನ್ನು ಆಕರ್ಷಿಸುವಲ್ಲಿ ರಂಭೂಮಿಯು ಕೂಡ ವಿಫಲವಾಗಿದೆ ಎಂದು ನಾವು ಆತ್ಮವಿಮರ್ಶೆ ಮಾಡಿಕೊಳ್ಳುವ ಸಂಕೀರ್ಣ ಕಾಲದಲ್ಲಿ ಇದ್ದೇವೆ. ಈ ಸನ್ನಿವೇಶ ಹೊಗಲಾಡಿಸಲು ಇತ್ತೀಚಿನ ದಿನಗಳಲ್ಲಿ ರಂಗ ಕರ್ಮಿಗಳು ಕಾರ್ಯ ಮಾಡಲು ಆರಂಭಿಸಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಎಂ.ಜಿ.ನೂಲಕರ ಅವರು ಪಾಹಿಶಾಂತ ಭುವನೇಶ್ವರಿ, ಭಾರತಾಂಬೆ ಶರಣು ಶಾರದೆ ಎಂಬ ನಾಂದಿ ಹಾಗೂ ಉಪನಾಂದಿ ಪದಗಳ ಜೊತೆಗೆ ಅಣ್ಣ ತಂಗಿ, ಸೌಭಾಗ್ಯ ಲಕ್ಷ್ಮಿ ನಾಟಕದ ಹಾಗೂ ಹಾಸ್ಯ ನಾಟ್ಯಗೀತೆಗಳನ್ನು ಹಾಡಿದರೆ, ಉತ್ಪಲಾ ಗದಗಕರ ಅವರು ಜಗಜ್ಯೋತಿ ಬಸವೇಶ್ವರ ನಾಟಕದ ಜ್ಞಾನ ಸಾಗರ, ಚಂದ್ರ ಬಸವಾ, ಮರಾಠಿ ನಾಟ್ಯ ಗೀತೆ, ಸಂವಾದಿ ಗೀತೆಗಳನ್ನು ಮಧುರವಾಗಿ ಹಾಡಿದರು. ಪ್ರೇಕ್ಷಕರು ಚಪ್ಪಾಳೆಯ ಮೂಲಕ ಅವರ ರಂಗಗೀತೆಗಳಿಗೆ ಪ್ರೋತ್ಸಾಹ ನೀಡಿದರು. ಅವರೊಂದಿಗೆ ಗಣೇಶ ಹಾಸಲಕರ ತಬಲಾ ಸಾಥ ನೀಡಿದರೆ, ಶೀಧರ ವಾಗ್ಮೋಡೆ ಕೊಳಲು ಹಾಗೂ ನಾರಾಯಣ ಕುಲಕರ್ಣಿ ತಾಳದಲ್ಲಿ ಸಾಥ ನೀಡಿದರು.

ಪ್ರಾರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಬ. ಗಾಮನಟ್ಟಿ ವಂದಿಸಿದರು. ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು.

೨೮. **ಡಾ. ಎಸ್. ಆರ್. ಗುಂಜಾಳ ದತ್ತಿ :** ದಾನಿಗಳು, ಶ್ರೀಮತಿ ಶಾಂತಾದೇವಿ ಗುಂಜಾಳ

"ಯಾವುದೇ ಅನುಕೂಲತೆಗಳು ಇರದೇ ಇದ್ದ ಸಮಯದಲ್ಲಿ ಡಾ. ಎಸ್.ಆರ್. ಗುಂಜಾಳರವರು ಬಂದ ಎಲ್ಲ ಕಷ್ಟಗಳನ್ನು ಎದುರಿಸಿ ಹಣ, ಸಮಯ, ಶಿಕ್ಷಣದ ಬೆಲೆಯನ್ನು ಅರ್ಥ ಮಾಡಿಕೊಂಡು ಸಮಾಜಮುಖಿಯಾಗಿ ಬೆಳೆದರು. ತಮ್ಮ ಆಸಕ್ತಿಯ ಗ್ರಂಥಾಲಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅದರಲ್ಲೆ ಆಳವಾದ ಅಧ್ಯಯನ ಮಾಡಿ, ಗ್ರಂಥಾಲಯಗಳಿಗೆ ಅಪರೂಪದ ಕಾಣಿಕೆ ನೀಡಿದ್ದಾರೆ ಎಂದು ಕ.ವಿ.ವಿ. ಶ್ರೀ ಬಸವೇಶ್ವರ ಪೀಠದ ಸಂಯೋಜಕ ಡಾ. ಸಿ.ಎಂ. ಕುಂದಗೋಳ ಹೇಳಿದ್ದಾರೆ.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಡಾ. ಎಸ್.ಆರ್. ಗುಂಜಾಳ ದತ್ತಿ ಅಂಗವಾಗಿ ದಿನಾಂಕ **೨೫–೬–೨೦೧೮** ರಂದು ನಡೆದ ಕಾರ್ಯಕ್ರಮದಲ್ಲಿ **'ಡಾ.ಎಸ್.ಆರ್. ಗುಂಜಾಳರು ನಡೆದು ಬಂದ ದಾರಿ'** ಎಂಬ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಜಗಜ್ಯೋತಿ ಬಸವಣ್ಣನವರ "ಕಾಯಕ" ತತ್ವದಲ್ಲಿ ಅಪಾರ ಶ್ರದ್ಧೆಯನ್ನಿಟ್ಟು, ಅದರಂತೆಯೇ ನಡೆದುಕೊಂಡು ಬಂದಿರುವ ಪ್ರೊ. ಗುಂಜಾಳರು ನಿಜವಾದ ಕಾಯಕ ಯೋಗಿಯಾಗಿದ್ದಾರೆ ಎಂದು ಅವರ ಸೇವೆಯನ್ನು ಶ್ಲಾಘಿಸಿದ ಡಾ. ಕುಂದಗೋಳರು 'ಬಸವಣ್ಣನವರನ್ನು ಕುರಿತು ಬರೆದಂಥಹ ಎಲ್ಲ ಭಾಷೆಗಳ ಲೇಖನ, ಪುಸ್ತಕ ಸಮಗ್ರ ಸಾಹಿತ್ಯ ಸೇರಿಸಿ ಬರೆದ 'ಬಸವ ಸಾಹಿತ್ಯ ದರ್ಪಣ' ಗ್ರಂಥ ಅತ್ಯಮೂಲ್ಯವಾಗಿದೆ ಎಂದರು. ಬೆಳಗಾವಿಯ ನಾಗನೂರಮಠ ಸಂಶೋಧನಾ ಕೇಂದ್ರ, ಕಲಬುರ್ಗಿಯ ಗ್ರಂಥಾಲಯ ಇವುಗಳನ್ನು ಆಧುನಿಕ ಮಾನದಂಡದಲ್ಲಿ ರೂಪಿಸಿದವರಲ್ಲಿ ಇವರ ಪಾತ್ರ ಬಹುದೊಡ್ಡದು' ಎಂದರು.

'ಡಾ. ಎಸ್.ಆರ್. ಗುಂಜಾಳರು ನಡೆದು ಬಂದ ದಾರಿ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದ ಬೆಂಗಳೂರಿನ ಬಸವಾ ಟಿ.ವಿ ವ್ಯವಸ್ಥಾಪಕ ನಿರ್ದೇಶಕರಾದ ಈ. ಕೃಷ್ಣಪ್ಪ, ಎಸ್.ಆರ್. ಗುಂಜಾಳ ಅವರ ವ್ಯಕ್ತಿತ್ವ ಕುರಿತು ಪ್ರಶಂಸಿಸಿ ಅವರ ಬದುಕು ಬರಹ ಕುರಿತಂತೆ ಒಂದು ದಾಖಲೀಕರಣ ಮಾಡುತ್ತೇವೆ. ಡಾಕ್ಯುಮೆಂಟ್ರಿ ಮಾಡುವ ಮೂಲಕ ಅವರನ್ನು ಶಾಶ್ವತವಾಗಿ ಉಳಿಸಿಕೊಳ್ಳುತ್ತೇವೆ ಎಂದು ಜನರ ಸಹಾಯ ಯಾಚಿಸಿದರು.

ಇದೇ ಸಂದರ್ಭದಲ್ಲಿ ಡಾ.ಎಸ್.ಆರ್. ಗುಂಜಾಳ ಮತ್ತು ಶ್ರೀಮತಿ ಶಾಂತಾದೇವಿ ಅವರನ್ನು ದಾಂಪತ್ಯ ಜೀವನದ ೬೦ ವಸಂತಗಳ ಸಂಭ್ರಮದ ಅಂಗವಾಗಿ ಸನ್ಮಾನಿಸಿ, ಗೌರವಿಸಲಾಯಿತು.

ಡಾ. ಎಸ್.ಆರ್. ಗುಂಜಾಳರು ಸನ್ಮಾನಕ್ಕೆ ಪ್ರತಿಕ್ರಿಯಿಸಿ ಮಾತನಾಡಿ, ತಮ್ಮ ಈ ಆದರ್ಶದ ಬದುಕಿಗೆ ದಾರಿ ತೋರಿಸಿ ಕೊಟ್ಟವರು ತಮ್ಮ ತಾಯಿ ರುದ್ರಮ್ಮ. ತಮ್ಮೊಂದಿಗೆ ಸದಾ ಸಹಕರಿಸಿದ ಸಹಧರ್ಮಿಣಿ ಶಾಂತಾದೇವಿ ಹಾಗೂ ಸ್ನೇಹಿತರ ಬಳಗದ ಜೊತೆ ರೆವರೆಂಡ ಉತ್ತಂಗಿ ಚೆನ್ನಪ್ಪ ಅವರ ಮಾರ್ಗದರ್ಶನ, ಮೃತ್ಯುಂಜಯ ಸ್ವಾಮಿಗಳು, ಮುರುಘಾಮಠ ಧಾರವಾಡ ಇವರ ಆಶೀರ್ವಾದವನ್ನು ನೆನೆದರು.

ಗ್ರಂಥ ರಚನೆ ಮಾಡಿದ ಪ್ರಕಾಶ ಮಲ್ಲನವರ ಮತ್ತು ವಿರೇಶ ಜಾಲಿಕಟ್ಟಿ ಇವರನ್ನು ಸನ್ಮಾನಿಸಲಾಯಿತು. ವೇದಿಕೆ ಮೇಲೆ ದತ್ತಿ ದಾನಿ ಶಾಂತಾದೇವಿ ಗುಂಜಾಳ ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಮಾತನಾಡಿ, ಇದೊಂದು ಪುಣ್ಯ ಜೀವಿಗಳ ಕಾರ್ಯಕ್ರಮ. ಬಸವಾದಿ ಶರಣರ ವಚನಗಳು ಉಳಿಯುವಲ್ಲಿ, ಅರ್ಥೈಸುವಲ್ಲಿ ಫ.ಗು ಹಳಕಟ್ಟಿಯವರ ಕಾರ್ಯದಂತೆ, ಗ್ರಂಥಾಲಯಗಳ ಮೂಲಕ ವಚನ ಸಾಹಿತ್ಯ ಕುರಿತಂತೆ ಗುಂಜಾಳರು ಮಾಡಿದ ಕೆಲಸ ಶ್ಲಾಘನೀಯ ಎಂದರು. ಗ್ರಾಮೀಣ ಪ್ರದೇಶದಿಂದ ಬಂದು ಆಕಾಶದೆತ್ತರಕ್ಕೆ ಬೆಳೆದು, ಸಾಹಿತ್ಯ ಲೋಕದಲ್ಲಿ ತಮ್ಮ ಕೊಡುಗೆಯಿಂದ ಹೆಸರು ಮಾಡಿದ್ದಾರೆ ಎಂದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜೂನ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು.

೨೯. **ಶ್ರೀಮತಿ ನಿರ್ಮಲಾ ಶಶಿಧರ ಪಾಟೀಲ ದತ್ತಿ:** ದಾನಿಗಳು, ಶ್ರೀ ನಿತೀಶ ಶಶಿಧರ ಪಾಟೀಲ.

"ಕೆಲಸಗಳ ಒತ್ತಡಗಳಿಂದ ಇಂದು ಜನರಿಗೆ ಸಮಯವೇ ಸಿಗದಂತಾಗಿದೆ. ರಂಗು-ರಂಗಿನ, ತಳಕು-ಬೆಳಕಿನ ಆಕರ್ಷಣೆಗೆ ಒಳಗಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಹವ್ಯಾಸಿ ಹಾಗೂ ರಂಗಭೂಮಿಯ ನಟರ ಸಂಖ್ಯೆ ಕಡಿಮೆಯಾಗುತ್ತಿದೆ" ಎಂದು ಖ್ಯಾತ ರಂಗ ಕಲಾವಿದೆ ವಿಷಯಾ ಜೇವೂರ ಆತಂಕ ವ್ಯಕ್ತಪಡಿಸಿದ್ದಾರೆ.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿ. ಶ್ರೀಮತಿ ನಿರ್ಮಲಾ ಶಶಿಧರ ಪಾಟೀಲ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೩೦-೬-೨೦೧೮** ರಂದು ನಡೆದ **"ರಂಗಭೂಮಿಯಲ್ಲಿ ಮಹಿಳೆ"** ಎಂಬ ವಿಷಯದ ಬಗ್ಗೆ ಅವರು ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

"ಈ ಹಿಂದೆ ಕಲೆಗಳಿಗೆ ರಾಜಾಶ್ರಯ ಇರುತ್ತಿತ್ತು. ಪ್ರೇಕ್ಷಕರಿಂದಲೂ ಸಹ ಕಲಾಕಾರರಿಗೆ ಪ್ರೋತ್ಸಾಹ ಸಿಗುತ್ತಿತ್ತು. ಕಲಾಕಾರರು ಸಹ ತಮ್ಮ ಸಹಜ ಅಭಿನಯದಿಂದ ಪ್ರೇಕ್ಷಕರ ಮನಗೆಲ್ಲುತ್ತಿದ್ದರು. ಸ್ತ್ರೀ ಪಾತ್ರಗಳನ್ನು ಪುರುಷರು ಮಾಡುತ್ತಿದ್ದುದು ವಿಶೇಷವಾಗಿತ್ತು ಎಂದರು. ಹವ್ಯಾಸಿ ಮತ್ತು ರಂಗಭೂಮಿ ಕಲಾವಿದರ ಬಗ್ಗೆ ವಿಶ್ಲೇಷಣೆ ಮಾಡಿದ ಅವರು ರಂಗ ಕಲಾವಿದರಿಗೆ ನಾಟಕಗಳು ಒಂದು ಉದ್ಯೋಗವಾಗಿದೆ".

'ನಾಟಕದಲ್ಲಿ ಯಾವುದೇ ಮಾತು ಇಲ್ಲದ ಕುಂಕುಮ ಹಚ್ಚುವ ಪಾತ್ರದಲ್ಲಿ, ನಂತರ ಗೋಪಿಕಾ ಸ್ತ್ರೀಯರ ಮಧ್ಯದಲ್ಲಿ ಕೊಳಲು ಊದುತ್ತಾ ನಿಂತ ಕೃಷ್ಣನ ಪಾತ್ರಗಳ ಮೂಲಕ ತಾವು ಕಲಾ ಪ್ರಪಂಚಕ್ಕೆ ಪ್ರವೇಶಿಸಿದ್ದಾಗಿ' ತಿಳಿಸಿದರು.

'ಮಹಿಳೆಯರಿಗೆ ಮಾನಸಿಕ ಬಲ ಜಾಸ್ತಿಯಾಗಿದ್ದರೆ, ಪುರುಷರಿಗೆ ದೈಹಿಕ ಬಲ ಹೆಚ್ಚು. ಮಹಿಳೆಯರು ಮಾನಸಿಕ ಬಲವನ್ನು ಹೆಚ್ಚಿಸಿಕೊಳ್ಳಬೇಕಲ್ಲದೆ, ಬರುವ ಕಷ್ಟಗಳನ್ನು ಎದುರಿಸಿ, ತಮ್ಮ ಕಲೆಯನ್ನು ಪ್ರದರ್ಶಿಸಬೇಕು ಹಾಗೂ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು' ಎಂದರು.

ಈ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಪ್ರಖ್ಯಾತ ಹವ್ಯಾಸಿ ರಂಗ ಕಲಾವಿದೆ ಶ್ರೀಮತಿ ವತ್ಸಲಾ ಕುಲಕರ್ಣಿ ಮಾತನಾಡಿ, "ಜೀವನವೇ ಒಂದು ನಾಟಕ ರಂಗವಾಗಿದೆ. ಇಲ್ಲಿ ನಾವು 'ನಾಟಕ' ಮಾಡದೇ ಇದ್ದರೆ, ಜೀವನ ನಡೆಸುವುದು ಕಷ್ಟಕರವಾಗುತ್ತದೆ. ಹೀಗಾಗಿ ಕೆಲವರು ನಾಟಕ ಮಾಡುವುದನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ತಮ್ಮ ೪೦ ವರ್ಷಗಳ ಕಲಾ ಸೇವೆಯಲ್ಲಿ 'ಖಣಚಿಟಜ ಥಿಥಿ' ಪಾತ್ರಗಳನ್ನೇ ನಿರ್ದೇಶಕರು ನನಗೆ ನೀಡುತ್ತಿದ್ದರು. ನನ್ನಲ್ಲಿಯ ಸಾಮರ್ಥ್ಯದ ಬಗ್ಗೆ ಅವರಿಗೆ ಅಪಾರ ವಿಶ್ವಾಸವಿತ್ತು. ಧೈರ್ಯ, ಆತ್ಮವಿಶ್ವಾಸ, ಪಾತ್ರಗಳಿಗೆ ಜೀವ ತುಂಬುವ ಛಲ ನನ್ನಲ್ಲಿ ಇದ್ದವು" ಎಂದು ಹೇಳಿ, ರೈಲು ನಿಲ್ದಾಣದ ಆವರಣದಲ್ಲಿ ಇಬ್ಬರು ಕುರುಡರು ಪರಸ್ಪರ ಪ್ರೇಮಿಸುವ ಪಾತ್ರದಲ್ಲಿ ತಾವು ಅಭಿನಯಿಸಿದ್ದನ್ನು ಹೇಳಿ, ಜನರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಲಾ ಸಂಗಮ ಸಂಸ್ಥೆಯ ಅಧ್ಯಕ್ಷ, ಖ್ಯಾತ ರಂಗಕರ್ಮಿ ಪ್ರಭು ಹಂಚಿನಾಳ ಮಾತನಾಡಿ, "ರಂಗಭೂಮಿಯ ಸೇವೆ ಬಲು ದೊಡ್ಡದು. ನಮ್ಮಲ್ಲಿಯ ನಟನಾ ಕೌಶಲ್ಯವನ್ನು ಬೆಳೆಸಿಕೊಂಡು ಸಾಧನೆಯನ್ನು ಮಾಡಬೇಕು. ಕಲೆ ಉಳಿಯಬೇಕು, ಬೆಳೆಯಬೇಕು. ಕಲಾವಿದರಿಗೆ ಮತ್ತು ರಂಗಭೂಮಿಗೆ ಹೆಚ್ಚಿನ ಪ್ರೋತ್ಸಾಹಗಳು ಅವಶ್ಯವಾಗಿವೆ" ಎಂದು ಪ್ರತಿಪಾದಿಸಿದರು.

ಜಾನದಪ ವಿದ್ವಾಂಸ ಬಸವಲಿಂಗಯ್ಯ ಹಿರೇಮಠರು ಜಾನಪದ ಗೀತೆಗಳನ್ನು ಪ್ರಸ್ತುತ ಪಡಿಸುವುದರ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜೂನ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಹಾಗೂ ಶಶಿಧರ ಪಾಟೀಲ ಮಾತನಾಡಿದರು. ಸಾಹಿತಿ ಹರ್ಷ ಡಂಬಳ ವಂದಿಸಿದರು.

೩೦. **ಶ್ರೀ. ಆರ್. ಸಿ. ನಾಗಮ್ಮನವರ ದತ್ತಿ :** ದಾನಿಗಳು, ಶ್ರೀ ಮೋಹನ ನಾಗಮ್ಮನವರ.

ಬದಲಾದ ಸಂದರ್ಭದಲ್ಲಿ ಉದ್ಯಮವಾಗಿರುವ ಪತ್ರಿಕಾ ಕ್ಷೇತ್ರ ಹಲವು ಸವಾಲುಗಳನ್ನು ಎದುರಿಸುತ್ತಿದ್ದು, ಅಭಿವ್ಯಕ್ತಿ ಸ್ವಾತಂತ್ರ್ಯ ಉಳಿಸಿಕೊಳ್ಳುವುದರ ಜೊತೆಗೆ ಸಾಮಾಜಿಕ ಆರೋಗ್ಯ ಕಾಪಾಡುವುದು ಹೇಗೆ ಎನ್ನುವ ಪ್ರಮುಖ ಸವಾಲು ಎದುರಿಸುತ್ತಿದೆ ಎಂದು ವಾರ್ತಾ ಮತ್ತು ಪ್ರಸಾರ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ ಡೊಳ್ಳಿನ ಅಭಿಪ್ರಾಯಪಟ್ಟರು. ಅವರು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ದಿ. ಶ್ರೀ ಆರ್. ಸಿ. ನಾಗಮ್ಮನವರ ದತ್ತಿ ಅಂಗವಾಗಿ ದಿನಾಂಕ **೧-೭-೨೦೧೮** ರಂದು ಏರ್ಪಡಿಸಿದ್ದ **'ಪತ್ರಿಕಾ ದಿನಾಚರಣೆ'** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

೧೭೫ ವರ್ಷಗಳ ಹಿಂದೆ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಪ್ರಕಟವಾಯಿತು. ಅಲ್ಲಿಂದ ಇಲ್ಲಿಯವರೆಗೆ ಮುದ್ರಣ ಮಾಧ್ಯಮದಲ್ಲಿ ಹಲವು ಮಹತ್ತರ ಬದಲಾವಣೆಗಳಾಗಿವೆ. ಆರಂಭದಲ್ಲಿ ಹೋರಾಟ ಮತ್ತು ಚಳುವಳಿಯ ಭಾಗವಾಗಿ ಪತ್ರಿಕೆಗಳು ಬೆಳೆದರೆ, ಪ್ರಸ್ತುತ ಉದ್ಯಮದ ಭಾಗವಾಗಿವೆ. ಪತ್ರಕರ್ತರ ಬಳಿ ಇರಬೇಕಾದ ಪತ್ರಿಕೋದ್ಯಮ, ಉದ್ಯಮದಾರರ, ಕಂಪನಿಗಳ ಕೈಗೆ ಸಿಲುಕಿದೆ. ಪತ್ರಕರ್ತರು ಅವರ ಮಾಲೀಕರ ಹಾಗೂ ಸಂಪಾದಕರ ಸೂಚನೆಯಂತೆ ಕೆಲಸ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ. ಹೀಗಾಗಿ ಒಂದೆಡೆ ಈ ರೀತಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ

ಧಕ್ಕೆ ಬಂದರೆ, ಇನ್ನೊಂದೆಡೆ ಸಾಮಾಜಿಕ ಜಾಲತಾಣದಲ್ಲಿ ಆ ಅಭಿವ್ಯಕ್ತಿ ಸ್ವಾತಂತ್ರ್ಯ ಮಿತಿ ಮೀರಿದೆ. ಅದನ್ನು ನಿಯಂತ್ರಣಕ್ಕೆ ತರಲು ಸಾಧ್ಯವೇ, ಇಲ್ಲವೇ ಎನ್ನುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಿಕಾ ರಂಗದ ಜೀವಮಾನ ಸಾಧನೆಗೆ ದಿ. ಆರ್.ಸಿ. ನಾಗಮ್ಮನವರ ಸ್ಮರಣಾರ್ಥ ನೀಡುವ "ಸಾಧನಾ ರಾಷ್ಟ್ರೀಯ ಪ್ರಶಸ್ತಿ" ಸ್ವೀಕರಿಸಿ ಕಾರವಾರದ 'ಕರಾವಳಿ ಮುಂಜಾವು' ದಿನಪತ್ರಿಕೆಯ ಸಂಪಾದಕ ಗಂಗಾಧರ ಹಿರೇಗುತ್ತಿ ಮಾತನಾಡಿ, ನಿರಂತರವಾಗಿ ಪ್ರಯೋಗಗಳಿಗೆ ಒಳಪಡಿಸಿದ್ದು 'ಕರಾವಳಿ ಮುಂಜಾವು' ಪತ್ರಿಕೆಯ ಸಾಧನೆ. ಅದರೊಂದಿಗೆ ನಾನಿದ್ದದ್ದೆ ಪ್ರಶಸ್ತಿ ದೊರೆಯಲು ಕಾರಣ. ಪತ್ರಿಕಾ ರಂಗದಲ್ಲಿ ಪಾವಿತ್ರ್ಯತೆ ಇರಬೇಕು ಎನ್ನುವುದು ಸಹಜ ಬಯಕೆ. ಕರಾವಳಿಯ ಜನ ಪತ್ರಿಕೆಯನ್ನು ಸಂಪೂರ್ಣ ನಂಬುವಂತೆ ಕಟಿಬದ್ಧವಾಗಿ ಶ್ರಮಿಸಿದ ಫಲವೇ ಆ ಭಾಗದಲ್ಲಿ ರಾಜ್ಯಮಟ್ಟದ ಅನಾರೋಗ್ಯಕರ ಸ್ಪರ್ಧೆಗಳ ಮಧ್ಯೆಯೂ ಪತ್ರಿಕೆ ಗಟ್ಟಿಯಾಗಿ ಬೆಳೆಯಲು ಸಾಧ್ಯವಾಯಿತು.

ತಮಗೆ ಸಮಾಜ, ಜಾತಿಗಳ ಮೇಲೆ ನಂಬಿಕೆ ಇಲ್ಲ. ಸ್ವತಃ ಬೆವರಿನಿಂದಲೇ ಈ ಮಟ್ಟಕ್ಕೆ ಬೆಳೆದಿದ್ದೇನೆ. ಪತ್ರಿಕೆಯಲ್ಲಿ ಹಲವು ಪ್ರಯೋಗಗಳ ಮೂಲಕ ಜನರನ್ನು ತಲುಪಿದ್ದು, ಇನ್ನೂ ಸೃಜನಾತ್ಮಕವಾಗಿ ಪತ್ರಿಕೆ ಬೆಳೆಸುವ ಪ್ರಯತ್ನ ನಿರಂತರ ಮಾಡುತ್ತೇನೆ ಎಂದ ಅವರು ಮೋಹನ ನಾಗಮ್ಮನವರ ತಂದೆ ಹೆಸರಿನಲ್ಲಿ ಪ್ರಶಸ್ತಿ ಸಿಕ್ಕಿದ್ದು ಸಂತಸ ತಂದಿದೆ. ಪ್ರಶಸ್ತಿಗಳ ಹಣವನ್ನು ದುರ್ಬಲ ವರ್ಗದ ವಿದ್ಯಾರ್ಥಿಗಳ ಅಧ್ಯಯನಕ್ಕೆ ನೀಡುತ್ತೇನೆ. ಹಾಗೆಯೇ ಪತ್ರಿಕೆಯ ಲಾಭದಲ್ಲಿ ಇಂತಿಷ್ಟು ಹಣವನ್ನು ದುರ್ಬಲರ ಅನುಕೂಲಕ್ಕಾಗಿಯೇ ನೀಡುತ್ತೇನೆ ಎಂದರು.

ಹಿರಿಯ ಪತ್ರಕರ್ತರು, ಸಂಘದ ಅಧ್ಯಕ್ಷರೂ ಆದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ರಾಷ್ಟ್ರೀಯ ಸಾಧನಾ ಮಹಿಳಾ ಚಿಂತನಾ ವೇದಿಕೆ ಅಧ್ಯಕ್ಷರಾದ ಡಾ. ಇಸಬೆಲ್ಲಾ ಝೇವಿಯರ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಡಾ. ಎಸ್. ಬಿ. ಜೋಗುರ ಸನ್ಮಾನಿತರ ಪರಿಚಯ ಮಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಪ್ರಶಸ್ತಿಪತ್ರ ವಾಚನ ಮಾಡಿದರು. ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಸ್ವಾಗತಿಸಿದರು. ದತ್ತಿದಾನಿ ಸಾಹಿತಿ, ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜುಲೈ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಬಸವಪ್ರಭು ಹೊಸಕೇರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವಂದಿಸಿದರು. ಶ್ರೀಮತಿ ವೀಣಾ ಚಿಕ್ಕಮಠ ಪ್ರಾರ್ಥನೆ ನಡೆಸಿಕೊಟ್ಟರು.

೩೧. **ಪ್ರೊ. ಶ. ತೋ. ನಂದಿಬೇವೂರ ದತ್ತಿ:** ದಾನಿಗಳು, ಮಕ್ಕಳಾದ ಶ್ರೀಮತಿ ಅರ್ಚನಾ ಮತ್ತು ಡಾ. ಶಿವಕುಮಾರಗೌಡ ಪಾಟೀಲ ಮತ್ತು ಶ್ರೀಮತಿ ಶ್ರೀದೇವಿ ಮತ್ತು ಶ್ರೀ ಅಮರೇಶ ನಂದಿಬೇವೂರ

ನಾವು ವಿದ್ಯಾರ್ಥಿಗಳನ್ನು ವಿಚಾರವಂತರನ್ನಾಗಿಸುತ್ತಿಲ್ಲ. ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟು ಬೇಗ ವೈಜ್ಞಾನಿಕ ಮನೋಭಾವ ತುಂಬಲು ಪ್ರಯತ್ನಿಸಬೇಕು. ಪ್ರಶ್ನಿಸುವುದು ಅತ್ಯಂತ ಮಹತ್ವದ ಗುಣ. ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಚಿಕಿತ್ಸಕ ಪ್ರಶ್ನೆಗಳಿಗೆ ನಾವು ಉತ್ತರಿಸಲಾಗದೇ ಆ ಗುಣವನ್ನೇ ಹತ್ತಿಕುತ್ತಿದ್ದೇವೆ. ಹೀಗೆ ಮಾಡದೆ ಪ್ರಶ್ನಿಸುವದನ್ನು ಪ್ರೋತ್ಸಾಹಿಸಬೇಕು. ಆದರೆ ಹಾಗಾಗುತ್ತಿಲ್ಲ. ಮಕ್ಕಳನ್ನು ಯಾಂತ್ರಿಕವಾಗಿ ಶಾಲೆಗೆ ಕಳಿಸುವ ಮೂಲಕ, ಸಿದ್ದಪಠ್ಯಕ್ರಮದ ಕಾರಣದಿಂದಾಗಿ ಮಕ್ಕಳಲ್ಲಿರುವ ಕ್ರಿಯಾಶೀಲತೆಯನ್ನು ಕೊಲ್ಲುತ್ತಿದ್ದೇವೆ ಇದು ವಿಪರ್ಯಾಸ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರಾದ ಡಾ. ಎಸ್. ಎಮ್. ಶಿವಪ್ರಸಾದ ಅಭಿಪ್ರಾಯಪಟ್ಟರು. ಅವರು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ. ಶರಣಪ್ಪ ತೋಟಪ್ಪ ನಂದಿಬೇವೂರ ದತ್ತಿ ಅಂಗವಾಗಿ ದಿನಾಂಕ **೨-೭-೨೦೧೮** ರಂದು ಆಯೋಜಿಸಿದ್ದ **"ಯುವ ವಿಜ್ಞಾನಿ ಪ್ರಶಸ್ತಿ"** ಪ್ರದಾನ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ವಿಜ್ಞಾನದಷ್ಟು ಸುಂದರ ಮತ್ತೊಂದಿಲ್ಲ. ವಿಜ್ಞಾನಿ, ತಂತ್ರಜ್ಞಾನಿ ಮತ್ತು ಅಭಿಯಂತರರು ಬೇರೆ ಬೇರೆ ಎಂಬ ಸಂಗತಿ ಅರಿಯಬೇಕಿದೆ. ಮಹಾನ್ ಸಾಧಕರ ಜೀವನ ಚರಿತ್ರೆಗಳನ್ನು ಓದುವ ಹವ್ಯಾಸವನ್ನು ರೂಡಿಸಿಕೊಳ್ಳುವುದರಿಂದ ಅವರುಗಳು ತಮ್ಮ ಜೀವನವನ್ನೇ ತ್ಯಾಗಮಾಡಿ, ವಿಶ್ವಕ್ಕೆ ನೀಡಿರುವ ಅದ್ಭುತ ಕೊಡುಗೆಗಳ ಅರಿವಾಗುತ್ತದೆ. ನಾವು ನ್ಯೂಟನ್, ಐನಸ್ಟನ್‌ರಂತಹ ವಿಜ್ಞಾನಿಗಳನ್ನು ಚಿರಕಾಲ ನೆನೆಯುತ್ತವೆ. ಆದರೆ ಅವರುಗಳ ಕಾಲದ ಶ್ರೀಮಂತರನ್ನು ನೆನೆಯುವುದಿಲ್ಲ. ಸ್ಟೋನ್‌ಏಜ್‌ನಿಂದ, ಗಾರ್ಬೇಜ್‌ವರೆಗೆ ಹಲವು ಯುಗಗಳನ್ನು ದಾಟಿದ ಬಹುತೇಕರು ಇನ್ನೂ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಲಿಲ್ಲ ಎಂದು ವಿಷಾದಿಸಿದರು.

ಸಮಾರಂಭದಲ್ಲಿ ಯುವ ವಿಜ್ಞಾನಿ ಪ್ರಶಸ್ತಿ ಸ್ವೀಕರಿಸಿದ ಕರ್ನಾಟಕ ವಿಶ್ವವಿದ್ಯಾಲಯದ, ರಸಾಯನ ಶಾಸ್ತ್ರ ವಿಭಾಗದ ವಿನಾಯಕ ಕಾಮತ ಮಾತನಾಡಿ, ನನ್ನ ಪ್ರತಿಭೆಯನ್ನು ಗುರುತಿಸಿ ಗೌರವಿಸುತ್ತಿರುವುದಕ್ಕೆ ಹೆಮ್ಮೆ ಹಾಗೂ ಸಂತೋಷ ಎನಿಸಿದೆ, ಇದರಿಂದ ನನಗೆ ಮತ್ತಷ್ಟು ಪ್ರೋತ್ಸಾಹ ದೊರೆತಂತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ಮನುಷ್ಯ ಎಷ್ಟು ವರ್ಷ ಬದುಕಿದ ಎನ್ನುವುದು ಮುಖ್ಯವಲ್ಲ, ಆದರೆ ಹೇಗೆ ಬದುಕಿದ ಎನ್ನುವುದು ಮುಖ್ಯ ಎಂದ ಅವರು, ವಿಜ್ಞಾನದ ಸಾಧನೆಗಳು ಒಮ್ಮಿಂದೊಮ್ಮೆಲೆ ಘಟಿಸಿದವುಗಳಲ್ಲ. ಸಾಕಷ್ಟು ಸಮಯ, ಶ್ರಮ, ಪ್ರಯೋಗಗಳ ನಂತರ ಸಿದ್ಧಿಸಿದವುಗಳು. ಹಿಂದಿನವರ ಪ್ರಯತ್ನಗಳನ್ನು ಸ್ಮರಿಸುವ ಸೌಜನ್ಯ ನಮಗಿರಬೇಕಿದೆ ಆದರೆ ಇಂದು ಹಾಗಾಗುತ್ತಿಲ್ಲ ಎಂದು ವಿಷಾದಿಸಿದರು.

ಪ್ರಾರಂಭದಲ್ಲಿ ಶೃದ್ಧಾ ಮೂರಶಿಳ್ಳಿ ಪ್ರಾರ್ಥಿಸಿದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ದತ್ತಿ ದಾನಿಗಳಾದ ಶ್ರೀಮತಿ ಅರುಣಾ ನಂದಿಬೇವೂರ ಹೇಳಿದರು. ಡಾ. ಎಸ್. ಎಂ. ತುವಾರ ಮತ್ತು ಡಾ. ನಾಗರಾಜ ಶೆಟ್ಟಿ ಅವರುಗಳು ಅತಿಥಿ, ಅಧ್ಯಕ್ಷರನ್ನು ಪರಿಚಯಿಸಿದರು. ಡಾ. ಎಸ್. ಟಿ. ನಂದಿಬೇವೂರ ಈ ಸಂದರ್ಭದಲ್ಲಿ ಮಾತನಾಡಿದರು. ಡಾ. ಶಿವಕುಮಾರ ಪಾಟೀಲ ವಂದಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ, ಎಸ್. ಬಿ. ಗಾಮನಗಟ್ಟಿ ಹಾಗೂ ಪ್ರೊ. ಬಿ. ಆರ್. ಹಾವಿನಾಳೆ, ಪ್ರೊ. ಎಂ. ಸಿ. ಕೊಡ್ಲಿ, ಪ್ರೊ. ರಮೇಶ ಸಿದ್ದಾಂತಿ, ಶ್ರೀಮತಿ ಪ್ರಭಾ ಮೂರಶಿಳ್ಳಿ, ಶ್ರೀಮತಿ ಪ್ರೇಮಾ ನಡಕಟ್ಟಿ, ಶ್ರೀಮತಿ ಬಳ್ಳಾರಿ, ಡಾ. ಸಾಂಬ್ರಾಣಿ, ತೋಟಗಿ, ಪಟ್ಟಣಶೆಟ್ಟಿ, ಕಾಮೋಜಿ, ಭರತ ಜಾಧವ ಮತ್ತು ಪ್ರಾಧ್ಯಾಪಕರು, ವಿದ್ಯಾರ್ಥಿಗಳು ನಂದಿಬೇವೂರ ಪರಿವಾರದವರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

೩೨. **ಶ್ರೀ ಎಂ. ಸಿ. ಶಾಂತನಗೌಡರ ದತ್ತಿ :** ದಾನಿಗಳು, ಶ್ರೀ ಎಂ. ಎಂ. ಶಾಂತನಗೌಡರ, ಬೆಂಗಳೂರು.

ನ್ಯಾಯದಾನದಲ್ಲಿ ಯಾವುದೇ ಪ್ರಭಾವ, ಹಸ್ತಕ್ಷೇಪವಿರದೆ ಸ್ವತಂತ್ರ ನ್ಯಾಯ ನೀಡಬೇಕು. ಸಂವಿಧಾನದ ಮೌಲ್ಯಗಳಿಗೆ ಅನುಗುಣವಾಗಿ ನ್ಯಾಯಾಧೀಶರು ಕಾರ್ಯ ನಿರ್ವಹಿಸಲು ಸ್ವತಂತ್ರ ನ್ಯಾಯಾಂಗದ ಅಗತ್ಯವಿದೆ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶ ಆರ್.ಬಿ. ಬೂದಿಹಾಳ ಪ್ರತಿಪಾದಿಸಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶನಿವಾರ ಸಂಜೆ ನ್ಯಾಯವಾದಿ ಎಂ.ಸಿ. ಶಾಂತನಗೌಡರ ದತ್ತಿ ಕಾರ್ಯಕ್ರಮದ ಅಂಗವಾಗಿ 'ಸ್ವತಂತ್ರ ನ್ಯಾಯಾಂಗ' ಎಂಬ ವಿಷಯದ ಮೇಲೆ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನ್ಯಾಯಾಲಯಗಳು ನ್ಯಾಯದೇಗುಲಗಳೆಂದೆ ಪರಿಗಣಿತವಾಗಿರುವುದರಿಂದ ನ್ಯಾಯದ ಕಲ್ಪನೆ ಮೂರ್ತಿಯೇ ನ್ಯಾಯಮೂರ್ತಿ. ಪ್ರಕರಣಗಳನ್ನು ವಿಚಾರಣೆ ಮಾಡಿ ನ್ಯಾಯದಾನ ಮಾಡುವುದರಿಂದ ಯಾವುದೇ ತಾರತಮ್ಯ ಆಗದಂತೆ ಕಾನೂನು ಹಾಗೂ ವಸ್ತುಸ್ಥಿತಿಯಲ್ಲಿ ನ್ಯಾಯದಾನ ಮಾಡಬೇಕು ಎಂದರು.

ಒತ್ತಡದಲ್ಲಿ ಕೆಲಸ ಮಾಡುವ ವ್ಯಕ್ತಿಯಿಂದ ಉತ್ತಮ ನ್ಯಾಯದಾನ ದೊರೆಯಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳು, ಕಾನೂನು ವ್ಯವಸ್ಥೆ ಸಂವಿಧಾನದ ಆಶಯಗಳಿಗೆ ಧಕ್ಕೆ ಬಂದಾಗ ನ್ಯಾಯಾಂಗ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದಿನೇಶ ಮಹೇಶ್ವರಿ ಮಾತನಾಡಿ, ನ್ಯಾಯಾಧೀಶರು ಮಾನವ ಸಹಜ ಭಾವನೆಗಳಿಂದ ಹೊರತಾಗಿರಬೇಕು ಎಂದು ಸಮಾಜ ಬಯಸುತ್ತದೆ. ನ್ಯಾಯಾಲಯದಲ್ಲಿ ತೀರ್ಪು ನೀಡುವ ನ್ಯಾಯಾಧೀಶ ಯಾವುದೇ ವ್ಯಕ್ತಿಯ ಪರವಾಗಿ ಅಥವಾ ವಿರೋಧವಾಗಿ ತೀರ್ಪು ನೀಡುವುದಿಲ್ಲ. ಅದು ವಿಷಯಾಧಾರಿತ ತೀರ್ಪಾಗಿರುತ್ತದೆ. ತೀರ್ಪನ್ನು ಪ್ರಶ್ನಿಸಲು ಅವಕಾಶವಿದೆ. ಕೆಲವು ಸಂದರ್ಭದಲ್ಲಿ ನ್ಯಾಯಾಧೀಶರನ್ನೇ ಪ್ರಶ್ನಿಸಲು ಮುಂದಾದಾಗ ತೊಂದರೆ ಆಗುತ್ತದೆ. ಪ್ರತಿಯೊಬ್ಬರು ಅಂತಿಮವಾಗಿ ನಮ್ಮ ಸಂವಿಧಾನಕ್ಕೆ ಬದ್ಧರಾಗಬೇಕು ಎಂದರು.

ದತ್ತಿದಾನಿ ಸುಪ್ರಿಂ ಕೋರ್ಟ್ ನ್ಯಾಯಮೂರ್ತಿ ಮೋಹನ ಶಾಂತನಗೌಡರ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ತಮ್ಮ ತಂದೆಯನ್ನು ನೆನೆದು ಭಾವುಕರಾಗಿ ತಂದೆಯೊಂದಿಗಿನ ಹಳೆಯ ನೆನಪು ಮೆಲುಕು ಹಾಕಿ ಸಭಿಕರನ್ನು ಕೆಲಕಾಲ ನಗಿಸಿದರು. ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಜಿಲ್ಲಾಧಿಕಾರಿಗಳು, ನ್ಯಾಯಮೂರ್ತಿಗಳು, ವಕೀಲರು ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು. ಬಸವಪ್ರಭು ಹೊಸಕೇರಿ ನಿರೂಪಿಸಿದರು. ಪ್ರಶಾಂತ ಕುಲಕರ್ಣಿ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಸ್ವಾಗತಿಸಿದರು.

೩೩. **ಕುಮಾರ ವಿಶಾಲ ರಾಜಶೇಖರ ಹಂಚಿನಮನಿ ದತ್ತಿ** : ದಾನಿಗಳು, ಶ್ರೀ ಚನಬಸಪ್ಪ ಮರದ.

ಯುವಜನಾಂಗ ದೇಶದ ದೊಡ್ಡ ಶಕ್ತಿ. ೨೦೨೦ ರ ಹೊತ್ತಿಗೆ ಭಾರತವು ಇಡೀ ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುತ್ತದೆ, ಇದಕ್ಕೆ ಯುವಜನಾಂಗವೇ ಬುನಾದಿ ಎಂದು ಮಾಜಿ ರಾಷ್ಟ್ರಪತಿ ದಿ. ಎ.ಪಿ.ಜೆ. ಅಬ್ದುಲ ಕಲಾಂ ಅವರ ವಿಜನ್ ಇಂಡಿಯಾ ಬಗ್ಗೆ ಹೇಳಿದನ್ನು ಸ್ಮರಿಸಿ, ದೇಶವು ಹೊಸ ಆರ್ಥಿಕ ನೀತಿಯನ್ನು ರೂಪಿಸಿಕೊಂಡು ಸರಿಯಾದ ದಿಶೆಯಲ್ಲಿ ಯುವಜನಾಂಗವನ್ನು ಬಳಸಿಕೊಂಡಿದ್ದೇ ಆದಲ್ಲಿ ಇದು ಸಾಧ್ಯವಾಗಬಲ್ಲದು ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಡಾ. ಎನ್. ಜಿ. ಚಚಡಿ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨-೮-೨೦೧೮** ರಂದು ಆಯೋಜಿಸಿದ್ದ **ಕುಮಾರ ವಿಶಾಲ ರಾಜಶೇಖರ ಹಂಚಿನಮನಿ**

**ಸಂಸ್ಮರಣೆ ದತ್ತಿ** ಕಾರ್ಯಕ್ರಮಲ್ಲಿ **"ಭಾರತದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ"** ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು. ಮುಂದುವರೆದು ಮಾತನಾಡಿದ ಡಾ. ಚಚಡಿ, ಸರಕಾರದ ರಾಷ್ಟ್ರೀಯ ಆದಾಯದಲ್ಲಿ ಶಿಕ್ಷಣಕ್ಕೆ ಈಗಿರುವ ಶೇ ೪ ರಿಂದ ೧೦ ಕ್ಕೆ ನಿರ್ದಿಷ್ಟಪಡಿಸಿ ಶಿಕ್ಷಣಕ್ಕೆ ಆಧ್ಯತೆ ನೀಡಿದಲ್ಲಿ, ಸರಕಾರ ಯುವಜನಾಂಗವನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ, ಅವರ ಕೌಶಲ್ಯ ಹೆಚ್ಚಿಸಿ, ಉತ್ತಮ ಆರೋಗ್ಯ ಒದಗಿಸಿ, ಉದ್ಯೋಗ ಸೃಷ್ಠಿ ಮಾಡುವುದರಿಂದ ದೇಶದ ಅಭಿವೃದ್ಧಿಯಾಗುವುದು. ದೇಶಕ್ಕೆ ಸ್ವಾತಂತ್ರ್ಯ ದೊರೆತು ಏಳು ದಶಕವಾದರೂ ಇಲ್ಲಿಯವರೆಗೆ ಶೇ ೭೬ ರಷ್ಟು ಮಾತ್ರ ಅಕ್ಷರಸ್ಥರು, ಸುಶಿಕ್ಷಿತರಾಗಿದ್ದಾರೆ, ಇದು ಖೇದಕರ ಎಂದ ಅವರು, ಯುವಕರು ನಮ್ಮ ದೇಶದ ಇತಿಹಾಸವನ್ನು ಅರಿತುಕೊಂಡು, ಸಾತ್ವಿಕ ವಿಚಾರ, ಸದ್ಗುಣಗಳನ್ನು ಬೆಳೆಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ತಮ್ಮದೇ ಆದ ಕೊಡುಗೆ ನೀಡುವಂತಾಗಬೇಕು, ದಿ. ವಿಶಾಲ ಹಂಚಿನಮನಿ ಕುರಿತ ದತ್ತಿ ಕಾರ್ಯಕ್ರಮ ಯುವ ಪೀಳಿಗೆಗೆ ಹೊಸ ಸಂದೇಶ ನೀಡುವಂತಹ ಅರ್ಥಪೂರ್ಣ ಕಾರ್ಯಕ್ರಮವಾಗಿದ್ದು, ಪ್ರತಿ ವರ್ಷ ಈ ಕಾರ್ಯಕ್ರಮ ಜರುಗಲು ಅವಕಾಶ ಮಾಡಿಕೊಟ್ಟಿರುವ ದತ್ತಿದಾನಿ ಚನ್ನಬಸಪ್ಪ ಮರದ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯವನ್ನು ಶ್ಲಾಘಿಸಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಶ್ರೀ ಸಿದ್ಧಶಿವಯೋಗಿ ಅಪ್ಪಗಳವರು, ಸಿದ್ಧಾರೂಢ ಆಶ್ರಮ, ದೇವರಹುಬ್ಬಳ್ಳಿ ಅವರು ಮಾತನಾಡಿ, ಈ ದೇಶದ ತರುಣರೇ ದೇಶದ ಅಭಿವೃದ್ಧಿಯ ಭದ್ರಬುನಾದಿ. ತಾರುಣ್ಯದಲ್ಲಿಯೇ ಯುವಕರು ಸಾಧನೆ ಮಾಡಲು ಸಾಧ್ಯ. ದೇಶದ ಸ್ವಾತಂತ್ರಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಸುಭಾಷಶ್ಚಂದ್ರ ಭೋಸ, ಭಗತಸಿಂಗ್, ಚಂದ್ರಶೇಖರ ಆಝಾದ, ವೀರಸಾವರಕರ ಮುಂತಾದ ತರುಣರ ಧೈರ್ಯ, ಸಾಹಸ, ತ್ಯಾಗ, ಬಲಿದಾನಗಳನ್ನು ಎಂದೂ ಮರೆಯುವಂತಿಲ್ಲ. ಇಂದಿನ ತಾಂತ್ರಿಕ ಯುಗದಲ್ಲಿ ತರುಣರು ದೇಶದ ಅಭಿವೃದ್ಧಿಯಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದು, ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಆವಿಷ್ಕಾರ, ಸಂಶೋಧನೆ, ಸಂಘಟನೆಯಲ್ಲಿ ತೊಡಗಿಕೊಂಡು ತರುಣರು ದೇಶಕ್ಕೆ ತಮ್ಮಿಂದ ಇನ್ನೂ ಹೆಚ್ಚಿನ ಉತ್ಕೃಷ್ಠ ಕೊಡುಗೆ ನೀಡಿ, ವಿಶ್ವದಲ್ಲಿ ಭಾರತವು ಇನ್ನೂ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುವಂತೆ ಕಾರ್ಯ ಮಾಡಬೇಕೆಂದು ಕರೆ ನೀಡಿದರು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ೨೦೧೭-೧೮ ನೇ ಸಾಲಿನಲ್ಲಿ ಕೆ.ಎಚ್. ಪಾಟೀಲ ಕಾಮರ್ಸ್ ಮತ್ತು ಬಿ.ಬಿ.ಎ ಕಾಲೇಜಿನ ವಿದ್ಯಾರ್ಥಿನಿ ಬಿ.ಬಿ.ಎ.ದಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ಪೂರ್ಣಿಮಾ ಶೆಟ್ಟರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯಿಸಿ, ತಾನು ಕಲಿತ ಕಾಲೇಜಿನಲ್ಲಿ ದಿ. ವಿಶಾಲ ಒಬ್ಬ ಉತ್ತಮ ವಿದ್ಯಾರ್ಥಿಯೆಂದು ಇಂದಿಗೂ ನೆನಪಿನಲ್ಲಿ ಉಳಿದುಕೊಂಡಿರುವುದು ಆತನ ಜಾಣ್ಮೆ, ಉತ್ತಮ ವ್ಯಕ್ತಿತ್ವ ಹಾಗೂ ಕೌಶಲ್ಯವೆ ಕಾರಣವಾಗಿದೆ ಎಂದು ಹೇಳಿ ಆತನ ಹೆಸರಿನಲ್ಲಿ ಸನ್ಮಾನ ಸ್ವೀಕರಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿ, ಕೃತಜ್ಞತೆ ಸಲ್ಲಿಸಿದಳು.

ವೇದಿಕೆಯಲ್ಲಿ ದಿ. ವಿಶಾಲನ ತಾಯಿ ಶ್ರೀಮತಿ ವಿಜಯಲಕ್ಷ್ಮೀ ಹಂಚಿನಮನಿ ಉಪಸ್ಥಿತರಿದ್ದರು. ದಿ. ಕುಮಾರ ವಿಶಾಲ ರಾಜಶೇಖರ ಹಂಚಿನಮನಿ ಅವರ ಭಾವಚಿತ್ರಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ದತ್ತಿದಾನಿ ಚನ್ನಬಸಪ್ಪ ಮರದ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ವಂದಿಸಿದರು. ಎಸ್.ಎ. ದೇವಲಾಪುರ ಪ್ರಾರ್ಥಿಸಿದರು.

೩೪. **ಶ್ರೀಮತಿ ನಂದಾ ಪಾಟೀಲ ದತ್ತಿ :** ದಾನಿಗಳು, ಡಾ. ಮಲ್ಲಿಕಾರ್ಜುನ ಪಾಟೀಲ.

ಜೀವನದ ನೈಜತೆ, ವಾಸ್ತವಿಕತೆ ವಚನಗಳಲ್ಲಿವೆ, ಅವು ಮನುಷ್ಯನ ಸತ್ಯಶುದ್ಧ ಕಾಯಕ, ನಡೆನುಡಿಗಳ ಅನುಭಾವ. ಹನ್ನೆರಡನೆಯ ಶತಮಾನದ ಶರಣರ ಆಶಯಗಳನ್ನು ಶಾಸ್ತ್ರೀಯ ರೂಪದಲ್ಲಿ ರಾಗಕ್ಕೆ ಅಳವಡಿಸಿ ಹಾಡುವುದು ತುಂಬಾ ಕಷ್ಟ, ಸಂಗೀತ ಸಾಗರವಿದ್ದಂತೆ. ಬಸವನಾಡಿನ ಕಲಬುರಗಿಯ ಕುಮಾರಿ ಮಾಲಾಶ್ರೀ ಕಣವಿ ಅತ್ಯಂತ ಮಧುರತೆಯಿಂದ ಸಂಗೀತಮಯವಾಗಿ, ವಚನಗಳನ್ನು ತಮ್ಮ ಸುಮಧುರ ಸಿರಿಕಂಠದಿಂದ ಹಾಡುತ್ತಾ ಶ್ರೇಷ್ಠ ಸಂಗೀತಗಾರರಾಗಿ ಹೊರಹೊಮ್ಮುತ್ತಿರುವುದು ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ. ವಚನಗಳು ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಮತ್ತು ಜನಸಾಮಾನ್ಯರ ಸಚ್ಚಾರಿತ್ರ್ಯ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಖ್ಯಾತ ಹಿಂದುಸ್ತಾನಿ ಸಂಗೀತಗಾರ ಪಂ. ಡಾ. ಮೃತ್ಯುಂಜಯ ಶೆಟ್ಟರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಡಾ. ನಂದಾ ಪಾಟೀಲ ದತ್ತಿ ಅಂಗವಾಗಿ ದಿನಾಂಕ **೬-೮-೨೦೧೮** ರಂದು ಆಯೋಜಿಸಿದ್ದ **"ಡಾ. ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರ-೨೦೧೮" ಪ್ರದಾನ ಸಮಾರಂಭ** ಹಾಗೂ **'ಜಾನಪದ ಸಂಗೀತ'** ಉಪನ್ಯಾಸ ಕಾರ್ಯಕ್ರಮದಲ್ಲಿ ಕಲಬುರಗಿಯ ಕುಮಾರಿ ಮಾಲಾಶ್ರೀ ಕಣವಿ ಅವರಿಗೆ "ವಚನ ಸಂಗೀತ ಪುರಸ್ಕಾರ-೨೦೧೮" ಪ್ರದಾನ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಶೆಟ್ಟರ, ಆಕಾಶವಾಣಿಯ ಹಿರಿಯ ಕಲಾವಿದ ಫಕ್ಕೀರೇಶ ಕಣವಿಯವರ ಪುತ್ರಿಯಾಗಿ ಸಂಗೀತ ಮನೆತನದ ಆನುವಂಶಿಕತೆಯ ಮುಂದುವರಿಕೆಯ ಭಾಗವಾಗಿ ಹಾಗೂ ಸತತ ಪರಿಶ್ರಮದಿಂದ ಮಾಲಾಶ್ರೀ ಸಂಗೀತ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, **"ಡಾ. ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರ-**

೨೦೧೮" ಕ್ಕೆ ಭಾಜನರಾದ ಇವರನ್ನು ದತ್ತಿದಾನಿಗಳು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘವು ಆಯ್ಕೆ ಮಾಡಿದ್ದು ಶ್ಲಾಘನೀಯ ಹಾಗೂ ಸೂಕ್ತವಾಗಿದೆ. ಇದು ನನಗೆ ಸಂತೋಷವನ್ನುಂಟು ಮಾಡಿದೆ ಎಂದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಜಾನಪದ ವಿದ್ವಾಂಸ ಡಾ. ಶ್ರೀಶೈಲ ಹುದ್ದಾರ 'ಜಾನಪದ ಸಂಗೀತ' ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡುತ್ತ, ಜನಪದ ಸಂಪತ್ತಿನಿಂದ ಕೂಡಿದ ಕಣಜವಾಗಿದೆ. ಆದರೆ ಜನಪದರ ಬದುಕು ಇಂದು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಭೂಮಿ ಮೊದಲು ರೈತನದಾಗಿತ್ತು, ಈಗ ಅದು ಭೂಗಳ್ಳರ ಕೈಯಲ್ಲಿ ಸಿಕ್ಕು ಒದ್ದಾಡುತ್ತಿದೆ. ದಣಿವು, ಶ್ರಮ ಕಳೆದುಕೊಳ್ಳಲು, ಮನರಂಜನೆ ಸೇರಿದಂತೆ ಹಲವಾರು ಬಗೆಯ ಜನಪದ ಇದ್ದದ್ದನ್ನು ಈ ದೇಶದ ಲೋಕಗೀತೆಗಳಲ್ಲಿ ಕಾಣುತ್ತೇವೆ. ಹಾಡು ಒಡಲಿನ ತಾಪವಾಗಿರಬೇಕು ಮತ್ತು ಸರಳವಾಗಿರಬೇಕು ಎಂದು ಹೇಳುತ್ತಾ, "ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ, ಎಳ್ಳು, ಜೀರಿಗೆ ಬೆಳೆಯುವ ಭೂಮಿ ತಾಯಿನ ಎದ್ದೊಂದು ಘಳಿಗೆ ನೆನೆದೇನ"..... ಶರೀಫರ 'ಅಳಬೇಡ ತಂಗಿ ಅಳಬೇಡ'.... ಸೇರಿದಂತೆ ಅನೇಕ ಜನಪದ ಹಾಡುಗಳ ಮೂಲಕ ಚಿಂತನೆಗೊಳಪಡಿಸಿ, ಅರ್ಥಪೂರ್ಣವಾಗಿ, ಸ್ವಾರಸ್ಯಕರವಾಗಿ ಉಪನ್ಯಾಸ ನೀಡಿ ನೆರೆದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದ್ದು ವಿಶೇಷವಾಗಿತ್ತು.

"ಡಾ. ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರ–೨೦೧೮" ಸ್ವೀಕರಿಸಿ ಅನಿಸಿಕೆ ಹಂಚಿಕೊಂಡ ಕು. ಮಾಲಾಶ್ರೀ ಕಣವಿ, ಸಂಗೀತದ ತವರೂರಾದ ಧಾರವಾಡ, ಪ್ರತಿಷ್ಠಿತ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಕೊಡಮಾಡಿದ ಈ ಪುರಸ್ಕಾರ ನನಗೆ ಅತ್ಯಂತ ಸಂತೋಷ ಹಾಗೂ ಹೆಮ್ಮೆ ತಂದಿದೆ. ಇದರಿಂದ ನನಗೆ ಸಂಗೀತ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಲು ಪ್ರೋತ್ಸಾಹ ಹಾಗೂ ಉತ್ತೇಜನ ದೊರೆತಂತಾಗಿದೆ ಎಂದು ಹೇಳಿ, ಡಾ. ನಂದಾ ಪಾಟೀಲ ದಂಪತಿಗಳಿಗೆ ಹಾಗೂ ಸಂಘಕ್ಕೆ ತಮ್ಮ ಮನಪೂರ್ವಕ ಕೃತಜ್ಞತೆ ಸಲ್ಲಿಸಿ, ಅತ್ಯಂತ ಸೊಗಸಾಗಿ ತಮ್ಮ ಸುಮಧುರ ಕಂಠದಿಂದ ಸಂಗೀತ ಕಛೇರಿಯನ್ನು ನಡೆಸಿಕೊಟ್ಟು ಸಂಗೀತಾಸಕ್ತರ ಮನಗೆದ್ದರು. ಇವರಿಗೆ ಪಂಚಾಕ್ಷರಿ ಕಣವಿ ತಬಲಾ ಹಾಗೂ ಪರಶುರಾಮ ಕಟ್ಟಿಸಂಗಾವಿ, ಕಲಬುರಗಿ ಹಾರ್ಮೋನಿಯಂ ಸಾಥ್ ನೀಡಿದರು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಡಾ. ನಂದಾ ಪಾಟೀಲ ತಮ್ಮ ಬಾಲ್ಯದಿಂದಲೇ ಸಂಗೀತ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಕೊಂಡು ಹೆಮ್ಮರವಾಗಿ ಬೆಳೆದು ಸಂಗೀತ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದು, ಅವರ ಹೆಸರಿನಲ್ಲಿ ಕೊಡಮಾಡುತ್ತಿರುವ ಈ ಪುರಸ್ಕಾರ ಉದಯೋನ್ಮುಖ ಕಲಾವಿದರಿಗೆ ಪ್ರೋತ್ಸಾಹ ನೀಡಿ, ಅವರನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಪ್ರದಾನ ಪಾತ್ರ ವಹಿಸುತ್ತಿದೆ ಎಂದರು.

ವೇದಿಕೆಯಲ್ಲಿ ಖ್ಯಾತ ಹಿಂದುಸ್ತಾನಿ ಗಾಯಕಿ ಡಾ. ನಂದಾ ಪಾಟೀಲ ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ದತ್ತಿದಾನಿ ಡಾ. ಮಲ್ಲಿಕಾರ್ಜುನ ಪಾಟೀಲ ಮಾತನಾಡಿ ದತ್ತಿ ಆಶಯ ಹಂಚಿಕೊಂಡರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಅತಿಥಿಗಳನ್ನು ಗೌರವಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು.

೩೫. **ಕ್ಯಾಪ್ಟನ ಬಿ. ಸಿ. ಕಲ್ಮಠ ಸ್ಮರಣೆ ದತ್ತಿ :** ದಾನಿಗಳು, ಶ್ರೀಮತಿ ಶ್ರೀಕಾವೇರಿ ಬಿ. ಕಲ್ಮಠ.

ಭಾರತ ಬಿಟ್ಟು ತೊಲಗಿ ಚಳುವಳಿ ಬಗ್ಗೆ ಚಾರಿತ್ರಿಕವಾಗಿ ನಾವು ಸಿಂಹಾವಲೋಕನ ಮಾಡಿಕೊಂಡು, ಪ್ರಸ್ತುತತೆ ಬಗ್ಗೆ ಆಲೋಚಿಸಬೇಕಾಗಿದೆ. ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಗ್ರಾಮ ಸಂಸ್ಕೃತಿ, ಹಳೇ ಜೀವನ ಶೈಲಿ ಉಳಿದಿದೆ. ಇಲ್ಲಿ ಸಂಸ್ಕೃತಿಯ ಸಮೃದ್ಧಿಯನ್ನು ಕಾಣುತ್ತೇವೆ. ಆದರೆ ಗ್ರಾಮ ಸಂಸ್ಕೃತಿಯನ್ನು ಹಳೇ ಮೈಸೂರು ಭಾಗದಲ್ಲಿ ಬೇಗನೆ ಕಳೆದುಕೊಂಡಿದ್ದೇವೆ ಎಂದು ರಂಗಕರ್ಮಿ, ದೇಶಿ ಕಾರ್ಯಕರ್ತ ಪ್ರಸನ್ನ ಹೆಗ್ಗೋಡು ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕ್ಯಾಪ್ಟನ್ ಬಿ. ಸಿ. ಕಲ್ಮಠ ಸ್ಮಾರಕ ದತ್ತಿ ಅಂಗವಾಗಿ ಜಆಯೋಜಿಸಿದ್ದ **'ಭಾರತ ಬಿಟ್ಟು ತೊಲಗಿ' (ಚಲೇಜಾವ್ ಚಳುವಳಿ ಸ್ಮರಣೆ)** ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಪ್ರಸನ್ನ ಅವರು, ಅಂದು ನಮ್ಮ ಹೆಚ್ಚಿನ ಹೋರಾಟಗಾರರಿಗೆ ವಿದೇಶಿ ಆಡಳಿತವನ್ನು ಹೊರಗೆ ಹಾಕುವುದಾಗಿತ್ತು. ಇಂದು ಸರಕಾರ ಹಾಗೂ ನಾವು ಹಲವು ರೀತಿಯಿಂದ ಯಂತ್ರ ನಾಗರಿಕತೆಯ ಹಿಂದೆ ಬಿದ್ದಿದ್ದೇವೆ. ಸರಕಾರಗಳು ನೈತಿಕ ಹೊಣೆಗಾರಿಕೆ ಮರೆತಿವೆ. ಇದಕ್ಕೆ ನಾವೇ ಕಾರಣೀಕರ್ತರಾಗುತ್ತಿದ್ದೇವೆ. ಗ್ರಾಮ ಸ್ವರಾಜ್ಯವೆಂದರೆ ಹಳೆಯ ಗ್ರಾಮವಲ್ಲ. ಅದು ಹೊಸ ಗ್ರಾಮವಾಗಿ, ಸರಳ ರೀತಿಯ ಶಿಕ್ಷಣ, ಆರೋಗ್ಯ, ಉದ್ಯೋಗ, ಸಮುದಾಯಗಳ ಮಧ್ಯ ಸಾಮರಸ್ಯವುಳ್ಳ ಗ್ರಾಮಗಳಾಗಿರಬೇಕು, ಅವುಗಳಿಗೆ ಯಾವ ರೀತಿಯ ಧೂಳು ತಗಲದಂತೆ ಇರಬೇಕು. ಇದು ಜನಚಳುವಳಿಯಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಡಾ. ಸಿ. ಎಸ್. ಪಾಟೀಲ, ಡೀನ್ ಕಾನೂನು ವಿಭಾಗ ಮತ್ತು ನಿರ್ದೇಶಕರು, ಕಾನೂನು ಶಾಲೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ರಾಷ್ಟ್ರದಲ್ಲಿ ನಾವೇ ಗುಲಾಮರು ಎನ್ನುವ ಭಾವನೆ ನಮ್ಮಲ್ಲಿ ನುಸುಳದಂತೆ, ನಮ್ಮ ದೇಶದ ಸಂವಿಧಾನದ ಅಡಿಯಲ್ಲಿ, ಪ್ರಜಾಸತ್ತಾತ್ಮಕವಾಗಿ ನಾವು ಆಳವಾಗಿ ಗಂಭೀರವಾದ ಚಿಂತನೆಯೊಂದಿಗೆ ಇಂದಿನ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು, ಗ್ರಾಮ ಸಂಸ್ಕೃತಿ ಹಾಗೂ ನಮ್ಮತನ ಉಳಿಸಿಕೊಂಡು ಹೋಗುವುದು ಅತ್ಯವಶ್ಯವಾಗಿದೆ ಎಂದರು.

ದತ್ತಿ ಅಂಗವಾಗಿ ಅವಳಿ ನಗರದ ಕಾಲೇಜು ವಿದ್ಯಾರ್ಥಿಗಳಿಗೆ 'ಭಾರತ ಬಿಟ್ಟು ತೊಲಗಿ' (ಚಲೇಜಾವ್ ಚಳುವಳಿ ಸ್ಮರಣೆ) ವಿಷಯ ಕುರಿತು ಆಯೋಜಿಸಿದ್ದ ಭಾಷಣ ಸ್ಪರ್ಧೆಯಲ್ಲಿ ಧಾರವಾಡದ ಜೆ.ಎಸ್.ಎಸ್. ಕಾಲೇಜಿನ ರಚನಾ ಎನ್. ಪಾಟೀಲ ಪ್ರಥಮ, ಕುಮಾರೇಶ್ವರ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಮೃತ್ಯುಂಜಯ ಆಯ್. ಕಬ್ಬೂರ ಹಾಗೂ ಹುಬ್ಬಳ್ಳಿಯ ಕೆ.ಎಸ್.ಎಲ್.ಯು ಲಾ ಕಾಲೇಜಿನ ಸ್ವಾತಿ ಹೆಗಡೆ ದ್ವಿತೀಯ ಬಹುಮಾನ ಹಂಚಿಕೊಂಡರು. ಹುಬ್ಬಳ್ಳಿ ರಾಜನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆಸೀಫ್ ಚನ್ನಾಪುರ ತೃತೀಯ ಸ್ಥಾನ ಪಡೆದರು.

ಭಾಷಣ ಸ್ಪರ್ಧೆಯಲ್ಲಿ ಅವಳಿನಗರದ ವಿವಿಧ ಕಾಲೇಜುಗಳಿಂದ, ದೀಪಾ ಯರಗಂಬಳಿಮಠ, ಸೌಮ್ಯಶ್ರೀ ಎಲ್. ಹಾನಗಲ್ಲ, ಶಿವರಾಜ ನವಲಗುಂದ, ಮಲ್ಲಪ್ಪ ಸ್ವಾಧಿ, ದೇವರಾಜ ಬಿ., ಕಾವೇರಿ ಸೂರ್ಯವಂಶಿ, ದೇವರಾಜ ಎಂ., ಬಸವರಾಜ ಡೊಂಕೆಣ್ಣವರ, ಇಸಾಕಲಿ ನದಾಫ್, ಬಸವರಾಜ ಟಿ. ಇಂಗಳಗಿ, ಅನಿಲ ಕಠಾರೆ, ಅಣ್ಣಪ್ಪ ವಗ್ಗಣ್ಣವರ, ರಂಜಿತಾ ಬಾಗೇವಾಡಿ, ಪ್ರವೀಣ ಕುಂಬಾರ, ವೆಂಕಟೇಶ ರಾಠೋಡ, ಶೋಭಾ ಹಿರೇಮಠ, ಅಕ್ಷತಾ ಆರ್. ಸೇಠ, ಕಾವ್ಯಾ ದೊಡಮನಿ ಸೇರಿದಂತೆ ಸುಮಾರು ನಲವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ನೀಡಲಾಯಿತು.

ಭಾಷಣ ಸ್ಪರ್ಧೆಯ ನಿರ್ಣಾಯಕರಾಗಿ, ಕ.ವಿ.ವಿ. ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ನಿಂಗಣ್ಣ ಮುದೇನೂರ, ಹುಬ್ಬಳ್ಳಿ ಸರಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ಡಾ. ವಾಯ್. ಎಂ. ಭಜಂತ್ರಿ, ಧಾರವಾಡ ಜೆ.ಎಸ್.ಎಸ್. ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿನದತ್ತ ಹಡಗಲಿ ಕಾರ್ಯನಿರ್ವಹಿಸಿದರು.

ಹರ್ಲಾಪುರದ ಶಂಭಯ್ಯ ಹಿರೇಮಠ ನೇತೃತ್ವದಲ್ಲಿ ತಮ್ಮ ತಂಡದ ಸದಸ್ಯರಾದ ಈಶ್ವರ ಅರಳಿ, ಚಂದ್ರು ಕಾಳೆ, ಶಿವು ಡಂಬಳ, ನಾಗರಾಜ ಗೌಡಣ್ಣವರ, ಮಲ್ಲೇಶ ಮುಳಗುಂದ ಹಾಗೂ ಕೊತಬಾಳದ ಶಂಕ್ರಣ್ಣ ಸಂಕಣ್ಣವರ ನೇತೃತ್ವದಲ್ಲಿ ತಂಡದ ಸದಸ್ಯರಾದ ಶಂಕರಯ್ಯ ಮುಧೋಳ, ಗಣೇಶ ಮುಗಳಿ, ಮುತ್ತು ಮಾದರ, ಸಂತು ನಾಲವಾಡ, ನಿಂಗಪ್ಪ ಕೋಡಿಕೊಪ್ಪದ, ರಮೇಶ ಸಂಕಣ್ಣವರ, ಶಿವು ಮುಗಳಿ ಈ ಎರಡೂ ತಂಡದವರು ತಮ್ಮ ಕಂಚಿನ ಕಂಠದಿಂದ ಸೊಗಸಾಗಿ ನಾಡು–ನುಡಿಗೆ ಸಂಬಂಧಿಸಿದ ಹಾಗೂ ಹೋರಾಟದ ಹಾಡುಗಳನ್ನು ಹಾಡಿ ನೆರೆದ ಸಭಿಕರನ್ನು ರೋಮಾಂಚನಗೊಳಿಸಿದರು.

ದತ್ತಿ ಆಶಯ ಹಾಗೂ ಚಳುವಳಿಯ ಕುರಿತು 'ಹೊಸತು ಮಾಸಿಕ' ಸಂಪಾದಕ ಡಾ. ಸಿದ್ಧನಗೌಡ ಪಾಟೀಲ ಹಾಗೂ ಸಂಘದ ಕಾ.ಕಾ. ಸಮಿತಿ ಸದಸ್ಯ ನ್ಯಾಯವಾದಿ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಹಿರಿಯ ನ್ಯಾಯವಾದಿ ಕೆ. ಬಿ. ನಾವಲಗಿಮಠ, ದತ್ತಿ ದಾನಿಗಳ ಪರವಾಗಿ ಶ್ರೀಮತಿ ಶಾರದಾ ಬಿ. ಕಲ್ಮಠ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

೩೬. **ಸಂಜಯ ಮತ್ತು ಪ್ರಿಯಾ ಆರ್. ಹೊರಡಿ ನೆನಪಿನ ದತ್ತಿ :** ಶ್ರೀಮತಿ ಪ್ರಭಾವತಿ ಆರ್. ಹೊರಡಿ, ಪ್ರೊ. ಆರ್.ವಿ. ಹೊರಡಿ ದಂಪತಿಗಳು.

ಸಂಘ, ಸಂಸ್ಥೆಗಳು ಸೇರಿದಂತೆ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಬಹುತೇಕ ಹಳೇ ತಲೆಮಾರಿನ, ಮಧ್ಯವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು, ಪ್ರಸ್ತುತ ಯುವಜನಾಂಗ ತಮಗೆ ಪ್ರೋತ್ಸಾಹ, ಆರ್ಥಿಕ ಸಹಾಯ, ಅನುಕೂಲ, ಶೈಕ್ಷಣಿಕ ಅರಿವು ದೊರೆಯುವಂತಹ ಸಾರ್ವಜನಿಕ ಕಾರ್ಯಕ್ರಮಗಳಿದ್ದರೂ ಕೂಡಾ ಅತೀ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದನ್ನು ಕಾಣುತ್ತೇವೆ ಇದು ವಿಷಾದನೀಯ ಎಂದು ಧಾರವಾಡ ಸಾ.ಶಿ. ಇಲಾಖೆಯ ನಿವೃತ್ತ ಆಯುಕ್ತರಾದ ವೆಂಕಟೇಶ ಮಾಚಕನೂರ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೦–೮–೨೦೧೮** ರಂದು ಆಯೋಜಿಸಿದ್ದ **"ಸಂಜಯ ಮತ್ತು ಪ್ರಿಯಾ ಆರ್. ಹೊರಡಿ ನೆನಪಿನ ದತ್ತಿ ಪ್ರಾರಂಭೋತ್ಸವ"** ಹಾಗೂ **"ಪ್ರತಿಭಾ ಪುರಸ್ಕಾರ ಸಮಾರಂಭ"** ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಮಾಚಕನೂರ, ಸರಕಾರದಿಂದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಆರ್ಥಿಕ ಸಹಾಯ ಮುಂತಾದ ಸೌಲಭ್ಯಗಳು ದೊರಕುತ್ತಿದ್ದರೂ ಗ್ರಾಮಾಂತರ ಹಾಗೂ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವಲ್ಲಿ ಇನ್ನೂ ಹಲವಾರು ಸಮಸ್ಯೆ, ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಇಂಥ ದತ್ತಿ ಕಾರ್ಯಕ್ರಮಗಳ ಮೂಲಕ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ, ಪ್ರೋತ್ಸಾಹ ಹಾಗೂ ಪ್ರೇರಣೆ ಸಿಕ್ಕಂತಾಗುತ್ತದೆ, ಯುವಜನತೆ ಪಠ್ಯದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಸ್ಪರ್ಧಾತ್ಮಕ ಅಧ್ಯಯನ, ಸಾಮಾಜಿಕ ಕಾರ್ಯಗಳಲ್ಲಿ, ಆಟೋಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದರು. ಆಕಸ್ಮಿಕವಾಗಿ ತಮ್ಮ ಮಕ್ಕಳನ್ನು ಕಳೆದುಕೊಂಡ ದತ್ತಿದಾನಿಗಳಾದ ಪ್ರೊ. ಹೊರಡಿ ದಂಪತಿಗಳು ದುಃಖ ಹಾಗೂ ನಿರಂತರ ಶೋಕದ ಮಧ್ಯೆಯೂ ತಮ್ಮ ಮಕ್ಕಳು ಶಿಕ್ಷಣ

ಪಡೆದ ಕರ್ನಾಟಕ ವಿಜ್ಞಾನ ಕಾಲೇಜಿನಲ್ಲಿ, ವಿಜ್ಞಾನ ಪದವಿಪೂರ್ವ ಶಿಕ್ಷಣವನ್ನು ಪೂರೈಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ "ಪ್ರತಿಭಾ ಪುರಸ್ಕಾರ" ನೀಡಲು ಸಂಘದಲ್ಲಿ ದತ್ತಿ ಇರಿಸಿ, ಈ ಮೂಲಕ ತಮ್ಮ ಮಕ್ಕಳ ನೆನೆಪು ಸದಾ ಉಳಿಯುವಂತೆ ಮಾಡಿದ್ದು ಶ್ಲಾಘನೀಯ. ಬಡತನದಿಂದ ವಿದ್ಯೆ ಮೊಟಕುಗೊಳ್ಳಬಾರದು, ತೊಂದರೆಯಲ್ಲಿರುವ ಪ್ರತಿಭಾವಂತ, ಬಡ ವಿದ್ಯಾರ್ಥಿಗಳ ಸಹಾಯಕ್ಕೆ ಸಮಾಜದಲ್ಲಿ ಹಲವಾರು ಜನರು ಎಲೆಮರೆಯ ಕಾಯಿಯಂತೆ ಕೈಜೋಡಿಸುತ್ತಿದ್ದಾರೆ ಇದು ಉತ್ತಮ ಕಾರ್ಯ ಎಂದರು.

ದೀಪ ಬೆಳಗಿಸುವ ಮೂಲಕ ದತ್ತಿ ಉದ್ಘಾಟಿಸಿ, ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ, ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ತಾವು ಬಾಲ್ಯದಲ್ಲಿ ಶಿಕ್ಷಣ ಪಡೆಯುವಾಗ ಎದುರಿಸಿದ ಬಡತನ, ಸೌಲಭ್ಯರಹಿತ ಸಂದರ್ಭದ, ತಾವು ಪಟ್ಟ ಕಷ್ಟಕಾರ್ಪಣ್ಯಗಳನ್ನು ಮೆಲುಕು ಹಾಕಿ ಭಾವುಕರಾಗಿ, ಪ್ರೊ. ಹೊರಡಿ ದಂಪತಿಗಳು ಉದಾತ್ತ ಜೀವನ ನಡೆಸಿದವರು, ಯಾರಿಗೂ ಎಂದಿಗೂ ಅನ್ಯಾಯ ಬಗೆದವರಲ್ಲ, ಕೇಡು ಬಯಸಿದವರಲ್ಲ ಇದು ವಿಧಿಯಾಟ ಎಂದ ಅವರು ಪ್ರೊ. ಹೊರಡಿ ದಂಪತಿಗಳು ಆತ್ಮಸ್ಥೈರ್ಯದೊಂದಿಗೆ, ತಮ್ಮ ಮಕ್ಕಳ ದುರಂತ ಸಾವನ್ನು ಸಹಿಸಿಕೊಂಡು ಔಚಿತ್ಯಪೂರ್ಣವಾಗಿ ತಮ್ಮ ಮಕ್ಕಳ ನೆನಪಿನಲ್ಲಿ ದತ್ತಿ ಇಡುವ ಮೂಲಕ ಸಮಾಜಮುಖಿ ಕಾರ್ಯ ಮಾಡಿದ್ದಾರೆ ಎಂದರು.

ಸಮಾರಂಭದಲ್ಲಿ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಓದಿ ಹೆಚ್ಚು ಅಂಕ ಪಡೆದ ಕು. ಅನುಷಾ ರಾಯಚೂರ ಹಾಗೂ ಕು. ಅದ್ವೈತ ಕುಲಕರ್ಣಿ ಅನುಪಸ್ಥಿತಿಯಲ್ಲಿ ಅವರ ತಂದೆ-ತಾಯಿ, ಪ್ರದೀಪ ಹಾಗೂ ಶ್ರೀಮತಿ ಪ್ರಾಚಿ ದಂಪತಿಗಳಿಗೆ "ಪ್ರತಿಭಾ ಪುರಸ್ಕಾರ' ನೀಡಿ ಗೌರವಿಸಲಾಯಿತು. ಪುರಸ್ಕಾರ ಸ್ವೀಕೃತರು ಪ್ರತಿಕ್ರಿಯಿಸಿ, ಇದು ವಿದ್ಯಾರ್ಥಿಗಳಿಗೆ ಪ್ರೇರಣೆ ಹಾಗೂ ಪ್ರೋತ್ಸಾಹ ನೀಡುವಂತದ್ದು ಎಂದು ಸನ್ಮಾನಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ದತ್ತಿದಾನಿಗಳಾದ ಪ್ರೊ. ಆರ್. ವ್ಹಿ. ಹೊರಡಿ ಪ್ರಾಸ್ತಾವಿಕ ನುಡಿಗಳನ್ನಾಡಿ ದತ್ತಿ ಆಶಯ ಹಂಚಿಕೊಂಡರು. ವೇದಿಕೆಯಲ್ಲಿ ಶ್ರೀಮತಿ ಪ್ರಭಾವತಿ ಆರ್. ಹೊರಡಿ ಉಪಸ್ಥಿತರಿದ್ದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಅತಿಥಿಗಳನ್ನು ಗೌರವಿಸಿದರು. ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ಶಂಕರ ಕುಂಬಿ ವಂದಿಸಿದರು.

ಸಮಾರಂಭದಲ್ಲಿ, ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಹಾಗೂ ಎಸ್. ಎಚ್. ಪಾಟೀಲ, ಶ್ರೀಮತಿ ಸುಮಿತ್ರಾ ಪಾಟೀಲ, ಮಿಲಿಂದ ಹಾಗೂ ಗೀತಾ ಕುಲಕರ್ಣಿ ದಂಪತಿಗಳು, ಪ್ರೊ. ಸವಡಿ, ಬಿ. ಡಿ. ಪಾಟೀಲ, ವೀರಣ್ಣ ಒಡ್ಡೀನ, ಪಾರ್ವತಿ ಹಾಲಭಾವಿ, ಡಾ. ಲೋಹಿತ ನಾಯ್ಕರ, ರಾಮಚಂದ್ರ ಧೋಂಗಡೆ, ಮಾರ್ಕಂಡೇಯ ದೊಡಮನಿ, ಬಿ. ಎಸ್. ಶಿರೋಳ, ಶಿವಾನಂದ ಹೂಗಾರ, ಸಿದ್ದು ತೇಜಿ, ಹೊರಡಿ ಹಾಗೂ ಪಾಟೀಲ ಪರಿವಾರದವರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

೩೭. **ಮಾತೋಶ್ರೀ ಪಾರ್ವತೆಮ್ಮ ಬ. ಹೊಂಬಳ ದತ್ತಿ :** ದಾನಿಗಳು, ಶ್ರೀ ಜಿ. ಬಿ. ಹೊಂಬಳ.

ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್ ಅವರು ಗ್ರಂಥಾಲಯ ಕ್ಷೇತ್ರದಲ್ಲಿ, ತಾಂತ್ರಿಕ ವಿಷಯಗಳಿಗಿಂತ ವೈಯಕ್ತಿಕವಾಗಿ ಓದುಗನಿಗೆ ನೀಡುವ ಸೇವೆ ಮುಖ್ಯ ಎಂಬ ಧೋರಣೆಯೊಂದಿಗೆ ತಮ್ಮ ಜೀವನಪೂರ್ತಿ ಈ ಕ್ಷೇತ್ರದಲ್ಲಿ ಅಪಾರ ಕಾರ್ಯಮಾಡಿದ ವ್ಯಕ್ತಿಯಾಗಿದ್ದರು. ಅವರನ್ನು ಸಾಮಾನ್ಯವಾಗಿ "ದ್ವೀ ಬಿಂದು ವರ್ಗೀಕರಣ ಜನಕ" ಎಂದೇ ಗುರುತಿಸುತ್ತಾರೆ. ಅವರು ಆ ವರ್ಗೀಕರಣ ಪದ್ಧತಿಗೆ ತಾತ್ವಿಕ ನೆಲೆಗಟ್ಟನ್ನು ಕೊಟ್ಟವರು. ಅವರೊಬ್ಬ ಪಾಂಡಿತ್ಯ, ಪ್ರಭಾವಿ ಮತ್ತು "ಗ್ರಂಥಾಲಯಗಳ ಪಂಚಮಹಾ ಸೂತ್ರಗಳ" ಮಹೋನ್ನತ ಕೃತಿಕಾರರು. ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯ ಜೊತೆಗೆ ಶಾಲಾ ಗ್ರಂಥಾಲಯಗಳ ಬೆಳವಣಿಗೆಯಲ್ಲಿಯೂ ಅವರು ಅಪಾರ ಕಾಳಜಿ ಹೊಂದಿದವರಾಗಿದ್ದರು. ಇವರು ಗ್ರಂಥಾಲಯ ಶಾಸ್ತ್ರ, ಸೂಚಿಕರಣ, ಗ್ರಂಥಾಲಯ ಸಂಘಟನೆ, ಪ್ರಲೇಖನ ಸೇವೆ, ಸಂದರ್ಭ ಸೇವೆ, ಲೇಖನ ಶಾಸ್ತ್ರ ಸೇರಿದಂತೆ ಗ್ರಂಥಾಲಯಗಳ ಸರ್ವಾಂಗೀಣ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ ಅದಮ್ಯ ಮಹಾನ್ ಚೇತನ. ನಾಗರಿಕತೆಯ ಬೆಳವಣಿಗೆಗೆ ಗ್ರಂಥಗಳೆ ಪೂರಕ ಹಾಗೂ ಜ್ಞಾನದೀಪವಾಗಿವೆ ಎಂದು ಗ್ರಂಥಾಲಯ ಮಾಹಿತಿ ವಿಜ್ಞಾನ ಸಲಹೆಗಾರರಾದ ಬೆಂಗಳೂರಿನ ಡಾ. ಕೆ. ಎನ್. ಪ್ರಸಾದ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು, ಮಾತೋಶ್ರೀ ದಿ. ಪಾರ್ವತೆಮ್ಮ ಬ. ಹೊಂಬಳ ದತ್ತಿ ಅಂಗವಾಗಿ ದಿನಾಂಕ **೧೨-೮-೨೦೧೮** ರಂದು ಆಯೋಜಿಸಿದ್ದ **'ಗ್ರಂಥಪಾಲಕರ ದಿನಾಚರಣೆ'** ಹಾಗೂ **'ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಡಾ. ಎಸ್. ಆರ್. ರಂಗನಾಥನ್ ಅವರ ಕೊಡುಗೆ'** ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಪ್ರಸಾದ, ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಬೇರೆ ಬೇರೆ ಆಯಾಮಗಳಿಂದ ಮಾಹಿತಿ ಲಭ್ಯವಿದ್ದರೂ, ಗ್ರಂಥಗಳಿಂದ ನಮಗೆ ಪೂರ್ಣ ಜ್ಞಾನ ದೊರೆಯಲು ಸಾಧ್ಯ. ಗ್ರಂಥಗಳು ಮನುಷ್ಯನನ್ನು ಚಿಂತನೆಗೆ ಹಚ್ಚುವ ಯಂತ್ರಗಳಾಗಿವೆ ಎಂದ ಅವರು, ಪದ್ಮಶ್ರೀ ಡಾ. ರಂಗನಾಥನ್ ಅವರೊಂದಿಗೆ ತಾವು ಹೊಂದಿದ ಸಂಬಂಧ ಮತ್ತು ಒಡನಾಟದ ಅಮೂಲ್ಯ ಸಂದರ್ಭಗಳನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ, ಉತ್ತಮ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ, ಖಾನಾಪೂರ ತಾಲೂಕಿನ ಬೀಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ. ಮಲ್ಲಿಕಾರ್ಜುನ ಎನ್. ಮೂಲಿಮನಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯಿಸಿ, ಈ ಸನ್ಮಾನ ನನ್ನ ಕಾರ್ಯದಲ್ಲಿ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡುತ್ತಿರುವವರಿಗೆ ಸಲ್ಲುತ್ತದೆ. ಈ ಸನ್ಮಾನದಿಂದ ಇನ್ನೂ ಹೆಚ್ಚು ಕ್ರಿಯಾಶೀಲತೆಯಿಂದ ಕಾರ್ಯಮಾಡುವಲ್ಲಿ ಜವಾಬ್ದಾರಿ ಹೆಚ್ಚಿದೆ ಎಂದು ತಮ್ಮ ಕೃತಜ್ಞತೆ ಸಲ್ಲಿಸಿದರು.

ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶೈಕ್ಷಣಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಡಾ. ಎಸ್. ಆರ್. ರಂಗನಾಥನ್ ಅವರು ಮಾಡಿದ ಕಾರ್ಯ, ಸೇವೆ ಅನುಪಮ. ಗ್ರಂಥ ಓದುವುದರಿಂದ ಸಚ್ಚಾರಿತ್ರ್ಯದೊಂದಿಗೆ ಉದಾತ್ ವಿಚಾರಗಳು ಬೆಳೆದು ಮನುಷ್ಯನ ಬದುಕು ಶ್ರೀಮಂತವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಎಸ್. ಆರ್. ರಂಗನಾಥನ್ ಹಾಗೂ ದಿ. ಮಾತೋಶ್ರೀ ದಿ. ಪಾರ್ವತೆಮ್ಮ ಬ. ಹೊಂಬಳ ಅವರ ಭಾವಚಿತ್ರಗಳಿಗೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಪ್ರಾಸ್ತಾವಿಕವಾಗಿ ದತ್ತಿದಾನಿ ಜಿ. ಬಿ. ಹೊಂಬಳ ಮಾತನಾಡಿ, ದತ್ತಿ ಆಶಯ ಹಂಚಿಕೊಂಡರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

೩೮. **ಶ್ರೀಮತಿ ಶಾಂತಾದೇವಿ ಶಿವಲಿಂಗಪ್ಪ ಅಂಗಡಿ ದತ್ತಿ :** ದಾನಿಗಳು, ಶ್ರೀ ಜಿ. ಎಸ್. ಅಂಗಡಿ.

ಒಂದು ಕಾಲಕ್ಕೆ ಸುಗಮ ಸಂಗೀತಕ್ಕೆ ಇದ್ದ ಪ್ರಾಶಸ್ತ್ಯ, ಸಿನೆಮಾ ಸಂಗೀತಕ್ಕೆ ಇರಲಿಲ್ಲ. ಆ ಸಂದರ್ಭದಲ್ಲಿ ಅದರದೇ ಆದ ಶ್ರೋತೃ ವರ್ಗ ಕೂಡಾ ಇತ್ತು. ಲಲಿತ ಕಲೆಗಳಲ್ಲಿ ಸಂಗೀತ ಅತ್ಯಂತ ಅಗ್ರಸ್ಥಾನ ಪಡೆದಿದೆ. ಗಂಗಪ್ಪ ವಾಲಿ, ಬಾಳಪ್ಪ ಹುಕ್ಕೇರಿ, ಅನುರಾಧಾ ಧಾರೇಶ್ವರ ಮುಂತಾದವರು ಸುಗಮ ಸಂಗೀತವನ್ನು ಜನಪ್ರಿಯಗೊಳಿಸಿದರು. ಸಂಗೀತ ಯಾವಾಗಲೂ ಸಾತ್ವಿಕತೆಯನ್ನು ಹೆಚ್ಚುಗೊಳಿಸುತ್ತಾ ಜನರ ಮನಸ್ಸಿನಲ್ಲಿರುವ ಹಿಂಸೆ, ಕ್ರೌರ್ಯವನ್ನು ಕಡಿಮೆಗೊಳಿಸಿ, ಮನಸ್ಸನ್ನು ಸ್ಥಿರವಾಗಿ ಕೇಂದ್ರಿಕರಿಸಿ, ಶಾಂತಿ, ಸಹನೆ ಗುಣಗಳನ್ನು ಬೆಳೆಸುವ ಶಕ್ತಿ ಹೊಂದಿದೆ ಎಂದು **'ಸಂಯುಕ್ತ ಕರ್ನಾಟಕ'** ದಿನಪತ್ರಿಕೆ ವಿಶ್ರಾಂತ ಸಂಪಾದಕರು ಹಾಗೂ ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಮನೋಜ ಪಾಟೀಲ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು, ಶ್ರೀಮತಿ ಶಾಂತಾದೇವಿ ಶಿವಲಿಂಗಪ್ಪ ಅಂಗಡಿ ಸ್ಮಾರಕ ದತ್ತಿ ಅಂಗವಾಗಿ ದಿನಾಂಕ **೧೪-೮-೨೦೧೮** ರಂದು ಆಯೋಜಿಸಿದ್ದ **'ಸುಗಮ ಸಂಗೀತ'** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಮನೋಜ ಪಾಟೀಲರು, ಸಂಗೀತವನ್ನು ಪಠ್ಯದಲ್ಲಿ ಅಳವಡಿಸಬೇಕು, ಅದರ ಪ್ರಭಾವ ಹೆಚ್ಚಿ ಲಲಿತ ಕಲೆಗೆ, ಕಲಾವಿದರಿಗೆ ಪ್ರೋತ್ಸಾಹ ಹಾಗೂ ಮಾನ್ಯತೆ ಸಿಕ್ಕಂತಾಗುತ್ತದೆ ಎಂದರು. ದೃಷ್ಟಿ ಹೀನತೆಯಿಂದ ತೊಂದರೆಯಿದ್ದರೂ ಅಂತರಂಗದ ಕಣ್ಣುಗಳು ಇರುತ್ತವೆ. ಅಂತಹ ಕಲಾವಿದೆಯಾದ ಕು. ಸವಿತಾ ಸಣ್ಣಮನಿ ಅವರಿಗೆ ಸಂಘವು ಕಾರ್ಯಕ್ರಮ ನೀಡಲು ಅವಕಾಶ ಮಾಡಿಕೊಟ್ಟಿದ್ದು ಶ್ಲಾಘನೀಯ. ಇಂಥ ಅವಕಾಶಗಳಿಂದ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಉತ್ತೇಜನ ದೊರೆತು ಉತ್ತಮ ಕಲಾವಿದರಾಗಿ ಹೊರಹೊಮ್ಮುತ್ತಾರೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಮಾಜಿಕ ಚಿಂತಕ ಚನಬಸಪ್ಪ ಮರದ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನದೇ ಆದ ಇತಿಹಾಸ ಹಾಗೂ ವೈಶಿಷ್ಟ್ಯತೆ ಹೊಂದಿದೆ. ಸಂಘವು ಕಲೆ, ಸಾಹಿತ್ಯ, ಸಂಗೀತ ಮುಂತಾದ ಕಲೆ, ಕಲಾವಿದರಿಗೆ ವೇದಿಕೆ ಒದಗಿಸುತ್ತಾ, ಪ್ರೋತ್ಸಾಹ ನೀಡುತ್ತಾ ಕಲೆ, ಕಲಾವಿದರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾ, ಜನರ ಹೃದಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿದೆ ಎಂದರು.

ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಕ.ವಿ.ವ.ಸಂಘದ ಹಿಂದಿನ ಕಾರ್ಯಾಧ್ಯಕ್ಷರಾದ ಪ್ರೊ. ಬಿ. ವ್ಹಿ. ಗುಂಜೆಟ್ಟಿ ಗೌರವ ಉಪಸ್ಥಿತಿ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ದತ್ತಿದಾನಿ ಜಿ. ಎಸ್. ಅಂಗಡಿ ಹಾಗೂ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು.

ಸಂಗೀತ ಕಲಾವಿದೆ ಕುಮಾರಿ ಸವಿತಾ ಸಣ್ಣಮನಿ ಸುಶ್ರಾವ್ಯವಾಗಿ ವಚನ ಸಂಗೀತ, ಭಾವಗೀತೆ, ಭಕ್ತಿಗೀತೆಗಳನ್ನು ಹಾಡಿ ಸಭೀಕರ ಮನಗೆದ್ದಳು. ಅವರಿಗೆ ಬಸವರಾಜ ಹಿರೇಮಠ ತಬಲಾ, ಕೃಷ್ಣ ಬಡಿಗೇರ ಹಾರ್ಮೋನಿಯಂ ಸಾಥ್ ನೀಡಿದರು.

ಕಾರ್ಯಕ್ರಮದಲ್ಲಿ ದಿ. ಶ್ರೀಮತಿ ಶಾಂತಾದೇವಿ ಶಿವಲಿಂಗಪ್ಪ ಅಂಗಡಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಗಸ್ಟ್ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿ, ವಂದಿಸಿದರು.

೩೯. **ದಿ. ಶ್ರೀ ದಿನೇಶ ಭೋಜರಾಜ ಶಿವಳ್ಳಿ ದತ್ತಿ:** ದಾನಿಗಳು, ಕು. ದಾನೇಶ್ವರಿ ದಿನೇಶ ಶಿವಳ್ಳಿ.

ಪ್ರತಿವರ್ಷ ಅಗಸ್ಟ ೧೯ ರಂದು ಶರಣ ಸಾಹಿತ್ಯ ಕಾರ್ಯಕ್ರಮ ಆಯೋಜಿಸಲು ದತ್ತಿ ಇರಿಸಿದ್ದಾರೆ.

೪೦. **ಡಾ. ದಿನೇಶ ಮಲ್ಲಿಕಾರ್ಜುನ ಪರಡ್ಡಿ:** ದಾನಿಗಳು, ಡಾ. ಮಲ್ಲಿಕಾರ್ಜುನ ಪರಡ್ಡಿ.

'ಮಾನಸಿಕ ತುಮುಲಗಳನ್ನು ತೊಡೆದುಹಾಕಿ ಮನಸ್ಸನ್ನು ಸ್ವಸ್ಥ ಮತ್ತು ಸಂಯಮಿಗಳನ್ನಾಗಿ ಮಾಡುವುದೇ ಯೋಗದ ಉದ್ದೇಶವಾಗಿದೆ. ಪ್ರಪಂಚದ ಎಲ್ಲ ಶಕ್ತಿಗಳಲ್ಲಿ ಶ್ರೇಷ್ಠವಾದ ಶಕ್ತಿಯು ಮನಸ್ಸಿನದಾಗಿದೆ. ಇಂದ್ರಿಯ ಶಕ್ತಿ ಅಥವಾ ವೈಜ್ಞಾನಿಕ ಯಂತ್ರಗಳ ಮೂಲಕ ದೊರೆತ ಎಲ್ಲ ಪ್ರಕಾರದ ಶಕ್ತಿಗಳಿಗಿಂತ ಧ್ಯಾನ ಶಕ್ತಿಯು ಹೆಚ್ಚಿನದಾಗಿದೆ. ಧ್ಯಾನ ಹಾಗೂ ಯೋಗ ಮಾಡುವುದರಿಂದ ನಮ್ಮಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿ, ಅದರಲ್ಲಿಯ ಅದ್ಭುತ ಶಕ್ತಿಯಿಂದ ರೋಗಗಳನ್ನು ವಾಸಿ ಮಾಡಬಹುದಾಗಿದೆ. ನೆಮ್ಮದಿಯ ಬದುಕಿಗೆ ಯೋಗ ಮಾಡುವುದು ಅತ್ಯವಶ್ಯವಾಗಿದೆ' ಎಂದು ಯೋಗಗುರು, ನಿವೃತ್ತ ಮುಖ್ಯಾಧ್ಯಾಪಕ ಎಸ್. ಡಿ. ಹಾವನೂರ ಹೇಳಿದರು.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೨–೯–೨೦೧೮** ರಂದು ಡಾ. ದಿನೇಶ ಪರಡ್ಡಿ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಅವರು **'ವರ್ತಮಾನದಲ್ಲಿ ಯೋಗದ ಮಹತ್ವ'** ಎಂಬ ವಿಷಯದ ಬಗ್ಗೆ ಮಾತನಾಡುತ್ತಿದ್ದರು.

'ಮಾತು ಬಲ್ಲವನಿಗೆ ಜಗಳವಿಲ್ಲ... ಊಟ ಬಲ್ಲವನಿಗೆ ರೋಗವಿಲ್ಲ... ಹಾಗೆಯೇ **'ಯೋಗ ಬಲ್ಲವನಿಗೆ ರೋಗದ ಭಯವೇ ಇಲ್ಲ'** ಮಾನವನ ಸಮಗ್ರ ವಿಕಸನಕ್ಕೆ ಯೋಗ ಅವಶ್ಯವಾಗಿದೆ. ಯೋಗ ಮಾಡುವುದಕ್ಕಾಗಿ ಹಣದ ಅವಶ್ಯಕತೆ ಇಲ್ಲ. ಖರ್ಚು ಇಲ್ಲದೇ ಹೆಚ್ಚಿನ ಪ್ರಯೋಜನಗಳನ್ನು ಯೋಗ ಮಾಡುವುದರಿಂದ ನಮಗೆ ದೊರೆಯುತ್ತವೆ. ದೇಹದಲ್ಲಿ ರಕ್ತ ಸಂಚಾರವು ಚೆನ್ನಾಗಿ ಆಗಬೇಕು. ಹಿತ–ಮಿತ ಆಹಾರ ಸೇವನೆ ಹಾಗೂ ಯೋಗ ಮಾಡುವುದರಿಂದ ರೋಗಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂದ ಅವರು ಮನಸ್ಸು ಹಾಗೂ ಪರಿಸರ ಮಾಲಿನ್ಯವಾಗುತ್ತಿರುವ ಬಗ್ಗೆ ಖೇದ ವ್ಯಕ್ತಪಡಿಸಿ, ಇವೆರಡೂ ಶುದ್ಧವಾಗಿರಬೇಕೆಂದರು.

ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಆದರೆ ಸಾಧಿಸುವ ಛಲ ಅತ್ಯಗತ್ಯ. ಯೋಗವು ಸಹ ಸಾಧನೆಯಿಂದ ಬರುತ್ತದೆ. ದುಡ್ಡಿದ್ದಲ್ಲಿ ದುರಾಭ್ಯಾಸಗಳು ಹೆಚ್ಚು, ದುರಾಭ್ಯಾಸಗಳಿಂದ ದೂರವಿರಲು ಯೋಗಗಳ ಪ್ರಯೋಜನ ಪಡೆಯುವುದು ಅವಶ್ಯವಾಗಿದೆ ಎಂದ ಯೋಗ ಗುರುಗಳು ಬದುಕಿಗೆ ಸಾರ್ಥಕತೆ ಇರಬೇಕು. ಆಲಸಿಗಳಾಗಿ ಜೀವನ ನಡೆಸದೇ, ಸದಾಕಾಲವೂ ಚಟುವಟಿಕೆಗಳಿಂದ ಲವಲವಿಕೆಯಿಂದ ಇರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ.ಸಂಘದ ಉಪಾಧ್ಯಕ್ಷ, ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಮಾತನಾಡಿ, 'ಸಮಾಜದಿಂದ ಪಡೆದದ್ದಕ್ಕಿಂತ ಹೆಚ್ಚು ಸೇವೆಯನ್ನು ಸಮಾಜಕ್ಕೆ ನಾವು ಸಲ್ಲಿಸಬೇಕು. ಪ್ರಾಚೀನ ಕಾಲದಲ್ಲಿ ಋಷಿಗಳು ಮಾಡಿತೋರಿಸಿದ ಯೋಗಗಳಿಂದ ದೈಹಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ತತ್ವಗಳು ದೊರೆಯುತ್ತವೆ' ಎಂದರು.

ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ಮಾತನಾಡಿ, ಕ.ವಿ.ವ.ಸಂಘದ ವತಿಯಿಂದ ಉಚಿತ ಯೋಗ ತರಬೇತಿ ಶಿಬಿರ ಏರ್ಪಡಿಸುವುದಾಗಿ ತಿಳಿಸಿದರು.

ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕರು ತಮ್ಮ ಆರೋಗ್ಯದ ಸಮಸ್ಯೆಗಳಿಗೆ ಕೇಳಿದ ಪ್ರಶ್ನೆಗಳಿಗೆ ಹಾವನೂರರವರು ಉತ್ತರಿಸಿದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿ, ನಿರೂಪಿಸಿದರು, ವಂದಿಸಿದರು.

೪೧. **ದಿ. ಪಾರ್ವತೆವ್ವ ಹೊಸಕೇರಿ ದತ್ತಿ :** ದಾನಿಗಳು, ಶ್ರೀ ಗಂಗಾಧರ ಹೊಸಕೇರಿ, ವಕೀಲರು

ನಮ್ಮ ನಾಡಗೀತೆ 'ಜಯಭಾರತ ಜನನಿಯ ತನುಜಾತೆ' ಹಾಗೂ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಆಲಿಸಿದಾಗ ಅವುಗಳಲ್ಲಿ ಕೇವಲ ಪುರುಷ ವ್ಯಕ್ತಿಗಳ ಹೆಸರಿನ ಉಲ್ಲೇಖ ಇದ್ದು, ಅದರಲ್ಲಿ ಒಬ್ಬ ಮಹಿಳೆಯ ಹೆಸರೂ ಉಲ್ಲೇಖ ಇರುವುದಿಲ್ಲ. ಅಲ್ಲಿ ಕೇವಲ ತಾಯ್ನನ ಹಾಗೂ ತಾಯಿಯ ವಿಜೃಂಭಣೆಯನ್ನು ಮಾತ್ರ ಕಾಣಬಹುದಾಗಿದೆ. ಇಲ್ಲಿ ಹೆಣ್ಣಿಗೆ ಸ್ಥಾನವಿಲ್ಲ. ಮಹಿಳೆ ಕುರಿತು ನಾವು ಮಾತನಾಡುವುದಾದರೆ, ಪ್ರಸ್ತುತ ಮಹಿಳೆಯ ಸ್ಥಿತಿಗತಿ ಏನು ? ಚರಿತ್ರೆ ಏನು ? ಸಮಾಜದಲ್ಲಿ ಮಹಿಳೆಗೆ ಸಮಾನತೆ ಸಿಗುವಲ್ಲಿ ಪುರುಷರು ಏನು ಮಾಡಬೇಕು, ಅವರ ಪಾತ್ರ ಏನು ? ಎಂದು ನಮ್ಮನ್ನು ನಾವು ಪ್ರಶ್ನೆ ಮಾಡಿಕೊಂಡು ನಮ್ಮ ಅಂತರಂಗದಿಂದ ಬದಲಾವಣೆ ಬಯಸಿ, ಆ ಬಗ್ಗೆ ಪುರುಷರು ಪ್ರಾಮಾಣಿಕವಾಗಿ ಕಾರ್ಯ ಮಾಡಿದಾಗ ಮಹಿಳೆಗೆ ಧಕ್ಕಬೇಕಾದ ನ್ಯಾಯ, ಸಮಾನತೆ, ಗೌರವ ಸಿಗಲು ಸಾಧ್ಯ ಎಂದು ಸ್ತ್ರೀ ಆರೋಗ್ಯ ತಜ್ಞ ಹಾಗೂ ಸುಸ್ಥಿರ ಕೃಷಿಕರಾದ ಡಾ. ಸಂಜೀವ ಕುಲಕರ್ಣಿ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಶ್ರೀಮತಿ ಪಾರ್ವತೆವ್ವ ಹೊಸಕೇರಿ ಸ್ಮರಣೆ ದತ್ತಿ ಅಂಗವಾಗಿ, ಶ್ರಾವಣ ಸಂಜೆ ಪ್ರಯುಕ್ತ ದಿನಾಂಕ **೨೭–೬–೨೦೧೮** ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ **''ಹೆಣ್ಣು ವರ್ತಮಾನದ ಕಣ್ಣೋಟ''** ಚಿಂತನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ದಾಂಡೇಲಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ, ಸಾಹಿತಿ, ಚಿಂತಕಿ ಡಾ. ವಿನಯಾ ಒಕ್ಕುಂದ **''ಹೆಣ್ಣು ವರ್ತಮಾನದ ಕಣ್ಣೋಟ''** ಚಿಂತನೆ ಕುರಿತು ಹಲವಾರು ವಾಸ್ತವಿಕ ಮತ್ತು ಅರ್ಥಪೂರ್ಣ ಉದಾರಣೆಗಳೊಂದಿಗೆ ಚಿಂತನೆ ಹಂಚಿಕೊಳ್ಳುತ್ತಾ, ತಾಯಿ ಹೆಣ್ಣಿನ ಸಶಕ್ತತೆಯ ಒಂದು ದೊಡ್ಡ ರೂಪಕ. ಅವಳು ಇನ್ನೊಬ್ಬರ ಬಗ್ಗೆ ಮಿಡಿಯಬಲ್ಲ ಶಕ್ತಿ ಹೊಂದಿದವಳು. ಹೆಣ್ಣಿಗೆ ತನ್ನ ಮನೆಯೇ ದೇವಾಲಯ ಹಾಗೂ ಗರ್ಭಗುಡಿ ಇದ್ದಂತೆ. ಅದರ ಮೇಲೆ ಅವಳು ಅಗಾಧ ಮತ್ತು ಅಪಾರ ಪ್ರೀತಿ ಹೊಂದಿರುತ್ತಾಳೆ. ಸದಾ ಅದರ ಏಳ್ಗೆ ಹಾಗೂ ಶುಚಿತ್ವ ಜೊತೆಗೆ ಇಡೀ ಪ್ರಪಂಚದ ಹಿತವನ್ನೇ ಬಯಸುವವಳು. ವರ್ತಮಾನದ ಇಂದಿನ ದಿನಗಳಲ್ಲಿ ಹೆಣ್ಣು ಸಂಕಟಗಳ ಸರಮಾಲೆಯಲ್ಲಿ ಸಿಲುಕಿದ್ದಾಳೆ. ಹೆಣ್ಣಿನಲ್ಲಿರುವ ಅಗಾಧ ಶಕ್ತಿಯನ್ನು ಜಾತಿ, ಧರ್ಮ ಹಾಗೂ ರಾಜಕಾರಣದ ಹೆಸರಿನಲ್ಲಿ ಬೇರ್ಪಡಿಸುತ್ತಿರುವುದಕ್ಕೆ ತಮ್ಮ

ಖೇದ ವ್ಯಕ್ತಪಡಿಸಿ, ಇಂತಹ ಶಕ್ತಿಗಳ ವಿರುದ್ಧ ಸಮಾಜ ಎಚ್ಚರದಿಂದ ಇರಬೇಕಾದ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ದತ್ತಿದಾನಿ ಗಂಗಾಧರ ಹೊಸಕೇರಿ ಹಾಗೂ ಶ್ರೀಮತಿ ಮಾಳವಿಕಾ ದಂಪತಿಗಳು ಹಾಗೂ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ದಿ. ಶ್ರೀಮತಿ ಪಾರ್ವತೆವ್ವ ಹೊಸಕೇರಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಪ್ಟಂಬರ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಮೋಹನ ನಾಗಮ್ಮನವರ ಸ್ವಾಗತಿಸಿದರು. 'ಹೊಸತು' ಮಾಸಿಕ ಪತ್ರಿಕೆಯ ಸಂಪಾದಕ ಡಾ. ಸಿದ್ಧನಗೌಡ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾ.ಕಾ. ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು.

೪೨. **ಜಾನಪದ ರತ್ನ ಶ್ರೀ ಹುಕ್ಕೇರಿ ಬಾಳಪ್ಪ ದತ್ತಿ :** ದಾನಿಗಳು, ಶ್ರೀ ಅಂದಾನೆಪ್ಪ ಬಾ. ಹುಕ್ಕೇರಿ.

ಪ್ರತಿವರ್ಷ ಅಗಷ್ಟ ೧ ರಂದು ಹುಕ್ಕೇರಿ ಬಾಳಪ್ಪ ಸ್ಮರಣೆಯಲ್ಲಿ ಕಾರ್ಯಕ್ರಮ ಮಾಡಲು ದತ್ತಿ ಇರಿಸಿದ್ದಾರೆ.

೪೩. **ಶ್ರೀ ಸಿ. ಬಿ. ಯಲಿಗಾರ ದತ್ತಿ:** ದಾನಿಗಳು, ಶ್ರೀ ಅ. ಚ. ಯಲಿಗಾರ.

ಪ್ರತಿ ವರ್ಷ ಅಗಸ್ಟ್ ೨೨ ರಂದು ಮಕ್ಕಳಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲು ದತ್ತಿ ಇರಿಸಿದ್ದಾರೆ.

೪೪. **ಡಾ. ಲಿಂಗರಾಜ ರಾಮಾಪೂರ ದತ್ತಿ:** ದಾನಿಗಳು, ಡಾ. ಲಿಂಗರಾಜ ರಾಮಾಪೂರ.

ಪ್ರತಿ ವರ್ಷ ಸಪ್ಟಂಬರ ೫ ರಂದು ಶಿಕ್ಷಕ ದಂಪತಿಗಳ ದಿನಾಚರಣೆ ಮಾಡಲು ದತ್ತಿ ಇರಿಸಿದ್ದಾರೆ.

೪೫. **ಸರ್. ಸಿದ್ಧಪ್ಪ ಕಂಬಳಿ ದತ್ತಿ :** ದಾನಿಗಳು, ದಿ. ಶ್ರೀ ಎಸ್. ಆರ್. ಬೊಮ್ಮಾಯಿ ಹಾಗೂ ಅಭಿಮಾನಿಗಳು.

ಗುಣಗ್ರಾಹಿಗಳಾದ ಸರ್. ಸಿದ್ಧಪ್ಪ ಕಂಬಳಿ ಅವರು ಮೇರು ವ್ಯಕ್ತಿತ್ವದ, ಅಪಾರ ವಿದ್ವತ್ ಹೊಂದಿದ, ಹಿಂದುಳಿದ, ಬಡವರ ಕಲ್ಯಾಣಕ್ಕಾಗಿ ಶ್ರಮಿಸಿದ ಜಾತ್ಯಾತೀತ ಜನಪ್ರಿಯ ವ್ಯಕ್ತಿಯಾಗಿದ್ದರು. ಅವರು ಉತ್ತರ ಕರ್ನಾಟಕದ ಶೈಕ್ಷಣಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ ಎಂದು ಧಾರವಾಡ ಕ.ವಿ.ವಿ. ಬಸವೇಶ್ವರ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಡಾ. ಸಿ.ಎಮ್. ಕುಂದಗೋಳ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಸರ್. ಸಿದ್ಧಪ್ಪ ಕಂಬಳಿ ಪ್ರತಿಷ್ಠಾನ ದತ್ತಿ (ದತ್ತಿ ದಾನಿ: ದಿ. ಶ್ರೀ ಎಸ್.ಆರ್. ಬೊಮ್ಮಾಯಿಯವರು, ಮಾಜಿ ಮುಖ್ಯಮಂತ್ರಿಗಳು) ಅಂಗವಾಗಿ ದಿನಾಂಕ **೧೧-೯-೨೦೧೮** ರಂದು ಆಯೋಜಿಸಿದ್ದ, **'ಸ್ವಾತಂತ್ರ್ಯ ಪೂರ್ವದ ರಾಜಕೀಯದಲ್ಲಿ ಸರ್. ಸಿದ್ಧಪ್ಪ ಕಂಬಳಿಯವರ ಮಹತ್ವ'** ವಿಷಯ ಕುರಿತು ಮುಖ್ಯಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಕುಂದಗೋಳ, ಸರ್. ಸಿದ್ಧಪ್ಪ ಕಂಬಳಿ ಹುಬ್ಬಳ್ಳಿ ನಗರಸಭೆ ಅಧ್ಯಕ್ಷರಾಗಿ, ಮುಂಬಯಿಯ ವಿಧಾನ ಪರಿಷತ್ ಸದಸ್ಯರಾಗಿ, ಮುಂಬಯಿ ಸರಕಾರದಲ್ಲಿ ಏಳು ಪ್ರಮುಖ ಖಾತೆಗಳ ಸಚಿವರಾಗಿ, ಅವರ ಆಕಾಂಕ್ಷೆ ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ಮತ್ತು ಕರ್ನಾಟಕ ಏಕೀಕರಣಗೊಳಿಸುವ ಹೋರಾಟಗಳು, ಕನ್ನಡ ಭಾಷೆ ಬೆಳೆಯಲು ಶ್ರಮಿಸಿದವರು. ಧಾರವಾಡ ಕರ್ನಾಟಕ ಕಾಲೇಜು, ಬೆಳಗಾವಿ ಲಿಂಗರಾಜ ಕಾಲೇಜು ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರುವಲ್ಲಿ ಮತ್ತು ಉಳಿಸುವಲ್ಲಿ ವಹಿಸಿದ ಪಾತ್ರ ಮರೆಯಲಾಗದು. ಅಲ್ಲದೇ ಉತ್ತರ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ಷೇತ್ರದ ಶಾಲೆಯ ಹಾಗೂ ಶಿಕ್ಷಕರ ಸಂಖ್ಯೆ ಹೆಚ್ಚಳ, ಏಕರೂಪದ ಕನ್ನಡ ಪಠ್ಯಕ್ರಮ, ಹುಬ್ಬಳ್ಳಿ-ಧಾರವಾಡ ಮಧ್ಯೆ ಮೊದಲ ಬಾರಿ ರಸ್ತೆಗೆ ಡಾಂಬರೀಕರಣ, ನೀರಾವರಿ, ಸಹಕಾರ, ಅರಣ್ಯ ಸೇರಿದಂತೆ ಎಲ್ಲ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆ ಅವರದು. ಅಲ್ಲದೇ ಬ್ರಾಹ್ಮಣೇತರ ರಾಜಕೀಯ ಪಕ್ಷ, ವೀರಶೈವ ಮಹಾಸಭೆ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅವರು ವಹಿಸಿದ ಪಾತ್ರ ಅಮೋಘ ಎಂದರು.

ಅಧ್ಯಕ್ಷತೆ ವಹಿಸಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಮಾತನಾಡಿ, ಸರ್. ಸಿದ್ಧಪ್ಪ ಕಂಬಳಿ ಅವರು ಅಂತಿಮ ದಿನಗಳಲ್ಲಿ ಅನುಭವಿಸಿದ ಯಾತನೆ ಮತ್ತು ಸಮಾಜದಿಂದ ಅವರು ನಿರ್ಲಕ್ಷಕ್ಕೆ ಒಳಗಾಗಿದ್ದಕ್ಕೆ ವಿಷಾದವ್ಯಕ್ತಪಡಿಸಿ, ಅವರು ಸಲ್ಲಿಸಿದ ಸೇವೆ, ಕೊಡುಗೆ ಸದಾ ಸ್ಮರಣೀಯವಾಗಿರುವಂತೆ ಮಾಡಲು ಸರಕಾರ **'ಸರ್. ಸಿದ್ಧಪ್ಪ ಕಂಬಳಿ'** ಅವರ ಹೆಸರಿನಲ್ಲಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ್ನು ಸ್ಥಾಪಿಸಬೇಕೆಂದು ಮತ್ತು ಅವರ ಭಾವಚಿತ್ರವನ್ನು ಕರ್ನಾಟಕದ ವಿಧಾನಸೌಧ ಹಾಗೂ ದೆಹಲಿಯ ಸಂಸತ್ ಭವನದಲ್ಲಿ ಹಾಕಲು ಆಗ್ರಹಿಸಿದರಲ್ಲದೇ ನಾಡಗೀತೆಯಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಸೇರಿಸಲು ಸರಕಾರ ಕ್ರಮಕೈಕೊಳ್ಳಬೇಕಾದ ಅಗತ್ಯತೆ ಇದೆ ಎಂದು ಒತ್ತಿ ಹೇಳಿದರು.

ಡಾ. ಪಾಪು ನೇತೃತ್ವದಲ್ಲಿ ಸಂಘದ ವತಿಯಿಂದ, ಬೆಳಗಾವಿಗೆ ಆಗಮಿಸಲಿರುವ ಗೌರವಾನ್ವಿತ ರಾಷ್ಟ್ರಪತಿ ರಾಮನಾಥ ಕೋವಿಂದ ಅವರನ್ನು ಭೇಟಿಯಾಗಿ ಸರ್. ಸಿದ್ಧಪ್ಪ ಕಂಬಳಿ ಅವರ ಮೇರು ವ್ಯಕ್ತಿತ್ವ ಹಾಗೂ ಕೊಡುಗೆ ಕುರಿತು ಸಮಗ್ರ ಮಾಹಿತಿಯ ಆಂಗ್ಲ ಭಾಷೆಯ ಪುಸ್ತಕವನ್ನು ಅರ್ಪಿಸಲು ಕಾರ್ಯಕ್ರಮದಲ್ಲಿ ನಿರ್ಧರಿಸಲಾಯಿತು.

ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಇದ್ದರು. ಕಾರ್ಯಕ್ರಮದಲ್ಲಿ ಸರ್. ಸಿದ್ಧಪ್ಪ ಕಂಬಳಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ವೀರಸನ್ಯಾಸಿ ಸ್ವಾಮಿ ವಿವೇಕಾನಂದರು ೧೮೯೩ ಸಪ್ಟಂಬರ ೧೧ ರಂದು ಅಮೇರಿಕಾದ ಚಿಕ್ಯಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಸ್ಮರಿಸಿ, ೧೨೫ ನೇ ವರ್ಷಾಚರಣೆಯನ್ನು ಆಚರಿಸಲಾಯಿತು. ಈ ಕುರಿತು ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಮಾತನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಸಪ್ಟಂಬರ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರಾದ ಮೋಹನ ನಾಗಮ್ಮನವರ ಪ್ರಾಸ್ತಾವಿಕ ಮಾತನಾಡಿ, ಶೋಷಿತರ, ಬಡವರ, ಶಿಕ್ಷಣದ ಬಗ್ಗೆ ಸರ್. ಸಿದ್ಧಪ್ಪ ಕಂಬಳಿ ಅವರು ಹೊಂದಿದ ಅಪಾರ ಕಾಳಜಿ ಹಾಗೂ ಕೊಡುಗೆ ರಾಜ್ಯ ಮತ್ತು ರಾಷ್ಟ್ರ ಎಂದೂ ಮರೆಲಾರದಂತದ್ದು. ಅಂಥವರ ಸ್ಮರಣೆ ನಮ್ಮ ಪೀಳಿಗೆಗೆ ಸದಾ ಇರಲು ವಿಧಾನಸೌಧ ಹಾಗೂ ದೆಹಲಿಯ ಸಂಸತ್ ಭವನದಲ್ಲಿ ಅವರ ಭಾವಚಿತ್ರ ಇರಬೇಕು ಎಂದು ಪ್ರಸ್ತಾಪಿಸಿದರು. ಕಾರ್‍ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೪೬. **ಶ್ರೀ ಮಹದೇವ ಸಿದ್ದೇಶ್ವರ ಕೇಸರಿ ದತ್ತಿ.**
೪೭. **ಶ್ರೀಮತಿ ಪಾರ್ವತಿದೇವಿ ಸಿದ್ಧೇಶ್ವರ ಕೇಸರಿ ದತ್ತಿ.**
೪೮. **ಶ್ರೀಮತಿ ಲೀಲಾ ಕೇಸರಿ ದತ್ತಿ.**

ನಮ್ಮನ್ನು ನಾವು ಬಹಳಷ್ಟು ಮುಂದವರೆದವರು, ತಿಳುವಳಿಕೆ ಉಳ್ಳವರು ಮತ್ತು ಉತ್ಕೃಷ್ಟ, ಆಧುನಿಕ ನಾಗರಿಕ ಸಮಾಜದಲ್ಲಿದ್ದೇವೆ ಎಂದು ಜಂಭ ಕೊಚ್ಚಿಕೊಳ್ಳುತ್ತೇವೆ. ನಮ್ಮ ತಂದೆ ತಾಯಿಗಳನ್ನು, ಹಿರಿಯ ನಾಗರಿಕರನ್ನು ಹೇಗೆ ಪಾಲನೆ ಪೋಷಣೆ ಮಾಡಬೇಕು. ಮಾಡುವಲ್ಲಿ ವಿಫಲವಾದರೆ ಅವರು ನಮ್ಮ ವಿರುದ್ಧ ಯಾವ ಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಒಂದು ಕಾನೂನು ರಚನೆಯಾಗಿ ಜಾರಿಯಾಗಿರುವುದು ನಮ್ಮ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ. ನಾವು ನಾಗರಿಕ ಸಮಾಜದಿಂದ ನಮ್ಮ ತಂದೆ ತಾಯಿಗಳನ್ನೇ ನಿರ್ಲಕ್ಷಿಸುವಷ್ಟು ಹೀನ ಸಂಸ್ಕೃತಿಯವರಾಗಿದ್ದೇವೆ ಎಂಬುದನ್ನು ನಮ್ಮ ನಡೆ–ನುಡಿ ಎತ್ತಿ ತೋರಿಸುತ್ತದೆ ಎಂದು ಧಾರವಾಡ ಹೈಕೋರ್ಟ್ ಪೀಠ ವಕೀಲರ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಉದಯೋನ್ಮುಖ ನ್ಯಾಯವಾದಿಗಳಾದ ಹರ್ಷವರ್ಧನ ಎಂ. ಪಾಟೀಲ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು **೧೨–೯–೨೦೧೮** ರಂದು ಆಯೋಜಿಸಿದ್ದ **ಮಹದೇವ, ಪಾರ್ವತಿದೇವಿ ಹಾಗೂ ಲೀಲಾ ಕೇಸರಿ ದತ್ತಿ** ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ನೈತಿಕ ದಿವಾಳಿತನ ಸರಿಪಡಿಸಲು ಕಾನೂನಿನ ತಿಳುವಳಿಕೆ ಪ್ರಜ್ಞಾವಂತ ಪ್ರಜೆಗಳಿಗೆ ಹಿಂದಿನ ತುರ್ತು ಅವಶ್ಯಕತೆಯಾಗಿದೆ. ಅಪರಾಧ ಘಟಿಸಿದ ನಂತರ ಶಿಕ್ಷೆ ವಿಧಿಸಿ ಅಪರಾಧ ಸಂಖ್ಯೆ ಕಡಿಮೆ ಮಾಡಬಹುದೆಂಬ ಮನೋಭಾವ ಉಚಿತ ಅಲ್ಲ. ಬದಲಾಗಿ ಸಾರ್ವಜನಿಕವಾಗಿ ಕಾನೂನಿನ ಅರಿವು ಮೂಡಿ ಜಾಗೃತ ಸಮಾಜ ನಿರ್ಮಾಣವಾದಲ್ಲಿ ಅಪರಾಧಗಳ ಸಂಖ್ಯೆ ಖಂಡಿತವಾಗಿ ಕಡಿಮೆಗೊಳ್ಳುವ ಸಾಧ್ಯತೆ ಇದೆ ಎಂದರು.

ಆಧುನಿಕ ಸಮಾಜದಲ್ಲಿ ಸಾವಿನ ನಂತರವೂ ಕೂಡಾ ಮರಣ ಹೊಂದಿದ ವ್ಯಕ್ತಿಯು ಗೌರವಯುತವಾಗಿ ಅಂತ್ಯ ಸಂಸ್ಕಾರ ಹೊಂದುವ ಮಾನವೀಯ ಮೌಲ್ಯಗಳ ಕಾನೂನು ಇರುವುದರಿಂದ ಪ್ರತಿಯೊಬ್ಬನು ಕಾನೂನಿನ ಬಗ್ಗೆ ಕನಿಷ್ಠ ತಿಳುವಳಿಕೆ ಹೊಂದುವುದು ಇವತ್ತಿನ ಅವಶ್ಯಕತೆಯಾಗಿದೆ ಎಂದು ಹರ್ಷವರ್ಧನ ಕರೆ ನೀಡಿದರು.

ಹೋರಾಟಗಾರರು, ನ್ಯಾಯವಾದಿಗಳು ಆದ ಕೆ.ಎಚ್. ಪಾಟೀಲ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿ, ಪ್ರತಿಯೊಬ್ಬ ಭಾರತಿಯನಿಗೂ ದೇಶದ ಸಂವಿಧಾನವೇ ಸರ್ವಶ್ರೇಷ್ಠ ಗ್ರಂಥ ಎಂಬ ಭಾವನೆ ಉಂಟಾದಾಗ ಮಾತ್ರ ಈ ದೇಶದಲ್ಲಿ ಶಾಂತಿ ಸುವ್ಯವಸ್ಥೆ ತಾನಾಗಿಯೇ ಇರುವುದು ಎಂದರು.

ಹುಬ್ಬಳ್ಳಿ ವಕೀಲರ ಸಂಘದ ಆಡಳಿತ ಮಂಡಳಿಯ ಸದಸ್ಯರು ಮತ್ತು ನ್ಯಾಯವಾದಿಗಳಾದ ಬಿ.ವಿ. ಕೋರಿಮಠರು ಅತಿಥಿಗಳಾಗಿ ಮಾತನಾಡಿ, ಬರಲಿರುವ ದಿನಗಳಲ್ಲಿ ಯುವಜನರ ಮೇಲೆ ಸಮಾಜ ಕಟ್ಟುವ ಮತ್ತು ದೇಶವನ್ನು ಬಲಿಷ್ಠಗೊಳಿಸುವ ಹೊಣೆಗಾರಿಕೆ ಇದೆ ಮತ್ತು ಶ್ರೀ ಮಹದೇವ ಕೇಸರಿ ದತ್ತಿ ಕಾರ್‍ಯಕ್ರಮವು ಕಾನೂನು ವಿದ್ಯಾರ್ಥಿಗಳಿಗಾಗಿ ಭಾಷಣ ಸ್ಪರ್ಧೆಯನ್ನು ಏರ್ಪಡಿಸುವ ಉದ್ದೇಶವು ಅದೇ ದೃಷ್ಟಿಕೋನ ಹೊಂದಿದೆ ಎಂದರು.

ಪ್ರಭಾವತಿ ಗೂಗಲ್ ವಕೀಲರು ಮಾತನಾಡ, ಯುವಜನಾಂಗ ತನ್ನ ಜವಾಬ್ದಾರಿ ತಿಳಿದುಕೊಂಡು ಸಮಾಜಮುಖಿ ಮತ್ತು ಜನಪರ ಕಾರ್ಯಗಳನ್ನು ಮಾಡುವಲ್ಲಿ ತೊಡಗಿಸಿಕೊಂಡರೆ ಸುಭಿಕ್ಷ ದೇಶ ನಿರ್ಮಿಸಲು ಸಾಧ್ಯ ಎಂದರು.

ಮಹದೇವ ಸಿದ್ಧೇಶ್ವರ ಕೇಸರಿ ದತ್ತಿ ಅಂಗವಾಗಿ ಕಾನೂನು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ **'**ಮಕ್ಕಳ ದೌರ್ಜನ್ಯ ಅಪರಾಧಿಗಳಿಗೆ ಮರಣ ದಂಡನೆ ಸೂಕ್ತವೇ**?**, ಭಾಷಣ ಸ್ಪರ್ಧೆಯಲ್ಲಿ ಗದಗ ಕೆ.ಎಲ್.ಇ. ಸೊಸೈಟಿ ಎಸ್.ಎ. ಮಾನವಿ ಕಾನೂನು ಮಹಾವಿದ್ಯಾಲಯದ ಕು. ಶಕೀಲಾ ಬಾನು ಪ್ರಥಮ, ಚಿಕ್ಕೋಡಿ ಕೆ.ಎಲ್.ಇ. ಸೊಸೈಟಿ ಕಾನೂನು ಮಹಾವಿದ್ಯಾಲಯದ ಸತ್ಯಪ್ಪ ಬಿ. ಮಾನೆ ದ್ವಿತೀಯ ಹಾಗೂ ಮೈಸೂರಿನ ಜೆ.ಎಸ್.ಎಸ್. ಕಾನೂನು ಮಹಾವಿದ್ಯಾಲಯದ

ಮಹದೇವಗೌಡ ತೃತೀಯ ಸ್ಥಾನ ಪಡೆದರು. ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ಪಾರ್ವತಿದೇವಿ ಕೇಸರಿ ದತ್ತಿ ನಿಧಿಯ ಅಂಗವಾಗಿ ೨೦೧೭–೧೮ ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ ಹೆಚ್ಚು ಅಂಕ ಪಡೆದ ಕೆಳಗಿನ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಧಾರವಾಡ ಪ್ರಜಂಟೇಶನ ಗರ್ಲ್ಸ್ ಹೈಸ್ಕೂಲಿನ ಕು. ಪೂರ್ಣಿಮಾ ಎಸ್. ಬೆಂಡಿಗೇರಿಮಠ, ಕು. ಲತಾ ಬಿ. ವಿರಕ್ತಮಠ, ಕು. ಪೂಜಾ ಎಮ್. ಯಡಿಯಾಪೂರ ಹಾಗೂ ಶ್ರೀಮತಿ ಲೀಲಾ ಮಹಾದೇವ ಕೇಸರಿ ದತ್ತಿ ನಿಧಿ ಅಂಗವಾಗಿ ೨೦೧೭–೧೮ ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ವಿದ್ಯಾರಣ್ಯ ಪದವಿಪೂರ್ವ ಮಹಾವಿದ್ಯಾಲಯದ ಕು. ಮೃತ್ಯುಂಜಯ ಕಬ್ಬೂರ, ಕು. ಪ್ರವೀಣ ಹುನಗುಂದ, ಕು. ಫಕ್ಕೀರಪ್ಪ ಕಸವಣ್ಣವರ ಅವರಿಗೆ ದತ್ತಿ ಬಹುಮಾನ ನೀಡಲಾಯಿತು.

ವೇದಿಕೆ ಮೇಲೆ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಸ್ವಾಗತಿಸಿದರು. ಕಾರ್ಯಾಕಾರಿ ಸಮಿತಿ ಸದಸ್ಯರಾದ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ನಿರ್ವಹಣೆ ಮಾಡಿದರು. ಮನೋಜ ಪಾಟೀಲ ವಂದಿಸಿದರು.

೪೯. **ಶ್ರೀಮತಿ ಫಕ್ಕೀರವ್ವ ಗುಡಿಸಾಗರ ದತ್ತಿ :** ದಾನಿಗಳು, ದಿ. ಶ್ರೀ ಎಸ್. ಎಂ. ಹೊಳೆಯಣ್ಣವರ.

ಜಾನಪದ/ಜನಪದ ಹಾಡುಗಳು ಜನ ಮಾಧ್ಯಮಗಳಾಗಿ ಕೆಲಸ ಮಾಡುತ್ತಿದ್ದ ಕಾಲವನ್ನು ನಾವು ಇಂದು ಮರೆತಿದ್ದೇವೆ. ಇತಿಹಾಸವನ್ನು ನೆನಪಿಸಿಕೊಡುವ ಹಾಡುಗಳು ಜನಪದ ಗೀತೆಗಳಲ್ಲಿ ಇದ್ದವು ಎಂಬುದನ್ನು ತಿಳಿದುಕೊಂಡು ಜಾನಪದ ಗೀತೆಗಳನ್ನು ಪುರಸ್ಕರಿಸಬೇಕು ಎಂದು ಹಾವೇರಿ ಕೆರಿಮತ್ತಿಹಳ್ಳಿ ಕ.ವಿ.ವಿ. ಸ್ನಾತಕೋತ್ತರ ಕೇಂದ್ರದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಉಪನ್ಯಾಸಕ ಡಾ. ವಿಶ್ವನಾಥ ವಾಯ್. ಚಿಂತಾಮಣಿ ಅಭಿಪ್ರಾಯಪಟ್ಟರು. ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು 'ಜಾನಪದ ಕೋಗಿಲೆ ಫಕ್ಕಿರವ್ವ ಗುಡಿಸಾಗರ ಸ್ಮರಣೆ ದತ್ತಿ' ಅಂಗವಾಗಿ ದಿನಾಂಕ **೧೪–೯–೨೦೧೮** ರಂದು ಆಯೋಜಿಸಿದ್ದ **'ಜನಪದ ಕಲೆಯಾಗಿ ಗೀಗೀ ಪದಗಳ ವೈಶಿಷ್ಟ್ಯ'** ವಿಷಯ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಜನಪದ ಸಾಹಿತ್ಯದಲ್ಲಿ ಗೀಗೀ ಪದಗಳು ತನ್ನದೇ ವೈಶಿಷ್ಟ್ಯ ಕಾಯ್ದುಕೊಂಡಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಹುಲಕುಂದದ ಭೀಮ ಕವಿಗಳು ರಚಿಸಿದ ಗೀಗೀ ಪದ ಸಾಹಿತ್ಯವನ್ನು ವಿಸ್ತರಿಸಿದ ತೊರಗಲ್ಲಮಠದ ರಾಚೋಟೇಶ್ವರ ಸ್ವಾಮಿಗಳು ಹತ್ತಾರು ಗೀಗೀ ಪದ ತಂಡ ರಚಿಸಿ ಯುವ ಸಮುದಾಯದಲ್ಲಿ ದೇಶಭಕ್ತಿ ಕಿಚ್ಚು ಹಚ್ಚಿಸಿದ್ದರು. ಉತ್ತರ ಕರ್ನಾಟಕದಲ್ಲಿ ಗೀಗೀ ಪದ ಮೇಳ ಕಟ್ಟಿಕೊಂಡು ಕಲೆಯನ್ನು ಉಳಿಸುವಲ್ಲಿ ಮತ್ತು ಸ್ವಾತಂತ್ರ್ಯದ ಪ್ರೇಮವನ್ನು ಹುಟ್ಟಿಸುವಲ್ಲಿ ಶ್ರಮಿಸಿದವು. ಗೀಗೀ ಪದ ಹಾಡುವವರು ಹೆಚ್ಚಾಗಿ ದಲಿತ, ಹರಿಜನ ಮಹಿಳೆಯರು. ಸ್ತ್ರೀ ಪಂಗಡದಲ್ಲಿ ಒಬ್ಬರು ಮುಮ್ಮೇಳ ಹಾಡುಗಾರ್ತಿಯೂ, ಹಿಮ್ಮೇಳದಲ್ಲಿ ಈರ್ವರೂ ಪುರುಷರು ಬರುತ್ತಾರೆ. ಈ ಕಲೆ ಅವರ ಹೆಮ್ಮೆಯ ಪರಂಪರೆಯಾಗಿದೆ ಎಂದ ಅವರು ಫಕ್ಕೀರವ್ವ ಗುಡಿಸಾಗರ ಇವರು ಜನಪದದ ಮೇರು ಪರ್ವತದಂತಿದ್ದು ಮುಂಬರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರ ಹೆಸರಿನಲ್ಲಿ ವೇದಿಕೆ ರಚಿಸಿ, ಜಾನಪದ ಕಲಾವಿದರು, ಚರ್ಮ ವಾದ್ಯ ನುಡಿಸುವವರನ್ನು ಒಂದೆಡೆ ಸೇರಿಸಿ, ಕಾರ್ಯಕ್ರಮ ನಡೆಸುವಂತಾಗಬೇಕೆಂದು ಆಶಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕವಿಗಳಾದ ಸಿ.ಎಮ್. ಚನ್ನಬಸಪ್ಪ, ಶ್ರೀಮತಿ ಫಕ್ಕೀರವ್ವ ಗುಡಿಸಾಗರ ಅವರ ಜೀವಿತಾವಧಿಯಲ್ಲಿಯ ಒಡನಾಟವನ್ನು ಸ್ಮರಿಸಿಕೊಳ್ಳುತ್ತಾ, ಜಾನಪದ ಕಲೆಗಳಲ್ಲಿ ಪ್ರಮುಖ ಸ್ಥಾನ ಪಡೆದ ಗೀಗೀ ಪ್ರಕಾರಕ್ಕೆ ಹೊಸ ದಿಕ್ಕು ತೋರಿಸಿದ ಮಹಾನ್ ಕಲಾವಿದೆಯಾಗಿದ್ದಳು. ಜಾನಪದ ಅಕಾಡೆಮಿ, ಆಕಾಶವಾಣಿ ವರ್ಷದ ಶ್ರೇಷ್ಠ ಕಲಾವಿದೆಯಾಗಿ 'ಜಾನಪದ ಶ್ರೀ' ಮೊದಲಾದ ಪ್ರಶಸ್ತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದ್ದು ಸ್ಮರಣೀಯವಾಗಿದೆ. ಅವರ ನೆನಪು ಮಾತ್ರ ಉಳಿದಿದ್ದು, ಅವರ ಜಾನಪದ ನೆನಪಿನ ಕುರಿತು ಜಾನಪದ ಸ್ಮಾರಕ ಭವನಗಳನ್ನು ನಿರ್ಮಿಸಬೇಕು. ದಿ. ಎಸ್.ಎಮ್. ಹೊಳೆಯಣ್ಣವರ ಅವರು ಹಿಂದುಳಿದ ಜಾತೀಯ ಫಕ್ಕೀರವ್ವಾ ಗುಡಿಸಾಗರ ಅವರ ಹೆಸರಿನಲ್ಲಿ ದತ್ತಿ ಸಂಘದಲ್ಲಿ ಸ್ಥಾಪಿಸಿ, ಅವರ ಸ್ಮರಣೆ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದು ಸ್ಮರಣೀಯ ಎಂದರು.

ಬೆಳ್ಳಿಗಟ್ಟಿಯ ಜಾನಪದ ಕಲಾವಿದ ಮಹದೇವಪ್ಪ ಹರಿಜನ ಜನಪದ ಕಲೆಯ ಗೀಗೀ ಪದಗಳ ವೈಶಿಷ್ಟ್ಯದ ಹಾಡುಗಳನ್ನು ಹಾಡಿ ರಂಜಿಸಿದರು.

ಜಾನಪದ ಕೋಗಿಲೆ ಫಕ್ಕೀರವ್ವ ಗುಡಿಸಾಗರ ಅವರ ಭಾವಚಿತ್ರಕ್ಕೆ ಪುಷ್ಪಸಮರ್ಪಿಸಿ ಗೌರವ ಸಲ್ಲಿಸಿದರು. ಕಾರ್ಯಾರ್ಧಕ್ಷ ಶಿವಣ್ಣ ಬೆಲ್ಲದ ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಹಾಗೂ ಬಿ.ಕೆ. ಹೊಂಗಲ್ ಅತಿಥಿಗಳನ್ನು ಪುಷ್ಪ ನೀಡಿ ಗೌರವಿಸಿದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಕ್ಕೇರಪ್ಪ ನಡುವಿನಮನಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಬಿ. ಗಾಮನಗಟ್ಟಿ ನಿರೂಪಿಸಿದರು.

೫೦. **ಕಲಾವಿದ ಬಿ. ಮಾರುತಿ ದತ್ತಿ:** ದಾನಿಗಳು, ಶ್ರೀ ದೀಪಕ ಮಾರುತಿ ಬಾಣದ

ಸಾಮಾನ್ಯವಾಗಿ ದೈಹಿಕ ನ್ಯೂನ್ಯತೆಯಿರುವ ವ್ಯಕ್ತಿಗಳಲ್ಲಿ ಯಾವುದಾದರೊಂದು ಕಲೆ ಸೇರಿಕೊಂಡು ಆ ವ್ಯಕ್ತಿಯನ್ನು ಪರಿಪೂರ್ಣವಾಗಿಸುತ್ತದೆ. ಹೀಗೆ ಸಾಕಷ್ಟು ಜನರು ಕಲೆಯ ಮೂಲಕವೇ ಬೆಳೆದಿದ್ದಾರೆ ಎಂದು ಧಾರವಾಡ ಮಾಜಿ ಶಾಸಕರಾದ ಚಂದ್ರಕಾಂತ ಬೆಲ್ಲದ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೫–೯–೨೦೧೮** ರಂದು ಆಯೋಜಿಸಿದ್ದ **ಕಲಾವಿದ ಬಿ. ಮಾರುತಿ ದತ್ತಿ** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಚಂದ್ರಕಾಂತ ಬೆಲ್ಲದ ಅವರು, ಪ್ರಶಸ್ತಿ ಪುರಸ್ಕೃತ ಕಿರಣ ಪೋಲಿಯೋ ಪೀಡಿತನಾಗಿ, ಮೊದಮೊದಲು ನಡೆದಾಡುತ್ತಿದ್ದ ಅವರು ನಂತರ ವರ್ಷಗಳಲ್ಲಿ ನಡೆಯುವ ಶಕ್ತಿ ಕಳೆದುಕೊಂಡರೂ ಕೂಡಾ ತಮ್ಮ ನ್ಯೂನ್ಯತೆಯನ್ನು ಬದಿಗಿಟ್ಟು ಚಿತ್ರ ರಚನೆಯನ್ನು ತಮ್ಮ ಕಾಯಕವಾಗಿಸಿಕೊಂಡು ಕಲಾರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಚಿತ್ರಕಲೆಯಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ಅಂಥವರನ್ನು ಗುರ್ತಿಸಿ 'ಚಿತ್ತಾರ ಚೇತನ' ಪ್ರಶಸ್ತಿ ನೀಡಿರುವುದು ಶ್ಲ್ಯಾಘನೀಯ ಎಂದ ಅವರು ಧಾರವಾಡದಲ್ಲಿ ಸುಸಜ್ಜಿತ ಕಲಾ ಗ್ಯಾಲರಿ ಸ್ಥಾಪನೆಯ ಅವಶ್ಯವಿದೆ ಎಂದು ಚಂದ್ರಕಾಂತ ಬೆಲ್ಲದ ಆಗ್ರಹಿಸಿದರು.

'ಚಿತ್ತಾರ ಚೇತನ' ಪ್ರಶಸ್ತಿ ವಿತರಿಸಿ ಮಾತನಾಡಿದ ಖ್ಯಾತ ಕಲಾವಿದ ಬೆಂಗಳೂರಿನ ರಾಮಣ್ಣ ಸೂರಿ ಮಾತನಾಡಿ ಇಂದು ಪ್ರಶಸ್ತಿ ಸ್ವೀಕರಿಸುತ್ತಿರುವ ಕಿರಣ ಶೇರಖಾನೆ ಕಲಾ ಲೋಕದ ವಿಸ್ಮಯವಾಗಿದ್ದಾರೆ. ಅತಿ ಚಿಕ್ಕ ವಯಸ್ಸಿನಲ್ಲಿಯೇ ವರ್ಣ ಸಂಯೋಜನೆಯಲ್ಲಿ ಪ್ರಭುದ್ಧತೆ ಸಾಧಿಸಿರುವ ಕಿರಣ ಶೇರಖಾನೆ ಬರುವ ದಿನಗಳಲ್ಲಿ ನಾಡಿನ ಪ್ರಮುಖ ಕಲಾವಿದರಾಗುವ ಲಕ್ಷಣ ತೋರಿದ್ದಾರೆ. ಚಿತ್ರಕಲಾ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ಬಗ್ಗೆ ವಿಶೇಷ ಕಾಳಜಿ ತೋರಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ, ಶ್ರೀಮತಿ ರೇಣುಕಾ ಮಾರ್ಕಂಡೆಯ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘವು ಎಲ್ಲ ಕಲಾ ಪ್ರಕಾರಗಳ ಪೋಷಕ ಪಾತ್ರ ವಹಿಸಿದ್ದು. ಚಿತ್ರಕಲೆಯಲ್ಲಿಯೂ ಸಹ ಆಸಕ್ತಿ ವಹಿಸಿರುವುದು ಶ್ಲ್ಯಾಘನೀಯ ಎಂದರು.

ಚಿತ್ತಾರ ಚೇತನ ಪ್ರಶಸ್ತಿ ಸ್ವೀಕರಿಸಿ, ಪ್ರತಿಕ್ರಿಯಿಸಿದ ಕಿರಣ ಶೇರಖಾನೆ, ನನ್ನನ್ನು ಗುರುತಿಸಿ ಈ ಪ್ರಶಸ್ತಿ ನೀಡಿರುವುದು ನನಗೆ ತುಂಬಾ ಸಂತೋಷ ತಂದಿದೆ. ಈ ಪ್ರಶಸ್ತಿಯು ನನ್ನ ಜವಾಬ್ದಾರಿಯನ್ನು ಇನ್ನೂ ಹೆಚ್ಚಿಸಿದೆ. ಅದಕ್ಕಾಗಿ ಸಂಘಕ್ಕೆ ನಾನು ಋಣಿಯಾಗಿದ್ದೇನೆ ಎಂದರು.

ವೇದಿಕೆ ಮೇಲೆ ಕಲಾವಿದ ಬಿ. ಮಾರುತಿ ಉಪಸ್ಥಿತರಿದ್ದರು. ಕುಮಾರಿ ಕವನ ಮತ್ತು ಕಾವ್ಯ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಮೋಹನ ನಾಗಮ್ಮನವರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

೫೧. **ಶ್ರೀಮತಿ ಜಯಶ್ರೀ ಗುತ್ತಲ ಜಾನಪದ ಪುರಸ್ಕಾರ ದತ್ತಿ.:** ದಾನಿಗಳು, ಶ್ರೀ ಎಸ್. ಬಿ. ಗುತ್ತಲ.

ಈ ಸಮಾರಂಭ, ಜಾನಪದ ಕಲಾವಿದೆಯಾದ ಶ್ರೀಮತಿ ದಿ. ಜಯಶ್ರೀ ಗುತ್ತಲ ಸ್ಮರಣೆ ದಿನ ಹಾಗೂ ಕಳಸದ ಗುರುಗೋವಿಂದಭಟ್ಟರ ಶಿಷ್ಯರಾದ ಸಂತ ಶಿಶುವಿನಹಾಳ ಶರೀಫರ ದ್ವಿಶತಮಾನೋತ್ಸವದ ಅಂಗವಾಗಿ ಅವರ ತತ್ವಪದ ಹಾಡುಗಳ ಸ್ಪರ್ಧಾ ಕಾರ್ಯಕ್ರಮವು ಒಂದೇ ದಿನ ನಡೆಯುತ್ತಿರುವುದು ಕಾಕತಾಳೀಯವಾಗಿಯೂ, ಔಚಿತ್ಯಪೂರ್ಣವಾಗಿದೆ ಎಂದು ಸಂಘದ ಕೋಶಾಧ್ಯಕ್ಷರಾದ ಹಾಗೂ  ಕಳಸದ ಗುರುಗೋವಿಂದಭಟ್ಟರ ಮರಿಮೊಮ್ಮಗನಾದ ಕೃಷ್ಣ ಜೋಶಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ವಿಶಿಷ್ಠ ಶೈಲಿಯ ಜಾನಪದ ಗಾಯಕಿ ಎಂದು ಪ್ರಸಿದ್ಧಿ ಪಡೆದಿದ್ದ ಶ್ರೀಮತಿ ದಿ. ಜಯಶ್ರೀ ಗುತ್ತಲ ದತ್ತಿ ಅಂಗವಾಗಿ ದಿನಾಂಕ **೧೬–೯–೨೦೧೮** ರಂದು ಆಯೋಜಿಸಿದ್ದ **"ಶ್ರೀಮತಿ ಜಯಶ್ರೀ ಗುತ್ತಲ ಜಾನಪದ ಪುರಸ್ಕಾರ–೨೦೧೮" ರ ಪ್ರದಾನ ಸಮಾರಂಭದ** ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಅತಿಥಿ ಹಾಗೂ ಶರೀಫರ ಹಾಡುಗಳ ಸ್ಪರ್ಧೆಯ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ, ರಾಜ್ಯಪ್ರಶಸ್ತಿ ವಿಜೇತ ಜಾನಪದ ಕಲಾವಿದ ಬಸವಲಿಂಗಯ್ಯ ಹಿರೇಮಠ ಅವರು ತಮ್ಮ ಹಾಗೂ ದಿ. ಜಯಶ್ರೀ ಗುತ್ತಲರ ಜಾನಪದ ಕ್ಷೇತ್ರದಲ್ಲಿಯ ಕಾರ್ಯಚಟುವಟಿಕೆಗಳನ್ನು ಮೆಲುಕು ಹಾಕುತ್ತಾ, ಸಂತ ಶಿಶುವಿನಹಾಳ ಶರೀಫರು ರಚಿಸಿದ ಪ್ರಚಲಿತವಿಲ್ಲದ ಹಾಡನ್ನು ಪ್ರಸ್ತುತಪಡಿಸುತ್ತಾ ಎಲ್ಲ ಮಹಿಳಾ ಮಂಡಳದ ಸದಸ್ಯರು, ಇನ್ನೂ ಹೆಚ್ಚಿನ ಪರಿಶ್ರಮಪಟ್ಟು ಹೊಸ ಹಾಡುಗಳನ್ನು ಪ್ರಸ್ತುತಪಡಿಸಲು ಪ್ರಯತ್ನಿಸಬೇಕೆಂದು ಕಿವಿಮಾತು ಹೇಳಿದರು. ಹಾಗೂ ತಮ್ಮ ಕಂಚಿನ ಕಂಠದಿಂದ ಶರೀಫರ ಹೊಸ ಹಾಡೊಂದನ್ನು ಹಾಡಿ ಸಭೀಕರ ಮನತಣಿಸಿದರು.

ಇನೋರ್ವ ಅತಿಥಿ ಹಾಗೂ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ ಡಾ. ಶ್ರೀಧರ ಕುಲಕರ್ಣಿ ಮಾತನಾಡುತ್ತಾ, ಎಲ್ಲ ಮಹಿಳಾ ಮಂಡಳದವರು ಉತ್ತಮವಾಗಿ ಶರೀಫರ ಹಾಡುಗಳನ್ನು ಪ್ರಸ್ತುತಪಡಿಸಿದ್ದು ಹೆಮ್ಮೆಯ ವಿಷಯವಲ್ಲದೇ ಸಾಮೂಹಿಕ ಹಾಡುವಾಗ ತಪ್ಪು, ತಡೆಗಳ ಬಗ್ಗೆ ಸಲಹೆ ನೀಡಿ ಸಂತ ಶಿಶುನಾಳ ಶರೀಫರ ಒಂದು ಹಾಡನ್ನು ಹೇಳುತ್ತಾ, ಪೂರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ತಮ್ಮ ಸಂಗಡ ಧ್ವನಿ ಕೂಡಿಸಲು ಹಾಗೂ ಚಪ್ಪಾಳೆಯೊಂದಿಗೆ ಪಾಪು ಸಭಾಭವನವನ್ನು ಮಂದಿರವಾಗಿ ಪರಿವರ್ತನೆಗೊಂಡು ಭಾಸವಾದಂತೆ ಮಾಡಿ ಅಚ್ಚರಿ ಮೂಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ದತ್ತಿ ದಾನಿ, ನಿವೃತ್ತ ಇಂಜನೀಯರರಾದ ಎಸ್. ಬಿ. ಗುತ್ತಲ, ಜಾನಪದ ಕಲಾವಿದೆ ದಿ. ಶ್ರೀಮತಿ ಜಯಶ್ರೀ ಗುತ್ತಲ ಸ್ಮರಣೆಯೊಂದಿಗೆ ಕಳಸದ ಗುರುಗೋವಿಂದ ಭಟ್ಟರ ನಿಕಟ ಸಂಪರ್ಕದಲ್ಲಿದ್ದು, ಅಲ್ಲದೇ ಗುರುಗಳ ಸ್ಥಾನದಲ್ಲಿ ಸ್ವೀಕರಿಸಿ, ಬೋಧ ಒಂದೇ, ಬ್ರಹ್ಮನಾದ ಒಂದೇ, ಶಿಶುವಿನಹಾಳದೀಶನ ಭಾಷೆ ಒಂದೇ ಎಂದು ಜಗತ್ತಿಗೆ ಸಾರಿದ ಮಹಾನ್ ದಾರ್ಶನಿಕ ಜಾನಪದ ಕವಿ ಶಿಶುವಿನಹಾಳದ ಶರೀಫರು ಕರ್ನಾಟಕದ ಕಬೀರರೆಂದೇ ಪ್ರಸಿದ್ಧರಾಗಿದ್ದಾರೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಿ. ಶ್ರೀಮತಿ ಜಯಶ್ರೀ ಗುತ್ತಲ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಪ್ರಶಸ್ತಿ ಹಾಗೂ ಬಹುಮಾನ ಪಡೆದ ಮಹಿಳಾ ಮಂಡಳಗಳು:

ಕಲ್ಯಾಣಿ ಮಹಿಳಾ ಮಂಡಳ, ಹುಬ್ಬಳ್ಳಿ ಪ್ರಥಮ ಬಹುಮಾನ ಪಡೆದು 'ಜಯಶ್ರೀ ಗುತ್ತಲ ಜಾನಪದ ಪುರಸ್ಕಾರ–೨೦೧೮' ಪಡೆದುಕೊಂಡರು. ಕಲ್ಪತರು ಮಹಿಳಾ ಮಂಡಳ, ಧಾರವಾಡ ಹಾಗೂ ಶಾರದಾ ಭಜನಾ ಮಂಡಳ, ಧಾರವಾಡ ದ್ವಿತೀಯ ಸ್ಥಾನ ಹಂಚಿಕೊಂಡವು. ಮಂಜುನಾಥ ಮಹಿಳಾ ಮಂಡಳ, ಧಾರವಾಡ ತೃತೀಯ ಸ್ಥಾನ ಪಡೆಯಿತು. ಸ್ಪರ್ಧೆಯಲ್ಲಿ ಅವಳಿನಗರದ ಒಟ್ಟು ೨೦ ತಂಡಗಳು ಭಾಗವಹಿಸಿದ್ದವು. ಭಾಗವಹಿಸಿದ ಎಲ್ಲ ತಂಡಗಳಿಗೆ ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು.

ಪ್ರಾರಂಭದಲ್ಲಿ ಕು. ಪ್ರೇಕ್ಷಾ ಗುತ್ತಲ ಪ್ರಾರ್ಥಿಸಿದಳು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಜಾನಪದ ಕಲಾವಿದೆ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಅವರು ಸಭಿಕರನ್ನು ಹಾಗೂ ಅತಿಥಿಗಳನ್ನು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ ಶ್ರೀಮತಿ ಜಯಶ್ರೀ ಗೌಳಿ ವಂದನಾರ್ಪಣೆ ಮಾಡಿದರು.

೫೨. **ಡಾ. ರಾ.ಯ. ಧಾರವಾಡಕರ ದತ್ತಿ:** ದಾನಿಗಳು, ಡಾ. ಶ್ರೀರಾಮ ಧಾರವಾಡಕರ.

ಡಾ. ರಾ. ಯ. ಧಾರವಾಡಕರ ಅವರು ಶ್ರೇಷ್ಠ ಉಪನ್ಯಾಸಕರು, ಕನ್ನಡ ನಾಡಿನ ಬಹುದೊಡ್ಡ ಸಾಹಿತಿಗಳು, ಪ್ರಬಂಧಕಾರರು, ಶಿಕ್ಷಣ ತಜ್ಞರು ಹಾಗೂ ಉತ್ತಮ ವಾಗ್ಮೀಗಳಾಗಿದ್ದರು. ಅವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೀಡಿದ ಕೊಡುಗೆ ಅಪಾರ ಹಾಗೂ ಅಮೋಘವಾಗಿದೆ ಎಂದು ಕಲಘಟಗಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಗಿರೀಶ ದೇಸೂರ ಹೇಳಿದರು.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ. ರಾ. ಯ. ಧಾರವಾಡಕರ ಅವರ ಜನ್ಮಶತಮಾನೋತ್ಸವ ನಿಮಿತ್ತ ದಿನಾಂಕ **೨೨–೯–೨೦೧೮** ರಂದು ಏರ್ಪಡಿಸಿದ್ದ ದತ್ತಿ ಪ್ರಾರಂಭೋತ್ಸವ ಸಮಾರಂಭದಲ್ಲಿ ಅವರು **'ಡಾ. ರಾ. ಯ. ಧಾ ಅವರ ಬದುಕು–ಬರಹ'** ಕುರಿತು ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ನೌಕರಿಗಳನ್ನು ಮಾಡುತ್ತಲೇ ವಿದ್ಯಾಭ್ಯಾಸವನ್ನು ಮುಂದುವರೆಸಬೇಕೆಂಬ ಹಂಬಲ ಹೊಂದಿದ ಅನೇಕ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಿ, ಅವರ ವಿದ್ಯಾಭ್ಯಾಸವು ಮುಂದುವರೆಯಲಿಕ್ಕೆ ಸಹಾಯ ಮಾಡುವ ದೃಷ್ಟಿಯಿಂದ ಅನೇಕ ಉಪನ್ಯಾಸಗಳನ್ನು ನೀಡಿ ವಿದ್ಯಾರ್ಥಿ ಕಲ್ಯಾಣ ನಿಧಿಯಿಂದ ನಿಧಿ ಸಂಗ್ರಹಿಸಿ ಅಂಥವರಿಗೆ ಸಹಾಯ ಮಾಡಿದವರು.

ಕನ್ನಡ ಮತ್ತು ಇಂಗ್ಲೀಷ ಎರಡೂ ಭಾಷೆಯಲ್ಲಿ ಅಪಾರ ಪ್ರೌಢಿಮೆಯನ್ನು ಹೊಂದಿದ್ದ ಡಾ. ರಾ. ಯ. ಧಾರವಾಡಕರರು ಸಾಹಿತ್ಯದ ವಿವಿಧ ಪ್ರಕಾರಗಳಾದ ಪ್ರಬಂಧ, ಕಥೆ, ಪ್ರವಾಸ ಕಥನ, ಸಂಶೋಧನೆ, ಭಾಷಾ ಸಾಹಿತ್ಯ ಮುಂತಾದ ೨೫ ಕ್ಕೂ ಹೆಚ್ಚು ಮೌಲಿಕವಾದ ಕೃತಿಗಳನ್ನು ರಚಿಸಿದವರಾಗಿದ್ದಾರೆ. ಡಾ. ದ. ರಾ. ಬೇಂದ್ರೆ, ಶಂ. ಭಾ. ಜೋಶಿ. ಬಿ.ಎಂ.ಶ್ರೀ. ವಿ.ಕೃ. ಗೋಕಾಕ, ಬೆಟಗೇರಿ ಕೃಷ್ಣಶರ್ಮಾ ಅವರಂಥ ಮೇದಾವಿಗಳ ಒಡನಾಟವಿದ್ದ ಧಾರವಾಡಕರರು ಚಿಕ್ಕಂದಿನಲ್ಲಿಯೇ ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಬೆಳೆಸಿಕೊಂಡಿದ್ದನ್ನು ವಿವರಿಸಿ, ಧಾರವಾಡಕರರು ಅನೇಕ ದೃಷ್ಟಾಂತಗಳ ಹಾಗೂ ಹಾಸ್ಯದ ಮೂಲಕ ವಿದ್ಯಾರ್ಥಿಗಳ ಮನಮುಟ್ಟುವಂತೆ ಸೊಗಸಾಗಿ ಪಾಠಗಳನ್ನು ಮಾಡುತ್ತಿದ್ದರು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಧಾರವಾಡದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಮಾತನಾಡಿ, ಧಾರವಾಡಕರ ಅವರು ಜೆ.ಎಸ್.ಎಸ್. ಕಾಲೇಜಿನಲ್ಲಿ ನನ್ನ ಗುರುಗಳಾಗಿದ್ದರು. ಅವರ ಪಾಠ, ಪ್ರವಚನ ಹಾಗೂ ಅವರ ಬಹುಮುಖ ವ್ಯಕ್ತಿತ್ವದಿಂದ ನಾನು ಪ್ರಭಾವಿತನಾಗಿದ್ದೇನೆ ಎಂದು ತಮ್ಮ ಗುರುಗಳಿಗೆ ಗೌರವ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ.ವಿ.ವ.ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಡಾ. ರಾ. ಯ. ಧಾರವಾಡಕರ ಅವರು ಕನ್ನಡ ನಾಡಿನ ಅತ್ಯಮೂಲ್ಯವಾದ ಆಸ್ತಿಯಾಗಿದ್ದರು. ಅವರು ಮೈಲಾರಲಿಂಗ ಗುಡ್ಡವನ್ನು ವಿದ್ಯಾಗಿರಿಯನ್ನಾಗಿ ಮಾರ್ಪಡಿಸಿದ ಶಿಲ್ಪಿ ಎಂದು ವರ್ಣಿಸಿ, ಅವರ ಜನ್ಮಶತಮಾನೋತ್ಸವ ನಿಮಿತ್ತ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದತ್ತಿ ಇರಿಸಿ ಅವರನ್ನು ನಮ್ಮ ಉಡಿಗೆ ಹಾಕಿದ್ದೀರಿ ಸಂತೋಷ. ಅವರ ಹೆಸರಿನಲ್ಲಿರುವ ಈ ದತ್ತಿ ಸೂಕ್ತವಾಗಿದೆ ಎಂದರು.

ದತ್ತಿದಾನಿಗಳ ಪರವಾಗಿ ಧಾರವಾಡ ಜೆ.ಎಸ್.ಎಸ್. ಕಾಲೇಜಿನ ನಿವೃತ್ತ ಗ್ರಂಥಪಾಲಕ ಅನಿಲ ಧಾರವಾಡಕರ ಮಾತನಾಡಿ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ತಮ್ಮ ತಂದೆಯವರು ನೀಡಿದ ಕೊಡುಗೆ ಹಾಗೂ ಸೇವೆಯನ್ನು ಮೆಲುಕು ಹಾಕಿ, ದತ್ತಿಯ ಆಶಯವನ್ನು ವಿವರಿಸಿದರು.

ಸಮಾರಂಭದಲ್ಲಿ ದಿ. ಡಾ. ರಾ. ಯ. ಧಾರವಾಡಕರ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

೫೩. **ಶ್ರೀ ಚಂದ್ರಶೇಖರ ಚನ್ನಪ್ಪ ಚೌಶೆಟ್ಟಿ ಹಾಗೂ ಶಿವಬಸಪ್ಪ ಚನ್ನಪ್ಪ ಚೌಶೆಟ್ಟಿ ದತ್ತಿ** : ದಾನಿಗಳು, ಶ್ರೀಮತಿ ಸುಮಾ ವಿಶ್ವನಾಥ ಚೌಶೆಟ್ಟಿ

ಶ್ರೀ ಚಂದ್ರಶೇಖರ ಚನ್ನಪ್ಪ ಚೌಶೆಟ್ಟಿ ಹಾಗೂ ಶಿವಬಸಪ್ಪ ಚನ್ನಪ್ಪ ಚೌಶೆಟ್ಟಿ ದತ್ತಿ ಕಾರ್ಯಕ್ರಮವನ್ನು ದಿನಾಂಕ ೨೬-೯-೨೦೧೮ ರಂದು ರಾ.ಹ. ದೇಶಪಾಂಡೆ ಸಭಾಭವನದಲ್ಲಿ 'ವರ್ತಮಾನದಲ್ಲಿ ಬಸವ ತತ್ವ' ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರಾದ ಈಶ್ವರ ಸಾಣಿಕೊಪ್ಪ ಆಗಮಿಸಿ, ವರ್ತಮಾನದಲ್ಲಿ ಬಸವ ತತ್ವ ಕುರಿತು ಮಾತನಾಡಿದರು.

ಧಾರವಾಡ ಬಸವ ಕೇಂದ್ರದ ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಚೌಧರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

೫೪. **ಶ್ರೀಮತಿ ಶಾಂತಲಾ ಪಾಟೀಲ ಸಾಹಿತ್ಯ ಪುರಸ್ಕಾರ (ಬಹುಮಾನ):** ದಾನಿಗಳು, ಶ್ರೀಮತಿ ವಿಜಯಮಾಲಾ ಪ್ರತಿವರ್ಷ

೫೫. **ಶ್ರೀಮತಿ ಇಂದುಮತಿ ಪಾಟೀಲ ಪುಟ್ಟಪ್ಪ ದತ್ತಿ :** ದಾನಿಗಳು, ಡಾ. ಪಾಟೀಲ ಪುಟ್ಟಪ್ಪ

ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಸಂಘದಲ್ಲಿ ರೂ ೩,೦೦,೦೦೦=೦೦ ಗಳ ದತ್ತಿ ಇರಿಸಿ ಪ್ರತಿ ವರುಷ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸಲು ಅನುವು ಮಾಡಿಕೊಟ್ಟಿದ್ದಾರೆ.

೫೬. **ತಲ್ಲೂರ ರಾಯನಗೌಡ ಪಾಟೀಲ ಸ್ಮಾರಕ ಸಂಸ್ಥೆಯ ದತ್ತಿ :** ದಾನಿಗಳು, ಡಾ. ಬಿ. ಆರ್. ಪಾಟೀಲ

ಕ್ರಿ. ಶ. ೯ ನೆಯ ಶತಮಾನದಲ್ಲಿಯ ಶ್ರೀವಿಜಯನ ಅಲಂಕಾರ ಗ್ರಂಥ 'ಕವಿರಾಜಮಾರ್ಗದಲ್ಲಿ' ವ್ಯಕ್ತವಾದ ಕನ್ನಡಿಗರ ಹಿರಿಮೆ-ಗರಿಮೆ ಉತ್ಕೃಷ್ಟವಾದದ್ದು, ಪ್ರತಿಯೊಬ್ಬ ಕನ್ನಡಿಗನೂ ಯಾರ ಜೊತೆ ಹೇಗೆ ಮಾತನಾಡಬೇಕು, ಬೇರೆಯವರು ಮಾತನಾಡಿದ್ದನ್ನು ಪರಸ್ಪರ ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಚೆನ್ನಾಗಿ ಬಲ್ಲವರಾಗಿದ್ದರು ಎಂದು ಜೆ.ಎಸ್.ಎಸ್. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿನದತ್ತ ಅ. ಹಡಗಲಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ತಲ್ಲೂರ ರಾಯನಗೌಡ ಪಾಟೀಲ ಸ್ಮಾರಕ ಸಂಸ್ಥೆಯ ದತ್ತಿ ಅಂಗವಾಗಿ ದಿನಾಂಕ **೩೦-೯-೨೦೧೮** ರಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು **'ಕರ್ನಾಟಕ ಏಕೀಕರಣ : ನೆನಪು'** ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಓದಲು, ಬರೆಯಲು ಬಾರದೇ ಇದ್ದರೂ ಸಮೃದ್ಧ ಕಾವ್ಯ ರಚಿಸಬಲ್ಲ ಜಾಣತನ, ಚಾಣಾಕ್ಷತನವನ್ನು ಕನ್ನಡಿಗರು ಮೈಗೂಡಿಸಿಕೊಂಡವರಾಗಿದ್ದರು. ಇದಕ್ಕೆ ಸಮೃದ್ಧವಾದ ಬೆಳೆದು ನಿಂತಿರುವ ಜಾನಪದ ಸಾಹಿತ್ಯವೇ ಸಾಕ್ಷಿಯಾಗಿದೆ ಎಂದರು. ಅನೇಕ ರಾಜಮನೆತನಗಳ ಹಿನ್ನೆಲೆಯಲ್ಲಿ ೧೯ ತುಂಡಾಗಿದ್ದ ಕರ್ನಾಟಕ ಏಕೀಕರಣದ ಹೋರಾಟಕ್ಕೆ ಧಾರವಾಡವೇ ಪ್ರಮುಖ ನೆಲೆಯಾಗಿತ್ತು. ಅನೇಕ ಜನ ಮಹನೀಯರ ಹೋರಾಟದ ಪ್ರತಿಫಲವಾಗಿ ೧೯೫೬ ನವಂಬರ ೧ ರಂದು ಕನ್ನಡ ರಾಜ್ಯ ಉದಯವಾಯಿತು. ಮುಂದೆ ೧೯೭೩ ನವಂಬರ ೧ ರಂದು ಆಗಿನ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸರು ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಘೋಷಿಸಿದರು ಎಂಬುದರ ಬಗ್ಗೆ ಏಕೀಕರಣದ ಹಿನ್ನೆಲೆಯನ್ನು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ವಿ.ವ.ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಮಾತನಾಡಿ, ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಹೋರಾಟ ಎರಡರಲ್ಲೂ ನಿಸ್ವಾರ್ಥ ಭಾವದಿಂದ ಹೋರಾಡಿದ ತಲ್ಲೂರ ರಾಯನಗೌಡರ ಶ್ರಮ ಅಪಾರವಾದದ್ದು. ಅವರು ಕೇವಲ ಹೋರಾಟಗಾರರಾಗಿರಲಿಲ್ಲ. ಜಾನಪದ ವಿದ್ವಾಂಸ, ಸಂಶೋಧಕ, ಅಂಕಣಕಾರ, ಕುಟುಂಬ ವತ್ಸಲರಾಗಿದ್ದರು. ಅವರು ಹಲವಾರು ಕೃತಿಗಳನ್ನು ನೀಡಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದವರು. ಅವರ ಸ್ಮರಣೆ ಶ್ಲಾಘನೀಯವಾದದ್ದು ಎಂದರು.

ಸಮಾರಂಭದಲ್ಲಿ ತಲ್ಲೂರ ರಾಯನಗೌಡ ಪಾಟೀಲ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಡಾ. ಪಿ. ಎಸ್. ಶಂಕರ, ದತ್ತಿ ದಾನಿಗಳಾದ ಶ್ರೀಮತಿ ದೇವಿಕಾರಾಣಿ ಪಾಟೀಲ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ನಿರೂಪಿಸಿದರು. ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೫೭. **ಪ್ರೊ. ಎಸ್. ಎ. ಹೊಸಮನಿ ದತ್ತಿ** : ದಾನಿಗಳು, ಶ್ರೀ ಈಶ್ವರಚಂದ್ರ ಶಿವರಾಜ ಹೊಸಮನಿ

ಸಿರಿಧಾನ್ಯಗಳು ಪೋಷಕಾಂಶಗಳ ಆಗರವಾಗಿದ್ದು, ಅವುಗಳ ಉಪಯೋಗದಿಂದ ಸರ್ವರೋಗಗಳನ್ನು ನಿಯಂತ್ರಿಸಲು ಹಾಗೂ ಹೋಗಲಾಡಿಸಲು ಸಾಧ್ಯವಿದೆ. ಸಿರಿಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಬಳಕೆ ಮಾಡಿದರೆ ಉತ್ತಮ ಆರೋಗ್ಯವನ್ನು ಪಡೆಯಲು ಸಾಧ್ಯ ಎಂದು ಕೃ.ವಿ.ವಿ. ಕೃಷಿ ವಿಸ್ತರಣಾ ನಿರ್ದೇಶಕರಾದ ಡಾ. ಆರ್. ಆರ್. ಪಾಟೀಲ ಹೇಳಿದರು.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರೊ. ಶಿವರಾಜ ಅಮೃತಪ್ಪ ಹೊಸಮನಿ ದತ್ತಿ ಅಂಗವಾಗಿ ದಿನಾಂಕ **೮-೧೦-೨೦೧೮** ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ **'ಆರೋಗ್ಯಕ್ಕಾಗಿ ಸಿರಿಧಾನ್ಯ ಬಳಸಿರಿ'** ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಅವರು ಮಾತನಾಡುತ್ತಿದ್ದರು.

ದೇಶದಲ್ಲಿ ಆದ ಹಸಿರು ಕ್ರಾಂತಿಯಿಂದ ಹಣ ತರುವ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದರಿಂದ ಶಕ್ತಿ ನೀಡುವ ಸಿರಿಧಾನ್ಯಗಳನ್ನು ಬೆಳೆಯುವುದನ್ನು ಕಡೆಗಣಿಸಲಾಯಿತು. ಬದಲಾದ ಕೃಷಿ ನೀತಿ, ಹೊಸ ಹೊಸ ಆಹಾರ ಪದ್ಧತಿಗಳಿಂದ ಸಿರಿಧಾನ್ಯಗಳ ಉಪಯೋಗ ಕಡಿಮೆಯಾಗುತ್ತಿದೆ. ಊಟದಲ್ಲಿ ಸಿರಿಧಾನ್ಯಗಳ ಬಳಕೆ ಕಡಿಮೆಯಾಗುತ್ತಿರುವುದರಿಂದ ಹಾಗೂ ಯುವ ಪೀಳಿಗೆ ಜಂಕ್ ಫುಡ್, ಫಾಸ್ಟ್ ಫುಡ್‌ಗಳಿಗೆ ಮಾರುಹೋಗುತ್ತಿರುವುದರಿಂದ ಸಣ್ಣ ವಯಸ್ಸಿನಲ್ಲಿಯೇ ಅನಾರೋಗ್ಯಕ್ಕೆ ಬಲಿಯಾಗುತ್ತಿರುವುದು ವಿಷಾದನೀಯ ಎಂದರು.

ಹಸಿರು ಕ್ರಾಂತಿಯಲ್ಲಿ ಹೆಚ್ಚಿನ ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಿರುವುದರಿಂದ ಮನುಷ್ಯನ ಆರೋಗ್ಯ ಹಾಗೂ ಪರಿಸರದ ಮೇಲೆ ಬಹಳಷ್ಟು ದುಷ್ಪರಿಣಾಮವಾಗುತ್ತಿದೆ. ಸಿರಿಧಾನ್ಯ ಸರ್ವರೋಗ ನಿವಾರಕವಾಗಿದ್ದರಿಂದ ಸಿರಿಧಾನ್ಯಗಳನ್ನು ಬೆಳೆಸಬೇಕು, ಬಳಸಬೇಕು ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃ.ವಿ.ವಿ. ಕುಲಪತಿಗಳಾದ ಡಾ. ಎಂ. ಬಿ. ಚಟ್ಟಿ ಅವರು ಮಾತನಾಡಿ, ಸಂಶೋಧನೆ ಹಾಗೂ ವಿಸ್ತರಣೆಗಳಲ್ಲಿ ಸಿರಿಧಾನ್ಯಗಳಿಗೆ ಪ್ರೊತ್ಸಾಹ ನೀಡುವ ನಿಟ್ಟಿನಲ್ಲಿ ಕಾರ್ಯ ಮಾಡಲಾಗುತ್ತಿದೆ ಎಂದು ಹೇಳಿ, ಸಿರಿಧಾನ್ಯಗಳ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿ ಅವಶ್ಯ ಎಂದರು.

ಸಿರಿಧಾನ್ಯ ಸಂಸ್ಕರಣ ಕೇಂದ್ರ ಸ್ಥಾಪಿಸಿ, ರೈತರು ತಂದ ಬೆಳೆಗಳ ಮಾರಾಟಕ್ಕೆ ಕೃಷಿ ವಿಶ್ವವಿದ್ಯಾಲಯದಿಂದ ವ್ಯವಸ್ಥೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದ ಅವರು, ಸಾರ್ವಜನಿಕರಿಗೆ ಹಣ್ಣುಹಂಪಲು, ತಾಜಾ ತರಕಾರಿ, ಶುದ್ಧ ಹಾಲುಗಳ ಜೊತೆಗೆ ಸಿರಿಧಾನ್ಯಗಳ ಹಾಗೂ ಸಿರಿಧಾನ್ಯಗಳ ಉತ್ಪನಗಳ ಮಾರಾಟಕ್ಕೆ ಮಳಿಗೆ ಸ್ಥಾಪಿಸುವ ಯೋಜನೆ ಇದೆಯೆಂದು ಹೇಳಿದರು.

ದಿ. ಪ್ರೊ. ಎಸ್. ಎ. ಹೊಸಮನಿ ಅವರ ಸೇವೆಯನ್ನು ಕೊಂಡಾಡಿದ ಡಾ. ಚಟ್ಟಿ ಅವರು, ಅವರೊಬ್ಬ ಶ್ರೇಷ್ಠ ಕೃಷಿ ವಿಜ್ಞಾನಿ, ದಕ್ಷ ಆಡಳಿತಗಾರ, ವಸ್ತುನಿಷ್ಠ ಪ್ರಾಯೋಗಿಕ ಪ್ರಯೋಜನಕಾರಿ ಪ್ರಾಧ್ಯಾಪಕರಾಗಿದ್ದರು ಎಂದು ವರ್ಣಿಸಿದರು. ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ನೇಮಕಗೊಂಡ ಡಾ. ಎಂ. ಬಿ. ಚಟ್ಟಿ ಅವರನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಪರವಾಗಿ ಸನ್ಮಾನಿಸಲಾಯಿತು.

ದತ್ತಿದಾನಿ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯ ಹಾಗೂ ಪ್ರಗತಿಪರ ಕೃಷಿಕರಾದ ಈಶ್ವರಚಂದ್ರ ಹೊಸಮನಿ ಮಾತನಾಡಿ, ತಮ್ಮ ತಂದೆಯವರು ಕೃಷಿ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿ, ಅವರ ಕಾರ್ಯವನ್ನು ಮುಂದುವರೆಸುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ದಿ. ಪ್ರೊ. ಎಸ್. ಎ. ಹೊಸಮನಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ನಿರೂಪಿಸಿದರು. ಕಾ.ಕಾ. ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ವಂದಿಸಿದರು.

೫೮. **ಶ್ರೀ. ಎಂ.ಟಿ., ಎ.ಟಿ., ಬಿ.ಟಿ. ಮತ್ತು ಎಚ್.ಟಿ. ಸಾಸನೂರ ಸಹೋದರರ ಸಂಸ್ಮರಣ ದತ್ತಿ** : ದಾನಿಗಳು, ಡಾ. ಅಶೋಕ ಹ. ಸಾಸನೂರ

ಸಮಾಜಮುಖಿ ಮತ್ತು ಸಮಾನತೆ ಚಿಂತನೆಗಳನ್ನು ಬಿತ್ತಿದ ೧೨ ನೇ ಶತಮಾನದ ವಚನಕಾರರ ಚಳುವಳಿ, ಕನ್ನಡ ಭಾಷೆ ಮತ್ತು ಕನ್ನಡ ನಾಡಿನ ಭಾಷಾ ಸ್ವರೂಪ, ಭಾಷಾ ಸಾಮರ್ಥ್ಯ ಮತ್ತು ಭಾಷಾ ತೀವ್ರತೆಯನ್ನು ಬದಲಾಯಿಸಿದ ಮೊದಲ ಕನ್ನಡ ಭಾಷಾ ಚಳುವಳಿ ಎಂದು ಕನ್ನಡದ ಪ್ರಸಿದ್ಧ ವಿದ್ವಾಂಸರಾದ ಪ್ರೊ. ಬಾಳಣ್ಣಾ ಶೀಗೀಹಳ್ಳಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀ ಎಂ.ಟಿ., ಎ.ಟಿ., ಬಿ.ಟಿ., ಮತ್ತು ಎಚ್.ಟಿ. ಸಹೋದರರ ಸ್ಮರಣಾರ್ಥ ದಿನಾಂಕ **೯-೧೦-೨೦೧೮** ರಂದು ಆಯೋಜಿಸಿದ್ದ **ಕನ್ನಡ ಭಾಷಾ ಚಳುವಳಿಗಳು** ಎಂಬ ವಿಷಯ ಕುರಿತು ವಿಶೇಷ ವ್ಯಾಖ್ಯಾನ ಮಾಲೆ-೨೨ರಲ್ಲಿ ಉಪನ್ಯಾಸ ನೀಡುತ್ತಾ ಡಾ. ಬಾಳಣ್ಣಾ ಶೀಗೀಹಳ್ಳಿ ಅವರು ಭಾಷೆಯ ಅಸ್ತಿತ್ವ, ವಿಮೋಚನೆ, ಬೆಳವಣಿಗೆ, ಅಭಿವೃದ್ಧಿ ಮತ್ತು ಸಂಕಷ್ಟಗಳು ಬಂದಾಗ ಮತ್ತೆ ಮತ್ತೆ ಭಾಷಾ ಚಳುವಳಿ, ಸಂಘರ್ಷ ಹಾಗೂ ಹೋರಾಟ ಅನಿವಾರ್ಯವೆಂದು ಮತ್ತು ಇದು ಜನತೆಯ ಸ್ವಾಭಿಮಾನದ ಕೂಗು ಎಂದು ಮುಂದುವರೆದು ಮಾತನಾಡುತ್ತಾ ಅವರು ಹೇಳಿದರು.

ಒಂದು ಭಾಷೆ ನಾಶವಾದರೆ ಒಂದು ಜನಾಂಗ ನಾಶವಾದಂತೆ. ಒಂದು ಜನಾಂಗವನ್ನು ಸಂಸ್ಕೃತಿ, ಸಂಸ್ಕಾರ, ವ್ಯವಹಾರಗಳನ್ನು ನಾಶ ಪಡಿಸಬೇಕು ಅಂದರೆ ಯಾವುದೇ ಶಸ್ತ್ರಗಳು ಬೇಕಾಗಿಲ್ಲ. ಆ ಜನಾಂಗದ ಭಾಷೆ ನಾಶ ಮಾಡಿದರೆ ಸಾಕು ಎಂದರು. ಚಳುವಳಿಗಳ ವಿಧಾನಗಳಲ್ಲಿ ಕ್ರಾಂತಿಕಾರಿ, ಸುಧಾರಣಾವಾದಿ, ಪ್ರತಿರೋಧಕ ಹಾಗೂ ಉಟೊಪಿಯನ್ ಚಳುವಳಿಗಳನ್ನು ಕುರಿತು ವಿವರವಾಗಿ ಚರ್ಚಿಸಿದರು. ಅನ್ಯ ಭಾಷೆಗಳ ಆಕ್ರಮಣ ಕನ್ನಡಿಗರ ಮೇಲೆ ತೀವ್ರವಾಗಿ ಆಗಿರುವುದರಿಂದ ಏಕೀಕರಣ ಚಳುವಳಿಯ ನಂತರವೂ ತಲ್ಲಣಗೊಂಡಿದ್ದೇವೆ.

ಏಕೀಕರಣದ ನಂತರ ಸಮಾನ ಹಕ್ಕುಗಳು, ಸಮಾನತೆ ಇರುತ್ತೆ ಅಂದುಕೊಂಡಿದ್ದು ಸುಳ್ಳಾಗಿದೆ. ಇಂದಿಗೂ ಉತ್ತರ ಕರ್ನಾಟಕದವರು ತುಳಿತಕ್ಕೆ ಒಳಗಾಗಿದ್ದೇವೆ ಎಂದರು.

ಅಧ್ಯಕ್ಷತೆ ವಹಿಸಿ, ಕ.ವಿ.ವ. ಸಂಘದ ಗೌರವ ಉಪಾಧ್ಯಕ್ಷರು ಹಾಗೂ ಹುಬ್ಬಳ್ಳಿಯ ಮಾಜಿ ಸಂಸದರಾದ ಪ್ರೊ. ಆಯ್. ಜಿ. ಸನದಿ ಅವರು ಮಾತನಾಡಿ, ಚಳುವಳಿಗಳನ್ನು ಮಾಡಬೇಕು ಅಂದ್ರೆ ಬೆಂಕಿಯನ್ನು ಹಚ್ಚಬೇಕಿಲ್ಲ. ದೀಪ ಹಚ್ಚುವುದರಿಂದಲೂ ಮಾಡಬಹುದು. ಕನ್ನಡ ಬದುಕಿದ್ದು ಹಳ್ಳಿಗಳಿಂದ. ಜಾತಿ, ಮತ, ಬಡವ ಶ್ರೀಮಂತ ಭಿನ್ನ ಮರೆತು ಭಾಷೆಯನ್ನು ಶ್ರೀಮಂತ ಮತ್ತು ಪರಿಪೂರ್ಣಗೊಳಿಸಿದ್ದಾರೆ ಎಂದರು.

ನಾಡೋಜ. ಡಾ. ಪಾಪು ಅವರು ಮಾತನಾಡಿ, ಗುಂಡುರಾಯರು ಆ ಹೊತ್ತಿಗೆ ಮುಖ್ಯಮಂತ್ರಿಗಳಾಗಿರದೇ ಹೋಗಿದ್ದರೆ, ಗೋಕಾಕ ಚಳುವಳಿ ಫಲಕಾರಿ ಆಗುತ್ತಿರಲಿಲ್ಲವೆಂದರು.

ವೇದಿಕೆ ಮೇಲೆ ದತ್ತಿ ದಾನಿಗಳಾದ ಡಾ. ಅಶೋಕ ಸಾಸನೂರ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು.

೫೯. **ಶ್ರೀಮತಿ ಮಲ್ಲವ್ವ ಯಲ್ಲಪ್ಪ ಸಿದ್ನಾಳ ದತ್ತಿ :** ದಾನಿಗಳು, ಶ್ರೀಮತಿ ಸುಲೋಚನಾ ಮ. ಸಿದ್ನಾಳ

ಹೆಣ್ಣು ಅಕ್ಷರಸಹ ತಾಯಿಯಾದಾಗಲೇ ಅವಳು ತಾಯಿಯಲ್ಲ. ಪ್ರತಿಯೊಂದು ಹೆಣ್ಣಿನಲ್ಲಿಯೂ ಹುಟ್ಟಿನಿಂದಲೇ ತಾಯಿತನ ಎಂಬುದು ನಿಸರ್ಗದತ್ತವಾಗಿ ಬಂದಿರುತ್ತದೆ. ಎಲ್ಲ ಧನಾತ್ಮಕ ಮೌಲಿಕ ಗುಣಗಳ, ಪ್ರೀತಿ, ಪಾಲನೆ, ಪೋಷಣೆ ಎಂಬ ವಿಶೇಷ ಗುಣಗಳ ಸಹಿಷ್ಣುತೆಯ ಪರಮಾವಧಿಯ ಮೂರ್ತಸ್ವರೂಪವೇ ತಾಯಿ ಎಂದು ಸಾಮಾಜಿಕ ಹೋರಾಟಗಾರ್ತಿ, ಖ್ಯಾತ ಹಿರಿಯ ನ್ಯಾಯವಾದಿ ಸವದತ್ತಿಯ ಶ್ರೀಮತಿ ಅನಸೂಯಾ ಎಮ್. ಕಿಟದಾಳ ತಾಯಿಯನ್ನು ವಿಶ್ಲೇಷಿಸುತ್ತಾ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨೨-೧೦-೨೦೧೮** ರಂದು ಆಯೋಜಿಸಿದ್ದ ಶ್ರೀಮತಿ ಮಲ್ಲವ್ವ ಯಲ್ಲಪ್ಪ ಸಿದ್ನಾಳ ದತ್ತಿ ಕಾರ್ಯಕ್ರಮದಲ್ಲಿ **'ಆಧುನಿಕ ತಾಯಿಯ ಮುಂದಿರುವ ಸವಾಲುಗಳು'** ಎಂಬ ವಿಷಯ ಕುರಿತು ಮಾತನಾಡಿದ ಶ್ರೀಮತಿ ಅನಸೂಯಾ ಕಿಟದಾಳ, ಅವಿಭಕ್ತ ಕುಟುಂಬದಲ್ಲಿ ತಾಯಿ, ಮಕ್ಕಳು ಇಬ್ಬರೂ ಸುರಕ್ಷಿತವಾಗಿದ್ದರು, ಇಂದು ಅವಿಭಕ್ತ ಕುಟುಂಬ ಮಾಯವಾಗಿ ಅತೀ ಚಿಕ್ಕ ಕುಟುಂಬಗಳು ಜನ್ಮ ತಾಳಿದ್ದರಿಂದ ತಾಯಿಗೆ ಭದ್ರತೆ, ರಕ್ಷಣೆ ಇಲ್ಲದಾಗಿ ತಾಯಿ ಆತಂಕದಲ್ಲಿ ಇದ್ದಾಳೆ. ಆಧುನಿಕ ವಿದ್ಯುನ್ಮಾನ ಪರಿಕರಗಳಾದ ಟಿ.ವಿ. ಮೋಬೈಲ್, ಫೇಸ್‌ಬುಕ್, ವ್ಯಾಟ್ಸ್‌ಆ್ಯಪ್, ಯುಟೂಬ್, ಇಂಟರನೆಟ್‌ಗಳ ಪ್ರಭಾವದಿಂದ ಮತ್ತು ಅನುಚಾನವಾಗಿ ಅವುಗಳನ್ನು ಒಳಿತು-ಕೆಡಕು ಒಂದೂ ಅರಿಯದೇ ಬಳಸುತ್ತಿರುವುದರಿಂದ ಮಕ್ಕಳು ತಾಯಂದಿರ ನಿಯಂತ್ರಣಕ್ಕೂ ಸಿಗದೇ ದಾರಿ ತಪ್ಪುತ್ತಿವೆ. ಇದನ್ನು ಹೇಗೆ ಸರಿಪಡಿಸುವುದು, ಮನೆಯಿಂದ ಆಚೆ ಹೋಗುವ ಮಕ್ಕಳು, ತಾಯಿ ಇಬ್ಬರೂ ಲೈಂಗಿಕ ದೌರ್ಜನ್ಯಕ್ಕೆ ಪದೇ ಪದೇ ಬಲಿಪಶು ಆಗುತ್ತಿರುವ ಸಂಕಷ್ಟಗಳಿಂದ ಹೇಗೆ ಪಾರಾಗುವುದು ಎಂಬ ಧಾವಂತ ಮತ್ತು ಕಠಿಣ ಸವಾಲುಗಳು ಆಧುನಿಕ ತಾಯಿಯ ಮುಂದಿವೆ. ತಾಯಿ ಹೆಣ್ಣಾದರೂ ಹೆಣ್ಣು ಮಗುವಿಗೆ ಜನ್ಮ ನೀಡುವದು ಯೋಗ್ಯವಲ್ಲ ಎಂಬ ಒತ್ತಡದಿ ಭ್ರೂಣ ಹತ್ಯೆಗಳಂತಹ ಹೇಯ ಪಾಪ ಕೃತ್ಯದಲ್ಲಿ ಒತ್ತಡದಿ ಭಾಗಿಯಾಗುವ ಅನಿವಾರ್ಯತೆಯಿಂದಾಗಿ ಹೆಣ್ಣು ಹೆರುವ ಸ್ವಾತಂತ್ರ್ಯ ತನಗೆ ಇಲ್ಲವೇ ಎಂಬುದು ಆಧುನಿಕ ತಾಯಿ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಇಂತಹ ಕಠಿಣ ಸವಾಲುಗಳಿಂದಾಗಿ ತಾಯಿ ಆರೋಗ್ಯದ ಮೇಲೆ ಬಹಳಷ್ಟು ದುಷ್ಪರಿಣಾಮ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ತಾಯಿಯನ್ನು ಭಯದ ಭೀತಿಯಿಂದ ಹೊರತಂದು ಅವಳನ್ನು ಸಂರಕ್ಷಿಸುವ ಜವಾಬ್ದಾರಿ ಆಧುನಿಕ ನಾಗರಿಕ ಸಮಾಜದ ಮೇಲೆ ಇದೆ ಎಂದು ಶ್ರೀಮತಿ ಅನಸೂಯಾ ಎಮ್. ಕಿಟದಾಳ ಅವರು ಮುಂದುವರೆದು ಮಾತನಾಡುತ್ತಾ ಹೇಳಿದರು.

ಖ್ಯಾತ ಹಿರಿಯ ಸಮಾಜ ಚಿಂತಕರಾದ ಪ್ರೊ. ಕೆ. ಎಸ್. ಶರ್ಮಾ ತಮ್ಮ ಅಧ್ಯಕ್ಷೀಯ ಸಮಾರೋಪ ನುಡಿಗಳನ್ನಾಡುತ್ತ, ತಾಯಿ ನಮ್ಮ ಸಮಾಜದ ಭದ್ರ ನೆಲೆಗಟ್ಟು, ತಾಯಿ ಅತ್ಯಂತ ಮೇಲ್ಮಟ್ಟದ ಪವಿತ್ರ ಸ್ಥಾನದಲ್ಲಿದ್ದಾಳೆ,

ಇಂದಿನ ಆತಂಕಕಾರಿ ಬೆಳವಣಿಗೆಗಳಿಂದಾಗಿ, ಪುರುಷ ಪ್ರಧಾನ ಸಮಾಜದ ಸಂಚು ಮತ್ತು ಕೃತ್ಯಗಳಿಂದಾಗಿ ತಾಯಿಗೆ ನೀಡಿದ ಪಾವಿತ್ರ್ಯ ಸ್ಥಾನವು ಹದಗೆಡುತ್ತಿದೆ. ತಾಯಿಯ ಪಾವಿತ್ರ್ಯದ ಸ್ಥಾನ ಹದಗೆಟ್ಟರೆ ಮೊದಲು ಕುಟುಂಬಕ್ಕೆ, ನಂತರ ಸಮಾಜಕ್ಕೆ ದುರಂತ ಕಟ್ಟಿಟ್ಟ ಬುತ್ತಿ. ಕಾರಣ ತಾಯಿಯನ್ನು ಮಾನವೀಯ ಮೌಲ್ಯಗಳಿಂದ ಸಮಾಜ ಗೌರವಿಸಬೇಕು. ಅಂದಾಗ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಉಳಿಯುವವು ಮತ್ತು ಬೆಳೆಯುವವು ಎಂದರು.

ಆಧುನಿಕ ತಾಯಿಯೂ ಕೂಡಾ ತನ್ನನ್ನು ತಾನು ಆತ್ಮವಿಮರ್ಷೆ ಮಾಡಿಕೊಂಡು ಸರಿಯಾದ ಹೆಜ್ಜೆ ಇಡಬೇಕಾದ ಅನಿವಾರ್ಯತೆ ಇಂದಿನ ತಾಯಿಯ ಮುಂದಿರುವ ಸವಾಲುಗಳಲ್ಲಿ ಒಂದು. ತಾಯಿ ತನ್ನ ಹಾಲನ್ನು ತನ್ನ ಮಗನಿಗೆ ಉಣಿಸಿದರೆ, ತನ್ನ ಬಾಹ್ಯ ಸೌಂದರ್ಯ ಕೊಚ್ಚಿಹೋಗುವುದೆಂದು, ಭಾವಿಸಿದ ಆಧುನಿಕ ತಾಯಿ ಕೇವಲ ಬಾಹ್ಯ ಸೌಂದರ್ಯಕ್ಕೆ ಬೆಲೆ ನೀಡಿ, ಮನೆಯಾಳಿನ ಮೂಲಕ ತನ್ನದೆ ಕರುಳಾದ ಮಗುವಿಗೆ ಎಮ್ಮೆ ಹಾಲನ್ನು ಬಾಟಲಿಯಿಂದ ಕುಡಿಸಿದರೆ, ಕರುಳ ಬಳಿಯ ಸಂಬಂಧ ಕಡಿದು ಹೋಗಿ, ಆ ಮಗುವಿಗೆ ತಾಯಿಯಿಂದ ನಿಸರ್ಗದತ್ತವಾಗಿ ಹರಿದು ಬರುವ ಸಂಸ್ಕೃತಿ ಹೇಗೆ ಬಂದಿತ್ತು. ಬಾಹ್ಯ ಸೌಂದರ್ಯಕ್ಕೆ ಬೆಲೆ ನೀಡಿ ಆಂತರಿಕ ಸೌಂದರ್ಯ ಆಧುನಿಕ ತಾಯಿ ಹಾಳುಮಾಡಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಸಂಘದ ೧೨೯ ನೇ ಸಂಸ್ಥಾಪನೆಯ ದಿನಾಚರಣೆಯ ನಿಮಿತ್ತ ಪ್ರೊ. ಕೆ.ಎಸ್. ಶರ್ಮಾ ಅವರನ್ನು ಸಂಘದ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ದಿ. ಶ್ರೀಮತಿ ಮಲ್ಲವ್ವ ಯಲ್ಲಪ್ಪ ಸಿದ್ನಾಳ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ದತ್ತಿದಾನಿ ಶ್ರೀಮತಿ ಸುಲೋಚನಾ ಸಿದ್ನಾಳ ಮತ್ತು ಮಹದೇವ ಸಿದ್ನಾಳ ದಂಪತಿಗಳು ಉಪಸ್ಥಿತರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ನಾಯಕ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ವಂದಿಸಿದರು. ಇದೇ ಸಂದರ್ಭದಲ್ಲಿ ಕವಿ ಬಿ. ಕೆ. ಹೊಂಗಲ ಹಾಗೂ ಶ್ರೀಮತಿ ಮಧುಮತಿ ಸಣಕಲ್ಲ ಅವರು ತಾಯಿ ಕುರಿತು ಕವನ ವಾಚನ ಮಾಡಿದರು.

೬೦. **ಶ್ರೀಮತಿ ಶಾಂತಾದೇವಿ ಮಾಳವಾಡ ದತ್ತಿ :**

ಕಿತ್ತೂರು ರಾಣಿ ಚನ್ನಮ್ಮಳ ರಾಜ್ಯಭಾರದ ಹಿಂದಿನ ಇತಿಹಾಸವನ್ನು ಕೂಲಂಕುಷವಾಗಿ ನೋಡಿದಾಗ, ನಮ್ಮ ದೇಶದ ಅರಸರು ಬರಿ ತಮ್ಮ ರಾಜ್ಯ ಮತ್ತು ಸಾಮ್ರಾಜ್ಯ ವಿಸ್ತರಿಸುವ ಕನಸಿನೊಂದಿಗೆ ಬೇರೆ ರಾಜ್ಯಗಳ ಮೇಲೆ ಆಕ್ರಮಣ ಮಾಡಿದ್ದನ್ನು ಕಾಣುತ್ತೇವೆ. ಕಿತ್ತೂರ ರಾಣಿ ಚೆನ್ನಮ್ಮಳ ಇತಿಹಾಸವನ್ನು ಓದಿದಾಗ ಪರಕೀಯರಿಂದ ಕಿತ್ತೂರ ನಾಡನ್ನು ರಕ್ಷಿಸಿಕೊಳ್ಳಬೇಕೆಂದು, ಕಿತ್ತೂರು ನಾಡಿನ ಜನತೆಯನ್ನು ಪರತಂತ್ರದಿಂದ ದೂರಿಡಬೇಕೆಂದು, ನಾಡು ಉಳಿಸಿಕೊಳ್ಳುವ ಸಲುವಾಗಿ ಕೆಚ್ಚೆದೆಯ ಕಲೆಯಂತೆ ಹೋರಾಟ ಮಾಡಿದ್ದನು ಕಾಣುತ್ತೇವೆ ಎಂದು ಧಾರವಾಡ ಕ.ವಿ.ವಿಯ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಕೆ. ಗುಡಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀಮತಿ ಶಾಂತಾದೇವಿ ಮಾಳವಾಡ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨೩-೧೦-೨೦೧೮** ರಂದು ಜರುಗಿದ ಕಿತ್ತೂರು ಚನ್ನಮ್ಮ ವಿಜಯೋತ್ಸವ ದಿನಾಚರಣೆ ಹಾಗೂ ಕಾಲೇಜು ವಿದ್ಯಾರ್ಥಿನಿಯರಿಗೆ ಮತ್ತು ಮಹಿಳೆಯರಿಗಾಗಿ ಜರುಗಿದ **'ಕವನ ವಾಚನ ಸ್ಪರ್ಧೆ'**ಯ ಬಹುಮಾನ ವಿತರಣೆಯ ಸಮಾರಂಭದ ಅಧ್ಯಕ್ಷೀಯ ಸ್ಥಾನದಿಂದ ಮುಂದುವರೆದು ಮಾತನಾಡಿದ ಡಾ. ಅನಿತಾ ಕೆ. ಗುಡಿ ಚನ್ನಮ್ಮನ ಇತಿಹಾಸವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಜಾನಪದ ಲೋಕದ ಪದಗಳನ್ನು ಆಲಿಸಬೇಕು, ನಮ್ಮ ಜನಪದರು ರಾಣಿ ಚನ್ನಮ್ಮಳನ್ನು ಅತ್ಯಂತ ಅಭಿಮಾನದಿಂದ ಕೊಂಡಾಡಿ ವೀರವನಿತೆ, ಕೆಚ್ಚೆದೆಯ ಸಾಹಸಗಾರ್ತಿ ಎಂದು ಬಾಯ್ತುಂಬ ಹಾಡಿದ್ದಾರೆ ಮತ್ತು ಕಿತ್ತೂರ ಚನ್ನಮ್ಮನ ವಿಜಯೋತ್ಸವ ದಿನ ಆಚರಿಸಿ ಇತಿಹಾಸ ಸ್ಮರಿಸುತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯ ಶ್ಲಾಘನೀಯ ಎಂದರು.

ಶ್ರೀಮತಿ ಶಾಂತಾದೇವಿ ಮಾಳವಾಡ ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ, ಅವರ ಬದುಕು ಮತ್ತು ಬರಹ ಬರಹಗಾರರಿಗೆ ಅನುಕರಣೀಯವಾಗಿದೆ, ಕೇವಲ ೨ ನೇ ತರಗತಿ ಓದಿದ ಶಾಂತಾದೇವಿ ಮಾಳವಾಡ ಕನ್ನಡ ಸಾಹಿತ್ಯಕ್ಕೆ ಉತ್ಕೃಷ್ಟ ಕೃತಿಗಳನ್ನು ನೀಡಿ, ಕನ್ನಡ ಸಾಹಿತ್ಯ ಲೋಕದ ಹಿರಿಮೆಯನ್ನು ಹೆಚ್ಚಿಸಿದ್ದಾರೆ ಎಂದು ಡಾ. ಅನಿತಾ ಕೆ. ಗುಡಿ ಇದೇ ಸಂದರ್ಭದಲ್ಲಿ ಹೇಳಿದರು.

ಹಿರಿಯ ಕವಿ ಡಾ. ವ್ಹಿ. ಸಿ. ಐರಸಂಗ, ಅತಿಥಿಗಳಾಗಿ ಮಾತನಾಡುತ್ತಾ, ಇತಿಹಾಸ ತಿಳಿಯದೆ ಇರುವವರು ಇತಿಹಾಸ ಸೃಷ್ಟಿ ಮಾಡಲು ಸಾಧ್ಯವಿಲ್ಲ. ಕಿತ್ತೂರ ರಾಣಿ ಚನ್ನಮ್ಮ, ಬೆಳವಡಿ ಮಲ್ಲಮ್ಮ ಆದಿಯಾಗಿ ಎಲ್ಲ ಇತಿಹಾಸ ಪುರುಷರ ಇತಿಹಾಸವನ್ನು ಪದೇ ಪದೇ ಓದಿದಾಗ, ನೈಜ ದೇಶಭಕ್ತಿ ತಾನಾಗಿಯೇ ಹುಟ್ಟುವುದು, ಆದ್ದರಿಂದ ಭವ್ಯ ಭಾರತದ ಕನಸು ಕಾಣುತ್ತಿರುವ ಯುವ ಪೀಳಿಗೆ ಇತಿಹಾಸ ಓದುವ ಅಭಿರುಚಿ ಬೆಳೆಸಿಕೊಳ್ಳಲಿ ಎಂದು ಕರೆ ನೀಡಿದರು.

ಅತಿಥಿ ಸ್ಥಾನದಿಂದ ಸಾಹಿತಿ ಮಹ್ಮದಅಲಿ ಗೂಡೂಬಾಯಿ ಮಾತನಾಡಿ, ಹುಟ್ಟು-ಸಾವಿನ ಮಧ್ಯದ ಮಧುರ ಕ್ಷಣಗಳನ್ನು ಪ್ರತಿಯೊಬ್ಬ ಮನುಷ್ಯ ಎಲ್ಲ ಸಂಕಷ್ಟಗಳನ್ನು ಮೆಟ್ಟಿ ನಿಂತು ಅರ್ಥಪೂರ್ಣವಾಗಿಸಿಕೊಳ್ಳಬೇಕು. ರಾಣಿ ಚನ್ನಮ್ಮ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಳ್ಳದೇ ನಾಡಿಗಾಗಿ ಹೋರಾಟ ಮಾಡಿದ್ದರಿಂದ ಅವರ ಬದುಕು ನಮಗೆ ಗೌರವಯುತ

ಬದುಕಾಗಿ ಕಾಣುತ್ತದೆ. ಕಿತ್ತೂರ ರಾಣಿ ಚನ್ನಮ್ಮಳಂತೆ ನಾವು ನಮ್ಮ ದೇಶಕ್ಕೆ ಏನು ಮಾಡಿದ್ದೇವೆ ಎಂದು ಯೋಚಿಸಿ ಹೆಜ್ಜೆ ಇಡುವ ಕಾಲವಿದು ಎಂದರು.

ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅವರು ಮಾತನಾಡಿ, ಶಾಂತಾದೇವಿ ಮಾಳವಾಡ ಸಾಹಿತ್ಯ ಕ್ಷೇತ್ರದ ಶ್ರೇಷ್ಠ ವ್ಯಕ್ತಿ, ತಮ್ಮ ಬದುಕಿನ ನೋವುಗಳನ್ನು ನುಂಗಿ ಸಮಾಜಕ್ಕೆ ಸಿಹಿಯನ್ನು ನೀಡಿದ ಮಹಾತಾಯಿ ಎಂದು ಹೇಳಿದರು.

ಕವನ ವಾಚನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀಮತಿ ಲಲಿತಾ ಪಾಟೀಲ, ದ್ವಿತೀಯ ಸ್ಥಾನ ಪಡೆದ ಶ್ರೀಮತಿ ಸೀಮಾ ಶಿರಹಟ್ಟಿ ಹಾಗೂ ತೃತೀಯ ಸ್ಥಾನ ಪಡೆದ ಶ್ರೀಮತಿ ಸಂಧ್ಯಾ ಕಳಸಾಪೂರ ಇವರನ್ನು ಅಭಿನಂದಿಸಿ ಬಹುಮಾನ ವಿತರಿಸಲಾಯಿತು. ೨೫ ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ವೇದಿಕೆ ಮೇಲೆ ದತ್ತಿದಾನಿ ಶ್ರೀಮತಿ ಲಲಿತಾ ಮಾಳವಾಡ ಹಾಗೂ ವಿಜಯಕುಮಾರ ಮಾಳವಾಡ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವೀರರಾಣಿ ಕಿತ್ತೂರ ಚನ್ನಮ್ಮಳ ಹಾಗೂ ದಿ. ಶ್ರೀಮತಿ ಶಾಂತಾದೇವಿ ಮಾಳವಾಡ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಸಂಘದ ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವಂದನೆ ಸಲ್ಲಿಸಿದರು.

೬೧. **ರೆ. ಚೆನ್ನಪ್ಪ ಉತ್ತಂಗಿ ಸಂಸ್ಮರಣ ದತ್ತಿ :**

ತಿರುಳಗನ್ನಡದ ತಿರುಕ ಎಂದು ತಮ್ಮನ್ನು ತಾವೇ ಬಣ್ಣಿಸಿಕೊಂಡು, ತಾವು ಕನ್ನಡದ ಸೇವಕ ಎಂದು ಸಾರಿದ ಶ್ರೇಷ್ಠ ಕನ್ನಡ ಸಾಹಿತಿಯೆ ರೆ. ಚನ್ನಪ್ಪ ಉತ್ತಂಗಿಯವರು. ರೆ. ಚನ್ನಪ್ಪ ಉತ್ತಂಗಿಯವರ ಬದುಕು-ಬರಹಗಳನ್ನು ನೋಡಿದಾಗ ಅವರು ಅಂತರ್‌ಧರ್ಮಿಯ ಸೌಹಾರ್ದತೆಯ ಹರಿಕಾರ, ಚಿಂತಕ, ಸಂಶೋಧಕ, ಕ್ರೈಸ್ತಧರ್ಮೋಪದೇಶಕ, ಸಾಹಿತಿ, ಅಸ್ಪೃಶ್ಯತೆಯ ನಿವಾರಣೆಯ ಹೋರಾಟಗಾರ ಹೀಗೆ ಬಹುಮುಖ ಪ್ರತಿಭಾವಂತ ಸಾಧಕ ಎಂಬುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ ಎಂದು ಹುಬ್ಬಳ್ಳಿ ಸಿಟಿ ಅಸೆಂಬ್ಲಿ ಆಫ್ ಗಾಡ್ ಚರ್ಚನ ಹಿರಿಯ ಸಭಾಪಾಲಕರಾದ ರೆ. ಡಾ. ಡ್ಯಾನಿಯೇಲ ಕೋಟಿ ಅವರು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ರೆ. ಉತ್ತಂಗಿ ಚನ್ನಪ್ಪ ದತ್ತಿ ಅಂಗವಾಗಿ ದಿನಾಂಕ ೨೮-೧೦-೨೦೧ ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೆ. ಉತ್ತಂಗಿ ಚನ್ನಪ್ಪ ಅವರ **'ಜೀವನ ಮತ್ತು ಸಾಧನೆ'** ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡಿದ, ರೆ. ಡಾ. ಡ್ಯಾನಿಯೇಲ ಕೋಟಿಯವರು ವ್ಯವಸ್ಥೆಯಲ್ಲಿ ಪ್ರತಿರೋಧ ಮಾಡುವುದಕ್ಕಿಂತ ನಿರ್ಜಿವ ಪುಸ್ತಕಗಳೊಡನೆ ಸಮಯ ಕಳೆಯುವದು ಲೇಸು ಎಂಬ ತತ್ವ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಓದುವ ಗೀಳು ಹಚ್ಚಿಕೊಂಡು ನೆನಪಿನ ಶಕ್ತಿ ಕೊರತೆಯ ಬಾಲಕನೆಂಬ ಅಪವಾದ ಹೊತ್ತಿದ್ದ ಚನ್ನಪ್ಪ ಉತ್ತಂಗಿಯವರು ಮುಂದೆ ಶ್ರೇಷ್ಠ ಸಾಹಿತಿಯಾಗಿ, ಮಹಾಮೇಧಾವಿಯಾಗಿ ಹೊರಹೊಮ್ಮಿದವರು ಎಂದು ಹೇಳಿದರು. ಶರಣರ ಕ್ರಾಂತಿಯ ವಿಚಾರಗಳನ್ನು, ವಚನಗಳನ್ನು ಹಾಗೂ ಸರ್ವಜ್ಞನ ವಚನಗಳನ್ನು ಆಳವಾಗಿ ಅಭ್ಯಸಿಸಿ, ಅವುಗಳ ಪ್ರಭಾವಕ್ಕೆ ಒಳಗಾಗಿ ಅವರ ಕೊನೆಯ ಉಸಿರು ಇರುವವರೆಗೆ ಅವುಗಳನ್ನು ಪಾಲಿಸಿದವರು, ಧರ್ಮ ವ್ಯಾಪಾರದ ಸರಕಲ್ಲ, ಸ್ವಧರ್ಮ ಪ್ರೀತಿಸುವ, ಪರಧರ್ಮ ನಿಂದಿಸುವ ಪ್ರವೃತ್ತಿ ಒಳ್ಳೆಯದಲ್ಲ ಎಂದು ಆಳವಾಗಿ ನಂಬಿದವರು ಉತ್ತಂಗಿ ಚನ್ನಪ್ಪನವರು ಎಂದರು.

ಉತ್ತಂಗಿ ಚನ್ನಪ್ಪನವರ ಜೊತೆ ೧೨ ವರ್ಷಗಳ ಒಡನಾಟದಿಂದಾಗಿ ನಾನು ಪ್ರೇರಿತನಾಗಿರುವೆ, ಸಾಕಷ್ಟು ವಿಷಯಗಳನ್ನು ನಾನು ಅವರ ಒಡನಾಟದಿಂದ ಕಲಿತೆ. ವಚನ ಸಾಹಿತ್ಯವನ್ನು ಕ್ರಮಬದ್ಧವಾಗಿ ಅಭ್ಯಸಿಸುವ ವಿಧಾನ ಅವರಿಂದ ಕಲಿತೆ ಎಂದು ಉತ್ತಂಗಿ ಅಭಿಮಾನಿ ಬಳಗದ ದತ್ತಿದಾನಿಗಳ ಪರವಾಗಿ ಮಾತನಾಡಿದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಎಸ್. ಆರ್. ಗುಂಜಾಳ ಹೇಳಿದರು.

ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅಧ್ಯಕ್ಷ ಸ್ಥಾನದಿಂದ ಮಾತನಾಡಿ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದು ಮತ್ತು ವಿಶ್ವಮಾನವ ಸಂದೇಶ ಸಾರುವುದು ಎಲ್ಲ ಪ್ರವರ್ತಕರು ವಿಶ್ವಕ್ಕೆ ನೀಡಿದ ಸಂದೇಶವಾಗಿದೆ, ಈ ಸಂದೇಶವನ್ನು ಸಂಶೋಧನೆ ಮೂಲಕ ಆಳವಾಗಿ ಅಧ್ಯಯನ ಮಾಡಿ, ಮನುಕುಲಕ್ಕೆ ಮಾರ್ಗದರ್ಶಕ ಸಾಹಿತ್ಯ ನೀಡಿದವರು ಮತ್ತು ಬಸವಾದಿ ಶರಣರ ವಚನ ಸಾಹಿತ್ಯದ ಮೌಲಿಕ ವಿಚಾರಧಾರೆಗಳು ಹಾಗೂ ಏಸುಕ್ರಿಸ್ತರ ಮಾರ್ಗದರ್ಶಕ ತತ್ವಗಳಲ್ಲಿ ಸಾಮ್ಯತೆ ಇದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೆ. ಉತ್ತಂಗಿ ಚನ್ನಪ್ಪ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸಮನೋಜ ಪಾಟೀಲ ವಂದನೆ ಸಲ್ಲಿಸಿದರು. ಮಾರ್ಕಂಡೇಯ ದೊಡಮನಿ ಪ್ರಾರ್ಥನೆ ಮಾಡಿದರು.

೬೨. **ದೇವುಡು ನರಸಿಂಹಶಾಸ್ತ್ರಿ ಉಪನ್ಯಾಸ ದತ್ತಿ :** ದಾನಿಗಳು, ಶ್ರೀ ಗಂಗಾಧರ ದೇವುಡು

ಕನ್ನಡ ಓದುಗರಲ್ಲಿ ಕಾದಂಬರಿಗಳನ್ನು ಓದುವ ಹವ್ಯಾಸ ಕಡಿಮೆಯಾಗಿರುವುದು ಖೇದಕರ ಸಂಗತಿ. ದೇವುಡು ನರಸಿಂಹ ಶಾಸ್ತ್ರಿಗಳು ನೀಡಿದ ಸಾಹಿತ್ಯವು ಸರ್ವಕಾಲಿಕ ಶ್ರೇಷ್ಠ, ಅದ್ವಿತೀಯ ಹಾಗೂ ಪ್ರಸ್ತುತ ಸಾಹಿತ್ಯವಾಗಿದೆ. ನವೋದಯ ಸಾಹಿತ್ಯಕ್ಕೆ ನಾಂದಿ ಹಾಡಿದವರಲ್ಲಿ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಅಗ್ರಗಣ್ಯರು. ದೇವುಡು ನರಸಿಂಹ ಶಾಸ್ತ್ರಿಗಳು ಬರೆದ 'ಅಂತರಾಳ' ಕಾದಂಬರಿ ಕನ್ನಡ ಕಾದಂಬರಿ ಲೋಕದ ಪ್ರಪ್ರಥಮ ಮನೋವಿಜ್ಞಾನ ಕಾದಂಬರಿ ಎಂದು ಖ್ಯಾತಿ ಹೊಂದಿದೆ ಎಂದು ಶ್ರೀ ಶ್ರೀನಿವಾಸ ವಾಡಪ್ಪಿ ಹೇಳಿದರು.

ದೇವುಡು ನರಸಿಂಹ ಶಾಸ್ತ್ರಿ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೩೧-೧೦-೨೦೧೮** ರಂದು ಶ್ರೀ ದೇವುಡು ನರಸಿಂಹ ಶಾಸ್ತ್ರಿಯವರ ಬದುಕು-ಬರಹ' ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಸಾಹಿತಿಗಳಾದ ಶ್ರೀ ಶ್ರೀನಿವಾಸ ವಾಡಪ್ಪಿ ಅವರು, ದೇವುಡು ನರಸಿಂಹ ಶಾಸ್ತ್ರಿಗಳಿಗೆ ಮನೆಯಲ್ಲಿ ಕಿತ್ತುತಿನ್ನುವ ಬಡತವಿದ್ದರೂ ಕೂಡಾ ಲೆಕ್ಕಿಸದೇ ಸಾಹಿತ್ಯ ಕೃಷಿಗಾಗಿ ತಮ್ಮ ಬದುಕನ್ನು ಮೀಸಲಾಗಿರಿಸಬೇಕು ಎಂಬ ಸದಾಶಯದಿಂದ, ಸರಕಾರದಿಂದ ಒಲಿದು ಬಂದ ಸ್ಥಾನಮಾನಗಳನ್ನು ಅತ್ಯಂತ ವಿನೀತವಾಗಿ ತಳ್ಳಿ ಹಾಕಿ, ಕನ್ನಡ ತಾಯಿಯ ನಿಸ್ವಾರ್ಥ ಸೇವೆ ಮಾಡಿದ ದೇವುಡು ನರಸಿಂಹ ಶಾಸ್ತ್ರಿಯವರು ಇಂದಿಗೂ ನಮಗೆ ಆದರ್ಶಪ್ರಾಯವಾಗಿ ಮತ್ತು ಅನುಕರಣೀಯವಾಗಿ ಕಾಣುತ್ತಾರೆ ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಪ್ರತಿಷ್ಠಿತ ಪ್ರಶಸ್ತಿಯನ್ನು ಕನ್ನಡ ಸಾರಸ್ವತಲೋಕದಲ್ಲಿ ಮೊಟ್ಟಮೊದಲು ಪಡೆದವರು ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು. ಆ ಮೂಲಕ ಕನ್ನಡ ಸಾರಸ್ವತಲೋಕದಲ್ಲಿ ಅವಿಸ್ಮರಣೀಯ ಕಾದಂಬರಿಗಳನ್ನು ನೀಡಿದವರು ಎಂಬ ಸ್ಥಾನ ಗಟ್ಟಿಗೊಳಿಸಿದ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು 'ಪುರಾಣ ಪ್ರಪಂಚ'ವನ್ನು ಆಧಾರವಾಗಿಟ್ಟುಕೊಂಡು, ಪುರಾಣ ಪ್ರಪಂಚವನ್ನು ತಮ್ಮ ಕಾದಂಬರಿಗಳಲ್ಲಿ ಮರುಸೃಷ್ಠಿ ಮಾಡಿ ಹೊಸ ಸಮಾಜಮುಖಿ ವಿಚಾರಗಳನ್ನು ತಮ್ಮ ಕಾದಂಬರಿಗಳ ಮೂಲಕ ಕನ್ನಡಿಗರಿಗೆ ನೀಡಿದ್ದಾರೆ. ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಅನಾರೋಗ್ಯದಿಂದಾಗಿ ತಮ್ಮ ಒಂದು ಕಾಲನ್ನು ಕಳೆದುಕೊಂಡರೂ ಕೂಡಾ ದೇವುಡು ನರಸಿಂಹ ಶಾಸ್ತ್ರಿಗಳು ಎದೆಗುಂದದೆ ಕನ್ನಡ ತಾಯಿಯ ಸೇವೆ ಹಾಗೂ ತಮ್ಮ ಬರವಣಿಗೆಯನ್ನು ನಿಲ್ಲಿಸದೇ ಅನುಚಾನವಾಗಿ ಮುಂದುವರೆಸಿಕೊಂಡು ಬಂದರು. ಮಹಾಕ್ಷತ್ರೀಯ, ಮಹಾಬ್ರಾಹ್ಮಣ, ಮಹಾದರ್ಶನ, ಮಯೂರ ಕಾದಂಬರಿಗಳು ಇವರು ನೀಡಿದ ಸರ್ವಶ್ರೇಷ್ಠ ಕೃತಿಗಳಾಗಿವೆ. ಚಲನಚಿತ್ರ ಮತ್ತು ನಾಟಕಗಳಿಗೆ ಸಂಭಾಷಣೆಯನ್ನು ರಚಿಸುವ ಮೂಲಕ ಶ್ರೇಷ್ಠ ಕಾರ್ಯ ಮಾಡಿದ ಇವರು ಚಿರಸ್ಮರಣೀಯರು. ಇವರು ರಚಿಸಿದ ಮಕ್ಕಳ ಸಾಹಿತ್ಯ ಇಂದಿಗೂ ಪ್ರಸ್ತುತವಾಗಿದೆ. ಚಲನಚಿತ್ರ, ಸಾಹಿತ್ಯ, ಪತ್ರಿಕೋದ್ಯಮ, ನಾಟಕ ಮತ್ತು ಕನ್ನಡ ಚಳುವಳಿಯ ನಾಯಕರಾಗಿ ತಮ್ಮ ಬಹುಮುಖ ಪ್ರತಿಭೆಯನ್ನು ಸಮಾಜಕ್ಕೆ ತೋರಿಸಿದವರು ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಎಂದು ಮುಂದುವರೆದು ಮಾತನಾಡಿದ ಶ್ರೀ ಶ್ರೀನಿವಾಸ ವಾಡಪ್ಪಿ ಹೇಳಿದರು.

ಕರ್ನಾಟಕ ರಾಜ್ಯೋತ್ಸವ ಸಂದರ್ಭದ ಮುನ್ನಾದಿನ ನಡೆಯುತ್ತಿರುವ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳ ಸ್ಮರಣೆ ನನಗೆ ಆದರ್ಶಪ್ರಾಯವಾಗಿ ಕಾಣುತ್ತಿದೆ, ಕಾರಣ ನಾನು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ, ಯಾಕೆಂದರೆ ಕರ್ನಾಟಕ ಏಕೀಕರಣ ಚಳುವಳಿ ಆರಂಭಗೊಂಡಾಗ ಮೈಸೂರು ಸಂಸ್ಥಾನದ ರಾಜಾಶ್ರಯದಲ್ಲಿರುವ ಸಾಹಿತಿಗಳು ಮತ್ತು ಜನಪ್ರತಿನಿಧಿಗಳು ಕನ್ನಡ ಏಕೀಕರಣ ಚಳುವಳಿಯನ್ನು ವಿರೋಧಿಸಿದನ್ನು ನಾನು ಇತಿಹಾಸದಲ್ಲಿ ಕಾಣುತ್ತೇವೆ, ಅಂತಹ ಕಠಿಣ ಸಂದರ್ಭದಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ಕರ್ನಾಟಕದ ಏಕೀಕರಣಕ್ಕಾಗಿ ಧ್ವನಿ ಎತ್ತಿದ ಮತ್ತು ದುಡಿದವರಲ್ಲಿ ಪ್ರಮುಖರು, ಮೈಸೂರ ಭಾಗದ ಕರ್ನಾಟಕದ ಏಕೀಕರಣದ ರೂವಾರಿಗಳು ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ನಾವು ಎದೆ ತಟ್ಟಿ ಹೇಳಬಹುದಾಗಿದೆ ಎಂದು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಡಾ. ಜಿ. ಎಂ. ಹೆಗಡೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಹೇಳಿದರು.

ದೇವುಡು ನರಸಿಂಹ ಶಾಸ್ತ್ರಿಗಳ ಬದುಕನ್ನು ನೋಡಿದಾಗ ಕನ್ನಡ-ಕರ್ನಾಟಕದ ಬಗ್ಗೆ ಪ್ರೀತಿ ಹುಟ್ಟುವ ಹಾಗೆ ಸ್ವಾಭಿಮಾನ ಜಾಗೃತವಾಗುವ ಹಾಗೆ ಮಾಡುತ್ತದೆ, ಕರ್ನಾಟಕದಲ್ಲಿ ಕನ್ನಡವೇ ಪ್ರಥಮ ಭಾಷೆ ಆಗಿರಬೇಕು ಎಂದು ಗಟ್ಟಿ ಧ್ವನಿಯಿಂದ ಸಾರಿದ್ದು ಮತ್ತು ಗಡಿನಾಡು ಭಾಗಗಳಲ್ಲಿ ಕನ್ನಡ ಶಾಲೆಯನ್ನು ತೆರೆಯಲೇ ಬೇಕೆಂಬ ಒತ್ತಾಯದ ಚಳುವಳಿ ಮಾಡಿದ್ದು ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಕನ್ನಡ ನಾಡಿಗೆ ಸಲ್ಲಿಸಿದ ಅನುಪಮ ಸೇವೆ ಎಂದು ಮುಂದುವರೆದು ಮಾತನಾಡಿದ ಡಾ. ಜಿ. ಎಂ. ಹೆಗಡೆ ಹೇಳಿದರು.

ಕಾರ್ಯಕ್ರಮದಲ್ಲಿ ದೇವುಡು ನರಸಿಂಹ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ಪ್ರಾಸಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ವಂದನೆ ಸಲ್ಲಿಸಿದರು. ಚನಬಸಪ್ಪ ಅವರಾದಿ ಪ್ರಾರ್ಥನೆ ಮಾಡಿದರು.

೬೩. **ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳ ದತ್ತಿ** : ದಾನಿಗಳು, ಶ್ರೀಮತಿ ಲೀಲಾವತಿ ಸಿದ್ಧಲಿಂಗಶಾಸ್ತ್ರಿ ಹಿರೇಮಠ ಗಾಂಧೀಜಿಯ ಬಗ್ಗೆ ಬಹಳ ಮಾತನಾಡುವುದನ್ನು ಕಾಣುತ್ತೇವೆ. ಈ ರೀತಿ ಮಾತನಾಡುವವರು ಗಾಂಧೀ ಒಬ್ಬ ಸ್ವಾತಂತ್ರ್ಯ ಹೋರಾಟದ ಧೃವತಾರೆ ಎಂದು ಮಾತ್ರ ಗಾಂಧೀ ಚಿತ್ರಣ ನೀಡುತ್ತಾರೆ. ಗಾಂಧೀ ವ್ಯಕ್ತಿಚಿತ್ರಣ ಇಷ್ಟಕ್ಕೆ ಸೀಮಿತವಾಗಿಲ್ಲ, ಅದರಾಚೆ ಗಾಂಧೀಯ ಬಹುದೊಡ್ಡ ವ್ಯಕ್ತಿತ್ವ ಇದೆ. ಗಾಂಧೀಯ ಪೂರ್ಣ

ಜೀವನ ಚರಿತ್ರೆ ಓದಿದಾಗ ಗಾಂಧೀಯ ನೈಜ ವ್ಯಕ್ತಿತ್ವ ಅರ್ಥವಾಗುವುದು. ಪ್ರತಿಯೊಬ್ಬರು ಗಾಂಧೀಯ ಪೂರ್ಣ ಜೀವನ ಓದಲೇಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಡಾ. ಎಂ. ವೈ. ಸಾವಂತ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳ ದತ್ತಿ ಅಂಗವಾಗಿ ದಿನಾಂಕ **೨-೧೧-೨೦೧೮** ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ **'ಶಿಕ್ಷಣದಲ್ಲಿ ಸಂಸ್ಕೃತಿ : ಗಾಂಧೀ ವಿಚಾರ ಧಾರೆ'** ಎಂಬ ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಡಾ. ಎಂ. ವೈ. ಸಾವಂತ, ದೇಶಿಯ ಸಂಸ್ಕೃತಿ ಆಧಾರ, ಮೂಲ ಶಿಕ್ಷಣ ಎಂಬ ಶಿಕ್ಷಣ ನೀತಿಯನ್ನು ಪ್ರತಿಪಾದಿಸಿದವರು ಗಾಂಧೀ, ಶಿಕ್ಷಣ ಎಂಬುದಕ್ಕೆ ಅಂತ್ಯವೆಂಬುದಿಲ್ಲ ಜೀವನದ ಕೊನೆಯವರೆಗೆ ಜ್ಞಾನಾರ್ಜನೆ ಹಸಿವು ಇರಬೇಕು, ಶಿಕ್ಷಣ ವ್ಯಕ್ತಿಯ ನೈತಿಕ ನೆಲೆಗಟ್ಟನ್ನು ಗಟ್ಟಿಗೊಳಿಸಬೇಕು, ಗುಣಮಟ್ಟದ ಶಿಕ್ಷಣ ಇರಬೇಕು, ಚಾರಿತ್ರಿಕ ಶಿದ್ದಿಯನ್ನು ನೀಡದ ಶಿಕ್ಷಣ, ಒಂದು ಶಿಕ್ಷಣವೇ ಅಲ್ಲ, ಶಿಕ್ಷಣ ಆಂತರಿಕ ಸದ್ಗುಣಗಳನ್ನು ಬೆಳೆಸುವುದು, ಆತ್ಮವಿಶ್ವಾಸ ಮೂಡಿಸುವುದು, ಬದುಕು ರೂಪಿಸುವುದು, ಆತ್ಮಸ್ಥೈರ್ಯ, ಅಹಿಂಸಾ ಮಾರ್ಗ, ಪ್ರಾಮಾಣಿಕತೆ ಮತ್ತು ದೇಶಭಕ್ತಿ ಮನುಷ್ಯನಲ್ಲಿ ಉತ್ಪತ್ತಿ ಮಾಡುವುದು ಶಿಕ್ಷಣದ ಮೂಲಆಶಯವಾಗಿರಬೇಕು ಎಂದು ಮುಂದುವರೆದು ಮಾತನಾಡುತ್ತಾ ಹೇಳಿದರು.

ಉನ್ನತ ಶಿಕ್ಷಣ ಸಂಸ್ಥೆಗಳು ನಮ್ಮ ದೇಶದಲ್ಲಿ ಇರಬೇಕು, ಆದರೆ ಅಂತಹ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕು ಹಾಗೂ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸ್ವಚ್ಚತೆ ಪ್ರಮುಖ ಬೋಧನೆಯಾಗಬೇಕು, ಗಾಂಧೀ ಶೈಕ್ಷಣಿಕ ವಿಚಾರಧಾರೆಗಳು ಇಂದಿಗೂ ಪ್ರಸ್ತುತ, ಈ ವಿಚಾರಧಾರೆಗಳನ್ನು ದೇಶ ಪಾಲಿಸಿದಲ್ಲಿ ಖಂಡಿತವಾಗಿ ಶೈಕ್ಷಣಿಕ ಪ್ರಗತಿ ಮತ್ತು ಅಭಿವೃದ್ಧಿ ಸಾಧಿಸಬಹುದಾಗಿದೆ ಎಂದು ಡಾ. ಎಂ. ವೈ. ಸಾವಂತ ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ, ಪ್ರೊ. ಕೆ. ಎಸ್. ಭಸ್ಮೆಯವರು, ಮಹಾತ್ಮರ ವಿಚಾರಧಾರೆಗಳನ್ನು ನಾವು ಓದುತ್ತೇವೆ, ಈ ವಿಚಾರಧಾರೆಗಳನ್ನು ನಾವು ಎಷ್ಟು ಪಾಲಿಸುತ್ತಿದ್ದೇವೆ ಮತ್ತು ಅನುಷ್ಠಾನ ಮಾಡಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದ್ದು ಇಂದಿನ ದಿನಮಾನದ ಅಗತ್ಯವಾಗಿದೆ, ಗಾಂಧಿ ತತ್ವ ಮತ್ತು ವಿಚಾರಧಾರೆಗಳನ್ನು ಪ್ರಯೋಗ ಮಾಡುವಲ್ಲಿ ನಾವು ವಿಫಲವಾಗಿದ್ದೇವೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ಅವುಗಳ ಜಾರಿಗಾಗಿ ಪ್ರಯತ್ನ ಮಾಡುವ ಮನಸ್ಸು ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.  ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿಯವರು ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ನಿರೂಪಿಸಿದರು. ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ವಂದಿಸಿದರು.

ಕಾರ್‍ಯಕ್ರಮದಲ್ಲಿ ಸಂಘದ ಕಾರ್‍ಯಕಾರಿ ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ, ಶಾಂತೇಶ ಗಾಮನಗಟ್ಟಿ ಹಾಗೂ ಎಸ್. ವಿ. ನಾಯಕ ರಾಣೆ, ಶ್ರೀಮತಿ ಮಂಜುಳಾ ಯಲಿಗಾರ, ಜಿ. ಆರ್. ಪುರೋಹಿತ ವಕೀಲರು, ಶ್ರೀನಿವಾಸ ವಾಡಪ್ಪಿ, ಪ್ರೊ. ಎನ್. ಡಿ. ಬಂಡಿವಾಡ,  ಬಿ.ಕೆ. ಹೊಂಗಲ, ಎಂ. ವಾಯ್. ಸಿದ್ನಾಳ ಸೇರಿದಂತೆ ಅನೇಕರು ಭಾಗವಹಿಸಿದ್ದರು.

೬೪. **ಶ್ರೀ ಭಾಲಚಂದ್ರ ಫಾಣೇಕರ ದತ್ತಿ :** ದಾನಿಗಳು, ಶ್ರೀ ಮನೋಹರ ಮತ್ತು ರವೀಂದ್ರ ಫಾಣೇಕರ

ಶ್ಯಾಮನ ತಾಯಿ ಕಾದಂಬರಿ ಮೂಲತಃ ಶ್ಯಾಮಚೀ ಆಯಿ ಎಂಬ ಮರಾಠಿ ಕಾದಂಬರಿಯಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿ. ಪಾಂಡುರಂಗ ಸದಾಶಿವ ಸಾನೆ  ಮೂಲ ಮರಾಠಿ ಕಾದಂಬರಿಯ ಲೇಖಕರು. ಸಾನೆ ಅವರು ಸಾನೆ ಗುರೂಜಿ ಎಂದು ಪ್ರಖ್ಯಾತ ಹೊಂದಿದ ಮಹಾಲೇಖಕರು. ಸಾನೆ ಗುರೂಜಿ ಎಂದರೆ ಇವರು, ಧಾರ್ಮಿಕ ಗುರುಗಳಲ್ಲ, ಬದಲಾಗಿ  ಪ್ರೌಢಶಾಲಾ ಶಿಕ್ಷಕರು. ವಿದ್ಯಾರ್ಥಿ-ಪಾಲಕರ ಅಚ್ಚುಮೆಚ್ಚಿನ ಹೆಸರೇ ಸಾನೆ ಗುರೂಜಿ. ಸಾನೆ ಗುರೂಜಿ ಒಬ್ಬ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರು. ಸಾನೆ ಗುರೂಜಿ ೧೯೩೨ ರಲ್ಲಿ ನಾಸಿಕ ಕಾರಾಗೃಹದಲ್ಲಿದ್ದಾಗ ತಮ್ಮ ತಾಯಿಯ ಪ್ರೀತಿ, ವಾತ್ಸಲ್ಯಗಳಿಂದ ತಮ್ಮ ಬದುಕು ರೂಪಗೊಂಡ ವಿವರಣೆಯನ್ನು ಸಾಂಸ್ಕೃತಿಕ ಕಾದಂಬರಿಯಾಗಿ ರಚಿಸಿದರು. ಸಾನೆ ಗುರೂಜಿ ಮರಾಠಿ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನ ಪಡೆದುಕೊಂಡವರು. ಕಥೆ, ಕಾವ್ಯ, ಪ್ರಬಂಧ, ಕಾದಂಬರಿ, ಚರಿತ್ರೆ ಮತ್ತು ನಾಟಕ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಬರವಣಿಗೆಯ ಮೂಲಕ ಹೆಸರು ಗಳಿಸಿದವರು. ಶ್ರೀಮಂತಿಕೆಯನ್ನು ಕಳೆದುಕೊಂಡು ಬಡತನದ ಬೇಗೆಯಲ್ಲಿ ಬೆಂದು ತಾಯಿಯ ಪ್ರೀತಿ ವಾತ್ಸಲ್ಯ ಮತ್ತು ತಂದೆಯ ಪ್ರೀತಿಯ ಅಂಕುಶಗಳು ತಮ್ಮ ಬಾಲ್ಯದುದ್ದಕ್ಕೂ ಘಟಿಸಿದ ವಿವರಗಳೇ ಶ್ಯಾಮಚೀ ಆಯಿ ಎಂಬ ಭಾವಭರಿತ ಕಾದಂಬರಿಯಾಗಿ ಹೊರಹೊಮ್ಮಿ ಜನಮನ್ನಣೆ ಗಳಿಸಿದ್ದೂ ಅಲ್ಲದೇ ಬಹುಜನಪ್ರಿಯ ಚಲನಚಿತ್ರವಾಗಿಯೂ ಮೂಡಿಬಂದು  ಜನಮಾನಸದಲ್ಲಿ ಇಂದಿಗೂ ಉಳಿದಿದೆ ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆ ಹಾಗೂ ಕಸ್ತೂರಿ ಮಾಸಪತ್ರಿಕೆಯ ವಿಶ್ರಾಂತ ಸಂಪಾದಕ ಹಾಗೂ ಕ.ವಿ.ವ.ಸಂಘದ ಕಾರ್‍ಯಕಾರಿ ಸಮಿತಿ ಸದಸ್ಯರಾದ ಮನೋಜ ಪಾಟೀಲ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಭಾಲಚಂದ್ರ ಘಾಣೇಕರ ದತ್ತಿ ಅಂಗವಾಗಿ ದಿನಾಂಕ ೩-೧೧-೨೦೧೮ ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, **'ಶ್ಯಾಮನ ತಾಯಿ'** ಕಾದಂಬರಿ ಕುರಿತು ಉಪನ್ಯಾಸ ನೀಡುತ್ತಾ, ಶ್ಯಾಮಚೀ ಆಯಿ ಎಂಬ ಭಾವನಾ ಪ್ರಧಾನ ಕೃತಿಯನ್ನು ಶ್ಯಾಮನ ತಾಯಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದವರು ದಿ. ಭಾಲಚಂದ್ರ ಘಾಣೇಕರ ಅವರು. ಭಾಲಚಂದ್ರ ಘಾಣೇಕರ ಈ ಕೃತಿಯಿಂದ ಸರ್ವಶ್ರೇಷ್ಠ ಅನುವಾದಕರಾಗಿ ನಮ್ಮೆದುರು ನಿಲ್ಲುತ್ತಾರೆ.

ಕರ್ನಾಟಕದ ಪ್ರತಿಷ್ಠಿತ ಪ್ರಕಾಶನ ಸಂಸ್ಥೆ **'ಸಮಾಜ ಪುಸ್ತಕಾಲಯ'**ದ ಸಂಸ್ಥಾಪಕರಾದ ಶ್ರೀ ಭಾಲಚಂದ್ರ ಘಾಣೇಕರ ಅವರು ಪ್ರಾತಃಸ್ಮರಣೀಯರು. ರಾಷ್ಟ್ರೀಯ ಶಾಲೆಯಲ್ಲಿ ಓದುತ್ತಿರುವಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವತ್ತ ತಮ್ಮ ಚಿತ್ತಹರಿಸುವುದರ ಜೊತೆಗೆ ಹಲವಾರು ಸ್ವಾತಂತ್ರ್ಯದ ಚಟುವಟಿಕೆಗಳಲ್ಲಿ ತೊಡಗಿ, ಜನರಿಗೆ ಸ್ವಾತಂತ್ರ್ಯದ ಬಗೆಗೆ ಅರಿವು ಮೂಡಿಸುವ ಕೆಲಸ ಮಾಡಿದವರು. ಕರಪತ್ರಗಳನ್ನು ಮುದ್ರಿಸಿ ಹಂಚಿದವರು. ಜೊತೆಗೆ ಸಾಹಿತ್ಯಿಕ ಕಾರ್ಯಗಳಲ್ಲಿಯೂ ಪಾಲ್ಗೊಂಡು ಸಾಹಿತ್ಯ ರಚನೆ, ಪ್ರಕಟಣೆ ಮತ್ತು ಅನುವಾದ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದವರಾಗಿದ್ದರು. ಹೀಗಾಗಿ ಮರಾಠಿಯಲ್ಲಿ ಪ್ರಕಟವಾದ ಸಾನೆ ಗುರೂಜಿ ಅವರ ಕೃತಿ **'ಶ್ಯಾಮಚಿ ಆಯಿ'** ಎಂಬುದನ್ನು **'ಶ್ಯಾಮನ ತಾಯಿ'** ಎಂದು ಕನ್ನಡದಲ್ಲಿ ಅನುವಾದಿಸಿ ಕನ್ನಡ ಓದುಗರ ಗಮನ ಸೆಳೆದವರು ಎಂದು ಮನೋಜ ಪಾಟೀಲರು, ಸಮಾಜ ಪುಸ್ತಕಾಲಯ ಇಂದಿಗೂ ಮಂಚೂಣಿಯ ಪ್ರಕಾಶನ ಸಂಸ್ಥೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಧಾರವಾಡದ ಅನ್ವೇಷಣ ಕೂಟದ ರೂವಾರಿ, ಹಿರಿಯ ಕವಿ ನರಸಿಂಹ ಪರಾಂಜಪೆ ಅವರು ಮಾತನಾಡಿ, ಭಾಲಚಂದ್ರ ಘಾಣೇಕರ ತಮ್ಮ ಬಾಲ್ಯದಲ್ಲಿ ಸಾಕಷ್ಟು ಬಡತನ ಅನುಭವಿಸಿ ಸ್ವಪ್ರತಿಭೆಯಿಂದ ಪ್ರಕಾಶಕರಾಗಿ ಬೆಳೆದು ನಿಂತ ಆದರ್ಶ ವ್ಯಕ್ತಿ, ಭಾಲಚಂದ್ರ ಘಾಣೇಕರ ಅವರು ಕೂಡಾ ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಏಕೀಕರಣ ಚಳುವಳಿಗಾರ, ಮಾತೃ ಭಾಷೆ ಮರಾಠಿಯಾಗಿದ್ದರೂ ಕನ್ನಡವನ್ನು ತಮ್ಮ ಮಾತೃಭಾಷೆಯಂತೆಯೇ ಬಳಿಸಿ ಪ್ರಕಾಶಕರಾಗಿ ಸಾಕಷ್ಟು ಕೃತಿಗಳನ್ನು ಕನ್ನಡಕ್ಕೆ ನೀಡಿದವರು, ತಮ್ಮ ಬಾಲ್ಯದ ನೆಲೆಯನ್ನು ಶ್ಯಾಮಚೀ ಆಯಿ ಕೃತಿಯಲ್ಲಿ ಕಂಡು ಉತ್ತೇಜಿತರಾಗಿ ಅದನ್ನು ಕನ್ನಡಕ್ಕೆ ಕಾಣಿಕೆಯಾಗಿ ನೀಡಿದವರು ಸಮಾಜ ಪುಸ್ತಕಾಲಯದ ಭಾಲಚಂದ್ರ ಘಾಣೇಕರ ಅವರು ಎಂದ ಅವರು, ತನ್ನ ಕೃತಿಗಳು ಹೊರಬರಲು ಕಾರಣರಾದ ಘಾಣೇಕರ ಅವರ ಉಪಕಾರ ಸ್ಮರಿಸಿದರು.

ಕಾರ್‍ಯಕ್ರಮದಲ್ಲಿ ಭಾಲಚಂದ್ರ ಘಾಣೇಕರ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ದತ್ತಿ ದಾನಿಗಳಾದ ಘಾಣೇಕರ ಸಹೋದರರು, ಕುಟುಂಬ ವರ್ಗದವರು ಉಪಸ್ಥಿತರಿದ್ದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ ನಿರೂಪಿಸಿ, ವಂದಿಸಿದರು.

೬೫. **ಪ್ರೊ. ಶಿ. ಶಿ. ಬಸವನಾಳ ದತ್ತಿ :** ದಾನಿಗಳು, ಶ್ರೀ ರವೀಂದ್ರ ಶಿ. ಬಸವನಾಳ

ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ತೆಲಗು ಮಾಧ್ಯಮದಲ್ಲಿ ಓದಿದ್ದ ಪ್ರೊ. ಶಿ. ಶಿ. ಬಸವನಾಳರಿಗೆ ಕನ್ನಡ ಸಾರಸ್ವತ ಲೋಕದ ಸಾಧನೆಗೆ ಅದು ಅಡಚಣೆ ಎನ್ನಿಸಲಿಲ್ಲ, ತಮ್ಮ ತಂದೆಯವರ ಮೂಲಕ ಕನ್ನಡ-ಸಂಸ್ಕೃತ ಭಾಷೆಯನ್ನು ಉತ್ಕೃಷ್ಟ ಮಟ್ಟದಲ್ಲಿ ಆಳವಾಗಿ ಮನೆಯಲ್ಲಿಯೇ ಕಲಿತ ಮಹಾನ್ ಸಾಧಕ ಪ್ರೊ. ಶಿ. ಶಿ. ಬಸವನಾಳರು ಎಂದು ಪುಣೆಯ ಬಸವ ಇಂಟರ್‌ನ್ಯಾಶನಲ್ ಅಂಡರಸ್ಟ್ಯಾಂಡಿಂಗ್ & ರಿಸರ್ಚ್ ಸೆಂಟರ ಚೇರಮನ್ನರು ಮತ್ತು ಬೋಧೆಗಾಂವ ಬಿ. ಫಾರ್ಮಸಿ ಮಹಾವಿದ್ಯಾಲಯ ಪ್ರಾಚಾರ್ಯರು ಹಾಗೂ ಖ್ಯಾತ ಲೇಖಕರಾದ ಡಾ. ಶಶಿಕಾಂತ ಪಟ್ಟಣ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಪ್ರೊ. ಶಿ. ಶಿ. ಬಸವನಾಳ ದತ್ತಿ ಅಂಗವಾಗಿ ದಿನಾಂಕ **೭-೧೧-೨೦೧೮** ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, **'ಪ್ರೊ. ಶಿ. ಶಿ. ಬಸವನಾಳರ ಬದುಕು-ಬರಹ'** ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ, ಡಾ. ಶಿಶಿಕಾಂತ ಪಟ್ಟಣ ಮುಂದುವರೆದು ಮಾತನಾಡುತ್ತಾ, ವೈಯಕ್ತಿಕ ಜೀವನದಲ್ಲಿ ಆದ ನಷ್ಟಗಳನ್ನು ಲೆಕ್ಕಿಸದೆ, ಎದೆಗುಂದದೆ, ಸಮಾಜ ಕಟ್ಟುವ ಕಾಯಕದಲ್ಲಿ ಧೈರ್ಯದಿಂದ ಮುನ್ನುಗಿದವರು ಪ್ರೊ. ಬಸವನಾಳರು, ಪ್ರೊ. ಬಸವನಾಳರು ಮಾಡಿದ ಸೇವೆ ಇಂದಿಗೂ ಅವಿಸ್ಮರಣೀಯ, ಗದ್ಯರೂಪದಲ್ಲಿದ್ದ ವಚನಗಳಿಗೆ ಕಾವ್ಯರೂಪ ನೀಡಿ ವಚನಗಳನ್ನು ಪರಿಸ್ಕರಿಸಿದ ಇವರ ಘನಕಾರ್ಯ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿಯುವಂತಹದ್ದು. ಬಸವಣ್ಣನವರನ್ನು ಆಳವಾಗಿ ಅಧ್ಯಯನ ಮಾಡಿದ ಪ್ರೊ. ಶಿ. ಶಿ. ಬಸವನಾಳರು, ಬಸವಣ್ಣವರನ್ನು ಪ್ರಗತಿಪರ, ವೈಚಾರಿಕ, ಸಮಾಜಮುಖಿ ಚಿಂತಕ ಎಂದು ವ್ಯಾಖ್ಯಾನಿಸಿದ್ದಾರೆ. ವಿದ್ಯಾಸಂಸ್ಥೆಗಳನ್ನು ಕಟ್ಟಬೇಕೆಂಬ ಉದ್ದೇಶದಿಂದ ಸರಕಾರದ ಸೇವೆಗೆ ಸೇರದೆ ಬಸವನಾಳರು ಮಾಡಿದ ತ್ಯಾಗದ ಫಲವೇ ಬೆಳಗಾವಿಯ ಲಿಂಗರಾಜ ಕಾಲೇಜು, ಕೆ.ಎಲ್.ಇ. ಸಂಸ್ಥೆ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಎಂಬುದು ಬಸವನಾಳರ ಜೀವನ ಚರಿತ್ರೆ ಓದಿದಾಗ ತಿಳಿದುಬರುವುದು. ಬಸವನಾಳರ ಸೇವೆಯನ್ನು ನಾವು ಕಿಂಚಿತ್ ಆದರೂ ಮಾಡಬೇಕೆಂದಾದರೆ, ಬಸವನಾಳರ ಅಪ್ರಕಟಿತ ಕೃತಿಗಳನ್ನು ಕೂಡಲೆ ಪ್ರಕಟಗೊಳಿಸುವುದು ಅವಶ್ಯ, ಬಸವನಾಳರ ಹೆಸರಿನಲ್ಲಿ ಟ್ರಸ್ಟ್ ರಚಿಸಿ, ಅವರು ಮಾಡಿದ ಕಾರ್ಯವನ್ನು ಮುಂದುವರೆಸಬೇಕಾದುದು ಸರಕಾರ ಮತ್ತು ಸಮಾಜದ ಕರ್ತವ್ಯ ಎಂದರು.

ಅಧ್ಯಕ್ಷತೆ ವಹಿಸಿದ ಧಾರವಾಡ ಕ.ವಿ.ವಿ. ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಖ್ಯಾತ ಸಿತಾರ ವಾದಕರಾದ ಡಾ. ಮಲ್ಲಿಕಾರ್ಜುನ ತರ್ಲಗಟ್ಟಿ ಮಾತನಾಡಿ, ಬಸವನಾಳರು ಮಹಾನ್ ಕಲಾ ಆರಾಧಕರಾಗಿದ್ದರು,

ಧಾರವಾಡವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡಿದ್ದರು, ಖ್ಯಾತ ಹಿಂದುಸ್ಥಾನಿ ಗಾಯಕರಾದ ಡಾ. ಮಲ್ಲಿಕಾರ್ಜುನ ಮನ್ಸೂರ ಅವರಿಗೆ ವಚನಗಳನ್ನು ಹಾಡಬಹುದು ಎಂದು ಮನವರಿಕೆ ಮಾಡಿಕೊಟ್ಟ ಬಸವನಾಳರು ಡಾ. ಮಲ್ಲಿಕಾರ್ಜುನ ಮನ್ಸೂರರು ವಚನ ಹಾಡುವಂತೆ ಮಾಡಿರುವುದನ್ನು ಕನ್ನಡ ಜನತೆ ಮರೆಯಲು ಅಸಾಧ್ಯ ಎಂದರು.

ದತ್ತಿ ದಾನಿಗಳ ಪರವಾಗಿ ಮಾತನಾಡಿದ, ಖ್ಯಾತ ಸಂಗೀತಗಾರ ಡಾ. ಮೃತ್ಯುಂಜಯ ಶೆಟ್ಟರ, ಪ್ರೊ. ಶಿ. ಶಿ. ಬಸವನಾಳರು ಮಾಡಿದ ವಚನ ಪರಿಷ್ಕರಣೆ ಕಾರ್ಯ ಇಂದಿನ ವಚನಸಾಹಿತ್ಯ ಸಂಶೋಧಕರಿಗೆ ಮಾರ್ಗದರ್ಶಕವಾಗಿದೆ, ಹೊಸ ಸಂಶೋಧಕರು ಪ್ರೊ. ಶಿ. ಶಿ. ಬಸವನಾಳರು ಅಕಾಲಿಕವಾಗಿ ನಮ್ಮನ್ನಗಲಿ ಅಚಾನಕ್ಕಾಗಿ ನಿಲ್ಲಿಸಿದ ವಚನ ಪರಿಷ್ಕರಣೆ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ. ಶಿ,. ಶಿ,. ಬಸವನಾಳರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಹಾಗೂ ಪ್ರೊ. ಮೊನಾಲಿಸ ಅಕ್ಕಿಹಾಳ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ ನಿರೂಪಿಸಿರು. ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೬೬. **ಅದರಗುಂಚಿ ಶಂಕರಗೌಡರ ದತ್ತಿ :** ದಾನಿಗಳು, ರಾಮಣ್ಣ ಮಾಸ್ತರ ಪ್ರತಿಷ್ಠಾನ, ಹುಬ್ಬಳ್ಳಿ.

'ಕೋಟ್ಯಾವಧಿ ದೇಶಭಕ್ತರ ತ್ಯಾಗ–ಬಲಿದಾನಗಳಿಂದ ನಮ್ಮ ದೇಶವು ಸ್ವಾತಂತ್ರ್ಯ ಪಡೆದಿದ್ದು, ದೇಶಕ್ಕಾಗಿ ಸರ್ವಸ್ವಗಳನ್ನು ತ್ಯಾಗ ಮಾಡಿದ ಈ ತ್ಯಾಗ ಜೀವಿಗಳನ್ನು ನಾವು ಸದಾವಕಾಲವೂ ಸ್ಮರಿಸಬೇಕು' ಎಂದು ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ ಹೇಳಿದ್ದಾರೆ.

ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕರ್ನಾಟಕ ಏಕೀಕರಣ ಹೋರಾಟಗಾರ ಅದರಗುಂಚಿ ಶಂಕರಗೌಡರ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ದಿನಾಂಕ **೭–೧೧–೨೦೧೮** ರಂದು **'ಕರ್ನಾಟಕ ಏಕೀಕರಣದಲ್ಲಿ ಶಂಕರಗೌಡರ ಪಾತ್ರ'** ಎಂಬ ವಿಷಯದ ಮೇಲೆ ಅವರು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು. ಜಾನಪದ ವಿದ್ವಾಂಸ, ಶಿಕ್ಷಕ ಡಾ. ರಾಮು ಮೂಲಗಿ (ರಾಮಣ್ಣ ಮಾಸ್ತರ) ಈ ದತ್ತಿ ಇರಿಸಿದ್ದಾರೆ.

ಸುಭಾಸಚಂದ್ರ ಬೋಸರ ಕ್ರಾಂತಿಕಾರಿ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದ ಶಂಕರಗೌಡರು ನಂತರ ಮಹಾತ್ಮಾ ಗಾಂಧೀಜಿಯವರ ಸತ್ಯ, ಶಾಂತಿ, ಅಹಿಂಸಾ ತತ್ವಗಳಿಗೆ ಮಾರುಹೋಗಿ ಆ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. 'ಕ್ರಾಂತಿ ಮತ್ತು ಶಾಂತಿ' ಎಂಬ ಎರಡೂ ಮಾರ್ಗದಲ್ಲಿ ನಡೆದ ಶಂಕರಗೌಡರು ಅಪರೂಪದ ಗಾಂಧೀವಾದಿ ಎಂದು ವರ್ಣಿಸಿದರು.

ಸಮರ್ಪಣಾ ಭಾವನೆ ಮತ್ತು ಆಕ್ರೋಶಗಳಿಂದ ಕಾರ್ಯ ಮಾಡಿದ ಶಂಕರಗೌಡರು ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದರು. ಕರ್ನಾಟಕ ಏಕೀಕರಣ ಚಳುವಳಿ ಬಲು ದೊಡ್ಡ ಚಳುವಳಿಯಾಗಿತ್ತು, ಆ ಚಳುವಳಿಗೆ ಗೌಡರ ಕಾಣಿಕೆ ಬಲು ದೊಡ್ಡದು ಎಂದರು. ದೇಶಭಕ್ತಿಯ ಜೊತೆಗೆ ದೈವೀ ಭಕ್ತಿಯನ್ನು ಬೆಳೆಸಿಕೊಂಡ ಅವರ ಆತ್ಮಶಕ್ತಿ ಬಲುದೊಡ್ಡದು ಎಂದು ಹೇಳಿದ್ದನ್ನು ಸ್ಮರಿಸಿದರು.

ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಶಂಕರಗೌಡರನ್ನು ಸರ್ಕಾರ ಮರೆತಿದ್ದು ನಾಡಿನ ದುರ್ದೈವ ಎಂದ ಸಿದ್ದಣ್ಣವರ ನಾಪತ್ತೆಯಾಗಿರುವ ಶಂಕರಗೌಡರನ್ನು ಹುಡುಕುವುದರಲ್ಲಿ ಕರ್ನಾಟಕ ಎಲ್ಲ ಸರಕಾರಗಳು ವಿಫಲವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿ, ಪ್ರಜಾಪ್ರಭುತ್ವಕ್ಕೆ ಧಕ್ಕೆಯಾದರೆ, ಅದು ಭಾರತಮಾತೆಗೆ ಮಾಡಿದ ಅವಮಾನವಾದಂತಾಗುವುದು, ರಾಜ್ಯ ವಿಭಜನೆಯಾಗದೇ ಅಖಂಡವಾಗಿಯೇ ಇರಬೇಕು. ಗಾಂಧೀಜಿ ಆಶಯದಂತೆ ಗಾಂಧೀ ಗ್ರಾಮಗಳು ಸ್ಥಾಪನೆಯಾಗಬೇಕು. ಶಂಕರಗೌಡರ ಮನೆಯು ಸ್ಮಾರಕವಾಗಬೇಕು ಎಂದೂ ಮಲ್ಲಿಕಾರ್ಜುನ ಸಿದ್ದಣ್ಣವರ ಒತ್ತಾಯಿಸಿದರು.

ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಡಾ. ಎಚ್. ವ್ಹಿ. ಬೆಳಗಲಿ, ವಿರುಪಾಕ್ಷಗೌಡ ಪಾಟೀಲರು ಮಾತನಾಡಿ, ದೇಶಪ್ರೇಮ, ಯುವಜನಾಂಗದ ನಿರ್ಮಾಣದ ಅವಶ್ಯಕತೆಯನ್ನು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ಶಂಕರಗೌಡರ ಹಾಗೂ ಅಂದಾನೆಪ್ಪ ದೊಡ್ಡಮೇಟಿಯವರ ಸ್ಮಾರಕ ನಿರ್ಮಾಣವಾಗಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಅದರಗುಂಚಿ ಶಂಕರಗೌಡರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಡಾ. ಲಿಂಗರಾಜ ಅಂಗಡಿ, ಸುರೇಶಗೌಡ್ರು ಪಾಟೀಲ, ದತ್ತಿದಾನಿ ಡಾ. ರಾಮು ಮೂಲಗಿ ಉಪಸ್ಥಿತರಿದ್ದರು.

ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಅಮೃತಾ ಮಡಿವಾಳ ನಿರೂಪಿಸಿದರು. ಸಿದ್ದು ಹಿರೇಮಠ ವಂದಿಸಿದರು.

೬೭. **ಶ್ರೀ ಆನಂದ ಚಿಗಟೇರಿ ದತ್ತಿ :** ದಾನಿಗಳು, ಶ್ರೀಮತಿ ಶಾರದಾ, ನಿರ್ಮಲಾ ಹಾಗೂ ಮಂಗಳಾ ಚಿಗಟೇರಿ.

ಗಾದೆ ಮಾತುಗಳನ್ನು ಆಧರಿಸಿದ ಕತೆಗಳು ಸಾಮಾಜಿಕ ಸ್ವಾಸ್ಥ್ಯವನ್ನು, ಜಾನಪದ ಸೊಗಡನ್ನು ಒಳಗೊಂಡಿರಬೇಕು. ಕತೆ ಅಬಾಲ ವೃದ್ಧರಿಗೆ ಮನರಂಜನೆ ನೀಡುವುದರ ಜೊತೆಗೆ ಬೌದ್ಧಿಕ ಬೆಳವಣಿಗೆಗೆ

ಕಾರಣವಾಗಬೇಕು ಎಂದು ಡಾ. ವೀಣಾ ಸಂಕನಗೌಡರ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೨೨-೧೧-೨೦೧೮** ರಂದು ನಡೆದ ದಿ. ಆನಂದ ಚಿಗಟೇರಿ ಅವರ ಸ್ಮರಣೆಯಲ್ಲಿ ನಡೆದ ದತ್ತಿ ಕಾರ್ಯಕ್ರಮದಲ್ಲಿ **ಗಾದೆ ಮಾತುಗಳನ್ನಾಧರಿಸಿ ಕತೆ ಹೇಳುವ ಸ್ಪರ್ಧಾ** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕಥಾ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೂ ಪ್ರಸ್ತುತಪಡಿಸುವ ಶೈಲಿ ಕೇಳುಗರನ್ನು ಆಕರ್ಷಿಸುವ ರೀತಿ ಮುಖ್ಯವಾಗಿರಬೇಕು. ಸ್ವಂತದ ವಿಚಾರಗಳನ್ನು ಸೇರಿಸಿ ಪ್ರಚಲಿತ ವಾಸ್ತವ ಸ್ಥಿತಿಯನ್ನು ನಿರೂಪಿಸುವ ರೀತಿಯಲ್ಲಿ ಕತೆ ಹೇಳುವ ಕಲೆಯನ್ನು ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕತೆ ಹೇಳುವವರಿಗೆ ಗಾದೆ ಮಾತುಗಳನ್ನು ತಾವೇ ಆಯ್ಕೆ ಮಾಡಿಕೊಂಡು ಹೇಳುವಂತಾಗಬೇಕು. ಅಂದರೆ ಗಾದೆ ಮಾತುಗಳು ಪುನರಾವರ್ತಿಯಾಗಿ ಚರ್ವಿತ ಚರ್ವಣವಾಗುವ ಅಪಾಯ ತಪ್ಪುತ್ತದೆ. ಕಲೆಗಳು ವೈವಿಧ್ಯಮಯವಾಗಿ ಮೂಡಿ ಬರುತ್ತವೆ ಎಂದು ಅತಿಥಿಗಳಾಗಿ ಆಗಮಿಸಿದ್ದ ಡಯಟ್‌ನ ನಿವೃತ್ತ ಉಪನ್ಯಾಸಕ ಪ್ರೊ. ರಾಮಚಂದ್ರ ಪಾಟೀಲ ಹೇಳಿದರು.

ಇನ್ನೋರ್ವ ಅತಿಥಿ ಹುಬ್ಬಳ್ಳಿ ಕೆ.ಎಲ್.ಇ. ಶಿಕ್ಷಣ ಮಹಾವಿದ್ಯಾಲಯದ ಸಹಪ್ರಾಧ್ಯಾಪಕರಾದ ಡಾ. ಲಿಂಗರಾಜ ಸಿ. ಮುಳ್ಳಳ್ಳಿ ಮಾತನಾಡಿ, ಕತೆಗಳು ಗ್ರಾಮೀಣ ಭಾಷೆಯ ಸೊಗಡಿನೊಂದಿಗೆ ಕೂಡಿರಬೇಕು. ಹೊಸ ಹೊಸ ವಿಚಾರಗಳನ್ನು ಪ್ರಸ್ತುತಪಡಿಸಬೇಕು. ಕತೆಗಳು ಕೇಳುಗರನ್ನು ಆಕರ್ಷಿಸುವಂತಿರಬೇಕು ಎಂದರು.

ದತ್ತಿ ದಾನಿಗಳು ಪರವಾಗಿ ಮಾತನಾಡಿದ ದಿ. ಆನಂದ ಚಿಗಟೇರಿ ಅವರ ಹಿರಿಯ ಸಹೋದರಿ ಡಾ. ವಿ. ಶಾರದಾ ಅವರು ನನ್ನ ತಮ್ಮ ಆನಂದ ಅಪರೂಪದ ಹಾಗೂ ವಿಶಿಷ್ಟ ವ್ಯಕ್ತಿಯಾಗಿದ್ದರು. ತಂದೆ-ತಾಯಿಗಳಿಂದ ಉತ್ತಮ ಸಂಸ್ಕಾರ ಪಡೆದ ಅವರು ಗುರುಭಕ್ತನಾಗಿ ಜೊತೆಗೆ ಶಿಷ್ಯವತ್ಸಲನಾಗುವ ಮೂಲಕ ಜನಾನುರಾಗಿ ಆಗಿದ್ದರು. ಅಕಾಲ ಮರಣಕ್ಕೆ ತುತ್ತಾದ ಆನಂದನ ಸ್ಮರಣೆ ನಿರಂತರವಾಗಿರಲಿ ಎಂಬ ಉದ್ದೇಶದಿಂದ ದತ್ತಿ ಇರಿಸಿದ್ದೇವೆ ಎಂದು ಹೇಳಿದರು. ದಿ. ಆನಂದ ಚಿಗಟೇರಿ ಅವರ ಅಭಿಮಾನಿ ಹುಬ್ಬಳ್ಳಿಯ ಶ್ರೀಮತಿ ಮಾಲತಿ ದೇಶಪಾಂಡೆ ಅಭಿಮಾನದಿಂದ ಭಾವನಾತ್ಮಕವಾಗಿ, ಅಂತಃಕರಣದಿಂದ ಮಾತನಾಡಿದರು.

ಮಹಾನಗರದ ಬೇರೆ ಬೇರೆ ಭಾಗಗಳಿಂದ ಬಂದ ೩೦ ಕ್ಕೂ ಹೆಚ್ಚು ಮಹಿಳಾ ಮಂಡಳಗಳ ಸದಸ್ಯರು **“ಕಾಯಕವೇ ಕೈಲಾಸ’** ಮತ್ತು **‘ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ’** ಎಂಬ ಎರಡು ಗಾದೆ ಮಾತುಗಳನ್ನು ಆಧರಿಸಿದ ಕತೆ ಹೇಳುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವುಗಳಲ್ಲಿ ರಾಧಾಕೃಷ್ಣ ಮಹಿಳಾ ಮಂಡಳದ ರೋಹಿಣಿ ಎಸ್. ರಾವ್ ಪ್ರಥಮ ಸ್ಥಾನ, ಯೋಗ ಮಿತ್ರ ಮಹಿಳಾ ಮಂಡಳದ ಸರಸ್ವತಿ ಭೋಸಲೆ ದ್ವಿತೀಯ ಸ್ಥಾನ ಹಾಗೂ ಬ್ರಹ್ಮಚೈತನ್ಯ ಮಹಿಳಾ ಮಂಡಳದ ಸಂಧ್ಯಾ ದೀಕ್ಷಿತ ತೃತೀಯ ಸ್ಥಾನ ಪಡೆದರು. ಶಾರದಾ ಭಜನಾ ಮಂಡಳದ ಶ್ರೀದೇವಿ ದೇಶಪಾಂಡೆ, ಕದಳಿ ಮಹಿಳಾ ವೇದಿಕೆಯ ಜಯಶೀಲಾ ಹಿರೇಮಠ ಹಾಗೂ ಸ್ನೇಹ ಬಳಗದ ಸುಜಾತಾ ಹಾನಗಲ್ ಸಮಾಧಾನಕರ ಬಹುಮಾನ ಹಂಚಿಕೊಂಡರು. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಚೇರಿ ಅಧೀಕ್ಷಕ ಶಿ.ಮ. ರಾಚಯ್ಯನವರ ಮತ್ತು ನಿರ್ಮಲಾ ಚಿಗಟೇರಿ ಪುಷ್ಪ ನೀಡಿ ಅತಿಥಿಗಳನ್ನು ಗೌರವಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ) ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಿವಾನಂದ ಭಾವಿಕಟ್ಟಿ ಹಾಗೂ ದಿ. ಆನಂದ ಚಿಗಟೇರಿ ಅವರ ತಂದೆ ಸಿ. ವೀರಬಸಪ್ಪ, ಸೇರಿದಂತೆ ಕುಟುಂಬ ವರ್ಗ, ಬಂಧು-ಬಳಗ ಸೇರಿದಂತೆ ಅನೇಕರ ಭಾಗವಹಿಸಿದ್ದರು. ಅಲ್ಪೋಪಹಾರದೊಂದಿಗೆ ಕಾರ್ಯಕ್ರಮ ಮುಗಿಯಿತು.

೬೮. **ಮಕ್ಕಳ ಮನೆ ದತ್ತಿ** : ದಾನಿಗಳು, ಶ್ರೀ ಈಶ್ವರ ಕಮ್ಮಾರ, ಕಾರ್ಯದರ್ಶಿ, ಮಕ್ಕಳಮನೆ, ಧಾರವಾಡ

೬೯. **ದಿ. ಶ್ರೀ ಗುರಪ್ಪ ಬೆಲ್ಲದ ದತ್ತಿ** : ದಾನಿಗಳು, ಶ್ರೀ ಮಹೇಶ ಸಿ. ಬೆಲ್ಲದ

ಲಿಂಗಾಯತರು ಹಿಂದು ಧರ್ಮದ ಹೊರಗೆ ಇದ್ದವರು. ಆದ್ದರಿಂದ ಹಿಂದು ಧರ್ಮವನ್ನು ಒಡೆಯುವ ಪ್ರಮಯವೇ ಉದ್ಭವಿಸುವುದಿಲ್ಲವೆಂದು ಕ.ವಿ.ವಿ. ತತ್ವಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಎನ್. ಜಿ. ಮಹದೇವಪ್ಪ ಇಂದಿಲ್ಲಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ದಿ. ಶ್ರೀ ಗುರಪ್ಪ ಬೆಲ್ಲದ ದತ್ತಿ ಅಂಗವಾಗಿ ದಿನಾಂಕ **೧-೧೨-೨೦೧೮** ರಂದು ಆಯೋಜಿಸಿದ್ದ **ಲಿಂಗಾಯತ-ವೀರಶೈವ ಧರ್ಮ** ವಿಷಯ ಕುರಿತಾಗಿ ಅವರು ಮಾತನಾಡುತ್ತಿದ್ದರು.

ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳಿಂದಾಗಿ ಬಸವಣ್ಣನವರ ನೇತೃತ್ವದಲ್ಲಿ ಲಿಂಗಾಯತ ಧರ್ಮ ಆಚರಣೆಯಲ್ಲಿ ಬಂದಿತ್ತು. ಶೂದ್ರರು ಮತ್ತು ಅತೀ ಶೂದ್ರರು ಅಸ್ಪೃಶ್ಯರು ಇವರಿಗೆ ಸಮಾಜದಲ್ಲಿ ಸಮಾನತೆಯ ಆಚರಣೆಯಾಗಲಿ ಇಲ್ಲವೆ ಆಸ್ತಿ ಸೇರಿದಂತೆ ವಿವಿಧ ಹಕ್ಕುಗಳನ್ನು ಕೂಡ ನಿರಾಕರಿಸಲಾಗಿತ್ತು. ಶೂದ್ರರು, ಅಸ್ಪೃಶ್ಯರು, ಸ್ತ್ರೀಯರಿಗೆ ಮೋಕ್ಷ ಇಲ್ಲವೆಂಬ ಕಂದಾಚಾರವನ್ನು ಮೇಲ್ವರ್ಗದವರು ಹೇಳಿದ್ದರೆಂದು ಅವರು ಹೇಳಿದರು. ಬಸವಣ್ಣನವರ

ಧರ್ಮವನ್ನು ವಿರೋಧಿಸುವವರು ವೀರಶೈವರಾದರೆ ಅವರೇ ನಿಜಕ್ಕೂ ಧರ್ಮವನ್ನು ಒಡೆದ ಆಪಾದನೆಯನ್ನು ಪಡೆಯಬೇಕಾಗುತ್ತದೆ 'ಮಗುವನ್ನು ಚಿವುಟುವುದು ಮತ್ತು ತೊಟ್ಟಿಲು ತೂಗುವುದು' ಒಟ್ಟಿಗೆ ಎರಡೂ ಕ್ರಿಯೆಗಳನ್ನು ವೀರಶೈವ ಧರ್ಮಗುರುಗಳು ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ಇವರಿಗೆ ಇಡೀ ಲಿಂಗಾಯತ ಸಮಾಜವನ್ನು ಒಗ್ಗೂಡಿಸುವ ಸಾಧ್ಯತೆ ಇತ್ತು. ಆದರೆ ಅದನ್ನು ಮಾಡದೇ ಒಡೆಯುವ ಕಾರ್ಯಕ್ಕೆ ಮುಂದಾದರು ಎಂದು ಡಾ. ಮಹಾದೇವಪ್ಪ ಆಪಾದಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮಾನಸಿಕ ಆರೋಗ್ಯ ಅಧಿಕಾರಿಗಳು (ನಿ) ಡಾ. ಶಿವಶಂಕರ ಪೋಳ ಮಾತನಾಡುತ್ತ, ಹಿಂದು ಧರ್ಮ ಇತ್ತೆಂಬುದಕ್ಕೆ ಯಾವುದೆ ಆಧಾರಗಳೇ ಇಲ್ಲ. ಈ ಶಬ್ಧ ಬಳಕೆಯನ್ನು ವೀರಸಾವರಕರ ಎಂಬ ಅಪ್ಪಟ ನಾಸ್ತಿಕ ತಮ್ಮ ಪುಸ್ತಕಗಳಲ್ಲಿ ಬಳಕೆಗೆ ತಂದ ಎಂದು ಅವರು ಹೇಳಿದರು. ಭಾರತದಲ್ಲಿ ಹಿಂದು ಧರ್ಮ ಅಸ್ತಿತ್ವದಲ್ಲಿ ಇದ್ದಿರಲೆ ಇಲ್ಲ. ಇಲ್ಲದ ಧರ್ಮಕ್ಕೆ ಭೌಗೋಲಿಕ ಮತ್ತು ಶಾಬ್ಧಿಕ ಆಡಂಬರವನ್ನು ಕೊಡಲಾಗುತ್ತದೆ ಎಂದು ಡಾ. ಪೋಳ ಟೀಕಿಸಿದರು. ೧೨ ನೇ ಶತಮಾನದಲ್ಲಿ ಬಸವಣ್ಣನವರಿಂದ ಸ್ಥಾಪಿತವಾಗಿದ್ದ ಲಿಂಗಾಯತ ಧರ್ಮವೇ ನಿಜವಾಗಿ ಮಾನವತಾವಾದ ಧರ್ಮವಾಗಿದೆ ಎಂದ ಅವರು ಹೇಳಿದರು.

ಹಿಂದಿನ ಶಾಸಕ ಚಂದ್ರಕಾಂತ ಗುರಪ್ಪ ಬೆಲ್ಲದ ಮಾತನಾಡಿ, ಅಣ್ಣ ಬಸವಣ್ಣನವರ ಕಾಲದಲ್ಲಿಯ ಅನುಭವ ಮಂಟಪದ ತತ್ವಗಳೆ ಡಾ. ಬಿ. ಆರ್. ಅಂಬೇಡಕರ ಅವರು ರಚಿಸಿರುವ ಸಂವಿಧಾನದ ಮೂಲತತ್ವಗಳಾಗಿವೆ ಎಂದು ಹೇಳಿದರು. ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮ ಮತ್ತು ಸಮಾಜವನ್ನು ಒಡೆಯುತ್ತಿದ್ದಾರೆಂದು ದೂರಿದರು.

ಕುಮಾರಿ ರೀಚಾ ಮಹೇಶ ಬೆಲ್ಲದ ಪ್ರಾರ್ಥನೆ ಹಾಡಿದರು. ಕ.ವಿ.ವ.ಸಂಘದ ಕಾರ್ಯಾದ್ಯಕ್ಷ ಶಿವಣ್ಣ ಬೆಲ್ಲದ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದತ್ತಿದಾನಿಗಳಾದ ಪ್ರಶಾಂತ ಮತ್ತು ಮಹೇಶ ಬೆಲ್ಲದ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ದಿ. ಗುರಪ್ಪ ಬೆಲ್ಲದರವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ವೇದಿಕೆ ಮೇಲೆ ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರು. ಸಭೆಯಲ್ಲಿ ಸಂಘದ ಗೌರವ ಉಪಾಧ್ಯಕ್ಷ ಸೇತುರಾಮ ಹುನಗುಂದ ಮತ್ತು ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಉಪಸ್ಥಿತರಿದ್ದರು.

೭೦. **ಶ್ರೀಮಾನ ಬಸಪ್ಪ ಶ. ಮುಂದಿನಮನಿ ಸ್ಮರಣೆ ದತ್ತಿ:** ದಾನಿಗಳು:ಸದಾನಂದ ಮತ್ತು ದಯಾನಂದ ಬಿ. ಮುಂದಿನಮನಿ ಸಹೋದರರು

ಕರಡು ಸ್ಥಿತಿಯಲ್ಲಿರುವ ಹೊಸ ಕೃಷಿ ಕಾನೂನು ಒಂದು ವೇಳೆ ಜಾರಿಗೆ ಬಂದರೆ ದೇಶದ ಶೇಕಡಾ ೮೦ ರಷ್ಟು ಭೂಮಿಯನ್ನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರು ನಿರ್ನಾಮವಾಗಿ ಹೋಗುತ್ತಾರೆ ಎಂದು ಹೊಸತು ಮಾಸಪತ್ರಿಕೆ ಸಂಪಾದಕ ಮತ್ತು ಕಮ್ಯೂನಿಷ್ಟ ಪಕ್ಷದ ಧುರೀಣ ಡಾ. ಸಿದ್ಧನಗೌಡ ಪಾಟೀಲ ಇಂದಿಲ್ಲಿ ಎಚ್ಚರಿಕೆ ನೀಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ದಿನಾಂಕ **೨-೧೨-೨೦೧೮** ರಂದು ಆಯೋಜಿಸಿದ್ದ ಬಸಪ್ಪ ಮುಂದಿನಮನಿ ಸ್ಮರಣೆ ದತ್ತಿ ಕಾರ್ಯಕ್ರಮದಲ್ಲಿ **'ಉಳುವಾ ಯೋಗಿ ಸಂಕಷ್ಟದಲ್ಲಿ'** ಎಂಬ ವಿಷಯದ ಬಗ್ಗೆ ಅವರು ಉಪನ್ಯಾಸ ನೀಡುತ್ತಿದ್ದರು.

ಈ ಹಿಂದೆ ವಿದೇಶಿಯರನ್ನು ಮತ್ತು ವಿದೇಶಿ ಕಂಪನಿಗಳನ್ನು 'ಚಲೇಜಾವ' ಮಾಡಿದ ನಾವು ಈಗಿನ ಸರಕಾರದ ನೀತಿಯಂತೆ ಇವರನ್ನು 'ಆವೋ' ಎಂದು ಆತ್ಮೀಯವಾಗಿ ಕರೆಯುತ್ತಿದ್ದೇವೆ ಎಂದವರು ವ್ಯಂಗ್ಯವಾಗಿ ನುಡಿದರು. ಈಗ ಕಂಪನಿಗಳೇ ಕೃಷಿ ಮಾಡುವ ಪರಿಸ್ಥಿತಿ ಹೊಸ ಕಾನೂನಿನಂತೆ ಬರಬಹುದು ಸಣ್ಣ ರೈತರು ತಮ್ಮ ಭೂಮಿಯನ್ನು ಗುತ್ತಿಗೆ ಮೇಲೆ ಸಾಗುವಳಿ ಇಲ್ಲವೆ ಮಾರಲೂಬಹುದು ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದರು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇರುವ ಶೇಕಡಾ ೯೦ ರಷ್ಟು ಹಣ ಜನಸಾಮಾನ್ಯರದ್ದು. ಆದರೆ, ರೈತರ ಕೃಷಿ ಸಾಲ ಮನ್ನಾಕ್ಕೆ ಸಬೂಬು ಹೇಳುವ ಸರಕಾರ ಅಂಬಾನಿ, ಬಜಾಜ್ ಅಂತಹ ಬಂಡವಾಳಶಾಹಿಗಳ ಕೋಟಿ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡುತ್ತಿರುವುದು ದೊಡ್ಡ ವಿಪರ್ಯಾಸ ಎಂದು ಟೀಕಿಸಿದರು.

೨೦೧೧ರ ಗಣತಿ ಪ್ರಕಾರ ಕೃಷಿ ಮೇಲೆ ಅವಲಂಬಿತರಾಗಿರುವವರ ಸಂಖ್ಯೆ  ಶೇ ೪೯ ಕ್ಕೆ ಕುಸಿದಿದೆ. ಕೃಷಿ ಕಾರ್ಮಿಕರು ಈಗ ಹಳ್ಳಿಗಳನ್ನು ಬಿಟ್ಟು ಗಾರೆ, ಇಟ್ಟಂಗಿ ಮತ್ತು ಕಟ್ಟಡ ಕಾರ್ಮಿಕರಾಗಿ ಪರಿವರ್ತನೆ ಹೊಂದುತ್ತಿದ್ದಾರೆ. ವೈಜ್ಞಾನಿಕ ಆಧಾರದ ಮೇರೆಗೆ ಕೃಷಿ ವೆಚ್ಚದ ಶೇ ೫೦ ರಷ್ಟು ಹೆಚ್ಚಿನ ದರವನ್ನು ಕೃಷಿ ಉತ್ಪನ್ನಗಳಿಗೆ ನಿಗದಿಪಡಿಸಬೇಕೆಂದು ಡಾ. ಸ್ವಾಮಿನಾಥನ್ ಆಯೋಗ ಈ ಹಿಂದೆ ಶಿಫಾರಸ್ಸು ಮಾಡಿತ್ತು. ಆದರೆ, ಈಗ ಅದು ಆಗುತ್ತಿಲ್ಲ. ಈ ಎಲ್ಲ ಸ್ಥಿತಿಗಳ ಹಿನ್ನೆಲೆಯಲ್ಲಿ ರೈತ ಈಗಾಗಲೇ ನೇಗಿಲು ಕಳೆದುಕೊಂಡಿದ್ದಾನೆ. ಇನ್ನು ಭೂಮಿ ಕಳೆದುಕೊಳ್ಳುವ ಸ್ಥಿತಿ ಸನಿಹದಲ್ಲಿದೆ ಎಂದವರು ಹೇಳಿದರು. ರೈತರಿಗಾಗುತ್ತಿರುವ ಈ ಎಲ್ಲ ಅನ್ಯಾಯಗಳನ್ನು ಪ್ರತಿಭಟಿಸುವ ಕಾರ್ಯ ಸುಶಿಕ್ಷಿತ ಮತ್ತು ಪ್ರಗತಿಪರ ರೈತರಿಂದ ಆಗಬೇಕಿದ್ದು, ಇದಕ್ಕಾಗಿ ಜನಾಂದೋಲನ ನಡೆಯಬೇಕಾಗಿದೆ ಎಂದೂ ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ನ್ಯಾಯವಾದಿ ಹಾಗೂ ಧಾರವಾಡ ಲಾ ಅಕಾಡೆಮಿ ಅಧ್ಯಕ್ಷ ಕೆ.ಬಿ. ನಾವಲಗಿಮಠ ಅವರು ಮಾತನಾಡಿ, ರೈತರ ಇಂದಿನ ಸ್ಥಿತಿ ಎಚ್ಚರಿಕೆಯ ಗಂಟೆಯಾಗಿದೆ. ಕೃಷಿ ಈಗ ವ್ಯವಹಾರವಾಗಿ ಬೆಳೆದಿದ್ದೇ ಇಂದಿನ ಎಲ್ಲ ಸಮಸ್ಯೆಗಳಿಗೆ ಕಾರಣವಾಗಿದೆ ಎಂದರು. ಹೊಸ ಕೃಷಿ ಕಾನೂನು ಜಾರಿಗೆ ಬರಲಾಗದಂತೆ ನೋಡುವ ಜವಾಬ್ದಾರಿ ಪ್ರತಿ ಭಾರತೀಯರ ಮೇಲಿದೆ ಎಂದವರು ಹೇಳಿದರು. ಗಾಂಧೀಜಿಯವರ ರಾಮರಾಜ್ಯ ಕಲ್ಪನೆಯ ಕನಸು ನನಸು ಮಾಡುವಲ್ಲಿ ಪ್ರತಿಯೊಬ್ಬರ ಪಾತ್ರವೂ ಇದೆ ಎಂದು ನಾವಲಗಿಮಠರು ಹೇಳಿದರು. ಪ್ರಶಾಂತ ಕುಲಕರ್ಣಿ ವಕೀಲರಿಂದ ಪ್ರಾರ್ಥನೆ. ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಅವರಿಂದ ಸ್ವಾಗತ, ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ಅವರಿಂದ ಗ್ರಂಥ ಸಮರ್ಪಣೆ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಬಸವಪ್ರಭು ಹೊಸಕೇರಿ ಅವರಿಂದ ಪ್ರಾಸ್ತಾವಿಕ ಭಾಷಣ ನಡೆಯಿತು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರು. ನಿಂಗಣ್ಣ ಕುಂಟಿ ಆಭಾರ ಮನ್ನಿಸಿದರು. ದತ್ತಿ ದಾನಿ ಸದಾನಂದ ಮುಂದಿನಮನಿ ಹಾಗೂ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆ ಮೇಲೆ ಉಪಸ್ಥಿತರಿದ್ದರು.

೭೧. **ನ್ಯಾಯವಾದಿ ಶ್ರೀ ಎಂ. ಜಿ. ಅಗಡಿ ದತ್ತಿ :** ದಾನಿಗಳು, ಶ್ರೀ ಬಾಬಣ್ಣ ಅಗಡಿ

ವಕೀಲರು ನೈತಿಕ ಮೌಲ್ಯಗಳ ರಕ್ಷಕರು ಆಗುವ ಮೂಲಕ ಇಂಥ ಗುಣಗಳ ಪ್ರಾತಿನಿಧ್ಯವನ್ನು ಸಮಾಜದಲ್ಲಿ ಹೆಚ್ಚಿಸಬೇಕೆಂದು ಹೈಕೋರ್ಟ್ ನ್ಯಾಯಮೂರ್ತಿ ಬಿ.ಎ. ಪಾಟೀಲ ಇಂದಿಲ್ಲಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಹಿರಿಯ ನ್ಯಾಯವಾದಿ ಎಂ.ಜಿ. ಅಗಡಿ ಸಂಸ್ಮರಣೆ ದತ್ತಿ ನಿಮಿತ್ತ ವಕೀಲರ ದಿನಾಚರಣೆ ಅಂಗವಾಗಿ ದಿನಾಂಕ **೩-೧೨-೨೦೧೮** ರಂದು ನಡೆದ ಸಮಾರಂಭದಲ್ಲಿ **'ತೀವ್ರ ಬದಲಾಗುತ್ತಿರುವ ದಿನಮಾನಗಳಲ್ಲಿ ವಕೀಲಿ ವೃತ್ತಿ'** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಿದ್ದರು.

ಸುಳ್ಳು ಕೇಸುಗಳನ್ನು ಹಿಡಿದು ಅದನ್ನು ಗೆಲ್ಲುವಲ್ಲಿಯೇ ತಮ್ಮ ಪ್ರಾವಿಣ್ಯತೆಯನ್ನು ಹೆಚ್ಚಿಸಿಕೊಳ್ಳುವುದರ ಬದಲು ಸಂಬಂಧಿಸಿದ ಪ್ರಕರಣಗಳನ್ನು ಪ್ರಾಮಾಣಿಕತೆಯಿಂದ ನೋಡಬೇಕಲ್ಲದೆ ಅದರಲ್ಲಿ ಸತ್ಯದ ಸ್ಥಿರೀಕರಣ ಇದ್ದರೆ ಮಾತ್ರ ವಕಾಲತ್ತು ವಹಿಸುವುದು ಸೂಕ್ತ ಎಂದು ಅವರು ಸಲಹೆ ನೀಡಿದರು.

ವಕೀಲರಿಗೆ ಸತತ ಅಧ್ಯಯನ ಅಗತ್ಯ. ವಾದಗಳಲ್ಲಿ ಭಾವನೆಗಳನ್ನು ಜಾಣ್ಮೆಯಿಂದ ಬಳಸುವುದು, ವಾಕ್ ಸಾಮರ್ಥ್ಯ, ರಚನಾತ್ಮಕತೆ ಇದರ ಜೊತೆಗೆ ತಮ್ಮ ಮಾತಗಳಿಂದ ಎದುರು ಪಕ್ಷದ ವಕೀಲರನ್ನು ಸಹ ಪ್ರಭಾವಗೊಳಿಸುವ ಚಾಕಚಕ್ಯತೆ ಬೇಕೆಂದು ಅವರು ಹೇಳಿದರು. ಮಾನವೀಯತೆ ಬೆಳೆಸಿಕೊಳ್ಳುವುದು ಅತ್ಯುತ್ತಮ ವಕೀಲರ ಲಕ್ಷಣ ಎಂದು ಹೇಳಿದ ನ್ಯಾಯಮೂರ್ತಿ ಬಿ.ಎ. ಪಾಟೀಲರು ಹಿರಿಯ ನ್ಯಾಯವಾದಿ ಎಂ.ಜಿ ಅಗಡಿಯವರು ಎಲ್ಲ ಕಾಲಕ್ಕೂ ಸಲ್ಲುವ ಆದರ್ಶ ವಕೀಲರು ಎಂದರು.

ಗೌರವ ಅತಿಥಿಗಳಾಗಿದ್ದ ಹೈಕೋರ್ಟಿನ ನ್ಯಾಯಮೂರ್ತಿ ಎ.ಎಸ್. ಬೆಳ್ಳುಂಕೆ ಮಾತನಾಡಿ, ವಕೀಲಿ ವೃತ್ತಿಯ ಗಾಂಭೀರ್ಯವನ್ನು ಮೊದಲು ಅರ್ಥೈಸಿಕೊಳ್ಳಬೇಕು. ಇದೊಂದು ಉದಾತ್ತ ವೃತ್ತಿಯಾಗಿದ್ದು, ವಕಾಲತ್ತು ವಹಿಸಿಕೊಳ್ಳುವ ಮೊದಲು ಮನವರಿಕೆ ಮಾಡಿಕೊಂಡು ನ್ಯಾಯಾಲಯಕ್ಕೆ ಮನಗಾಣಿಸಬೇಕೆಂದು ಹೇಳಿದರು. ಇಂದಿನ ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ದಿನಗಳಲ್ಲಿ ಒಳ್ಳೆಯ ವಕೀಲರು ಆಗುವುದು ಶ್ರಮದಾಯಕವಾಗಿದೆ. ಆದರೆ, ಮೌಲ್ಯಗಳನ್ನು ಎತ್ತಿ ಹಿಡಿಯುವ ವಕೀಲರು ಶಾಶ್ವತವಾಗಿ ತಮ್ಮ ಕಾರ್ಯ ಸಾಧನೆ ಮಾಡಬಲ್ಲರೆಂದು ಅವರು ಹೇಳಿದರು. ಹಿಂದಿನ ಕಾಲದಲ್ಲಿ ಕಕ್ಷಿದಾರರಿಂದ ಶುಲ್ಕವನ್ನು ಮೊದಲು ವಕೀಲರು ಕೇಳುತ್ತಿರಲಿಲ್ಲ. ಈಗ ಅದು ಪ್ರಾರಂಭಕ್ಕೇ ಪ್ರಾರಂಭಗೊಂಡಿದೆ ಎಂದು ನ್ಯಾಯಮೂರ್ತಿಗಳು ಹೇಳಿ ವಿಷಾದ ವ್ಯಕ್ತಪಡಿಸಿದರು.

**ಕೋರ್ಟ್ ಬಹಿಷ್ಕಾರ ಸರಿಯಲ್ಲ :** ಸಣ್ಣ ಪುಟ್ಟ ಕಾರಣಗಳಿಗೆ ಎಲ್ಲ ನ್ಯಾಯಾಲಯಗಳ ಬಹಿಷ್ಕಾರ ಸರಿಯಾದ ಕ್ರಮ ಅಲ್ಲ ಎಂದು ನ್ಯಾಯಮೂರ್ತಿ ಬೆಳ್ಳುಂಕೆ ಅವರು ಇದೇ ಕಾಲಕ್ಕೆ ಅಭಿಪ್ರಾಯಪಟ್ಟರು. ಸಂಬಂಧಿಸಿದ ನ್ಯಾಯಾಲಯಗಳಿಗೆ ಮಾತ್ರ ಅದು ಅವಶ್ಯವೆನಿಸಿದರೆ ಬಹಿಷ್ಕಾರ ಹಾಕಬಹುದೇನೋ? ಆದರೆ ಎಲ್ಲ ನ್ಯಾಯಾಲಗಳ ಬಹಿಷ್ಕಾರದಿಂದ ಕಕ್ಷಿದಾರರು ಹಾಗೂ ಅಪ್ರತ್ಯಕ್ಷವಾಗಿ ಸರಕಾರವೂ ನಷ್ಟಕ್ಕೆ ಗುರಿಯಾಗುತ್ತಿದೆ ಎಂದು ಅವರು ಹೇಳಿದರು.

**ದಂತಕಥೆಗಳು:** ಹಿರಿಯ ನ್ಯಾಯವಾದಿ ಮತ್ತು ಧಾರವಾಡ ಲಾ ಅಕಾಡೆಮಿ ಅಧ್ಯಕ್ಷ ಕೆ.ಬಿ. ನಾವಲಗಿಮಠ ಅವರು ಅಧ್ಯಕ್ಷತೆ ವಹಿಸಿದ್ದರು. ತಮಗೆ ಹಿರಿಯ ನ್ಯಾಯವಾದಿಗಳಾಗಿದ್ದ ದಿ. ಸಿ.ಬಿ. ಪಾಟೀಲ, ದಿ. ಜಿ.ಎಂ. ಪಾಟೀಲ, ದಿ. ಎಂ.ಜಿ. ಅಗಡಿ, ದಿ. ಐ.ಜಿ ಹಿರೇಗೌಡರ ಅವರನ್ನು ಹಾಗೂ ಅವರ ನ್ಯಾಯಪರಂಪರೆಯ ಪ್ರಭುದ್ಧತೆಯನ್ನು ಹೃದಯಸ್ಪರ್ಶಿಯಾಗಿ ನಾವಲಗಿಮಠ ಸ್ಮರಿಸಿಕೊಂಡು ಧಾರವಾಡ ವಕೀಲರ ಇತಿಹಾಸದಲ್ಲಿ ಇವರು ದಂತಕಥೆಗಳಾಗಿದ್ದಾರೆ ಎಂದರು.

ಪಬ್ಲಿಕ್ ಪ್ರಾಸಿಕ್ಯೂಟರ್ ಸ್ಥಾನ ಎಂದರೆ ಬರೀ ಆರೋಪಿಗಳಿಗೆ ಶಿಕ್ಷೆ ನೀಡುವುದಲ್ಲ. ಸಂಬಂಧ ಇರದೇ ಇರುವ ಸಾಕ್ಷಿಗಳನ್ನು ಸಂಖ್ಯಾ ಬಲವನ್ನಾಗಿ ಬಳಸಿಕೊಳ್ಳುವುದೂ ಸರಿಯಲ್ಲ. ಒಂದು ವೇಳೆ ಆರೋಪಿಯಲ್ಲಿ ಅಪರಾಧದ ಬದಲು ಅವನ ಆರೋಪಿತ ಕೃತ್ಯ ಪ್ರಕರಣಕ್ಕೆ ಸಂಬಂಧಿಸಿಲ್ಲವಾದರೆ ಅಥವಾ ಸತ್ಯ ಆ ಪ್ರಕರಣದಲ್ಲಿದ್ದರೆ ಅದನ್ನು ಎತ್ತಿ ತೋರಿಸುವ ಮೂಲಕ ಆರೋಪಿಯನ್ನು ರಕ್ಷಿಸುವ ಕೆಲಸವೂ ಸಹ ಪಬ್ಲಿಕ್ ಪ್ರಾಸಿಕ್ಯೂಟರ್‌ದ್ದೇ ಆಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಅವರು ಸ್ವಾಗತಿಸಿದರು. ಪ್ರಶಾಂತ ಕುಲಕರ್ಣಿ ವಕೀಲರು ಪ್ರಾರ್ಥನೆ ಗೀತೆ ಹಾಡಿದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಇತರರು ಮಾಲಾರ್ಪಣೆ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯಲ್ಲಿ ಧಾರವಾಡ ಜಿಲ್ಲೆಯ ಸೆಷನ್ಸ್ ನ್ಯಾಯಾಧೀಶರು ಸೇರಿದಂತೆ ಹಲವಾರು ನ್ಯಾಯಾಧೀಶರು, ವಕೀಲರ ಸಂಘದ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

೭೨. **ಡಾ. ಎಸ್. ಪಿ. ಹಿರೇಮಠ ದತ್ತಿ :** ದಾನಿಗಳು, ಶ್ರೀಮತಿ ಉಜ್ವಲಾ ಹಿರೇಮಠ

ಭಯಾನಕ ರೋಗವೆಂದೇ ಬಿಂಬಿತವಾಗಿರುವ ಮೆದುಳು ಗಡ್ಡೆ ಕ್ಯಾನ್ಸರ್, ನೀರಿನಲ್ಲಿ ಫ್ಲೋರೋಸಿಸ್ ಅಂಶದಿಂದ ಬರುವ ನ್ಯೂನ್ಯತೆಗಳು ಇವುಗಳ ಕುರಿತಾಗಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿದ್ಯಾರ್ಥಿಗಳು ಸಂಶೋಧನ ಕೈಕೊಂಡಿದ್ದು, ಇದರಲ್ಲಿ ಧನಾತ್ಮಕ ಬೆಳವಣಿಗೆ ಕಂಡು ಬಂದಿದೆ ಎಂದು ಕ.ವಿ.ವಿ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಎಂ. ವಾಯ್ . ಕರಿದುರ್ಗಣ್ಣವರ ಇಂದಿಲ್ಲಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ದಿನಾಂಕ ೬-೧೨-೨೦೧೮ ರಂದು ಆಯೋಜಿಸಿದ್ದ ಪ್ರೊ. ಎಸ್.ಪಿ. ಹಿರೇಮಠ ದತ್ತಿ ಕಾರ್ಯಕ್ರಮದ ಅಂಗವಾಗಿ **'ಪ್ರೊ. ಎಸ್.ಪಿ. ಹಿರೇಮಠ ಯುವ ವಿಜ್ಞಾನಿ ಪ್ರಶಸ್ತಿ'** ಪ್ರದಾನ ಸಮಾರಂಭದ ಮುಖ್ಯಅತಿಥಿಗಳಾಗಿ ಮಾತನಾಡುತ್ತಿದ್ದರು.

೨೦೨೪ ನೇ ಇಸ್ವಿ ವೇಳೆಗೆ ದೇಶದಲ್ಲಿ ಇಂಧನ ಸಮಸ್ಯೆ ಮತ್ತಿಷ್ಟು ಹೆಚ್ಚಾಗಲಿದ್ದು, ಈ ಬಗ್ಗೆ ಚಿಂತನೆ ಮಾಡುವುದು ಅವಶ್ಯವಿದೆ. ಅತಿ ಚಿಕ್ಕ ವಿಷಯವಾದ ಮೊಬೈಲ್ ಚಾರ್ಜಿಂಗ್ ಸಹ ಈಗ ಕರೆಗಳು ಹೆಚ್ಚಾದಾಗ ದಿನಕ್ಕೆ ಎರಡು ಬಾರಿ ಚಾರ್ಜಿಂಗ್ ಮಾಡುವ ಪರಿಸ್ಥಿತಿ ಇದೆ. ಈ ಬಗ್ಗೆ ಅಧ್ಯಯನವನ್ನು ನಡೆಸಲಾಗುತ್ತಿದ್ದು, ಈ ಬಗ್ಗೆ ವ್ಯವಹಾರಿಕವಾಗಿ ಜನಸಾಮಾನ್ಯರ ಕೈಗೆಟುಕುವಂಥ ಉಪಕರಣವನ್ನು ಶೋಧಿಸುವ ಪ್ರಯತ್ನಗಳು ನಡೆದಿವೆ ಎಂದು ಅವರು ಹೇಳಿದರು. ಇಂಥ ಪ್ರಯೋಗ ಯಶಸ್ವಿಯಾದರೆ ಕನಿಷ್ಠ ೨೩ ದಿನಗಳ ಕಾಲ ಮೊಬೈಲ್ ಫೋನಗೆ ಚಾರ್ಜಿಂಗ್ ಇರುವುದಿಲ್ಲವೆಂದು ಅವರು ಹೇಳಿದರು. ಇದಕ್ಕೆ ಸಂಬಂಧಿಸಿದಂತೆ ತಮ್ಮ ಸಂಶೋಧನೆಗಳನ್ನು ಪ್ರಧಾನ ಮಂತ್ರಿ ಮೋದಿ ಅವರ ಗಮನಕ್ಕೆ ತರಲಾಗಿತ್ತು. ಅವರು ರಾಜ್ಯ ಸರಕಾರಕ್ಕೆ ಈ ಬಗ್ಗೆ ಸೂಚನೆಯನ್ನು ಕಳಿಸಿದ್ದರು. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳೊಬ್ಬರು ಬಂದು ಚರ್ಚಿಸಿದ್ದಾಗಿ ಹೇಳಿದರು.

ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದ ದಿ. ಡಾ. ಎಸ್.ಪಿ. ಹಿರೇಮಠ ಅವರು ಅತ್ಯುತ್ತಮ ರಸಾಯನಶಾಸ್ತ್ರ ವಿಜ್ಞಾನಿಗಳು ಆಗಿದ್ದರೆಂದು ಅವರನ್ನು ಸ್ಮರಿಸಿದರು. ಡಾ. ಹಿರೇಮಠ ಕುಷ್ಠರೋಗ ನಿವಾರಣೆ ಬಗ್ಗೆಯೂ ತಮ್ಮ ಸಂಶೋಧನೆ ಕೈಕೊಂಡಿದ್ದರೆಂದು ಹೇಳಿದರು.

ಸಭೆಯಲ್ಲಿ ಕ.ವಿ.ವಿ. ರಸಾಯನಶಾಸ್ತ್ರ ವಿಭಾಗದ ಆಜೀವ ಪ್ರಾಧ್ಯಾಪಕ ಪ್ರಶಸ್ತಿ ಪಡೆದ ಡಾ. ಎಸ್.ಟಿ. ನಂದಿಬೇವೂರ, ಅವರ ಪತ್ನಿ ಹಾಗೂ ಯುವ ವಿಜ್ಞಾನಿ ಪ್ರಶಸ್ತಿ ಪಡೆದ ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಕು. ಕೆ.ಎಂ. ಶ್ರೀಲೇಖಾ ಅವರನ್ನು ಸನ್ಮಾನಿಸಲಾಯಿತು. ತಮ್ಮ ಸನ್ಮಾನಕ್ಕೆ ಉತ್ತರ ನೀಡಿದ ಡಾ. ಎಸ್.ಟಿ. ನಂದಿಬೇವೂರ ಅವರು ತಮ್ಮ ಹಾಗೂ ದಿ. ಎಸ್.ಪಿ. ಹಿರೇಮಠ ಅವರ ಬಾಂಧವ್ಯವನ್ನು ಸ್ಮರಿಸಿದರು. ಡಾ. ಶ್ರೀಮತಿ ಉಜ್ವಲಾ ಹಿರೇಮಠ ಅವರು ತಮ್ಮ ದಿ. ಪತಿಯನ್ನು ಭಾವಪೂರ್ಣವಾಗಿ ನೆನೆಪಿಸಿಕೊಂಡರು. ಸಭೆಯಲ್ಲಿ ಕುಮಾರಿ ಶ್ರದ್ಧಾ ಮೂರಶಿಳ್ಳಿ ವಚನಗಾಯನ ಹಾಡಿದರು. ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕ.ವಿ.ವ.ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಹಾಗೂ ಶ್ರೀಮತಿ ಪಾರ್ವತಿ ಹಾಲಭಾವಿ ಗ್ರಂಥಾರ್ಪಣೆ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಕೊನೆಗೆ ಆಭಾರ ಮನ್ನಿಸಿದರು.

೭೩. **ಶ್ರೀ ಎಸ್.ವ್ಹಿ. ನಾಯ್ಕರಾಣೆ (ಕೆ.ಎ.ಎಸ್) ಕುಟುಂಬದ ದತ್ತಿ :**

ಪ್ರತಿ ವರ್ಷ ಡಿಸೆಂಬರ ೧೪ ರಂದು ಜನ್ಮದಿನಾಚರಣೆ ನಿಮಿತ್ತ ಸಾಹಿತ್ಯಿಕ ಕಾರ್ಯಕ್ರಮ ಮಾಡಲು ದತ್ತಿ ಸ್ಥಾಪಿಸಿದ್ದಾರೆ.

೭೪. **ಡಾ. ಶ್ರೀನಿವಾಸ ಶೇಷಪ್ಪ ದಲಾಲ ದತ್ತಿ :** ದಾನಿಗಳು, ಶ್ರೀ ರಾಮಚಂದ್ರ ಶೇಷಪ್ಪ ದಲಾಲ

'ನಿಮ್ಮ ಬಾಯಲ್ಲಿರುವ ಹಲ್ಲುಗಳ ಸಂಖ್ಯೆ ಎಷ್ಟು ?'

ಖ್ಯಾತ ಗಣಿತಜ್ಞ ಹಾಗೂ ಕರ್ಷಜ್ಞಾನ (ವೇಗಗಣಿತ) ಪ್ರತಿಷ್ಠಾನದ ಸಂಸ್ಥಾಪಕಿ ಶ್ರೀಮತಿ ಸುಮಂಗಲಾ ದಾಂಡೇವಾಲೆಯವರು ಸ್ಥಳೀಯ ವಿದ್ಯಾರಣ್ಯ ಪದವಿಪೂರ್ವ ಮಹಾವಿದ್ಯಾಲಯದ ಪಿ.ಯು.ಸಿ. ವಿಜ್ಞಾನ ವಿಭಾಗದ ಎರಡೂ ತರಗತಿಗಳ ವಿದ್ಯಾರ್ಥಿಗಳಿಗೆ ಹಠಾತ್ತಾಗಿ ಕೇಳಿದರು. ಸಂದರ್ಭ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ದಿನಾಂಕ **೧೭-೧೨-೨೦೧೮** ರಂದು ನಡೆದ ಡಾ. ಶ್ರೀನಿವಾಸ ಶೇಷಪ್ಪ ದಲಾಲ ದತ್ತಿ ಕಾರ್ಯಕ್ರಮದಲ್ಲಿ ಅವರು **'ಗಣಿತ ಕಬ್ಬಿಣದ ಕಡಲೆ ಅಲ್ಲ'** ಎಂಬ ವಿಷಯದ ಬಗ್ಗೆ ಮಾತನಾಡುತ್ತಿದ್ದರು.

ಹಲವು ವಿದ್ಯಾರ್ಥಿಗಳು ತಮ್ಮ ಕೈಗಳನ್ನು ಒಂದೊಂದಾಗಿ ಬಾಯಲ್ಲಿ ಹಾಕಿಕೊಂಡು ಎಣಿಸತೊಡಗುತ್ತ ೨೮ ಎಂದೋ, ಇನ್ನೂಕೆಲವರು ೩೦, ಉಳಿದವರು ೩೨ ಎಂದೆಲ್ಲ ಹೇಳತೊಡಗಿದರು. ಇದನ್ನೆಲ್ಲ ಕೇಳಿಸಿಕೊಂಡ ಶ್ರೀಮತಿ ಸುಮಂಗಲಾ ಅವರು ನಿಮ್ಮ ಮೂಗಿನ ಹೊರಳೆಗಳ ಮಧ್ಯಭಾಗ ನಿಮ್ಮ ಮೇಲು ತುಟಿಯನ್ನು ಸರಿಯಾಗಿ ಎರಡು ಭಾಗಮಾಡಿದೆ. ಬೇಕಾದ ಒಂದು ಭಾಗದ ಹಲ್ಲುಗಳನ್ನು ಎಣಿಸಿ ಅದರಿಂದ ನಾಲ್ಕರಿಂದ ಗುಣಿಸಿದರೆ (ಮೇಲ್ದವಡೆ ಮತ್ತು ಕೆಳದವಡೆ) ನಿಮ್ಮ ಹಲ್ಲುಗಳ ಒಟ್ಟು ಮೊತ್ತ ಸುಲಭವಾಗಿ ಸಿಗುತ್ತದೆ ಎಂದರು. ಸೃಷ್ಟಿಕರ್ತ ಬ್ರಹ್ಮ ನಮ್ಮ ಶರೀರವನ್ನು ಸರಿಯಾಗಿ ಕರಾರುವಾಕ್ಕಾಗಿ ರಚಿಸಿದ್ದಾನೆ. ದೇಹದ ಎಡಭಾಗಕ್ಕೂ ಬಲಭಾಗಕ್ಕೂ ಯಾವುದೇ ಅಂತರವನ್ನು ಅವನು ಮಾಡಿಲ್ಲ. ಶರೀರದಲ್ಲಿ ಒಟ್ಟು ೨೦೬ ಮೂಳೆಗಳು ಇರುತ್ತವೆ. ಇದರಲ್ಲಿ ಒಂದು ಹೆಚ್ಚಾದರೆ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಕಡಿಮೆಯಾದರೆ ಮರುಜೋಡಣೆಯನ್ನು ವೈದ್ಯರಿಂದ ಮಾಡಿಸಿಕೊಳ್ಳಬೇಕಾಗುತ್ತದೆ ಎಂದು ಅವರು ಹೇಳಿ, 'ಸೃಷ್ಟಿಕರ್ತ ಬ್ರಹ್ಮ ನಮ್ಮ ಮೊದಲ ಗಣಿತ ತಜ್ಞ ಎಂದು ವರ್ಣಿಸಿದರು.'

ಇಡೀ ಮೋಬಾಯಿಲ್ ಮತ್ತು ಕಂಪ್ಯೂಟರ ವ್ಯವಸ್ಥೆಗೆ ಗಣಿತದ ವಿವಿಧ ಪ್ರಬೇಧಗಳು ಅಸ್ಥಿಭಾರ ಹಾಕಿವೆ. ಹಾಗೆ ನೋಡಿದರೆ ಸಂಸ್ಕೃತದ ವ್ಯಾಕರಣ ಗಣಿತದ ಮೂಲಾಧಾರವಾಗಿದೆ ಎಂದು ಹೇಳಿದ ಅವರು, ಇದನ್ನು ಭಾರತೀಯರಿಗೆ ತಿಳಿಸಿಕೊಟ್ಟವರು ವಿದೇಶಿಯವರು ಎಂದರು. ಯಾಕೆಂದರೆ ಸಂಸ್ಕೃತ ನಮ್ಮ ದೇಶದಲ್ಲಿಯೆ ಅನಾಥವಾಗಿದೆ ಎಂದು ಹೇಳಿ ವಿಷಾದಿಸಿದರು. ಗಣಿತ ಕಬ್ಬಿಣದ ಕಡಲೆ ಖಂಡಿತ ಅಲ್ಲ. ಮೇಲ್ನೋಟಕ್ಕೆ ಸ್ವಲ್ಪ ಇರಿಸುಮುರಿಸು ತರುತ್ತದೆ ನಿಜ. ಆದರೆ ಅದರ ಆಳಕ್ಕೆ ಇಳಿದಂತೆ ಅದರಲ್ಲಿ ಆಸಕ್ತಿ ಹೆಚ್ಚಾಗಿ ಇಡೀ ಗಣಿತವೆ ನಮ್ಮನ್ನು ಆವರಿಸಿಬಿಟ್ಟು ಮೆದುಳಿಗೆ ಚುರುಕುತನ ಮತ್ತು ದೇಹಕ್ಕೆ ಚೇತನಶಕ್ತಿ ನೀಡುತ್ತದೆ ಎಂದರು. ತಮ್ಮ ಒಂದು ಗಂಟೆ ಭಾಷಣದಲ್ಲಿ ಅವರು ವಿದ್ಯಾರ್ಥಿಗಳೊಂದಿಗೆ ಅಂಕಿಸಂಖ್ಯೆಗಳ ಚಮತ್ಕಾರವನ್ನು ಮಾಡಿತೋರಿಸಿ ರಂಜಿಸುತ್ತಲೇ ತಿಳುವಳಿಕೆ ನೀಡಿದರು.

ವಿದ್ಯಾರಣ್ಯ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಶರಣಮ್ಮ ಗೋರೆಬಾಳ ಅವರು ಪಿ.ಯು.ಸಿ. ಎರಡನೇ ವರ್ಷದಲ್ಲಿ ಗಣಿತದಲ್ಲಿ ಹೆಚ್ಚು ಅಂಕಪಡೆದ ಕು. ಮಂಜುನಾಥ ಮಾಡಳ್ಳಿ ಹಾಗೂ ಪ್ರಥಮ ವರ್ಷದ ಕು. ಕಾವೇರಿ ಪಾಟೀಲ ಅವರಿಗೆ ಬಹುಮಾನ ನೀಡಿ ಗೌರವಿಸಿದರು. ತಮ್ಮ ವಿದ್ಯಾಲಯಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘ ಬಂದು ವಿದ್ಯಾರ್ಥಿಗಳಿಗೆ ಅತ್ಯುಪಯೋಗಿ ಗಣಿತ ಉಪನ್ಯಾಸ ನೀಡಲು ಮಾಡಿದ ಏರ್ಪಾಡಿಗೆ ಧನ್ಯವಾದ ಸಲ್ಲಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕ.ವಿ.ವ.ಸಂಘದ ಗೌರವ ಉಪಾಧ್ಯಕ್ಷ ಸೇತುರಾಮ ಹುನಗುಂದ ವಹಿಸಿದ್ದರು. ವಿದ್ಯಾರಣ್ಯ ಹೈಸ್ಕೂಲಿನ ಹಿಂದಿನ ವಿದ್ಯಾರ್ಥಿ, ಶಿಕ್ಷಕ ಹಾಗೂ ಕ.ವಿ.ವ.ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿಯವರು ಮಾತನಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಈ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕ ಮನೋಜ ಪಾಟೀಲ ಸ್ವಾಗತಿಸಿದರು. ಶಿಕ್ಷಕರಾದ ಮಹೇಶ ಕುರುಬರ ಆಭಾರ ಮನ್ನಿಸಿದರು.

೭೫. **ಶ್ರೀಮತಿ ಶಕುಂತಲಾ ಎಸ್. ಮತ್ತು ಡಾ. ಎಸ್.ವಿ. ಅಯ್ಯನಗೌಡರ ದತ್ತಿ:** ವಿಹಾಸ ಹಾಗೂ ವಿನಯ ಎಸ್. ಅಯ್ಯನಗೌಡರು

ಭಾರತದ ಯಾವುದೇ ಸಂಪ್ರದಾಯಗಳು ಮೂಢನಂಬಿಕೆಗಳು ಅಲ್ಲ. ವೈಜ್ಞಾನಿಕ ಹಿನ್ನೆಲೆಯಿಂದ ಕೂಡಿವೆ ಎಂದು ಡಾ. ಬಿ.ಪಿ. ಮಠದ ಅವರು ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨೩-೧೨-೨೦೧೮** ರಂದು ಆಯೋಜಿಸಿದ್ದ, ಶ್ರೀಮತಿ ಶಕುಂತಲಾ ಎಸ್. ಅಯ್ಯನಗೌಡರ ಮತ್ತು ಡಾ. ಎಸ್.ವ್ಹಿ. ಅಯ್ಯನಗೌಡರ ದತ್ತಿ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿ, **ರಂಗೋಲಿ ಮತ್ತು ಸಂಸ್ಕೃತಿ** ವಿಷಯ ಕುರಿತು ಮಾತನಾಡುತ್ತಿದ್ದರು.

ರಂಗೋಲಿ ಅನ್ನುವುದು ಒಂದು ಕಲೆ. ಇದನ್ನು ಭಾರತದಲ್ಲಿ ಬಹುಶಃ ೯೦ ರಷ್ಟು ಹೆಣ್ಣುಮಕ್ಕಳು ಶಾಲೆಗೆ ಹೋಗದೆ ರಂಗೋಲಿಯ ಬಗ್ಗೆ ಓದದೇ ಅವರ ತಾಯಂದಿರಿಂದ, ಅಜ್ಜಿಯರಿಂದ, ಅಕ್ಕಂದಿರಿಂದ ಕಲಿತ ಒಂದು ಪಾರಂಪರಿಕ ಕಲೆ. ರಂಗೋಲಿಯ ಹಿಂದುಗಡೆ ಒಂದು ಸಂಪ್ರದಾಯವಿದೆ. ವೈಚಾರಿಕತೆ ಇದೆ. ಒಂದು ವೈಜ್ಞಾನಿಕತೆ ಇದೆ. ರಂಗೋಲಿಯನ್ನು ವೇದ ಕಾಲದಲ್ಲಿಯೂ ಹಾಕುತ್ತಿದ್ದರು. ರಾಮಾಯಣ, ಮಹಾಭಾರತ ಕಾಲದಲ್ಲಿ ಹಾಕುತ್ತಿದ್ದರು ಎನ್ನುವ ಬಗ್ಗೆ ಪುರಾವೆಗಳಿವೆ. ರಂಗೋಲಿಯ ಬಗ್ಗೆ ಕರಾವಳಿ ಪ್ರದೇಶದಲ್ಲಿಯ ಬಾರಕೂರು ಶಾಸನ ಮತ್ತು ಕೊಲ್ಲಾಪೂರ ಪ್ರದೇಶದಲ್ಲಿ ಪತ್ತೆಯಾದ ಶಾಸನದಲ್ಲಿ ಉಲ್ಲೇಖವಿದೆ. ರಂಗೋಲಿಯಲ್ಲಿ ಅಡಗಿರುವ ವೈಜ್ಞಾನಿಕತೆ, ಸಂಪ್ರದಾಯ ಬಗ್ಗೆ ಇನ್ನೂ ಯಾರಿಗೂ ಆಳವಾಗ ತಿಳಿದಿಲ್ಲ. ಹಿಂದಿನವರೂ ಹಾಕುತ್ತಾರೆ ಈಗಿನವರೂ ನಾವು ಹಾಕಬೇಕು ಅನ್ನುವ ರೂಢಿ ಬಳಕೆಯಲ್ಲಿದೆ. ಆದರೆ, ರಂಗೋಲಿಯನ್ನು ಹಾಕುವುದರಿಂದ ಹತ್ತಾರು ಶನಿಗಳು ಓಡಿಹೋಗುತ್ತವೆ. ರಂಗೋಲಿಯನ್ನು ಅಕ್ಕಿ ಹಿಟ್ಟಿನಿಂದ ಹಾಕಿದರೆ ಅತಿ ಶ್ರೇಷ್ಠ ಎನ್ನುತ್ತಾರೆ. ಏಕೆಂದರೆ ಆ ಅಕ್ಕಿ ಹಿಟ್ಟನ್ನು ಇರುವೆಗಳು, ಸಣ್ಣ ಸಣ್ಣ ಕೀಟಗಳು ಸೇವಿಸಿ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತವೆ. ನಮಗೆ ಅರಿವಿಲ್ಲದೆ ನಾವು ಹತ್ತಾರು ಕೀಟಗಳ ಹೊಟ್ಟೆಯನ್ನು ತುಂಬಿಸುತ್ತೇವೆ ಎಂದರು.

ರಂಗೋಲಿ ಶುಭ ಕಾರ್ಯಗಳಿಗೂ ಬೇಕು, ಅಶುಭ ಕಾರ್ಯಗಳಿಗೂ ರಂಗೋಲಿ ಬಳಕೆಯಾಗುತ್ತದೆ. ಮಾಟ-ತಂತ್ರ ಮಾಡುವ ಸಮಯದಲ್ಲಿ ಮತ್ತು ಸ್ಮಶಾನದಲ್ಲಿ ಹೆಣವನ್ನು ಹುಗಿಯುವ ಜಾಗದ ಸುತ್ತ ರಂಗೋಲಿಯನ್ನು ಹಾಕುತ್ತಾರೆ. ಮುಂಜಾನೆ ಎದ್ದು ಅಂಗಳವ ಗುಡಿಸಿ ಚೆಂದಾದ ರಂಗೋಲಿ ಹಾಕಿದರೆ ದೇವರು ಕುಲುಕುಲು ನಕ್ಕು ನಲಿಯುತ್ತಾನೆ ಎಂಬ ನಂಬಿಕೆಯಿದೆ. ಯಜ್ಞ ಯಾಗಾದಿಗಳನ್ನು ಮಾಡುವ ಸಮಯದಲ್ಲಿ ಅಗ್ನಿ ಕುಂಡದ ಸುತ್ತ

ರಂಗೋಲಿಯನ್ನು ಹಾಕುತ್ತಾರೆ. ಆಧುನಿಕ ರಂಗೋಲಿಗಳು ದಿನಕ್ಕೆ ಲಕ್ಷಗಟ್ಟಲೆ ಹುಟ್ಟಿಕೊಳ್ಳುತ್ತವೆ. ಸಾಹಿತ್ಯದಲ್ಲಿ ರಂಗೋಲಿ ಇದೆ. ಸಂಸ್ಕೃತಿಯಲ್ಲಿ ರಂಗೋಲಿ ಇದೆ. ಆದಿ ಪಂಪನ ಕಾಲದಲ್ಲಿಯೂ ರಂಗೋಲಿ ಇತ್ತು. ರಂಗೋಲಿ ಹಾಕುವುದರಿಂದ ಸಂಯಮ ವಿಕಿರಣಗಳು ಮನೆಯ ಪ್ರವೇಶ ಮಾಡುವುದಿಲ್ಲ. ರಂಗೋಲಿಯು ವಚನದಲ್ಲಿ, ದಾಸರ ಪದದಲ್ಲಿ, ಜಾನಪದದಲ್ಲಿ ಹಾಡಿದ ಬಗ್ಗೆ ದಾಖಲೆ ಇದೆ. ಭಾರತದಲ್ಲಿ ಸ್ವಚ್ಛ ಅಭಿಯಾನದ ಜೊತೆ ರಂಗೋಲಿ ಅಭಿಯಾನ ಪ್ರಾರಂಭಿಸಬೇಕು. ರಂಗೋಲಿಗಳನ್ನು ಹಾಕುವುದನ್ನು ಎಲ್ಲ ಧರ್ಮ ಪ್ರದೇಶ, ಜನಾಂಗಗಳಲ್ಲಿಯೂ ಕಾಣುತ್ತೇವೆ. ರಂಗೋಲಿಯ ಬಗ್ಗೆ ವೈಜ್ಞಾನಿಕವಾದ ಆಳವಾದ ಅಧ್ಯಯನಗಳು ಆಗದೇ ಇರುವುದು ದುರದೃಷ್ಟಕರ. ರಂಗೋಲಿ ಬಗ್ಗೆ ವೈಜ್ಞಾನಿಕ ಸಂಶೋಧನಗಳು ಆಗಬೇಕಿದೆ. ಎಲ್ಲಾ ಮೂಲಾಕ್ಷರಗಳಿಗೂ ರಂಗೋಲಿಯಲ್ಲಿರುವ ಚುಕ್ಕಿಗಳೇ ಆಧಾರ. ರಂಗೋಲಿ ಹಾಕುವ ರೀತಿಯೇ ಮುಂದೆ ಅಕ್ಷರವಾಗಿ ಅಭಿವೃದ್ಧಿ ಹೊಂದಿವೆ ಎಂದು ಭಾಷಾ ತಜ್ಞರು ಹೇಳುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಮಾತನಾಡಿ, ರಂಗೋಲಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಕಲೆಯಾಗಿದ್ದು, ಅದರ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳು ಆಗಬೇಕಾಗಿದೆ. ನಮ್ಮ ಯುವಪೀಳಿಗೆಯು ನಮ್ಮ ಹಿರಿಯರಿಂದ ಬಂದ ರಂಗೋಲಿ ಸಂಸ್ಕೃತಿಯ ಕಲೆಯನ್ನು ಉಳಿಸಿಕೊಂಡು ಹೋಗಬೇಕು ಎಂದರು. ವೇದಿಕೆ ಮೇಲೆ ಎಸ್.ವ್ಹಿ. ಅಯ್ಯನಗೌಡರ ದಂಪತಿಗಳು ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಹಾಗೂ ಡಾ. ಮನಗುಂಡಿ, ಡಾ. ಬಸವರಾಜ ತಲ್ಲೂರ, ಪ್ರೊ. ಎಸ್.ಬಿ. ಜೋಗೂರ, ಡಿ.ಎಚ್. ಮೋರೆ, ಡಾ. ಚಂದ್ರಶೇಖರ ರೊಟ್ಟಿಗವಾಡ, ಪ್ರಭು ಹಂಚಿನಾಳ, ಚನಬಸಪ್ಪ ಅವರಾದಿ, ನಿಂಗಪ್ಪ ಮಾಯಕೊಂಡ, ಎಂ.ಬಿ. ಹೆಗ್ಗೇರಿ, ಲಕ್ಷ್ಮಣ ಪುರದ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

೭೬. **ಲಿಂ. ಶ್ರೀ ಗುರುಪಾದಪ್ಪ ದುಂಡಪ್ಪ ದೊಡವಾಡ ದತ್ತಿ :** ದಾನಿಗಳು, ದಿ. ಶ್ರೀ ಜಿ. ಜಿ. ದೊಡವಾಡ

ನಮ್ಮ ಅರಿವಿಗೆ ನಾವು ತೃಪ್ತಿ ಪಡಿಸುತ್ತಾ ಇಲ್ಲ. ಅದಕ್ಕೆ ಶಾಶ್ವತವಾಗಿ ಸಂಕಟಪಡುತ್ತಾ ಇದ್ದೇವೆ ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ. ಶಂಭುಹೆಗಡಾಳ ಇಂದಿಲ್ಲಿ ಅಭಿಪ್ರಾಯ ಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೩೦-೧೨-೨೦೧೮** ರಂದು ಆಯೋಜಿಸಿದ್ದ ಶತಾಯುಷಿ ದಿ. ಜಿ.ಜಿ. ದೊಡವಾಡ ಅವರ ತಂದೆ ದಿ. ಗುರುಪಾದಪ್ಪ ದುಂಡಪ್ಪ ದೊಡವಾಡ ದತ್ತಿ ಕಾರ್ಯಕ್ರಮದಲ್ಲಿ ಅವರು **ಬಯಲು ಬಯಲಾಯಿತ್ತಯ್ಯಾ** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಿದ್ದರು.

'ಬಯಲು ಬಯಲವೇ ಭಿತ್ತಿ, ಬಯಲು ಬಯಲವೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ, ಬಯಲು ಜೀವನ ಬಯಲು ಭಾವನೆ, ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು ಗುಹೇಶ್ವರಾ ನಾ ನಿಮ್ಮ ನಂಬಿ ಬಯಲಾದೆನಯ್ಯಾ' ಎಂಬ ಅಲ್ಲಮಪ್ರಭುಗಳ ವಚನವನ್ನು ಅವರು ಸ್ಮರಿಸಿ ಅದರ ವಿಶ್ಲೇಷಣೆಯನ್ನು ಮಾಡಿದರು.

ಶಾಶ್ವತ ತೃಪ್ತಿ ಇಂದ್ರಿಯಗಳಿಗೆ ಇಲ್ಲ. ಬೆಳಗಿನ ಅನ್ನ ಸಿಕ್ಕರೆ ಅಲ್ಪ ತೃಪ್ತಿ ಮಧ್ಯಾಹ್ನದವರೆಗೆ ಇರುತ್ತದೆ. ನಂತರ ಅದರದೇ ಪುನರಾವರ್ತನೆ. ಇಂದ್ರಿಯಗಳ ಕ್ಷಣಕ್ಷಣದ ತೃಪ್ತಿಯನ್ನು ಪರಿಹರಿಸುವುದೇ 'ಸಂತೃಪ್ತಿ' ಅಲ್ಲ. ಇದು ಒಂದು ರೀತಿಯ ಬಯಕೆಗಳಿಗೆ ಸಂಕಟ ತರುವ ಸ್ಥಿತಿಯೇ ಹೌದು. ಇನ್ನು ಧ್ಯಾನ, ಯೋಗ ಮತ್ತು ಪ್ರಾಣವಾಯು ನಿಯಂತ್ರಣದಿಂದ ಸಂತೃಪ್ತಿ ಸಿಗುತ್ತದೆ ಎನ್ನುತ್ತಾರೆ. ಇದು ಭಗವಂತನನ್ನು ನೆನೆಯುವ ಕ್ರಿಯೆ ಎಂದು ಅನ್ನಬಹುದೇನೋ, ಆದರೆ, 'ಅಂತರಂಗದಲ್ಲಿ ಬಯಲಾಗಬೇಕು, ವಿಚಾರಗಳಿಂದ ಬಯಲಾಗಬೇಕು. ಹೀಗಾದರೆ ಧ್ಯಾನ ಸ್ಥಿತಿಗೆ ಬರುತ್ತೇವೆ. ನಾವು ನಮ್ಮನ್ನು ಬಯಲು ಇಲ್ಲವೇ "ಖಾಲಿ ಮಾಡಿಕೊಳ್ಳುವ" ಪರಿಸ್ಥಿತಿಗೆ ಬಂದರೆ ಮಾತ್ರ ತೃಪ್ತಿಯ ಮೆಟ್ಟಿಲುಗಳನ್ನು ಏರಲು ಸಾಧ್ಯ. ಇಂತಹ ಶೂನ್ಯ ಸ್ಥಿತಿಯನ್ನು ಕೆಲವರು ದೇವರು. ಗಾಡ್, ಅಲ್ಲಾ ಎಂದು ಕರೆದರು. ಆದರೆ ಬುದ್ಧ ಮಾತ್ರ 'ಶೂನ್ಯ' ಎಂಬ ಶಬ್ದವನ್ನೆ ದೇವರ ಬದಲು ಬಳಸಿದ. ಶೂನ್ಯತ್ವ ಸರಿ. ದೇವರೆಂಬ ವ್ಯಕ್ತಿವಾಚಕವನ್ನು ರೂಢಿಗೊಳಿಸಿದ್ದರಿಂದ ಶೂನ್ಯಕ್ಕೆ ವ್ಯಕ್ತಿ ಬೇರೆ ನಾನು ಬೇರೆ ಎಂಬ ವಿಶ್ಲೇಷಣೆ ಬರುತ್ತದೆ ಎಂದವರು ಅಭಿಪ್ರಾಯಪಟ್ಟರು.

ಶಾಶ್ವತ ತೃಪ್ತಿಬೇಕಾದಲ್ಲಿ 'ಅರಿವಿಗೆ ತೃಪ್ತಿ' ಬರಬೇಕಾಗುತ್ತದೆ. ಅದರ ಬದಲು ಅಹಂ ಭಾವಕ್ಕೆ ನಾವು ಅಗ್ರಮಣೆ ಹಾಕುತ್ತಾ ಅದು ಖುಷಿಪಟ್ಟರೆ ನಾವು ಶಾಶ್ವತ ತೃಪ್ತಿ ಪಟ್ಟುಕೊಳ್ಳುತ್ತೇವೆಂಬ ಭ್ರಮೆಯಿಂದಲೇ ಸಂಕಟ ಪಡುತ್ತಿದ್ದೇವೆ ಎಂದು ಡಾ. ಶಂಭು ಹೆಗಡಾಳ ಅವರು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಡಾ. ಶಂಭು ಹೆಗಡಾಳ ಅವರ ಉಪನ್ಯಾಸವನ್ನು ಶ್ಲಾಘಿಸಿದರಲ್ಲದೇ ಅದರಲ್ಲಿಯ ಒಳ ಧನಿಯನ್ನು ಅರ್ಥಮಾಡಿಕೊಳ್ಳಬೇಕೆಂದರು.

ಇದೇ ಸಂದರ್ಭದಲ್ಲಿ ದೊಡವಾಡ ಕುಟುಂಬಕ್ಕೆ ಸೇರಿದ ಜನಪ್ರಿಯ ವೈದ್ಯ ಡಾ. ನಿತಿನಚಂದ್ರ ಹತ್ತೀಕಾಳ ಹಾಗೂ ಖ್ಯಾತ ಕೃಷಿ ವಿಜ್ಞಾನಿ ಡಾ. ಶ್ರೀಕಾಂತ ಪಾಟೀಲ ದಂಪತಿಗಳನ್ನು ಸನ್ಮಾನಿಸಲಾಯಿತು. ತಮ್ಮ ಸನ್ಮಾನಕ್ಕೆ ಉತ್ತರಿಸಿದ ಡಾ. ನಿತಿನ್‌ಚಂದ್ರ ಹತ್ತೀಕಾಳ ಅವರು ಈ ಸನ್ಮಾನ ನನ್ನನ್ನು ಪುನೀತಗೊಳಿಸಿದ್ದು, ಬಡವರ ಮತ್ತು ದಲಿತರ ಸೇವೆಗಾಗಿ ಇನ್ನಷ್ಟು ಹುಮ್ಮಸು ತಂದಿದೆ ಎಂದು ಹೇಳಿದರು. ಕೃಷಿ ವಿಜ್ಞಾನಿ ಡಾ. ಶ್ರೀಕಾಂತ ಪಾಟೀಲ ಮಾತನಾಡಿ, ಬಿ.ಟಿ. ಹತ್ತಿಯ ಬಗ್ಗೆ ತಾವು ಕೈಕೊಂಡ ಸಂಶೋಧನೆಗಳನ್ನು ವಿವರಿಸಿದರು. ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ೯೩ ವರ್ಷದ ತರುಣ ಚನಬಸಪ್ಪ ಅವರಾದಿ ವಚನವನ್ನು ಸುಶ್ರಾವ್ಯವಾಗಿ ಹಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ದತ್ತಿ ಕಾರ್ಯಕ್ರಮ ಸಂಯೋಜಕ ಮನೋಜ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನಕಾರ್ಯದರ್ಶಿ ಪ್ರಕಾಶ ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕ ಮಾತನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಆಭಾರ ಮನ್ನಿಸಿದರು.

೭೭. **ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ** : ದಾನಿಗಳು, ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ ಶ್ರೀಕ್ಷೇತ್ರ ಧರ್ಮಸ್ಥಳ.

೭೮. **ಶ್ರೀ ಸಿದ್ಧಲಿಂಗ ದೇಸಾಯಿ ದತ್ತಿ :** ದಾನಿಗಳು, ಶ್ರೀ ದಶರಥರಾವ ಕೇಶವರಾವ ದೇಸಾಯಿ, ಶ್ರೀ ಅಭಿಷೇಕ ಸಿದ್ಧಲಿಂಗ ದೇಸಾಯಿ

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ದಿನಾಂಕ **೧–೧–೨೦೧೯** ರಂದು ಸೋಮವಾರ ನಡೆದ ದಿ. ಸಿದ್ಧಲಿಂಗ ದೇಸಾಯ ದತ್ತಿ ಕಾರ್ಯಕ್ರಮದಲ್ಲಿ ಅಭಿಷೇಕ ಸಿದ್ಧಲಿಂಗ ದೇಸಾಯಿ ಕಥೆ–ಚಿತ್ರಕಥೆ ಬರೆದು, ನಿರ್ದೇಶಿಸಿ, ನಟಿಸಿದ 'ಲವ್' ಕಿರುಚಿತ್ರವನ್ನು ಖ್ಯಾತ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ ನಾಡಿಗೆ ಸಮರ್ಪಿಸಿದರು.

ಕಿರುಚಿತ್ರಕ್ಕೆ ರಾಹುಲ್ ದತ್ತಪ್ರಸಾದ ಸಂಕಲನ ಹಾಗೂ ಛಾಯಾಗ್ರಹಣ ಕೆಲಸ ಮಾಡಿದ್ದು, ಖ್ಯಾತ ನಟ ಸೋಮಶೇಖರ ಜಾಡರ ಸಂಗೀತ ನೀಡಿದ್ದಾರೆ. ೨೫ ನಿಮಿಷದ ಕಿರುಚಿತ್ರದಲ್ಲಿ ಒಂದೇ ಹುಡುಗಿಯಿಂದ ಇಬ್ಬರು ಹುಡುಗರು ಮೋಸ ಹೋದ, ಮೋಸದ ಪ್ರೀತಿಯಿಂದ ಅಂಟಿದ ಕುಡಿತದ ಚಟ. ಕೊನೆಗೆ ಆತ್ಮಹತ್ಯೆ ಮುಂದಾದ ನಾಯಕನಿಗೆ ಪ್ರೇತಾತ್ಮ ತಂದೆ–ತಾಯಿ ಮುಂದೆ ಪ್ರತ್ಯಕ್ಷವಾಗಿ ಹುಡುಗಿ ಪ್ರೀತಿ ದೊಡ್ಡದಲ್ಲ ಎಂಬ ಸಂದೇಶ ಸಾರುತ್ತದೆ.

ನಂತರ ಮಾತನಾಡಿದ ಪ್ರೊ. ಚಂಪಾ, ಸಿದ್ಧಲಿಂಗ ದೇಸಾಯಿ ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾರ್ಥಿ. ದೇಸಾಯಿ ಮನೆತನದ ಕುಡಿಯಾಗಿ ಸಾಹಿತ್ಯ, ರಂಗಭೂಮಿ, ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿದ ಕ್ರಿಯಾಶೀಲ ವ್ಯಕ್ತಿ. 'ಸಿಕ್ಕೇದುಂಗುರ' ನಾಟಕದ ಮೂಲಕ ರಾಷ್ಟ್ರಮಟ್ಟದ ಖ್ಯಾತಿ ಪಡೆದರು ಎಂದರು.

ಬದುಕಿನಲ್ಲಿ ಎಲ್ಲಿಯೂ ನೆಲೆ ನಿಲ್ಲದ ವ್ಯಕ್ತಿ ಸಿದ್ಧಲಿಂಗ ದೇಸಾಯಿ. ಅವರು ಜನಪದ ದಾಟಿಯಲ್ಲಿ ಜನಪ್ರಿಯ ಗೀತೆ ರಚಿಸಿದ್ದಾರೆ. ಧಾರವಾಹಿ, ನಾಟಕ, ಸಿನೆಮಾ ರಂಗದಲ್ಲಿ ಅವರ ಗೀತೆಗಳು ಬಳಕೆ ಆಗಿವೆ. ಅವುಗಳನ್ನು ಬರೆದ ವ್ಯಕ್ತಿಯ ಹೆಸರು ಪ್ರಸಿದ್ಧಿಗೆ ಬರದಿರುವುದು ದುರಂತ ಎಂದು ಹೇಳಿದರು.

ಮನುಷ್ಯ ಸಂಬಂಧ ಬೆಸೆಯುವ ಕೊಂಡಿ ಪ್ರೇಮ, ಪ್ರೀತಿ ಹಾದಿ ತಪ್ಪಿದಾಗ ಸಂಭವಿಸುವ ಅನಾಹುತದ ಎಳೆ ಇಟ್ಟುಕೊಂಡು ಸಿದ್ಧಲಿಂಗ ದೇಸಾಯಿ ಪುತ್ರ ಅಭಿಷೇಕ 'ಲವ್' ಕಿರುಚಿತ್ರ ನಿರ್ದೇಶಿಸಿ, ನಟಿಸಿದ್ದಾರೆ. ಭವಿಷ್ಯದಲ್ಲಿ ಅಭಿಷೇಕನಿಗೆ ಉತ್ತಮ ಅವಕಾಶಗಳು ಲಭಿಸಲಿ ಎಂದು ಹಾರೈಸಿದರು.

ವಿದ್ವಾಂಸ ಡಾ. ಗುರುಲಿಂಗ ಕಾಪಸೆ ಮಾತನಾಡಿ, ಬೇಂದ್ರೆ ಪರಂಪರೆಯಾಗಿ ಕಣವಿ, ಕಣವಿ ಪರಂಪರೆಯಾಗಿ ಚಂಪಾ, ಇವರ ಪರಂಪರೆಯಾಗಿ ಸಿದ್ಧಲಿಂಗ ದೇಸಾಯಿ ಕವನ ಪರಂಪರೆ ಬೆಳೆಸಿದ್ದಾರೆ. ದೇಸಾಯಿ ಕನ್ನಡ ಐಚ್ಛಿಕ ವಿಷಯದ ವಿದ್ಯಾರ್ಥಿ ಆಗಿದ್ದರೂ, 'ಲಿಂಗಾಯತ ಧರ್ಮ' ಎಂಬ ಕೃತಿ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ ಎಂದು ತಿಳಿಸಿದರು.

ಉತ್ತಮ ನಾಟಕಕಾರರಾಗಿ, ದೇಶಿಯ ಭಾಷೆ ಹದವಾಗಿ ಬಳಸಿ, ಮನುಷ್ಯ ಸಂಬಂಧ ಸಾರಿದ್ದಾರೆ. ಇಂದು ಮನುಷ್ಯ ಜೀವನ ಸಂಸ್ಕೃತಿ ಕುಸಿದಿದೆ. ಇದು ಎತ್ತರವಾಗಬೇಕು. ಕನ್ನಡದ ಅಸ್ಮಿತೆಗೆ ಧಕ್ಕೆ ಬರದ ರೀತಿಯಲ್ಲಿ ಇಂಗ್ಲಿಷ ಬಳಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ನಾಡೋಜ. ಡಾ. ಪಾಟೀಲ ಪುಟ್ಟಪ್ಪ, ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕೋಶಾಧ್ಯಕ್ಷ ಕೃಷ್ಣ ಜೋಶಿ ಮಾತನಾಡಿದರು. ಈ ಸಂದರ್ಭದಲ್ಲಿ ಗಣ್ಯರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಮಾರಂಭದಲ್ಲಿ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ, ಸತೀಶ ತುರಮರಿ, ಅಭಿಷೇಕ ದೇಸಾಯಿ, ರಾಹುಲ್ ದತ್ತ ಪ್ರಸಾದ್ ಅನೇಕರು ಇದ್ದರು.

೭೯. **ಶ್ರೀ ಸಿ.ಎಸ್. ಪಾಟೀಲ ದತ್ತಿ :** ದಾನಿಗಳು, ಶ್ರೀ ಸಿ.ಎಸ್. ಪಾಟೀಲ ಸಹೋದರ ಚಂದ್ರಗೌಡ ಶಿ. ಪಾಟೀಲ

ಉತ್ತರ ಕರ್ನಾಟಕದ ಪ್ರಥಮ ಇಂಜನಿಯರ ಶ್ರೀ ಚನ್ನವೀರಗೌಡ ಅಣ್ಣಾ ಶಿದ್ರಾಮಗೌಡ ಪಾಟೀಲರು. ನೂರು ವರ್ಷಗಳ ಹಿಂದೆ ಶಿಕ್ಷಣ ಪಡೆಯುವದೇ ಬಹಳ ಕಷ್ಟವಾಗಿತ್ತು. ಇಂತಹ ಕಾಲಘಟ್ಟದಲ್ಲಿ ಇಂಜನೀಯರ ಪದವಿ ಪಡೆಯುವದು ಸಾಮಾನ್ಯವಲ್ಲ ಎಂದು  ಹುಬ್ಬಳ್ಳಿ ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಅಶೋಕ ಶೆಟ್ಟರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨-೧-೨೦೧೯** ರಂದು ಆಯೋಜಿಸಿದ್ದ, ಶ್ರೀ ಚನ್ನವೀರಗೌಡ ಅಣ್ಣಾ ಶಿದ್ರಾಮಗೌಡ ಪಾಟೀಲ ಸಂಸ್ಮರಣೆ ದತ್ತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಶೆಟ್ಟರ ನೂರು ವರ್ಷಗಳ ಹಿಂದೆ ಶಿಕ್ಷಣವೆನ್ನುವುದು ಗೊತ್ತಿಲ್ಲದ ವಿದ್ಯೆಯಾಗಿತ್ತು. ಆದರೆ ಚೆನ್ನವೀರಗೌಡ ಅಣ್ಣಾ ಇವರು ಯಾರ ಮಾರ್ಗದರ್ಶನವಿಲ್ಲದೆ ಉತ್ತರ ಕರ್ನಾಟಕದಲ್ಲಿ ಇಂಜನೀಯರ ಎನ್ನುವ ಪದವೆ ಗೊತ್ತಿಲ್ಲದ ವೇಳೆಯಲ್ಲಿ ಪುಣೆಗೆ ಹೋಗಿ ಎಲ್.ಸಿ.ಎ. ಪದವಿ ಪಡೆದು ಇಂಜನೀಯರರಾಗಿದ್ದು, ಆಶ್ಚರ್ಯಕರ ಸಂಗತಿ. ಇದು ಇವರ ಅಗಾಧ ಪ್ರಯತ್ನ ಹಾಗೂ ದೇವರ ಕೃಪೆ. ಇವರು ದೊಡ್ಡ ಜಮೀನದಾರರು. ಇವರಿಗೆ ಉನ್ನತ ಶಿಕ್ಷಣ ಪಡೆದು ನೌಕರಿ ಮಾಡುವ ಅವಶ್ಯಕತೆ ಇರಲಿಲ್ಲ. ಆದರೆ ಇವರು ತಮ್ಮ ಮನದೊಳಗೆ ಉತ್ತರ ಕರ್ನಾಟಕದ ದುಸ್ಥಿತಿಯನ್ನು ಕಂಡು ಇಲ್ಲಿ ಸುಧಾರಣೆಯನ್ನು ತರಬೇಕು, ಸಮಾಜಕ್ಕೆ ಉಪಯುಕ್ತವಾಗುವಂತ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಬೇಕೆಂಬ ಮಹಾತ್ವಾಕಾಂಕ್ಷೆ ಹೊಂದಿ ಪುಣೆಗೆ ಹೋಗಿ ಇಂಗ್ಲೆಂಡಿನ ಎಲ್.ಸಿ.ಎ. ಪದವಿ ಪಡೆದುಕೊಂಡವರು.

ಇವರು ೧೯೦೪ ರಲ್ಲಿ ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಟೌನ ಹಾಲ್ ನೀಲನಕ್ಷೆ ತಯಾರಿಸಿ ಆ ಕಟ್ಟಡ ನಿರ್ಮಾಣವಾಗುವಲ್ಲಿ ಮಹತ್ವದ ಪಾತ್ರ ವಹಿಸಿದವರು. ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ಸರಕಾರದವರು ಇವರ ಸುಮಾರು ೧೨೦೦ ಎಕರೆ ಭೂಮಿಯನ್ನು ಸ್ವಾದೀನ ಮಾಡಿಕೊಂಡಾಗ ಇವರು ಯಾವುದೇ ತಕರಾರು ಮಾಡದೇ ಸಮಾಜದ ಅಭಿವೃದ್ಧಿ ಕಾರ್ಯಕ್ಕೆ ತಮ್ಮ ಭೂಮಿಯನ್ನು ಬಿಟ್ಟುಕೊಟ್ಟವರು. ಉತ್ತರ ಕರ್ನಾಟಕವನ್ನು ಕಟ್ಟಿದವರು ಇಂತವರೆ, ಯಾವ ರಾಜ ಮಹರಾಜರು ಅಲ್ಲ. ಇವರು ಕೆ.ಎಲ್.ಇ. ಸಂಸ್ಥೆಯ ಸಪ್ತಋಷಿಗಳ ಜೊತೆಗೆ ಒಡನಾಟ ಹೊಂದಿದವರು. ಈಗ ನಾವುಗಳು ಯಾವುದೇ ಮಂಗಲ ಕಾರ್ಯಾಲಯವನ್ನು ಕಟ್ಟದೇ, ವೃದ್ಧಾಶ್ರಮ ಕಟ್ಟುವ ಪರಿಸ್ಥಿತಿ ಬಂದಿದೆ. ಏಕೆಂದರೆ, ಈಗ ಯಾರೂ ಹಿರಿಯರ ಕಡೆ ಗಮನ ನೀಡುತ್ತಿಲ್ಲ. ಹಿರಿಯರ ಪರಿಸ್ಥಿತಿ ಅದೋಗತಿಯತ್ತ ಸಾಗುತ್ತಿದೆ.  ಸಮಾಜದಲ್ಲಿ ಅಸಮತೋಲನವಾಗುತ್ತಿದೆ, ಇದನ್ನು ಹತೋಟಿಗೆ ತರಬೇಕಾಗಿದೆ ಎಂದರು.

ಇನ್ನೋರ್ವ ಅತಿಥಿ ಬೆಳಗಾವಿ ಕೆ.ಎಲ್.ಇ. ಸೊಸಾಯಿಟಿ ನಿರ್ದೇಶಕರಾದ ಶ್ರೀ ಶಂಕ್ರಣ್ಣ ಮುನವಳ್ಳಿ ಮಾತನಾಡಿ, ಚನ್ನವೀರಗೌಡ ಅಣ್ಣಾ ಪಾಟೀಲರು ಪುಣೆಯ ಡೆಕ್ಕನ್ ಇಂಜನೀಯರಿಂಗ್ ಕಾಲೇಜಿನಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಹಿಂದಿನಿಂದಲೂ ಪಾಟೀಲರ ಕುಟುಂಬ ಸಮಾಜಸೇವೆಯಲ್ಲಿ ತೊಡಿಗಿಸಿಕೊಂಡಂತಹ ಕುಟುಂಬ. ಸಮಾಜ ಬದಲಾವಣೆಯಾಗಬೇಕಾದರೆ, ಒಳ್ಳೆಯ  ಕೆಲಸಗಳಾಗಬೇಕೆಂದರೆ, ಇಂತಹ ಮೇಧಾವಿ, ಚಿಂತನಾಶೀಲ, ಕ್ರಿಯಾಶೀಲ ವ್ಯಕ್ತಿಗಳಿಂದ ಸಾಧ್ಯ. ಈಗ ಇಲ್ಲೇ ನೋಡಿ ೧೫ ವರ್ಷಗಳ ಹಿಂದೆ ಬಿ.ವಿ.ಬಿ ಕಾಲೇಜು ಹೇಗೆ ಇತ್ತು ಈಗ ಹೇಗಾಗಿದೆ ನೋಡಿ ೧೫ ವರ್ಷಗಳ ಪ್ರಾಮಾಣಿಕ ಪರಿಶ್ರಮ, ಉತ್ಕೃಷ್ಣ ಗುಣಮಟ್ಟದ ಶಿಕ್ಷಣ ನೀಡುತ್ತಾ ದೇಶದಲ್ಲಿ ಪ್ರಖ್ಯಾತಿ ಹೊಂದಿದ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ. ೧೯೧೬ ರಲ್ಲಿ ಕೆ.ಎಲ್.ಇ. ಸಂಸ್ಥೆ ಕೇವಲ ೧ ಶಾಲೆಯಿಂದ ಪ್ರಾರಂಭವಾಗಿ ಈಗ ೨೬೨ ಸಂಸ್ಥೆಯನ್ನು ಹೊಂದಿದೆ. ಇದು ಕೇವಲ ಸಂಖ್ಯಾಜಾದೂ ಅಲ್ಲ. ಇಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡುವಂತಹ ೨೬೨ ಶಿಕ್ಷಣ ಸಂಸ್ಥೆಗಳು ಇವು. ಇಂದಿಗೂ ಸಹ ಕೆ.ಎಲ್.ಇ. ಸಂಸ್ಥೆಯು ಸಂಸ್ಥಾಪಕ ಸಪ್ತಋಷಿಗಳ ಆಶಯ, ಉದ್ದೇಶಗಳಿಗೆ ಧಕ್ಕೆ ತರದೇ, ಅವರ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಉತ್ತರೋತ್ತರ ಅಭಿವೃದ್ಧಿ ಹೊಂದುತ್ತಾ ಸಮಾಜಕ್ಕೆ ತಮ್ಮದೇ ಕೊಡುಗೆ ನೀಡುತ್ತಾ ಬರುತ್ತಿವೆ ಎಂದರು. ಇವತ್ತಿನ ಯುವಕರು ಟಿ.ವಿ. ಮೋಬಾಯಿಲ್ ನಲ್ಲಿ ಮುಳುಗಿ ಹೋಗಿದ್ದಾರೆ. ಹೀಗೆ ಮುಂದುವರೆದರೆ ಇದು ಒಳ್ಳೆಯ ಬೆಳವಣಿಗೆ ಅಲ್ಲ. ಇದನ್ನು ಬಿಟ್ಟು ಯುವಕರು ಇತಿಹಾಸವನ್ನು ತಿಳಿದುಕೊಂಡು ಮಹಾನ್ ವ್ಯಕ್ತಿಗಳ ಚರಿತ್ರೆಯನ್ನು ತಿಳಿದುಕೊಂಡು ಅವರಂತೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜಮುಖಿಯಾಗಿ ಬೆಳೆದು, ಬದುಕಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಎ. ಬಿ. ದೇಸಾಯಿಯವರು ಮಾತನಾಡಿ, ಇಂದು  ಸಮಾಜ ಬಹಳಷ್ಟು ಬದಲಾವಣೆಯಾಗಿದೆ.  ಸಮಾಜದಲ್ಲಿ ಎಷ್ಟು ಒಳ್ಳೆಯ ಕೆಲಸಗಳಾಗುತ್ತಿವೆಯೋ ಅಷ್ಟೇ ಕೆಟ್ಟ ಕೆಲಸಗಳೂ ಆಗುತ್ತಿವೆ. ಕೆಟ್ಟ ಕೆಲಸಗಳನ್ನು ಹತೋಟಿಗೆ ತರಬೇಕೆಂದರೆ, ಒಳ್ಳೆಯ ಮಾರ್ಗದರ್ಶಕರು ಬೇಕು. ಮೊದಲಿನಿಂದಲೂ ಉತ್ತರ ಕರ್ನಾಟಕ ಸರಕಾರದಿಂದ ನಿರ್ಲಕ್ಷಕ್ಕೆ ಒಳಪಟ್ಟಿದೆ. ಯಾವ ರಾಜಕಾರಣಿಯು ಇದರ ಅಭಿವೃದ್ಧಿ  ಬಯಸಿಲ್ಲ. ಈ ಭಾಗದಿಂದ ಹೋದ ಜನಪ್ರತಿನಿಧಿಗಳೇ ಬೆಂಗಳೂರು ಅಭಿವೃದ್ಧಿ ಬಯಸುತ್ತಾರೆ, ಬೆಂಗಳೂರಿನಲ್ಲಿ ಮನೆ ಮಾಡಿಕೊಳ್ಳುತ್ತಾರೆ. ತಮ್ಮ ಕ್ಷೇತ್ರಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದಿಲ್ಲ. ಇಂದು ರಾಜಕೀಯದಲ್ಲಿ  ಮರ್ಯಾದೆ ಇಲ್ಲ. ಆದ್ದರಿಂದ ನಾನು ಹಿಂದೆ ಸರಿದಿದ್ದೇನೆ. ಕೇವಲ ದುಡ್ಡು, ಅಧಿಕಾರಕ್ಕೆ ಬಡೆದಾಡುತ್ತಾರೆ, ಇದೇ ಹಾದಿಯಲ್ಲಿ ಇಂದಿನ ಶಿಕ್ಷಣ ಸಂಸ್ಥೆಗಳು ನಡೆದಿವೆ. ಇದು ಸಮಾಜದ ಅಭಿವೃದ್ಧಿಗೆ ಮಾರಕ. ಬಹುತೇಕ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣಕ್ಕೆ ಆಧ್ಯತೆ ನೀಡದೇ, ಸೇವಾಮನೋಭಾವನೆ ಹೊಂದದೆ, ಕೇವಲ ಜನರಿಂದ ಡೊನೇಶನ ಕಿತ್ತುಕೊಳ್ಳುವ, ಹಣಗಳಿಸುವ, ಸ್ವಾರ್ಥಸಾಧನೆಗೆ ನಿಂತಿವೆ. ಸಮಾಜದ ಕಳಕಳಿ ಇದ್ದಲ್ಲಿ ಶಿಕ್ಷಣ ಸಂಸ್ಥೆಗಳು ಎಂದಾದರೂ ಬಡಮಕ್ಕಳಿಗೆ ತಮ್ಮ ಸಂಸ್ಥೆಗಳಲ್ಲಿ ಉಚಿತವಾಗಿ,

ರಿಯಾಯಿತಿ ದರದಲ್ಲಿ ಶಿಕ್ಷಣ ನೀಡುತ್ತಿವೆ ಎನ್ನುವ ಬಗ್ಗೆ ಸಮಾಜಕ್ಕೆ ತಿಳಿಸಲಿ ಎಂದು ಖಾರವಾಗಿ ನುಡಿದರು. ಸರಕಾರಗಳು ರೈತರ ಸರ್ವಾಂಗೀಣ ಅಭಿವೃದ್ಧಿಗೆ ಗಮನವನ್ನು ಕೊಡದೇ ಯಾವುದೇ, ಯಾವುದೇ ನೀರಾವರಿ ಯೋಜನೆಗಳನ್ನು ತರದೇ, ಕೇವಲ ಚುನಾವಣೆ ವೇಳೆಯಲ್ಲಿ ಮತವನ್ನು ದೋಚುವ ಹುನ್ನಾರದಿಂದ ಸಾಲಮನ್ನಾ ಎನ್ನುವ ರೈತರ ಕಣ್ಣು ಒರೆಸುವ ತಂತ್ರ ಮಾಡುತ್ತಾರೆ ಇದರಿಂದ ಏನು ಪ್ರಯೋಜನೆ. ಇದು ಸರಿಯಾದ ಕ್ರಮವಲ್ಲ. ರೈತ ಮತ್ತೆ ಸಾಲ ಮಾಡಿಕೊಂಡು ಸಾಲದ ಸುಳಿಯಲ್ಲಿ ಸಿಲುಕುತ್ತಾನೆ. ಇದರ ಬದಲು ರೈತರಿಗೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ತರಬೇಕು. ೫೦ ವರ್ಷಗಳಿಂದ ನವಲಗುಂದದ ಬೆಣ್ಣಿ ಹಳ್ಳಕ್ಕೆ ಚೆಕ್ ಡ್ಯಾಮ್ ಕಟ್ಟುವ ಒಂದು ಸಣ್ಣ ಯೋಜನೆ ತರಲು ಆಗುತ್ತಿಲ್ಲ. ಒಟ್ಟಾರೆ ರೈತರನ್ನು ಉದ್ಧಾರ ಮಾಡುವ ಇಚ್ಛಾಶಕ್ತಿ ಜನಪ್ರತಿನಿಧಿಗಳಿಗಿಲ್ಲ ಎಂದರು.

ಧಾರವಾಡ ಶ್ರೀಕ್ಷೇತ್ರ ಮುರುಘಾಮಠದ ಪೂಜ್ಯಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಅಂಕಲಗಿ ಎನ್.ಎಸ್.ಎಫ್ ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಶಿರೇಖಾ ಚಂದ್ರಕಾಂತ ಬರಗಾಲಿ ಅವರನ್ನು ದತ್ತಿದಾನಿಗಳ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ದಿ. ಶ್ರೀ ಚನ್ನವೀರಗೌಡ ಅಣ್ಣಾ ಶಿದ್ರಾಮಗೌಡ ಪಾಟೀಲರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಎಂ. ಯು. ಪಾಟೀಲ ಉಪಸ್ಥಿತರಿದ್ದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು. ದತ್ತಿದಾನಿ ಸಿ. ಎಸ್. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ದತ್ತಿ ಆಶಯ ವಿವರಿಸಿದರು.

೮೦. **ಡಾ. ಶಂ. ಬಾ. ಜೋಶಿ ದತ್ತಿ :** ದಾನಿಗಳು, ಮಾನವ ಧರ್ಮ ಪ್ರತಿಷ್ಠಾನ

ಪ್ರತಿವರ್ಷ ಜನೆವರಿ ೩ ಅಥವಾ ೪ ರಂದು ಶಂಬಾ ಜೋಶಿ ಅವರ ಸಾಹಿತ್ಯ ಮತ್ತು ಸಂಶೋಧನೆ ಕುರಿತು ಕಾರ್ಯಕ್ರಮ ಏರ್ಪಡಿಸಲು ದತ್ತಿ ಸ್ಥಾಪಿಸಿದ್ದಾರೆ.

೮೧. **ಶ್ರೀಮತಿ ಲಲಿತಾ ಮತ್ತು ಪ್ರೊ.** ಸಿ. ವಿ. **ಕೆರಿಮನಿ ದತ್ತಿ :** ದಾನಿಗಳು, ಶ್ರೀಮತಿ ಸಂಪದಾ ಸುಭಾಸ ಕೆರಿಮನಿ

ಪ್ರತಿವರ್ಷ ಜನೆವರಿ ೪ ರಂದು ಧಾರ್ಮಿಕ ಸಾಹಿತ್ಯ, ಮಹಿಳಾ ಸಾಹಿತ್ಯ, ನಾಡು-ನುಡಿ ಕುರಿತು ಉಪನ್ಯಾಸ, ಚಿಂತನೆ ಇತ್ಯಾದಿ ಕುರಿತು ಕಾರ್ಯಕ್ರಮ ಏರ್ಪಡಿಸಲು ದತ್ತಿ ಸ್ಥಾಪಿಸಿದ್ದಾರೆ.

೮೨. **ಗದಿಗೆಯ್ಯ ಹೊನ್ನಾಪೂರಮಠ ದತ್ತಿ :** ದಾನಿಗಳು, ಶ್ರೀಮತಿ ಗೌರಾಂಬಿಕಾ ಚಂ ಹೊನ್ನಾಪೂರಮಠ

೧೯೦೩-೧೯೦೪ ರಲ್ಲಿಯೇ ನಮ್ಮ ಯುವಕರು ಆಧುನಿಕರಾಗಬೇಕು, ಪಶ್ಚಿಮ ಮುಖಿಗಳಾಗಬೇಕು, ಸ್ವಾವಲಂಬಿಗಳಾಗಬೇಕು. ದೇಶ ಸ್ವತಂತ್ರವಾಗಬೇಕು ಎಂದು ಹಾಗೂ ಭೌತಿಕತೆ-ತಾತ್ವಿಕತೆಯನ್ನು ನಂಬಿಕೊಂಡಿದ್ದ ಕಾಲಘಟ್ಟ ಗದಿಗೆಯ್ಯ ಹೊನ್ನಾಪುರ ಅವರದು ಎಂದು ಸಾಹಿತಿ ಮತ್ತು ಚಿಂತಕರಾದ ಹೊಸಪೇಟೆಯ ಡಾ. ಮೃತ್ಯುಂಜಯ ರುಮಾಲೆ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೭-೧-೨೦೧೯** ರಂದು ಆಯೋಜಿಸಿದ್ದ, ಗದಿಗೆಯ್ಯ ಹೊನ್ನಾಪುರಮಠ ದತ್ತಿ ಕಾರ್ಯಕ್ರಮದಲ್ಲಿ **"ಗದಿಗೆಯ್ಯ ಹೊನ್ನಾಪುರಮಠರ ಸಾಮಾಜಿಕ ಬದ್ಧತೆ"** ವಿಷಯ ಮೇಲೆ ಅವರು ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ರುಮಾಲೆ ಅವರು, ಸಾಮಾಜಿಕ ಸೇವೆ, ಕಾರ್ಯಗಳು, ಲಾಭದಾಯಕವಾಗಿದ್ದರೆ, ಅದರಲ್ಲಿ ಸ್ವಾರ್ಥ ಅಡಗಿದ್ದರೆ ಅದು ಎಂದೂ ಸಾಮಾಜಿಕ ಸೇವೆ ಎನಿಸುವುದಿಲ್ಲ, ಅದೊಂದು ವ್ಯಾಪಾರವಾಗುತ್ತದೆ. ಈ ಕಾಲದಲ್ಲಿ ತಾವು ಏನು ಉದ್ಯೋಗ ಮಾಡುತ್ತೀರಿ ಎಂದು ಕೇಳಿದರೆ ಸುಮಾರು ಜನ ನಾವು ಸಾಮಾಜಿಕ ಸೇವೆ ಮಾಡುತ್ತೇವೆ ಎಂದು ಉತ್ತರ ನೀಡುತ್ತಾರೆ. ಅಂದರೆ ಇವರು ಮಾಡುವ ಸೇವೆಯಲ್ಲಿ ಸ್ವಾರ್ಥ ಹಾಗೂ ಲಾಭ ಮನೋಭಾವನೆ ಅಡಗಿರುವುದನ್ನು ಕಾಣುತ್ತೇವೆ. ಇದು ಎಂದಿಗೂ ಸಾಮಾಜಿಕ ಸೇವೆಯಾಗಲಾರದು. ಇದು ಅವರ ಉಪಜೀವನದ ಒಂದು ಕ್ರಮವಾಗಿದೆ. ಆದರೆ ಹೊನ್ನಾಪುರಮಠರು ತಮ್ಮ ಸಾಮಾಜಿಕ ಸೇವೆಯಲ್ಲಿ ಎಂದೂ ಸ್ವಾರ್ಥ ಹಾಗೂ ಲಾಭ ಮನೋಭಾವನೆ ಹೊಂದದೇ ನಿಸ್ವಾರ್ಥ ಮನೋಭಾವನೆಯಿಂದ ಪ್ರಾಮಾಣಿಕ ಸೇವೆ ಸಲ್ಲಿಸಿದ ಮಹಾನುಭಾವರು.

ಗದಿಗೆಯ್ಯ ಹೊನ್ನಾಪುರಮಠರ ಸಾಮಾಜಿಕ ಸೇವೆಯನ್ನು ಅವಲೋಕಿಸಿದಾಗ ಇಂದು ಹೆಮ್ಮರವಾಗಿ ಬೆಳೆದು ನಿಂತ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕ ಸದಸ್ಯರಾಗಿ, ಆಡಳಿತ ಮಂಡಳಿಯ ಸದಸ್ಯರಾಗಿ ಅಪಾರ ಸೇವೆ ಸಲ್ಲಿಸಿದ್ದನ್ನು ಕಾಣುತ್ತೇವೆ. ಮುಂಬಯಿ ಪ್ರಾಂತಿಕ ರಾಜಕೀಯ ಪರಿಷತ್ತಿನ ಸ್ವಾಗತ ಸಮಿತಿ ಸದಸ್ಯರಾಗಿ ವೀರಶೈವ ಮಹಾಸಭಾದ ಸ್ಥಾಪಕ ಸದಸ್ಯರಾಗಿ ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿ ಖಾದಿಧಾರಿಗಳಾಗಿ, ಗ್ರಂಥಕರ್ತರ ಸಮ್ಮೇಳನ ಯೋಜನಾ ಸಮಿತಿ ಸದಸ್ಯರಾಗಿ, ಕನ್ನಡ ಭಾಷೆಗಳನ್ನಾಡುವ ಪ್ರದೇಶಗಳ ಏಕೀಕರಣಕ್ಕಾಗಿ ಸ್ಥಾಪಿಸಿದ ಸಮಿತಿಯ ಸದಸ್ಯರಾಗಿ ಧಾರವಾಡ ಮುನಸಿಪಾಲಿಟಿಯ ಸಭಾ ಸದಸ್ಯರಾಗಿ, ವೀರಶೈವ ಸ್ಥಾಯಿ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ, ತಮ್ಮ ಮನೆಯ ಅಟ್ಟದ ಮೇಲೆಯೇ ಕರ್ನಾಟಕ ಏಕೀಕರಣದ ಬೀಜಾಂಕುರ 'ಕರ್ನಾಟಕ ಸಭೆ' ಸ್ಥಾಪನೆ ಮಾಡಿದರು. ದಾವಣಗೆರೆಯಲ್ಲಿ ಪ್ರಥಮವಾಗಿ ಮೃತ್ಯುಂಜಯಪ್ಪಗಳು ಹಾಗೂ ಹರ್ಡೇಕರ ಮಂಜಪ್ಪನವರು ಕೂಡಿ ಬಸವಜಯಂತಿ ಆಚರಣೆ ಮಾಡುವ ವೇಳೆಯಲ್ಲಿ 'ತರುಣ ವೀರಶೈವ ಸಮ್ಮೇಳನ'ದ ಅಧ್ಯಕ್ಷತೆಯನ್ನು ವಹಿಸಿದ್ದರು.

ಹುಬ್ಬಳ್ಳಿ ಮೂರು ಸಾವಿರ ಮಠದ ಆಸ್ತಿ ನಿರ್ವಹಣೆಯ ಪಂಚಕಮೀಟಿ ಸದಸ್ಯರಾಗಿ ಹೀಗೆ ಹತ್ತು ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸಮಾಜ ಮುಖಿ ಸೇವೆ ಸಲ್ಲಿಸುವ ಮುಖಾಂತರ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬೆಳಗಾವಿಯ ಬಸವರಾಜ ಕಟ್ಟಿಮನಿ ಸ್ಮಾರಕ ಟ್ರಸ್ಟ್ ಅಧ್ಯಕ್ಷರಾದ ಡಾ. ಮಲ್ಲಿಕಾರ್ಜುನ ಹಿರೇಮಠ ಅವರು ಮಾತನಾಡಿ, ಹೊನ್ನಾಪುರಮಠರು ೩೩ ಅಮೂಲ್ಯ ಕೃತಿಗಳನ್ನು ಸಾರಸ್ವತಲೋಕಕ್ಕೆ ನೀಡಿದ್ದಾರೆ. ಕ.ವಿ.ವ.ಸಂಘವು ಪ್ರಕಟಿಸುತ್ತಿದ್ದ 'ವಾಗ್ಭೂಷಣ' ಪತ್ರಿಕೆಯ ಸಹಸಂಪಾದಕರಾಗಿಯೂ ಕಾರ್ಯಮಾಡಿದವರು. ಗದಿಗೆಯ್ಯನವರು ಸಮಚಿತ್ತದ, ಪೂರ್ಣ ಪ್ರಮಾಣದ ಹೊಣೆಗಾರಿಕೆಯ ವ್ಯಕ್ತಿತ್ವಕ್ಕೆ ಸಾಕ್ಷಿಯಾದವರು. ಉತ್ತರ ಕರ್ನಾಟಕದ ಮೊದಲನೇ ವೀರಶೈವ ವಕೀಲರೆಂದು ಪ್ರಖ್ಯಾತಿ ಹೊಂದಿದವರಾಗಿದ್ದರು. ಅವರು ಸಾಮಾಜಿಕ ಬದ್ಧತೆಯ ವಿಷಯದಲ್ಲಿ ಹಾಗೂ ತಮ್ಮ ತತ್ವ ಸಿದ್ಧಾಂತದೊಂದಿಗೆ ಎಂದೂ ರಾಜಿಯಾಗುತ್ತಿರಲಿಲ್ಲ ಎಂದರು.

ಕಾರ್ಯಕ್ರಮದಲ್ಲಿ ದಿ. ಶ್ರೀ ಗದಿಗೆಯ್ಯ ಹೊನ್ನಾಪುರಮಠರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಡಾ. ಹೇಮಾ ಪಟ್ಟಣಶೆಟ್ಟಿ ಉಪಸ್ಥಿತರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರೂಪಿಸಿ, ವಂದಿಸಿದರು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಹಾಗೂ ಕಾ.ಕಾ.ಸಮಿತಿ ಸದಸ್ಯರಾದ ಮನೋಜ ಪಾಟೀಲ ಅತಿಥಿಗಳನ್ನು ಗೌರವಿಸಿದರು.

೮೩. **ಡಾ. ಪಂಚಾಕ್ಷರಿ ಹಿರೇಮಠ ದತ್ತಿ :** ದಾನಿಗಳು, ಶ್ರೀಮತಿ ವಿಜಯಶ್ರೀ ಹಾಗೂ ಶ್ರೀ ಮೃತ್ಯುಂಜಯ, ಜಯದೇವ ಪಂ.ಹಿರೇಮಠ

ಸಹಸ್ರಚಂದ್ರ ದರ್ಶನ ಪಡೆದ ವಿದ್ಯಾವಾಚಸ್ಪತಿ ಡಾ. ಪಂಚಾಕ್ಷರಿ ಹಿರೇಮಠ ಅವರ ೮೭ ನೇ ಜನ್ಮದಿನಾಚರಣೆ ಅಂಗವಾಗಿ ದಿನಾಂಕ೧೦-೧-೨೦೧೯ ರಂದು ರಾ.ಹ. ದೇಶಪಾಂಡೆ ಸಭಾಭವನದಲ್ಲಿ 'ಡಾ. ಪಂಚಾಕ್ಷರಿ ಹಿರೇಮಠರ 'ಎನ್ನಾಲೇಕ ಮತ್ತು ಇತರ ಕಥೆಗಳು' ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು.

ಬೆಳಗಾವಿಯ ಡಾ. ಕೃಷ್ಣಶರ್ಮ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ನ ಟ್ರಸ್ಟ್‌ನ ಅಧ್ಯಕ್ಷರಾದ ಪ್ರೊ. ರಾಘವೇಂದ್ರ ಪಾಟೀಲ ಅತಿಥಿ ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದರು. ಧಾರವಾಡ ಪುರಸ್ಕಾರ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಕ.ವಿ.ವ. ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

೮೪. **ಶ್ರೀ ಮಾರ್ಕಂಡೇಯ ದೊಡಮನಿ ಶಿಕ್ಷಣ ಸಮಿತಿ ಹಾಗೂ ಚಾರಿಟೇಬಲ್ ಟ್ರಸ್ಟ್ ದತ್ತಿ :** ದಾನಿಗಳು, ಶ್ರೀ ಮಾರ್ಕಂಡೇಯ ದೊಡಮನಿ, ಸೌ. ಸುಶೀಲಾ ಮಾ. ದೊಡಮನಿ

ಮನುಷ್ಯ ನಿನ್ನ ಹತ್ತಿರ ಜಗತ್ತಿನ ಎಲ್ಲ ಸಂಪತ್ತನ್ನು ಇಟ್ಟುಕೊಂಡರೂ ನೀನು ಎಂದೂ ನಿಜವಾದ ಆನಂದವನ್ನು ಪಡೆಯಲು ಸಾಧ್ಯವಿಲ್ಲ ಎಂದು ಪುಡಕಲಕಟ್ಟಿ ಆತ್ಮಾನಂದ ಆಶ್ರಮದ ಶ್ರೀ ಈರಣ್ಣ ಸತ್ಯಣ್ಣವರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೩-೧-೨೦೧೯** ರಂದು ಆಯೋಜಿಸಿದ ಶ್ರೀ ಮಾರ್ಕಂಡೇಯ ದೊಡಮನಿ ಶಿಕ್ಷಣ ಸಮಿತಿ ಹಾಗೂ ಚಾರಿಟೇಬಲ್ ಟ್ರಸ್ಟ್ ದತ್ತಿ ಕಾರ್ಯಕ್ರಮದಲ್ಲಿ **'ಆನಂದವೇ ಮಾನವ ಧರ್ಮ'** (ಶ್ರೀ ಗುರುದೇವ ಆತ್ಮಾನಂದರ ಪ್ರವಚನ ಸಂಗ್ರಹ) ಗ್ರಂಥ ಬಿಡುಗಡೆಗೊಳಿಸಿ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಮನುಷ್ಯ ಆನಂದದಿಂದ ಇರಬೇಕೆಂದರೆ, ಮೊದಲು ನಿನ್ನನ್ನು ನೀನು ಅರಿತುಕೊಳ್ಳಬೇಕು. ಅಂದಾಗ ಮಾತ್ರ ನಿಜವಾದ ಆನಂದವನ್ನು ಹೊಂದಲು ಸಾಧ್ಯ. ಆತ್ಮಜ್ಞಾನಿಗಳು ಮಾತ್ರ ಈ ಜಗತ್ತಿನಲ್ಲಿ ಆನಂದದಿಂದ ಇರುತ್ತಾರೆ. ಯಾರು ಆತ್ಮಜ್ಞಾನವನ್ನು ಹೊಂದಿರುವುದಿಲ್ಲವೋ ಅವರು ಮಾನವರಷ್ಟೇ, ನಿಜವಾದ ಮಾನವರಲ್ಲ. ಮಾನವನು ತನ್ನ ಪಂಚೇಂದ್ರಿಯ ಮೂಲಕ ಆನಂದವನ್ನು ಹೊಂದಲು ತವಕಿಸುತ್ತಾನೆ. ಆದರೆ ಆತ್ಮಜ್ಞಾನದಿಂದಲ್ಲ. ಯಾರು ಪಂಚೇಂದ್ರಿಯಗಳ ಮೂಲಕ ಆನಂದವನ್ನು ಹೊಂದಲು ಬಯಸುತ್ತಾರೋ ಅವರು ಎಂದಿಗೂ ನಿಜವಾದ ಆನಂದವನ್ನು ಪಡೆಯಲು ಸಾಧ್ಯವಿಲ್ಲ. ಯಾರು ತಮ್ಮ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ಮನಸ್ಸನ್ನು ನಿಗ್ರಹ ಮಾಡಿಕೊಳ್ಳುತ್ತಾರೊ ಅವರು ಮಾತ್ರ ಆತ್ಮಜ್ಞಾನ ಹೊಂದಲು ಸಾಧ್ಯ. ಭಾರತ ದೇಶದ ಒಂದೊಂದು ಗ್ರಾಮಗಳಲ್ಲಿಯೂ ಭಗವಂತನು ಒಬ್ಬೊಬ್ಬ ಆತ್ಮಜ್ಞಾನಿಗಳನ್ನು ಹುಟ್ಟಿಸಿದ್ದಾನೆ. ಆತ್ಮಜ್ಞಾನಿಗಳೆಂದರೆ ಸತ್ಪುರುಷರು, ನಾವು ಇತಿಹಾಸವನ್ನು ಅವಲೋಕಿಸಿದಾಗ ಇದನ್ನು ಕಾಣುತ್ತೇವೆ. ನಾವು ಸತ್ಪುರುಷರ ಮಾತುಗಳನ್ನು ಕೇಳಿ ಬಹಳ ಚೆನ್ನಾಗಿ ಹೇಳಿದ್ದಾರೆ ಎನ್ನುತ್ತೇವೆ ವಿನಃ ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪಾಲನೆ ಮಾಡುವುದಿಲ್ಲ. ಎಲ್ಲಿಯವರೆಗೆ ಸತ್ಪುರುಷರ ತತ್ವ, ಸಿದ್ಧಾಂತಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾವು ನಿಜವಾದ ಆನಂದವನ್ನು ಹೊಂದಲು ಸಾಧ್ಯವಿಲ್ಲ ಎಂದರು. ನಮ್ಮಲ್ಲಿ ಅರಿವು ಇದೆ ಎನ್ನುವುದನ್ನು ಮರೆತು, ಅಜ್ಞಾನದಲ್ಲಿ ಮುಳುಗಿ ಹೋಗಿದ್ದೇವೆ. ಭಗವಂತ ಏ ಮಾನವ ಸಾವಿರಾರು ಜೀವರಾಶಿಗಳಲ್ಲಿ ನಿನಗೆ ಮಾತ್ರ ಅರಿವನ್ನು ದಯಪಾಲಿಸಿದ್ದೇನೆ. ಆದರೆ ಅದನ್ನು ನೀನು ಮರೆತು ಅರಿವು ಇಲ್ಲದ

ಪಶುಪಕ್ಷಿಗಳಿಗಿಂತ ಹೀನ್ನಾಯ ಸ್ಥಿತಿಯಲ್ಲಿ ಬದುಕುವುದನ್ನು ಕಂಡು ಮರಮರ ಮರಗುತ್ತಿದ್ದಾನೆ. ನಾವು ಆನಂದ ಪಡೆಯಬೇಕಾದರೆ ಗುರುವಿನ ಮಾರ್ಗದರ್ಶನದಲ್ಲಿ ಅವರ ತತ್ವ, ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅರಿವಿನಿಂದ ಜೀವನ ಸಾಗಿಸಿದಾಗ ನೀಜವಾದ ಆನಂದ, ಸುಖ ಹೊಂದಲು ಸಾಧ್ಯ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ, ಪೂಜ್ಯ ಶ್ರೀ ಸಮರ್ಥ ಶಿವಾನಂದ ಸ್ವಾಮಿಗಳು, ಸುರೇಬಾನ ಮನಿಹಾಳ, ನಾಗನೂರ ಅವರು ಮಾತನಾಡಿ, ಮನುಷ್ಯ ಆನಂದವನ್ನು ಬಾಹ್ಯ ವಸ್ತುಗಳಿಂದ ಪಡೆದುಕೊಳ್ಳಲು ಹವಣಿಸುತ್ತಾನೆ. ಆದರೆ ಅದು ಬಾಹ್ಯ ವಸ್ತುಗಳಿಂದ ಸಿಗುವುದಿಲ್ಲ. ಅವನು ಹುಡುಕಿ ಹುಡುಕಿ ಹತಾಶನಾಗುತ್ತಾನೆ. ಆದರೆ ಸಿಗುವುದಿಲ್ಲ. ಆನಂದವನ್ನು ನಾವು ಪಂಚೇಂದ್ರಿಯಗಳಿಂದ ಹುಡುಕಲು ಸಾಧ್ಯವಿಲ್ಲ. ಆನಂದಕ್ಕೆ ಆಕಾರ, ರೂಪ, ಬಣ್ಣ, ವಾಸನೆ ಯಾವುದೂ ಇಲ್ಲ. ಅದು ನಮ್ಮ ಅಂತರಂಗದ ಅನುಭವಕ್ಕೆ ಬರುವುದೇ ಆನಂದ. ಆನಂದ ನಮ್ಮ ಅಂತರಂಗದೊಳಗೆ ಅಡಗಿದೆ. ಅದನ್ನು ಬೇರೆಲ್ಲೂ ಹುಡುಕುವ ಅಗತ್ಯವಿಲ್ಲ. ಅದನ್ನು ಕಂಡುಕೊಳ್ಳುವ ಮಾರ್ಗ ಅನುಸರಿಸಬೇಕು. ಆನಂದಕ್ಕೆ ಜಾತಿ, ಮತ, ಧರ್ಮ, ಪಂಥಗಳಿಲ್ಲ. ಯಾವುದೆ ಜಾತಿಯವರಿರಲಿ ಆನಂದ ಬಯಸುತ್ತಾನೆ. ಆದರೆ ಅರವಿನ ಕೊರತೆಯಿಂದ ಅದು ಸಿಗುತ್ತಿಲ್ಲ. ನಾವು ಭೂಮಿಯ ಮೇಲೆ ಇನ್ನೊಬ್ಬರಿಗೆ ತೊಂದರೆ ಕೊಟ್ಟು, ಇನ್ನೊಬ್ಬರ ಮನಸ್ಸಿಗೆ ಘಾತವ ಮಾಡಿ, ಒಬ್ಬರನ್ನೊಬ್ಬರು ಹಿಂಸಿಸಿ ಬದುಕುತ್ತಿದ್ದೇವೆ. ನಮಗೆಲ್ಲಿ ದೊರೆಯಬೇಕು ಆನಂದ. ಇದನ್ನೆಲ್ಲ ಬಿಟ್ಟು ಸತ್ಪುರುಷರ ಹೇಳಿದ ಸಾತ್ವಿಕ ಮಾರ್ಗದಲ್ಲಿ ನಡೆದುಕೊಂಡು, ಪರಸ್ಪರ ಅರಿತು, ಬೆರೆತು, ಸಹಕಾರದಿಂದ ಅನ್ಯೋನ್ಯವಾಗಿ ಶುದ್ಧ ಮನಸ್ಸಿನಿಂದ ಬಾಳಿ ಬದುಕಿದರೆ ಆನಂದ ಹೊಂದಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಗ್ರಂಥ ದಾನಿಗಳಾದ ಕಾರವಾರದ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಕಾಲೇಜಿನ ಡಾ. ಶಿವಾನಂದ ದೊಡಮನಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ದತ್ತಿದಾನಿ ಹಾಗೂ ಗ್ರಂಥ ಸಂಪಾದಕರಾದ, ಶರಣ ಹರಳಯ್ಯ ಪತ್ರಿಕೆ ಸಂಪಾದಕ ಶ್ರೀ ಮಾರ್ಕಂಡೇಯ ದೊಡಮನಿ ದಂಪತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರೂಪಿಸಿ, ವಂದಿಸಿದರು. ಶ್ರೀಮತಿ ಮಹಾದೇವಿ ದೊಡಮನಿ ಸಹೋದರಿಯರು ಪ್ರಾರ್ಥನೆ ಹಾಡಿದರು.

೮೫. **ಶ್ರೀಮತಿ ರೇಣವ್ವ ಅಂಗಡಿ ಹಾಗೂ ಶ್ರೀ ರುದ್ರಪ್ಪ ಗುಂಡಪ್ಪ ಅಂಗಡಿ ಸಂಸ್ಮರಣ ದತ್ತಿ :** ದಾನಿಗಳು ಶ್ರೀಮತಿ ಸುಮಂಗಲಾ ಮತ್ತು ಡಾ. ಲಿಂಗರಾಜ ಅಂಗಡಿ

ಪ್ರತಿ ವರ್ಷ ಜುಲೈ ೨೫ ರಂದು ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲು ದತ್ತಿ ಇರಿಸಿದ್ದಾರೆ.

೮೬. **ದಿ. ಶ್ರೀ ಎನ್. ಎಚ್. ದೇಸಾಯಿ (ನಾನಪ್ಪ ಮಾಸ್ತರ) ಸ್ಮಾರಕ ದತ್ತಿ:** ದಾನಿಗಳು, ಪ್ರೇಮಾಬಾಯಿ ಎನ್. ದೇಸಾಯಿ

ಪ್ರತಿ ವರ್ಷ ಜನವರಿ ೧೧ ರಂದು ಪ್ರಾಥಮಿಕ ಶಾಲಾ ಶಿಕ್ಷಕರಿಂದ ಕವಿಗೋಷ್ಠಿ ಇಲ್ಲವೆ ಮಕ್ಕಳ ಗೀತಗಾಯನ ಏರ್ಪಡಿಸಲು ದತ್ತಿ ಸ್ಥಾಪಿಸಿದ್ದಾರೆ.

೮೭. **ಡಾ. ಆರ್. ಸಿ. ಹಿರೇಮಠ ದತ್ತಿ :** ದಾನಿಗಳು, ಡಾ. ಶಶಿಕಲಾ ಆರ್. ಹಿರೇಮಠ

ಡಾ. ಆರ್.ಸಿ. ಹಿರೇಮಠ ದತ್ತಿ ಕಾರ್ಯಕ್ರಮ ಅಂಗವಾಗಿ ದಿನಾಂಕ ೧೫-೧-೨೦೧೯ ರಂದು ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ 'ಡಾ. ಆರ್.ಸಿ. ಅವರ ಬದುಕು-ಬರಹ' ವಿಷಯ ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು.

'ಡಾ. ಆರ್.ಸಿ. ಅವರ ಬದುಕು ಬರಹ' ಅವರ ಕುರಿತು ಬಾಗಲಕೋಟೆಯ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆ ವ ಸಂಶೋಧನಾ ಕೇಂದ್ರದ ಉಪ ಆಡಳಿತ ಅಧಿಕಾರಿಗಳಾದ ಡಾ. ಶಿಲ್ಪಾ ವಾರದ ಅತಿಥಿ ಉಪನ್ಯಾಸ ನೀಡಿ ಮಾತನಾಡಿದರು.

ಧಾರವಾಡ ರಾಯಾಪೂರದ ಮಹಾಂತ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕರಾದ ಡಾ. ಸುಜಾತಾ ಕೋಂಬಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

೮೮. **ಶ್ರೀಮತಿ ಸುಶಿಲಾ ಎಮ್. ಅಪ್ಪಾಜಿ ಸ್ಮರಣೆ ದತ್ತಿ :** ದಾನಿಗಳು, ಶ್ರೀಮತಿ ಮಂಜುಳಾ ಕಟ್ಟೀಮನಿ

ಶ್ರೀಮತಿ ಸುಶೀಲಾ ಮಲ್ಲೇಶಪ್ಪ ಅಪ್ಪಾಜಿ ದತ್ತಿ ಕಾರ್ಯಕ್ರಮವನ್ನು ದಿನಾಂಕ ೧೬-೧-೨೦೧೯ ರಂದು ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಪ್ರಸಿದ್ಧ ಸಂಗೀತಗಾರರಾದ ಶ್ರೀಮತಿ ಸುಜಾತಾ ಗುರವ ಅವರಿಂದ ವಚನ ಸಂಗೀತ ಏರ್ಪಡಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಮಾತನಾಡಿದರು.

ಶ್ರೀಮತಿ ಸುಜಾತಾ ಗುರವ ವಚನ ಸಂಗೀತ ಕಾರ್ಯಕ್ರಮವನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

೮೯. **ಶ್ರೀ ಗಜಾನನ ಮಹಾಲೆ ದತ್ತಿ :** ದಾನಿಗಳು, ಶ್ರೀ ಶಂಕರ ಹಲಗತ್ತಿ

ಪಾತ್ರಧಾರಿಗಳಿಗೆ ಭಾವನೆಗಳನ್ನು ತುಂಬುವುದೇ ಪ್ರಸಾದನ ಕಲೆಯಾಗಿದೆ ಎಂದು ಧಾರವಾಡ ಸಹಕಾರ ಇಲಾಖೆಯ ಉಪನಿಬಂಧಕರಾದ ಶ್ರೀಮತಿ ಸಾವಿತ್ರಿ ಕಡಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು,

ಗಜಾನನ ಮಹಾಲೆ ದತ್ತಿ ಅಂಗವಾಗಿ ದಿನಾಂಕ **೨೦-೧-೨೦೧೯** ರಂದು ಆಯೋಜಿಸಿದ್ದ **'ಸುಗಮ ಸಂಗೀತ'** ಹಾಗೂ **'ನಾಟಕ ಪ್ರದರ್ಶನ'**ದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪಾತ್ರಧಾರಿಗಳಿಗೆ ನಾನು ಯಾವ ಪಾತ್ರವನ್ನು ಮಾಡುತ್ತಿದ್ದೇನೆ. ನಾನು ಅವನೇ ಎಂದು ಭಾವನೆ ಮೂಡುವುದು ಬಣ್ಣವನ್ನು ಹಚ್ಚಿಕೊಂಡ ಮೇಲೆ. ಆ ಬಣ್ಣ ಅವನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅವನು ಕನ್ನಡಿಯಲ್ಲಿ ನೋಡಿಕೊಂಡಾಗ ನಾನು ಪಾತ್ರಧಾರಿಯಲ್ಲ. ನಾನು ಅವನೇ ಎನ್ನುವ ಭಾವನೆ ಮೂಡಿ ಅವನು ರಂಗದ ಮೇಲೆ ನಿರಾಳವಾಗಿ ತನ್ನ ಕಲೆಯನ್ನು ಪ್ರದರ್ಶಿಸುತ್ತಾನೆ. ಶ್ರೀ ಗಜಾನನ ಮಹಾಲೆ ಅವರು ತಮ್ಮ ಜೀವನದುದ್ದಕ್ಕೂ ಪ್ರಸಾದನದ ಸೇವೆ ಸಲ್ಲಿಸಿ ಸಾವಿರಾರು ನಾಟಕಗಳ ಪ್ರದರ್ಶನಕ್ಕೆ ಕಾರಣೀಭೂತರಾದವರು. ಆದರೆ, ಇವರಿಗೆ ಸರಕಾರದಿಂದಾಗಲಿ, ಜನರಿಂದಾಗಲಿ ಇವರು ಬದುಕಿದ್ದಾಗ ಸಿಗಬೇಕಾದ ಮಾನ್ಯತೆ ಸಿಗಲಿಲ್ಲ. ಯಾವ ಸರಕಾರಗಳೂ ಮಾಡದ ಕೆಲಸ ಕರ್ನಾಟಕ ವಿದ್ಯಾವರ್ಧಕ ಸಂಘ ಮಾಡುತ್ತಿದೆ. ಹಾಗೂ ಇಂಥ ಮಹನೀಯರ ಸ್ಮರಣೆ ಇಂದಿನ ಯುವಕರಿಗೆ ಅತ್ಯವಶ್ಯ. ಇಂದಿನ ಯುವಕರು ಇತಿಹಾಸವನ್ನು ಅವಲೋಕಿಸಿದಾಗ ಮಾತ್ರ ಅವರಿಗೆ ಮುಂದಿನ ಮಾರ್ಗದರ್ಶನ ಸಿಗುತ್ತದೆ. ನಾನು ಕೆ.ಎ.ಎಸ್. ವ್ಯಾಸಂಗ ಮಾಡುವಾಗ ಕರ್ನಾಟಕ ಏಕೀಕರಣದ ಬಗ್ಗೆ ಓದುತ್ತಿರುವಾಗ ಏಕೀಕರಣದ ಹೋರಾಟ ಕರ್ನಾಟಕ ವಿದ್ಯಾವರ್ಧಕ ಸಂಘದಿಂದಲೇ ಪ್ರಾರಂಭವಾಯಿತು. ಆಗ ನಾನು ಬಹಳಷ್ಟು ಸಂಘದ ಬಗ್ಗೆ ತಿಳಿದುಕೊಂಡಿದ್ದೆ. ನನ್ನ ಭಾಗ್ಯ ಧಾರವಾಡಕ್ಕೆ ವರ್ಗವಾಗಿ ಬಂದು ಈ ವಿದ್ಯಾವರ್ಧಕ ಸಂಘದಲ್ಲಿ ಇಂದು ಇಂಥ ಮಹಾನ್ ವ್ಯಕ್ತಿಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವುದು ನಮಗೆ ಹೆಮ್ಮೆ ಎನಿಸುತ್ತಿದೆ. ಸುಮಾರು ೧೨೫ ವರ್ಷದಿಂದ ಕನ್ನಡ, ನಾಡು ನುಡಿ ಜಲ, ಗಡಿಗಳಿಗಾಗಿ ಸೇವೆ ಸಲ್ಲಿಸುತ್ತಿರುವ ಸಂಘವೆಂದರೇ ಅದು ಕರ್ನಾಟಕ ವಿದ್ಯಾವರ್ಧಕ ಸಂಘ ಎಂದು ಹೇಳಿದರು.

ಧಾರವಾಡ ಕೃಷಿ ವಿ.ವಿ.ಯ ಪ್ರಾಧ್ಯಾಪಕರಾದ ಡಾ. ಅನಿಲಕುಮಾರ ಮುಗಳಿ ಅತಿಥಿಗಳಾಗಿ ಆಗಮಿಸಿ, ಮಾತನಾಡುತ್ತಾ, ನಾನು ಸಹ ಒಬ್ಬ ರಂಗ ಕಲಾವಿದನಿದ್ದು, ಗಜಾನನ ಮಹಾಲೆ ಅವರಿಂದ ಬಣ್ಣ ಹಚ್ಚಿಸಿಕೊಂಡವನೇ, ಒಮ್ಮೆ ನಾನು ನಾಟಕದಲ್ಲಿ ದುರ್ಯೋಧನನ ಪಾತ್ರವನ್ನು ಮಾಡಿದ್ದೆ. ಗಜಾನನ ಮಹಾಲೆ ಅವರ ಹತ್ತಿರ ಬಣ್ಣವನ್ನು ಹಚ್ಚಿಸಿಕೊಂಡ ಮೇಲೆ ಕನ್ನಡಿಯಲ್ಲಿ ನೋಡಿಕೊಂಡೆ. ನಾನು ನಾನಾಗಿ ಉಳಿದಿದ್ದಿಲ್ಲ. ದುರ್ಯೋಧನನಾಗಿ ಆಗಿ ಪರಿವರ್ತನೆ ಆಗಿಬಿಟ್ಟಿದ್ದೆ. ನನ್ನ ಅಂತರಂಗದಲ್ಲಿ ನಾನು ದುರ್ಯೋಧನ ನಾನು ಅನಿಲಕುಮಾರ ಅಲ್ಲ ಎಂದು ಭಾವನೆ ಮೂಡಿ ವೇದಿಕೆಯ ಮೇಲೆ ನಿಜವಾದ ಮಹಾಭಾರತ ನಡೆದಿದೆ. ನಾನು ದುರ್ಯೋಧನನೆ ಅಂತಾ ಪಾತ್ರಕ್ಕೆ ಜೀವ ತುಂಬಿ ಪ್ರದರ್ಶನ ನೀಡಿದೆ. ಗಜಾನನ ಮಹಾಲೆ ಅವರ ವಿಶಿಷ್ಟ ಭಗವಂತನು ನೀಡಿದ ಕಲೆ ಎಂದರೆ ಇವರು ಯಾವುದೇ ತರಹದ ಪಾತ್ರಧಾರಿಗಳನ್ನ ಅದೇ ರೀತಿಯಾಗಿ ತಮ್ಮ ಪ್ರಸಾದನ ಕಲೆಯಿಂದ ತಯಾರುಮಾಡುತ್ತಿದ್ದರು. ಸಾಧಾರಣ ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡುತ್ತಿದ್ದರು. ಧಾರವಾಡದಲ್ಲಿ ನಾನು ಕಂಡ ಅಪರೂಪದ ವ್ಯಕ್ತಿಗಳಿಬ್ಬರು. ಅವರು ಸೈಕಲ್ ಮೇಲೆಯೇ ಸವಾರಿ ಮಾಡುವವರು. ಒಬ್ಬರು ಕವಿಗಳಾದಂಥ ಡಾ.ವ್ಹಿ.ಸಿ. ಐರಸಂಗ, ಇನ್ನೊಬ್ಬರು ಗಜಾನನ ಮಹಾಲೆ ಅವರು. ಅತಿ ಸರಳೀಕರಣ ಜೀವನ ಇವರದು. ಇವರು ಯಾವತ್ತು ತಮ್ಮ ಕಲೆಗಳತ್ತ ಮುಖಮಾಡಿ ಕೆಲಸ ಮಾಡುವುದರಲ್ಲೇ ತಲ್ಲಿನರಾದವರು. ಇವತ್ತು ಪ್ರಶಸ್ತಿಗಳನ್ನು ಪಡೆಯಬೇಕಾದರೆ ವಸೂಲಿ, ಲಾಭಿ ಮಾಡಬೇಕು. ಆದರೆ. ಮಹಾಲೆಯವರು ತಮ್ಮ ಕಲೆಯಿಂದಲೇ ಪ್ರಶಸ್ತಿಯನ್ನು ಪಡೆದುಕೊಂಡವರು. ಇವರ ಹಾದಿಯಲ್ಲೇ ಇವರ ಮಗ ಸಂತೋಷ ಮಹಾಲೆಯವರು ಸಾಗುತ್ತಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆ ಮೇಲೆ ಇನ್ನೋರ್ವ ಅತಿಥಿ ಗೋಕಾಕದ ಹೈಕೋರ್ಟ ವಕೀಲರಾದ ವಾಲಿ ಹಾಗೂ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಇದ್ದರು. ಪ್ರಾರಂಭದಲ್ಲಿ ಗಜಾನನ ಮಹಾಲೆ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸಲಾಯಿತು. ಪ್ರಾರಂಭದಲ್ಲಿ ಕು. ಶ್ರೀಹರಿ ಅಂಬೇಕರ ಹಾಗೂ ಸಂಗಡಿಗರು ಸುಗಮ ಸಂಗೀತ ಪ್ರಸ್ತುತಪಡಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಸ್ವಾಗತಿಸಿದರು. ಮನೋಜ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಸತೀಶ ತುರಮರಿ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು. ಕೊನೆಯಲ್ಲಿ ಕುಲಪುರೋಹಿತ ಡಾ. ಆಲೂರ ವೆಂಕಟರಾವ ಅವರ ಮೂಲ ಕಥೆಯ, ಸಂತೋಷ ಗಜಾನನ ಮಹಾಲೆ ನಾಟಕ ರೂಪಾಂತರ, ವಿಜಯೀಂದ್ರ ಅರ್ಚಕ ಪರಿಕಲ್ಪನೆ ಮತ್ತು ನಿರ್ದೇಶನದ 'ಭಕ್ತ ಕನಕದಾಸ' ನಾಟಕ ಪ್ರದರ್ಶನಗೊಂಡಿತು.

೯೦. **ಶ್ರೀ ಎಂ. ಡಿ. ಗೋಗೇರಿ ದತ್ತಿ :**

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀ ಎಂ.ಡಿ. ಗೋಗೇರಿ ದತ್ತಿ ಅಂಗವಾಗಿ ದಿನಾಂಕ ೨೫-೧-೨೦೧೯ ರಂದು ಶ್ರೀ ಎಂ.ಡಿ. ಗೋಗೇರಿಯವರ 'ಗೀತ ಗಾಯನ' ಕಾರ್ಯಕ್ರಮವನ್ನು ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಬಿ. ಗಾಮನಗಟ್ಟಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ವಿನಾಯಕ ಪಾಲನಕರ ಅವರು ವಹಿಸಿದ್ದರು.

ಹುಬ್ಬಳ್ಳಿಯ ಸಂಗೀತ ಶಿಕ್ಷಕರಾದ ಶ್ರೀಮತಿ ಪಲ್ಲವಿ ಹಾಗೂ ಸಂಗೀತಗಾರರಾದ ಶ್ರೀಧರ ಪಾಡಾ ಶ್ರೀ ಎಂ.ಡಿ. ಗೋಗೇರಿಯವರ ಗೀತ ಗಾಯನ ಪ್ರಸ್ತುತಪಡಿಸಿದರು.

೯೧. **ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ದತ್ತಿ :** ದಾನಿಗಳು, ಶ್ರೀ ಎಸ್. ಎಂ. ಶಿವಪ್ರಸಾದ

ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ದತ್ತಿ ಅಂಗವಾಗಿ ದಿನಾಂಕ **೨೮-೧-೨೦೧೯** ರಂದು ಆಯೋಜಿಸಿದ್ದ 'ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ಅವರ ಜೀವನ ದರ್ಶನ' ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಬೈಲಹೊಂಗಲದ ಕೆ.ಆರ್.ಸಿ.ಇ.ಎಸ್. ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು, ಪ್ರಸಿದ್ಧ ಕಥೆಗಾರರಾದ ಡಾ. ಸಂಗಮನಾಥ ಲೋಖಾಪೂರ ಅವರು ಅತಿಥಿ ಉಪನ್ಯಾಸಕರಾಗಿ ಆಗಮಿಸುವರು.

ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪ್ರೊ. ಕೆ.ಎಸ್. ಕೌಜಲಗಿ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಧಾರವಾಡ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ನ ಅಧ್ಯಕ್ಷರಾದ ಡಾ. ಡಿ.ಎಂ. ಹಿರೇಮಠ ಅಧ್ಯಕ್ಷತೆ ವಹಿಸುವರು.

೯೨. **ಶ್ರೀ ಸತ್ಯ ಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನ ಉತ್ತರಾಧಿಮಠ ದತ್ತಿ :** ದಾನಿಗಳು, ಶ್ರೀಮತಿ ಜಯಶ್ರೀ ಶೇಷರಾಜ ಗುತ್ತಲ ದಂಪತಿಗಳು.

'ಮನಮುಟ್ಟುವ, ಹೃದಯ ತಟ್ಟುವ, ಪರಿಶುದ್ಧವಾದ ಸುಶ್ರಾವ್ಯ ಸಂಗೀತ ಅನೇಕ ಮನೋವ್ಯಾಧಿಗಳನ್ನು ಗುಣಪಡಿಸುವುದು ಇಂದಿನ ಮೊಬೈಲ್ ಮತ್ತು ಕಂಪ್ಯೂಟರಗಳನ್ನು ಅತಿಯಾಗಿ ಬಳಸುವ ನಮ್ಮ ಯುವಕ-ಯುವತಿಯರು ಮನೋಗ್ಲಾನಿಗಳಿಂದ ಬಳಲುತ್ತಿದ್ದಾರೆ. ಹರಿದಾಸರ ಹಾಡುಗಳನ್ನು ಪಾಲಕರು ತಮ್ಮ ಮಕ್ಕಳಿಗೆ ಹೇಳಿಕೊಡುವುದರ ಮೂಲಕ ಸಂಪ್ರದಾಯ, ಸಂಸ್ಕಾರಗಳನ್ನು ಕೊಡುವುದರಿಂದ ಯಾವುದೇ ಮನೋರೋಗಗಳು ಕಾಡಲಾರವು' ಎಂದು ಖ್ಯಾತ ಮನೋವೈದ್ಯ ಡಾ. ಆನಂದ ಪಾಂಡುರಂಗಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನ, ಧಾರವಾಡದ ಉತ್ತರಾಧಿಮಠ ದತ್ತಿ ಕಾರ್ಯಕ್ರಮ ಅಂಗವಾಗಿ ದಿನಾಂಕ **೨೯-೧-೨೦೧೯** ರಂದು ಆಯೋಜಿಸಿದ್ದ **ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ**ದಲ್ಲಿ ದಾಸ ಸಾಹಿತ್ಯದ ರೂಪಕ ಉದ್ಘಾಟನೆಗೊಳಿಸಿ ಮಾತನಾಡಿದರು.

ಸಾಹಿತಿ ಶ್ರೀನಿವಾಶ ಕುಲಕರ್ಣಿ ಅವರು ಅತಿಥಿಗಳಾಗಿ ಆಗಮಿಸಿ, ಮಾತನಾಡುತ್ತಾ, ಕೇವಲ ಭೌತಿಕತೆಯೇ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಸುಹಾಸಿನಿಯರು ಅಲ್ಲಲ್ಲಿ ಭಜನಾ ಮಂಡಳಿ ರಚಿಸಿಕೊಂಡು ಹರಿದಾಸರ ಹಾಡುಗಳನ್ನು ಪ್ರಚುರಪಡಿಸುವುದರ ಮೂಲಕ ಸಂಪ್ರದಾಯಗಳನ್ನು ಉಳಿಸಿ-ಬೆಳೆಸಿಕೊಂಡು ಹೊರಟಿದುದು ಸಂತೋಷಕರ ಸಂಗತಿ ಎಂದರು.

ಕ.ವಿ.ವ. ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಬ್ರಾಹ್ಮಣ ಹೆಂಗಳೆಯರು ನೂರಾರು ಸಂಖ್ಯೆಯಲ್ಲಿ ಸಂಘಟಿತರಾಗಿ 'ಸಂಪ್ರದಾಯ-ಸಂಸ್ಕಾರ' ಗಳನ್ನು ಮುಂದುವರೆಸುತ್ತಿರುವುದನ್ನು ಬೇರೆಯವರು ಅವರನ್ನು ಅನುಸರಿಸಬೇಕೆಂದು ಹೇಳಿದರು.

ಧಾರವಾಡದ ಯೋಗಮಿತ್ರ ಮಹಿಳಾ ಮಂಡಳದ ಶ್ರೀಮತಿ ವಿದ್ಯಾ ಶಿರಹಟ್ಟಿ, ಹಾಗೂ ಶ್ರೀಮತಿ ಜಯಶ್ರೀ ಗದಗಕರ ನೇತೃತ್ವದಲ್ಲಿ ಪ್ರಸ್ತುತಪಡಿಸಿದ ಮೇರು ಹರಿದಾಸಿಣಿ 'ಗಲಗಲಿಅವ್ವನವರು' ರೂಪಕವನ್ನು ಪ್ರಸ್ತುಪಡಿಸಿ, ನೆರೆದ ಪ್ರೇಕ್ಷಕರ ಮನ ಗೆಲ್ಲುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮದ ಪೂರ್ವದಲ್ಲಿ ಹರಿದಾಸ ಮಹಿಳೆಯರ ಹಾಡುಗಳ ಸ್ಪರ್ಧೆ ಜರುಗಿತು. ಹರಿದಾಸ ಮಹಿಳೆಯರ ಹಾಡುಗಳ ಸ್ಪರ್ಧೆಯಲ್ಲಿ ಶ್ರೀಮತಿ ರೇಖಾ ದೇಶಪಾಂಡೆ ನೇತೃತ್ವದ ತಾರಕೇಶ್ವರಿ ಭಜನಾ ಮಂಡಳಿ ಪ್ರಥಮ ಬಹುಮಾನ ಪಡೆದು 'ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ-೨೦೧೯ನ್ನು ಪಡೆದುಕೊಂಡರು. ಶ್ರೀಮತಿ ಕಾಂಚನಾ ಕಟ್ಟಿ ನೇತೃತ್ವದ ಓಂಕಾರ ಭಜನಾ ಮಂಡಳಿ ದ್ವಿತೀಯ ಬಹುಮಾನವನ್ನು ಪಡೆದರೆ, ತೃತೀಯ ಬಹುಮಾನವನ್ನು ಶ್ರೀಮತಿ ಸರೋಜಾ ದೇಶಪಾಂಡೆ ನೇತೃತ್ವದ ಸ್ವರ್ಣ ಕಮಲ ಭಜನಾ ಮಂಡಳಿ ಹಾಗೂ ಶ್ರೀಮತಿ ಸುಮಾ ದೇಸಾಯಿ ನೇತೃತ್ವದ ಆರಾಧನಾ ಭಜನಾ ಮಂಡಳಿಯು ಜಂಟಿಯಾಗಿ ಪಡೆದುಕೊಂಡವು

ಇದೇ ಸಂದರ್ಭದಲ್ಲಿ ಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನದ ವತಿಯಿಂದ ಜರುಗುವ ಉತ್ತರಾಧಿಮಠ ದತ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಳೆದ ಸತತ ೧೧ ವರ್ಷಗಳವರೆಗೆ ವಹಿಸಿದ ಶತಾಯುಷಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸತ್ಯಪ್ರಮೋದ ಹರಿದಾಸ ಪ್ರತಿಷ್ಠಾನದ ಅಧ್ಯಕ್ಷರಾದ ಎಸ್.ಬಿ. ಗುತ್ತಲ ದತ್ತಿ ಕುರಿತು ಮಾತನಾಡಿದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಅತಿಥಿಗಳನ್ನು ಪರಿಚಯಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಬಿ.ಗಾಮನಗಟ್ಟಿ ವಂದಿಸಿದರು.ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಜನೆವರಿ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕ ಸತೀಶ ತುರಮರಿ ಕಾರ್ಯಕ್ರಮ ನಿರೂಪಿಸಿದರು. ಸ್ಪರ್ಧೆಯ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸರೋಜಾರಾವ ಹಾಗೂ ಪ್ರತಿಷ್ಠಾನದ ಸಹ ಕಾರ್ಯದರ್ಶಿ ಹಾಗೂ ದಂತ ಮಹಾವಿದ್ಯಾಲಯದ ಪ್ರಾಧ್ಯಾಪಿಕೆ ಡಾ. ಕೃತಿಕಾ ಗುತ್ತಲ

ಬಹುಮಾನ ಹಾಗೂ ಪ್ರಮಾಣ ಪತ್ರ ಭಾಗವಹಿಸಿದವರಿಗೆ ನೀಡಿದರು. ಇನ್ನೋರ್ವ ಅತಿಥಿ ಹಾಗೂ ಸಹ ನಿರ್ಣಾಯಕಿ ಶ್ರೀಮತಿ ಆಶಾ ಪ್ರಳಯಕಲ್ಮಠ ವೇದಿಕೆ ಮೇಲೆ ಉಪಸ್ಥಿತರಿದ್ದರು.

೯೩. **ದಿ. ಆರ್.ಎಚ್. ಗೂಡವಾಲಾ ದತ್ತಿ :** ದಾನಿಗಳು, ಶ್ರೀ ಎನ್.ಆರ್. ಗೂಡವಾಲಾ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಹುಬ್ಬಳ್ಳಿ

ಪ್ರತಿವರ್ಷ ಫೆಬ್ರುವರಿ ೨ ರಂದು ಕಾನೂನು ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲು ೨೦೧೮ ರಲ್ಲಿ ದತ್ತಿ ಸ್ಥಾಪಿಸಿದ್ದಾರೆ.

೯೪. **ಪ್ರೊ. ವಿಜಯೇಂದ್ರ ಮೊಕಾಸಿ ಸ್ಮರಣಾರ್ಥ ದತ್ತಿ :** ದಾನಿಗಳು, ಶ್ರೀಮತಿ ಸರೋಜಿನಿ ವಿ. ಮೊಕಾಸಿ

ಪ್ರತಿ ವರ್ಷ ಶಿವರಾತ್ರಿ ಅಕ್ಕ ಪಕ್ಕ **"ತೋಟಗಾರಿಕೆ"** ವಿಷಯ ಕುರಿತು ಕಾರ್ಯಕ್ರಮ ಏರ್ಪಡಿಸಲು ದತ್ತಿ ಇರಿಸಿದ್ದಾರೆ.

೯೫. **ಡಾ. ಶಿವಾನಂದ ಶಾಂತಪ್ಪ ಗಾಳಿ ದತ್ತಿ :** ದಾನಿಗಳು, ಡಾ. ಜಿನದತ್ತ, ಶ್ರೀಮತಿ ಸುಜಾತಾ ಹಡಗಲಿ

ಧಾರವಾಡ : ವಡ್ಡಾರಾಧನೆ ೧೯ ಕಥೆಗಳ ಒಂದು ಗುಚ್ಚ, ಇದೊಂದು ಮಹೋನ್ನತ ಕೃತಿಯಾಗಿದ್ದು, ಇದರಲ್ಲಿ ಬರುವ ಕಥೆಗಳು ತಮ್ಮ ಶಕ್ತಿ, ಸರಳತೆ, ದೇಶಿಯತೆಯ ಚೆಲುವಿನಿಂದ ಓದುಗರ ಗಮನ ಸೆಳೆಯುತ್ತವೆ ಎಂದು ಕಲಘಟಗಿ ಗುಡ್‌ನ್ಯೂಜ್ ಕಾಲೇಜಿನ ಪ್ರಾಚಾರ್ಯರಾದ ಡಾ. ಬಿ. ಜಿ. ಬಿರಾದಾರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿ. ಡಾ. ಶಿವಾನಂದ ಶಾಂತಪ್ಪ ಗಾಳಿ ದತ್ತಿ ಅಂಗವಾಗಿ ದಿನಾಂಕ **೧೩-೦೨-೨೦೧೯** ರಂದು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ **'ವಡ್ಡಾರಾಧನೆಯ ಒಂದು ಅವಲೋಕನ'** ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ವಡ್ಡಾರಾಧನೆಯ ಕಥೆಗಳಲ್ಲಿ ಜೀವ ತುಂಬಿದ ಶಿವಕೋಟ್ಯಾಚಾರ್ಯರು ಬೇರೆ ಬೇರೆ ರೀತಿಯಿಂದ ಕಥೆಗಳನ್ನು ಹೇಳಿದ್ದಾರೆ. ನೀತಿ, ಚರಿತ್ರೆ, ಧರ್ಮ, ವ್ಯವಹಾರ ಹೀಗೆ ಹಲವು ವಿಷಯಗಳು ಈ ಕಥೆಗಳಲ್ಲಿವೆ. ಧಾರ್ಮಿಕ ಉದ್ದೇಶದಿಂದ ರಚಿತವಾದ ಈ ಕೃತಿ ಹಳೆಗನ್ನಡದ ಉತ್ತಮ ಕೃತಿಯಾಗಿದೆ. ಇದು ಒಂದು ಅದ್ಭುತ ಗದ್ಯ ಕಾವ್ಯ. ಕೃತಿಯ ಗಾತ್ರದ ಮೇಲೆ ಕೃತಿಯನ್ನು ದೊಡ್ಡದು, ಸಣ್ಣದು ಎಂದು ವರ್ಗೀಕರಿಸಲು ಬರುವುದಿಲ್ಲ. ವಡ್ಡಾರಾಧನೆ ಒಂದು ಮಹೋನ್ನತ ಕೃತಿಯಾಗಿದೆ ಇದರಲ್ಲಿಯ ಕಥೆಗಳು ತಮ್ಮ ಶಕ್ತಿ, ಸರಳತೆ, ದೇಶಿಯತೆಯ ಚೆಲುವಿನಿಂದ ಓದುಗರ ಗಮನ ಸೆಳೆಯುತ್ತವೆ ಎಂದು, ಗಾಳಿಯವರ ಮನೆ ಆತಿಥ್ಯಕ್ಕೆ ಹೆಸರಾಗಿತ್ತು. ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದ ಗಾಳಿಯವರು ಅಜಾತ ಶತ್ರುವಾಗಿದ್ದರು. ಅವರು ಧಾರವಾಡ ಜಿಲ್ಲಾ ಕ.ಸಾ.ಪ ಅಧ್ಯಕ್ಷರಾಗಿ ನಾಲ್ಕು ಅವಧಿಗೆ ಆಯ್ಕೆಯಾಗಿ ಮರೆಯಲಾಗದ ಕಾರ್ಯ ಮಾಡಿದ್ದಾರೆ. ಅವರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಅಪಾರವಾಗಿ ಕಾರ್ಯಮಾಡಿ ತಮ್ಮದೆ ಆದ ಕೊಡುಗೆ ನೀಡಿದ್ದಾರೆ ಎಂದು ಗಾಳಿಯವರ ಜೊತೆಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡರು.

ಧಾರವಾಡ ಕ.ವಿ.ವಿ.ಯ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ ಡಾ. ಜೆ.ಎಂ. ನಾಗಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಡ್ಡಾರಾಧನೆ ೨೫೦೦ ಶ್ಲೋಕ ಒಳಗೊಂಡ ಮೂಲಾರಾಧನೆ, ಇದನ್ನು ಜನ ವಡ್ಡಾರಾಧನೆ ಎಂದು ಕರೆಯುತ್ತಾರೆ. ಇದರಲ್ಲಿ ಸುಕುಮಾರಸ್ವಾಮಿಯ ಕಥೆ, ಸುಕೌಶಳಸ್ವಾಮಿಯ ಕಥೆ, ಗಜಕುಮಾರನ ಕಥೆ, ಸನತ್ಕುಮಾರ ಚಕ್ರವರ್ತಿಯ ಕಥೆ, ಭದ್ರಬಾಹು ಭಟ್ಟಾರರ ಕಥೆ, ಕಾರ್ತಿಕ ಋಷಿಯ ಕಥೆ ಸೇರಿದಂತೆ ೧೯ ಕಥೆಗಳಿದ್ದು ಇವು ಜೈನ ಧರ್ಮದ ಸಂಸ್ಕೃತಿ, ಪರಂಪರೆ ರೀತಿ, ರಿವಾಜು, ಆಚರಣೆಗಳನ್ನು ತಿಳಿಸಿಕೊಡುತ್ತವೆ. ಈ ಕಥೆಗಳಲ್ಲಿ ಬರುವ ನಾಯಕರು ಸಾಮಾನ್ಯರಲ್ಲ, ತಮ್ಮ ಪ್ರಪಂಚದಲ್ಲಿ ಬರುವ ಎಲ್ಲ ಕ್ಲೇಷಗಳನ್ನು ಕಳೆದುಕೊಂಡು ಇವರು ದೈವತ್ವಕ್ಕೆ ಏರಿದವರು, ಆದ್ದರಿಂದ ಇದು ಬೃಹತಾರಾಧನೆ ಎಂದು ಹೇಳುತ್ತಾರೆ. ವಡ್ಡಾರಾಧನೆ ಪಂಡಿತರಿಗಷ್ಟೇ ಅಲ್ಲದೇ ಪಾಮರರಿಗೂ ಸರಳವಾಗಿ ಅರ್ಥವಾಗುವ ಕೃತಿಯಾಗಿದೆ ಎಂದು ವಡ್ಡಾರಾಧನೆಯಲ್ಲಿ ಬರುವ ಕಥೆಗಳನ್ನು ಎಳೆ ಎಳೆಯಾಗಿ ವಿವರಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ದಿ. ಡಾ. ಶಿವನಂದ ಗಾಳಿಯವರ ಭಾವಚಿತ್ರಕ್ಕೆ ಪುಷ್ಪಾರ್ಪಣೆಯೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆ ಮೇಲೆ ದತ್ತಿದಾನಿ ಡಾ. ಜಿನದತ್ತ ಅ. ಹಡಗಲಿ ಹಾಗೂ ಶ್ರೀಮತಿ ಸುಜಾತಾ ಹಡಗಲಿ ದಂಪತಿಗಳು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಸೋನಾಲಿ ಗೋಗಿ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ನಾಯಕ ನಿರೂಪಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು.

೯೬. **ಶ್ರೀಮತಿ ಪಾರ್ವತೆವ್ವ ಮಲ್ಲಯ್ಯ ರಾಚಯ್ಯನವರ ದತ್ತಿ :** ದಾನಿಗಳು, ಶ್ರೀ ಎಸ್.ಎಂ. ರಾಚಯ್ಯನವರ

ನಮ್ಮ ಮತ್ತು ನಮ್ಮ ನಂತರ ಜನಾಂಗದ ತಾಯಂದಿರು ನನಗೆ ಸರ್ವಶ್ರೇಷ್ಠರಾಗಿ ಕಾಣುವರು. ನಮ್ಮ ತಾಯಂದಿರು ಅಶಿಕ್ಷಿತರು, ಅನಕ್ಷರಿಗಳು ಅಥವಾ ಅತ್ಯಲ್ಪ ಅಕ್ಷರಿಗಳು ಇದ್ದಂತಹ ಕಾಲಘಟ್ಟದವರು. ಆದರೆ ನಮ್ಮ ಕಾಲದ ತಾಯಂದಿರು ಮಕ್ಕಳನ್ನು ಸುಸಂಸ್ಕೃತ-ಧ್ಯೇಯನಿಷ್ಠ-ಪ್ರಾಮಾಣಿಕ ಮಕ್ಕಳನ್ನಾಗಿ ಬೆಳೆಸಿದ್ದಾರೆ ಎನ್ನುವುದು ಹೆಮ್ಮೆಯ ಸಂಗತಿ ಮತ್ತು ತಾಯಿಯ ಸರ್ವಶ್ರೇಷ್ಠತೆಯನ್ನು ಸಾರಿ ಹೇಳುತ್ತದೆ ಎಂದು ಕನ್ನಡದ ಹಿರಿಯ ವಿದ್ವಾಂಸರಾದ ಡಾ. ಗುರುಲಿಂಗ ಕಾಪಸೆ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೪-೨-೨೦೧೯** ರಂದು ಆಯೋಜಿಸಿದ್ದ **'ಶ್ರೀಮತಿ ಪಾರ್ವತೆವ್ವಾ ಮಲ್ಲಯ್ಯಾ ರಾಚಯ್ಯನವರ ದತ್ತಿ ಉದ್ಘಾಟನೆ ಹಾಗೂ ಸರ್ವಜ್ಞನ ಸ್ಮರಣೆ'** ಕಾರ್ಯಕ್ರಮದಲ್ಲಿ ದತ್ತಿ ಉದ್ಘಾಟಿಸಿ ಮಾತನಾಡಿದ ಡಾ. ಗುರುಲಿಂಗ ಕಾಪಸೆ, ನಮ್ಮ ತಾಯಂದಿರಿಗೆ ಮಕ್ಕಳಿಗೆ ಜ್ಞಾನೋದಯ ಮತ್ತು ಅರಿವಿನ ಪ್ರಾರಂಭ ತಾಯಿಯ ಉದರದಿಂದಲೆ ಪ್ರಾರಂಭವಾಗುವುದೆಂಬ ಅರಿವು ಹೊಂದಿದ್ದು, ಆ ಬಗ್ಗೆ ತಾಯಂದಿರು ತುಂಬಾ ಮುತುವರ್ಜಿ ವಹಿಸಿ ಒಳ್ಳೆಯ ಮಾತುಗಳನ್ನು ಮಾತ್ರ ಆಲಿಸುವ ಮೂಲಕ ಮಕ್ಕಳ ಕಾಳಜಿಯನ್ನು ಅಲ್ಲಿಂದಲೆ ಪ್ರಾರಂಭಿಸುತ್ತಿದ್ದರು. ತಾಯಿಯ ಪಾದದಲ್ಲಿ ಸ್ವರ್ಗವಿದೆ. ಜೀವಂತ ದೇವತೆಯೇ ತಾಯಿ. ತನ್ನ ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ನಿರ್ಮಿಸುವ ಭಾಗ್ಯೋದಯದ ಶಿಲ್ಪಿಯಾಗಿದ್ದಾಳೆ. ಜಗತ್ತಿನಲ್ಲಿ ತನ್ನ ಮಕ್ಕಳ ಬದುಕಿಗೆ ಬೆಳಕಾಗುವವಳು ತಾಯಿ ಮಾತ್ರ. ತಾಯಿ ತನಗಾಗಿ ಏನನ್ನೂ ಬಯಸದ ಸಮಷ್ಟಿ ಪ್ರಜ್ಞೆಯ ಭಾಗವಾಗಿದ್ದಾಳೆ. ಅಂತಹ ಮಮತೆಯ ಮಾತೆಯನ್ನು ದೇವತೆಯಂತೆ ಕಾಣುವ ಸದ್ಬುದ್ಧಿ ನಮ್ಮಲ್ಲಿ ಬೆಳೆದು ಬರಬೇಕೆಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಡಾ. ಗುರುಲಿಂಗ ಕಾಪಸೆಯವರು, ದತ್ತಿದಾನಿಗಳಾದ ಶ್ರೀ ಶಿವಪುತ್ರಯ್ಯ ರಾಚಯ್ಯನವರವರನ್ನು ನಾನು ನಾಲ್ಕು ದಶಕಗಳಿಂದ ವೈಯಕ್ತಿಕವಾಗಿ ಬಲ್ಲವನಾಗಿದ್ದೇನೆ, ಅವರಲ್ಲಿರುವ ಕಾರ್ಯದಕ್ಷತೆ, ಕರ್ತವ್ಯದ ಬದ್ಧತೆ, ಪ್ರಾಮಾಣಿಕತೆ, ಓದಬೇಕೆಂಬ ವಿಶಿಷ್ಠ ಗುಣ ಮತ್ತು ಪರರನ್ನು ಗೌರವಿಸುವ ವಿನಯದ ನಡೆ-ನುಡಿಗಳು ಪ್ರಾಯಶಃ ಅವರ ತಾಯಿಯವರಾದ ಪಾರ್ವತೆವ್ವ ಇವರಿಂದ ಬಂದ ಬಳುವಳಿಯಾಗಿದೆ ಎಂದು ನನಗೆ ಅನಿಸುತ್ತದೆ. ತಾಯಿಯ ಬದುಕು ದತ್ತಿದಾನಿಗಳ ಮೇಲೆ ಎಷ್ಟೊಂದು ಪ್ರಭಾವ ಬೀರಿದೆ ಎಂದು ತಾಯಿಯ ಮತ್ತು ಸರ್ವಜ್ಞನ ವಚನಗಳನ್ನು ಹಾಡುತ್ತಿದ್ದ ತಾಯಿಯ ವಿಶಿಷ್ಠ ಗುಣದ ಸ್ಮರಣೆಗಾಗಿ ಇಂತಹ ಆದರ್ಶಪ್ರಾಯ ದತ್ತಿ ಇರಿಸಿದ ಶ್ರೀ ಶಿವಪುತ್ರಯ್ಯ ರಾಚಯ್ಯನವರ ನನಗೆ ಆದರ್ಶಪ್ರಾಯರಾಗಿ ಕಾಣುತ್ತಿದ್ದಾರೆ ಮತ್ತು ಇವರ ದತ್ತಿ ಆಶಯ ಸರ್ವಕಾಲಕ್ಕೂ ಈಡೇರುತ್ತಿರಲಿ ಎಂದು ಶುಭ ಕೋರುವೆ ಎಂದರು.

ಮುಖ್ಯ ಅತಿಥಿಗಳ ಸ್ಥಾನದಿಂದ ಮಾತನಾಡಿದ ಖ್ಯಾತ ಹಿರಿಯ ಜಾನಪದ ವಿದ್ವಾಂಸರಾದ ಡಾ. ಸೋಮಶೇಖರ ಇಮ್ರಾಪೂರ, ತಾಯಿತನ ಎಂಬುದು ಸರ್ವ ಜೀವರಾಶಿಗಳಲ್ಲಿರುವ ಶ್ರೇಷ್ಠ ಗುಣವಾಗಿದೆ. ಕಾಲ ಬದಲಾವಣೆ ಆದರೂ ಕೂಡ ತಾಯಿಯ ಸ್ಥಾನಮಾನಕ್ಕೆ ಯಾವುದೆ ಚ್ಯುತಿ ಬಾರದೇ ಎಂದಿನಂತೆ ಗೌರವಿತ ಸ್ಥಾನಮಾನ ತಾಯಿ ಹೊಂದಿರುತ್ತಾಳೆ. ಸರ್ವಜ್ಞನ ವಚನಗಳು ಸಮಾಜದ ಓರೆ-ಕೋರೆಗಳನ್ನು ಎತ್ತಿಹೇಳಿ ಸಮಾಜ ಒಳಿತಾದ ದಾರಿಯಲ್ಲಿ ನಡೆಯಬೇಕೆಂಬ ಮಾರ್ಗಸೂಚಿ ವಚನಗಳಾಗಿವೆ. ಇಂತಹ ವಚನಗಳ ಪಠಣ ಮತ್ತು ಶ್ರವಣ ಇತ್ತೀಚಿಗೆ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ದತ್ತಿದಾನಿಗಳಾದ ಶಿವಪುತ್ರಯ್ಯ ರಾಚಯ್ಯನವರ ತನ್ನ ತಾಯಿಯ ಸ್ಮರಣೆಯ ಜೊತೆಗೆ ಸರ್ವಜ್ಞನ ವಚನಗಳು ಸಮಾಜದಲ್ಲಿ ಪ್ರಚುರವಾಗಲಿ ಎಂಬ ಧ್ಯೇಯದಿಂದ ಈ ದತ್ತಿ ಇರಿಸಿದ್ದು ಶ್ಲಾಘನೀಯ. ಸರ್ವಜ್ಞ ಬರೆಯದ ವಿಷಯಗಳೇ ಇಲ್ಲ ಸರ್ವಜ್ಞನ ಸಾಮಾಜಿಕ ನಿರೀಕ್ಷೆ ಅಗಾಧವಾಗಿತ್ತು. ಆದ್ದರಿಂದ ಸರ್ವಜ್ಞನ ವಚನಗಳಲ್ಲಿರುವ ತತ್ವಗಳು ಇಂದಿಗೂ ಪ್ರಚಲಿತ. ಜತ್ತಿನಲ್ಲಿ ಸ್ತ್ರೀ ಸ್ವಾತಂತ್ರ್ಯಂ ನಅರ್ಹತೆ ಎಂಬ ವೇದಘೋಷ ಪ್ರಭಲವಾಗಿರುವ ಕಾಲದಲ್ಲಿಯೇ ಸರ್ವಜ್ಞ ಜಗದಿ ಸ್ವಾತಂತ್ರ್ಯವೇ ಲೇಸು ಎಂಬ ಸಾರವನ್ನು ಸಾರಿದ್ದು, ಈ ಮಾತು ಇಂದಿಗೂ ಪ್ರಚಲಿತವಾಗಿವೆ. ಸರ್ವಜ್ಞನ ವಚನಗಳ ಮೇಲೆ ಹೆಚ್ಚಿನ ಸಂಶೋಧನೆ ಆಗಬೇಕಿದೆ. ಸರ್ವಜ್ಞನ ವಚನಗಳ ಹೆಸರಿನಲ್ಲಿ ಯಾರ್‍ಯಾರು ಪ್ರಕ್ಷಿಪ್ತ ವಚನಗಳನ್ನು ಪ್ರಯೋಗಿಸುತ್ತಿದ್ದಾರೆ. ಆದ್ದರಿಂದ ಸರ್ವಜ್ಞನ ಮೂಲ ವಚನಗಳು ಯಾವವು ಮತ್ತು ಪ್ರಕ್ಷಿಪ್ತ ವಚನಗಳು ಯಾವವು ಎಂಬ ಬಗ್ಗೆ ಸಂಶೋಧನೆಯಾಗಿ ಮೂಲವಚನಗಳು ಮಾತ್ರ ಸಾರಸ್ವತ ಲೋಕದಲ್ಲಿ ಉಳಿಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಕನ್ನಡ ಸಂಶೋಧಕರ ಮೇಲಿದೆ ಎಂದರು.

ದತ್ತಿದಾನಿಗಳಾದ ಶಿವಪುತ್ರಯ್ಯ ರಾಚಯ್ಯನವರ ತಮ್ಮ ತಂದೆ ತಾಯಿ ಸಮಾಜದಲ್ಲಿ ಸಲಹೆಸೂಚನೆಗಳನ್ನು ನೀಡುವಾಗ ಮತ್ತು ಹಿರೇತನವನ್ನು ಮಾಡುವಾಗ ಸಂದರ್ಭಕ್ಕನುಸಾರವಾಗಿ ಸರ್ವಜ್ಞನ ವಚನಗಳ ತತ್ವವನ್ನು ಅಕ್ಷರಶಃ ಜನರಿಗೆ ತಿಳಿಸಿಹೇಳಿ, ಅವುಗಳಂತೆ ನಡೆದುಕೊಳ್ಳಲು ಜನರಿಗೆ ಹೇಳುತ್ತಿದುದ್ದು ಇಂದಿಗೂ ನನ್ನ ಮನಸಿನಲ್ಲಿ ಹಚ್ಚುಹಸಿರಾಗಿ ಉಳಿದಿದೆ. ಮತ್ತು ನನ್ನ ತಾಯಿ ಪಾರ್ವತೆವ್ವ ಬೀಸುವಾಗ, ಕುಟ್ಟುವಾಗ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸರ್ವಜ್ಞನ ವಚನಗಳನ್ನು ಹಾಡುತ್ತಿದ್ದುದು ನನಗೆ ಬದುಕಿಗೆ ಪ್ರೇರಣೆಯಾಗಿದೆ, ಆದ್ದರಿಂದಲೇ ಸರ್ವಜ್ಞನ ವಚನಗಳ ತತ್ವ ಪ್ರಚಾರವಾಗಲಿ ಎಂಬ ಮಹಾದಾಶೆಯಿಂದ ನಾನು ಈ ದತ್ತಿಯನ್ನು ಇರಿಸಿದ್ದೇನೆ ಎಂದು ಹೇಳಿ, ತಾವೇ ತಾಯಿಯ ಕುರಿತು ರಚಿಸಿದ ಕವನವನ್ನು ಮತ್ತು ಜಾನಪದ ಕವನವನ್ನು ಸಭೆಯಲ್ಲಿ ಹಾಡಿದರು. ಕ.ವಿ.ವ. ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಿ. ಪಾರ್ವತೆವ್ವಾ ಮಲ್ಲಯ್ಯಾ ರಾಚಯ್ಯನವರ ಅವರ ಭಾವಚಿತ್ರಕ್ಕೆ ಪುಷ್ಪಸಮರ್ಪಿಸಿ, ಗೌರವ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ದತ್ತಿ ದಾನಿಗಳ ಪರವಾಗಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಡಾ. ಗುರುಲಿಂಗ ಕಾಪಸೆ ಹಾಗೂ ಡಾ. ಸೋಮಶೇಖರ ಇಮ್ರಾಪೂರ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಅತಿಥಿಗಳನ್ನು ಪುಷ್ಪ ಮತ್ತು ಗ್ರಂಥ ನೀಡಿ ಗೌರವಿಸಿದರು.

ಪ್ರಾರಂಭದಲ್ಲಿ ಕಲ್ಲಪ್ಪ ಚಂದನಮಟ್ಟಿ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ

ಫೆಬ್ರುವರಿ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಪ್ರಫುಲ್ಲಾ ನಾಯಕ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ವಂದಿಸಿದರು.

೯೭. **ಶ್ರೀಮತಿ ಕುಸುಮ ವಿಠ್ಠಲರಾವ ದೇಶಪಾಂಡೆ ಸ್ಮರಣಾರ್ಥ ದತ್ತಿ :** ದಾನಿಗಳು, ಡಾ. ರಾಜನ್ ದೇಶಪಾಂಡೆ.

ಹೊಸ ತಲೆಮಾರಿನ ಮಕ್ಕಳು ಹೇಗೆಲ್ಲಾ ಚಿಂತಿಸುತ್ತವೆ, ಆಲೋಚಿಸುತ್ತವೆ, ನಡೆದುಕೊಳ್ಳುತ್ತವೆ, ಅದಕ್ಕೆ ತಕ್ಕಂತೆ ಆ ಮಕ್ಕಳ ಮನಸ್ಸಿನ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ಆಗದಂತೆ ಸಂವೇದನಾಶೀಲತೆಯಿಂದ ತಾಯಿ ಆ ಮಕ್ಕಳಿಗೆ ಪ್ರತಿಕ್ರಿಯಿಸಬೇಕು ಮತ್ತು ಸ್ಪಂದಿಸಬೇಕು ಎಂಬುದು ಬದಲಾಗುತ್ತಿರುವ ದಿನಗಳಲ್ಲಿ ತಾಯಿಯ ಮುಂದಿರುವ ಅತಿದೊಡ್ಡ ಸವಾಲಾಗಿದೆ, ಈ ಪಾತ್ರವನ್ನು ತಾಯಿ ಹೇಗೆ ನಿರ್ವಹಿಸಬೇಕೆಂದು ಮತ್ತು ಆ ಮೂಲಕ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಯಾವ ರೀತಿಯ ಕೊಡುಗೆಯನ್ನು ನೀಡಬೇಕೆಂದು ತಾಯಿ ಆತಂಕದಲ್ಲಿದ್ದಾಳೆ ಎಂದು ಖ್ಯಾತ ಬರಹಗಾರ್ತಿಯು ಮತ್ತು ನಿವೃತ್ತ ಉಪನ್ಯಾಸಕರು ಆದ ಶ್ರೀಮತಿ ಮಾಲತಿ ಮುದಕವಿಯವರು ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೮-೨-೨೦೧೯** ರಂದು ಆಯೋಜಿಸಿದ್ದ ಶ್ರೀಮತಿ ಕುಸುಮ ವಿಠ್ಠಲರಾವ್ ದೇಶಪಾಂಡೆ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ **'ಬದಲಾಗುತ್ತಿರುವ ದಿನಗಳಲ್ಲಿ ತಾಯಿಯ ಪಾತ್ರ'** ಎಂಬ ವಿಷಯದ ಮೇಲೆ ಮಾತನಾಡುತ್ತಾ, ಕಾಲಕಾಲಕ್ಕೆ ಕಾಲ ಬದಲಾಗುತ್ತಿದೆ ಅಂತಾ ಆದಿ ಕಾಲದಿಂದ ಹೇಳುತ್ತಾ ಬಂದರು ತಾಯಿಯ ಕರುಳು ಬಳ್ಳಿಯ ಸಂಬಂಧ, ತಾಯಿಯ ಮಮತೆ ಮತ್ತು ದಯಾಗುಣ ಎಂದು ಕೂಡಾ ಬದಲಾಗಿಲ್ಲ. ಆದರೆ ಕಾಲಕ್ಕೆ ತಕ್ಕಂತೆ ತಾಯಿಯ ಕರ್ತವ್ಯ ಮಾತ್ರ ಬದಲಾಗಿದೆ, ತಾಯಿಯ ಕರ್ತವ್ಯ ಬದಲಾದಾಗಲೆಲ್ಲಾ ತಾಯಿ ಕಂಗೆಡದೆ ಮತ್ತು ದಿಕ್ಕೆಡೆದೆ ಸಾವಧಾನದಿಂದ ಆ ಸವಾಲುಗಳನ್ನು ಎದುರಿಸಿ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸಿ ಯಶಸ್ವಿಯಾಗಿದೆ ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ ಎಂದು ಶ್ರೀಮತಿ ಮಾಲತಿ ಮುದಕವಿ ಅವರು ಹೇಳಿದರು.

ಬದಲಾಗುತ್ತಿರುವ ಸನ್ನಿವೇಶದಲ್ಲಿ ತಾಯಿಯ ಕರ್ತವ್ಯವೂ ತನ್ನ ಮನೆಯಾಚೆ ಕೂಡಾ ವಿಸ್ತರಣೆಗೊಂಡಿರುವುದರಿಂದ ಮತ್ತು ತಾಯಿ ವೃತಿಮುಖಿಯಾಗಿರುವುದರಿಂದ ಹೆಚ್ಚಿನ ಸಮಯ ತನ್ನ ವೃತ್ತಿಯಿಂದಾಗಿ ಮನೆಯಿಂದಾಚೆ ಕಳೆಯುವ ಅನಿವಾರ್ಯತೆ ಇದ್ದಾಗಲೂ ಕೂಡಾ, ಬದಲಾಗುತ್ತಿರುವ ಕಾಲದಲ್ಲಿ ತಾಯಿ ತನ್ನ ಮನೆಯಲ್ಲಿಯೇ ಇದ್ದಾಳೆ ಮತ್ತು ಸಂಪೂರ್ಣವಾಗಿ ನನ್ನ ಕಡೆಗೆ ತನ್ನ ಲಕ್ಷ್ಯವಿಟ್ಟು ಪಾಲನೆ ಪೋಷಣೆ ಮಾಡುತ್ತಿದ್ದಾಳೆ, ಕಾಳಜಿ ವಹಿಸುತ್ತಿದ್ದಾಳೆ ಎಂಬ ಭಾವನೆ ಮಗುವಿನಲ್ಲಿ ಮೂಡುವಂತೆ ತಾಯಿ ತನ್ನ ಪಾತ್ರ ನಿಭಾಯಿಸಬೇಕಾಗಿದೆ. ಅಲ್ಲದೇ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ರೀತಿಯಿಂದ ಮಗುವನ್ನು ಸನ್ನದ್ಧಗೊಳಿಸಲು ಮಗುವಿಗಿರುವ ಮಾನಸಿಕ, ದೈಹಿಕ, ಶೈಕ್ಷಣಿಕ ಸಮಸ್ಯೆಗಳನ್ನು ಅರಿತುಕೊಂಡು ಆ ಮಗುವಿನ ಉತ್ತಮ ಸ್ನೇಹಿತನಂತೆ ಆ ಸಮಸ್ಯೆಗಳಿಂದ ಮಗುವನ್ನು ಮುಕ್ತವಾಗಿಸುವ ಪಾತ್ರವನ್ನು ಕೂಡಾ ಈಗಿನ ತಾಯಿ ನಿಭಾಯಿಸಬೇಕಾಗಿದೆ, ಖೇದಕರ ಸಂಗತಿ ಮತ್ತು ಹೃದಯ ಹಿಂಡುವಂತ ತಾಯಿಯ ಪಾತ್ರವೆಂದರೆ ಒಂಟಿಯಾಗಿರುವ ತನ್ನ ಮಗುವನ್ನು ತನ್ನವರಿಂದ ಮತ್ತು ಪರರಿಂದ ಸಂರಕ್ಷಿಸಿಕೊಳ್ಳಲು ಗುಡ್‌ಟಚ್ ಮತ್ತು ಬ್ಯಾಡ್‌ಟಚ್‌ಗಳ ಪರಿಚಯ ಮಾಡಿಕೊಟ್ಟು, ಬ್ಯಾಡ್‌ಟಚ್‌ಗಳಿಗೆ ಮಗು ಹೇಗೆ ಪ್ರತಿಭಟಿಸಬೇಕೆಂದು ಹೇಳಿಕೊಡುವ ಪ್ರಸಂಗವಾಗಿದೆ, ಮಗು ಗಂಡಾದರೂ ಸರಿ, ಹೆಣ್ಣಾದರೂ ಸರಿ ಆ ಮಕ್ಕಳು ಸ್ವೇಚ್ಛಾಚಾರಿಗಳಾಗಿ ಬೆಳೆಯದಂತೆ ಮತ್ತು ಆರೋಗ್ಯ ಸರಿಯಾಗಿ ನೋಡಿಕೊಳ್ಳುವಂತೆ ಸುಶಿಕ್ಷಿತವಾಗಿಸಬೇಕಾಗಿದೆ ಎಂದು ಶ್ರೀಮತಿ ಮಾಲತಿ ಮುದಕವಿ ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಆದಾಯ ತೆರಿಗೆ ಇಲಾಖೆಯ ನಿವೃತ್ತ ಪ್ರಧಾನ ಆಯುಕ್ತರು ಮತ್ತು ಇಂಟೆಕ್ ಮ್ಯೂಸಿಯಂನ ಗೌರವ ಸಂಚಾಲಕರಾದ ಡಾ. ಎನ್.ಪಿ. ಭಟ್ ಅವರು ಮಾತನಾಡಿ, ಆಧುನಿಕ ಜಗತ್ತಿನಲ್ಲಿ ಗ್ರಾಹಕರಿಗೆ ಸಾಕಷ್ಟು ಹಕ್ಕುಗಳು ದೊರೆತಿದ್ದು ನಮ್ಮ ಸಮಾಜದ ಹೆಣ್ಣು ಮಕ್ಕಳು ದೊಡ್ಡ ಮಟ್ಟದ ಗ್ರಾಹಕರಾಗಿದ್ದರೂ ಕೂಡಾ ತಮ್ಮ ಹಕ್ಕುಗಳನ್ನು ತಿಳಿದುಕೊಂಡಿಲ್ಲ ಎನ್ನುವುದು ದುರದೃಷ್ಟಕರ, ಹೆಣ್ಣು ಮಕ್ಕಳು ಒಂದು ವಸ್ತುವನ್ನು ಖರೀದಿಸುವಾಗಿ ಅದರ ಗುಣ ಮತ್ತು ಬೆಲೆಯ ಬಗ್ಗೆ ಚೆನ್ನಾಗಿ ಚೌಕಾಸಿ ಮಾಡಿ ಅತ್ಯಂತ ಯೋಗ್ಯ ದರಕ್ಕೆ ಯೋಗ್ಯ ವಸ್ತುವನ್ನು ಖರೀದಿಸಬಲ್ಲ ಪ್ರಾವಿಣ್ಯತೆ ಮತ್ತು ಕಲೆಯನ್ನು ಬಲ್ಲವರಾಗಿದ್ದಾರೆ. ಆದರೆ ಬೇಜವಾಬ್ದಾರಿಯಿಂದ ಟೋಪಿ ಹಾಕಿಸಿಕೊಳ್ಳುವ ಗಂಡಸರನ್ನು ಮಾರುಕಟ್ಟೆಗೆ ಕಳಿಸಿ, ಅವರು ಕಳಪೆ ಸಾಮಗ್ರಿಗಳು ಮತ್ತು ನೀಡಿದ ದುಬಾರಿ ಬೆಲೆ ಬಗ್ಗೆ ಅತ್ಯಂತ ಸಮರ್ಥವಾಗಿ ವಿಶ್ಲೇಷಣೆ ಮಾಡುವ ನಮ್ಮ ಹೆಣ್ಣು ಮಕ್ಕಳು ಮಾರುಕಟ್ಟೆಗೆ ಮುಕ್ತವಾಗಿ ಇಳಿದಾಗ ಮಾತ್ರ ಗ್ರಾಹಕರಿಗೆ ರಕ್ಷಣೆಯಾಗುವ ಮತ್ತು ಉತ್ತಮ ಸಾಮಗ್ರಿಗಳು ಯೋಗ್ಯ ಬೆಲೆಗೆ ಸಿಗುವ ಸಾಧ್ಯತೆ ಇದೆ ಮತ್ತು ಕಲಬೆರಕೆ ವ್ಯಾಪಾರ ವಹಿವಾಟಿನಲ್ಲಿ ನಡೆಯುವ ಮೋಸತನ ನಿಲ್ಲುವ ಸಾಧ್ಯತೆ ಇದೆ, ಈ ದಿಸೆಯಲ್ಲಿ ನಮ್ಮ ಮಹಿಳೆಯರು ಗ್ರಾಹಕ ಹಿತರಕ್ಷಣೆಗಾಗಿ ಒಂದು ಶಕ್ತಿಯಾಗಿ ಹೊರಹೊಮ್ಮಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಶ್ರೀಮತಿ ಕುಸುಮ ವಿಠ್ಠಲರಾವ್ ದೇಶಪಾಂಡೆ ದತ್ತಿ ಅಂಗವಾಗಿ ನೀಡುವ ಶ್ರೇಷ್ಠ ತಾಯಿ ಗೌರವ ಪುರಸ್ಕಾರ-೨೦೧೯ ನೇದ್ದನ್ನು ಖ್ಯಾತ ಮಹಿಳಾ ಹೋರಾಟಗಾರ್ತಿ ಮತ್ತು ನಿವೃತ್ತ ಶಿಕ್ಷಕಿಯರು ಆದ ಧಾರವಾಡದ ಶ್ರೀಮತಿ ನಂದಾ ನಾರಾಯಣರಾವ ಹಂಪಿಹೊಳಿಯವರಿಗೆ ನೀಡಿ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಪ್ರತಿಕ್ರಿಯೆ ನೀಡಿ ಮಾತನಾಡಿದ ಶ್ರೀ ನಂದಾ ನಾರಾಯಣರಾವ ಹಂಪಿಹೊಳಿ ಎಲ್ಲರಿಗೂ ಪ್ರೀತಿ, ಆದರ ಮತ್ತು ಗೌರವಗಳನ್ನು ಯಾವುದೇ ಭೇದಭಾವವಿಲ್ಲದೇ ಸಲ್ಲಿಸುವವಳೇ ಸರ್ವಶ್ರೇಷ್ಠ ತಾಯಿ ಆಗಿರುತ್ತಾಳೆ.

ನನ್ನ ತಂದೆ–ತಾಯಿ, ನನ್ನ ಸಹೋದರ ಮತ್ತು ನನ್ನ ಪತಿ ನನಗೆ ನೀಡಿದ ಎಲ್ಲರೂ ಒಂದೇ ಮತ್ತು ಎಲ್ಲರಿಗೂ ಗೌರವಾದರಗಳನ್ನು ಯಾವುದೇ ಭಿನ್ನಭಾವವಿಲ್ಲದೇ ಸಲ್ಲಿಸಬೇಕೆಂದು ನೀಡಿದ ಸಂಸ್ಕಾರವೇ ನನಗೆ ಉತ್ತಮ ಸಮಾಜ ಸೇವೆ ಮಾಡಲಿಕ್ಕೆ ದಾರಿದೀಪವಾಯಿತು ಎಂದು ಹೇಳಿದರು.

ದತ್ತಿದಾನಿಗಳಾದ ಡಾ. ರಾಜನ್ ದೇಶಪಾಂಡೆ ಮಾತನಾಡಿ, ನನ್ನ ತಾಯಿ ಅತ್ಯುನ್ನತ ಹುದ್ದೆಯಲ್ಲಿ ನನ್ನ ತಂದೆ ಎಲ್ಲ ಸೌಲಭ್ಯಗಳನ್ನು ಹೊಂದಿ ಸೇವೆ ಸಲ್ಲಿಸುತ್ತಿರುವಾಗಲೂ, ಅವುಗಳಯೆಡೆಗೆ ಗಮನ ನೀಡದೇ ನನ್ನ ತಾಯಿ ಬಡವರ ಮತ್ತು ನೊಂದವರ ಸೇವೆಯನ್ನು ಮಾಡುತ್ತಿದ್ದುದು ನನ್ನ ಮತ್ತು ನನ್ನ ಕುಟುಂಬದ ಎಲ್ಲ ಸದಸ್ಯರ ಮೇಲೆ ಪರಿಣಾಮ ಬೀರಿದೆ ಮತ್ತು ಅವೇ ಆದರ್ಶಗಳನ್ನು ನಾವು ಇಂದು ಪಾಲನೆ ಮಾಡುತ್ತಿದ್ದೇವೆ ಎಂದರು.

ಶ್ರೀಮತಿ ಕುಸುಮ ವಿಠ್ಠಲರಾವ್ ದೇಶಪಾಂಡೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಗೌರವ ಸಲ್ಲಿಸಲಾಯಿತು. ವೇದಿಕೆ ಮೇಲೆ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಶ್ರೀಮತಿ ಆಶಾ ಬೆಳಕಲ್ ಚುಟುಕು ಕವನ ವಾಚನ ಮಾಡಿದರು.

ಡಾ. ಶ್ರೀಧರ ಕುಲಕರ್ಣಿ ಪ್ರಾರ್ಥನೆ ಹಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಕಾಶ ಎಸ್. ಉಡಿಕೇರಿಯವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಶ್ರೀನಿವಾಸ ವಾಡಪ್ಪಿ ಅವರು ಅತಿಥಿ ಹಾಗೂ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ವಂದನಾರ್ಪಣೆಗೈದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ನಾಯಕ ಕಾರ್ಯಕ್ರಮ ನಿರೂಪಿಸಿದರು.

೯೮. **ಶ್ರೀ ಸಿ. ಬಿ. ಯಲಿಗಾರ ದತ್ತಿ :** ದಾನಿಗಳು, ಶ್ರೀಮತಿ ವಿಜಯಲಕ್ಷ್ಮೀ ವಿ. ವಾಲಿ (ದಿ. ಅಮರೇಶ ಎಸ್. ಎಲಿಗಾರ ಅವರ ಪತ್ನಿ)

ಸಂಗೀತದಲ್ಲಿ ರಾಗ, ತಾಳ, ಲಯದೊಂದಿಗೆ ದೈವತ್ವವು ಸಮ್ಮಿಳಿತವಾದಾಗ ಸಂಗೀತ ಸುಮಧುರವಾಗಿ ಕೇಳುಗರ ಮನಸನ್ನು ಪ್ರಸನ್ನಗೊಳಿಸಿ, ಸಾತ್ವಿಕ ಭಾವನೆ ಮೂಡಿಸುತ್ತದೆ ಮತ್ತು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ನ್ಯಾಯವಾದಿಗಳು ಮತ್ತು ಸಂಗೀತಗಾರರಾದ ಶ್ರೀಮತಿ ಆಶಾ ಪಾಟೀಲಕುಲಕರ್ಣಿಯವರು (ಪ್ರಳಯಕಲ್ಮಠ) ಅಭಿಪ್ರಾಯಪಟ್ಟರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ವಿ. ವಾಲಿಯವರು ಇರಿಸಿದ, **ದಿ. ಶ್ರೀ ಎಸ್. ಎಸ್. ಎಲಿಗಾರ ಮತ್ತು ದಿ. ಶ್ರೀ ಅಮರೇಶ ಎಸ್. ಎಲಿಗಾರ ಸ್ಮರಣಾರ್ಥ ದತ್ತಿ ಉದ್ಘಾಟನಾ ಸಮಾರಂಭ** ಹಾಗೂ **ಸಂಗೀತ ಕಾರ್ಯಕ್ರಮದ (೨೧–೨–೨೦೧೯)** ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಶ್ರೀಮತಿ ಆಶಾ ಪಾಟೀಲಕುಲಕರ್ಣಿ (ಪ್ರಳಯಕಲ್ಮಠ) ಇತ್ತೀಚೆಗೆ ಬಹಳ ಜನರು ಸಂಗೀತದ ಬಗ್ಗೆ ಆಕರ್ಷಣೆ ಬೆಳೆಸಿಕೊಂಡು ಕಲಿಯುತ್ತಿದ್ದಾರೆ, ಆದರೆ ಅವರ ಸಂಗೀತದಲ್ಲಿ ದೈವತ್ವದ ಅಂಶ ಕಾಣುವುದಿಲ್ಲ, ಸಂಗೀತ ಇಂದು ಕಮರ್ಷಿಯಲ್ ಆಗುತ್ತಿದೆ. ಕಠಿಣ ಅಭ್ಯಾಸ, ಸತತ ಪರಿಶ್ರಮ ಹಾಗೂ ಏಕಾಗ್ರತೆಯಿಂದ ಸಂಗೀತವನ್ನು ಸಿದ್ಧಿಸಿಕೊಂಡಾಗ ಸಂಗೀತ ಸರಸ್ವತಿ ಒಲಿಯುತ್ತಾಳೆ ಮತ್ತು ದೈವತ್ವದ ಅಂಶ ಪ್ರಾಪ್ತವಾಗುತ್ತದೆ. ಇಂಥ ಸಂಗೀತ ಸಿದ್ದಿಯಿಂದ ಕೇಳುಗರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದ ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು, ಪಂ. ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್ಲ ಮುಂತಾದ ದಿಗ್ಗಜರ ಸಂಗೀತವನ್ನು ಎಷ್ಟು ಸಲ ಕೇಳಿದರೂ ಬೇಸರವಾಗುವುದಿಲ್ಲ, ಮತ್ತೆ ಮತ್ತೆ ಕೇಳಬೇಕೆಂಬ ಹಂಬಲ ಉಂಟಾಗುತ್ತದೆ, ಈ ದಿಸೆಯಲ್ಲಿ ಇಂದಿನ ಕಲಾವಿದರು ಸಂಗೀತ ಸಿದ್ಧಿಯನ್ನು ಸಾಧಿಸಬೇಕೆಂದು, ಸಂಗೀತ, ನೃತ್ಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ದಿಸೆಯಲ್ಲಿ ದತ್ತಿ ಇರಿಸಿದ ದತ್ತಿದಾನಿ, ಎಂಎಸ್ಸಿ ಪದವೀಧರೆ ಶ್ರೀಮತಿ ವಿಜಯಲಕ್ಷ್ಮಿ ವಿ. ವಾಲಿ ಅವರ ಕಾರ್ಯ ಶ್ಲಾಘನೀಯ ಎಂದರು.

ದೀಪ ಬೆಳಗಿಸಿ ದಿ. ಶ್ರೀ ಎಸ್. ಎಸ್. ಎಲಿಗಾರ ಮತ್ತು ದಿ. ಶ್ರೀ ಅಮರೇಶ ಎಸ್. ಎಲಿಗಾರ ಸ್ಮರಣಾರ್ಥ ದತ್ತಿ ಉದ್ಘಾಟಿಸಿದ ಕ.ವಿ.ವಿ. ನಿವೃತ್ತ ಉಪಕುಲಸಚಿವರಾದ ಶ್ರೀ ವಿ. ಆರ್. ವಾಲಿ ಮಾತನಾಡಿ, ದಿ. ಶ್ರೀ ಎಸ್. ಎಸ್. ಎಲಿಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ ಕನ್ನಡ ನಾಡು, ನುಡಿಗಾಗಿ ಹಾಗೂ ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸಿದವರು ಹಾಗೂ ಇವರ ಸುಪುತ್ರ ದಿ. ಶ್ರೀ ಅಮರೇಶ ಎಲಿಗಾರ ವೃತ್ತಿಯಿಂದ ವ್ಯಾಪಾರಸ್ಥರಾಗಿದ್ದರೂ ಪ್ರವೃತ್ತಿಯಿಂದ ಸಂಗೀತ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿಯನ್ನು ಹೊಂದಿದ್ದರು, ಇವರ ಹೆಸರಿನಲ್ಲಿ ದತ್ತಿ ಸ್ಥಾಪಿತವಾದದ್ದು, ಅತ್ಯಂತ ಯೋಗ್ಯ ಕಾರ್ಯವಾಗಿದೆ, ಇಂತಹ ದತ್ತಿ ಉದ್ಘಾಟಿಸಲು ನನಗೆ ಸಂತೋಷವೆನಿಸುತ್ತದೆ. ಇಂಥ ದತ್ತಿ ಕಾರ್ಯಕ್ರಮಗಳು ನಿರಂತರವಾಗಿ ಜರುಗಿ ಸಮಾಜಕ್ಕೆ ಉತ್ತಮ ಸಂದೇಶ ಕೊಡುವಂತಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿಗಳು ಮತ್ತು ನ್ಯಾಯವಾದಿಗಳಾದ ಶ್ರೀ ಪ್ರಕಾಶ ಎಸ್. ಉಡಿಕೇರಿಯವರು ಮಾತನಾಡಿ, ನಮ್ಮ ಸಂಘದ ಪ್ರತಿಷ್ಠಿತ ದತ್ತಿಗಳ ಸಾಲಿಗೆ ಹೊಸದಾಗಿ ಸೇರ್ಪಡೆಯಾದ ಈ ದತ್ತಿ ಅತ್ಯಂತ ವಿಶಿಷ್ಟ ದತ್ತಿಯಾಗಿದೆ, ನಮ್ಮ ಸಮಾಜದಲ್ಲಿ ಎಲ್ಲರೂ ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬ ಮಾತು ಪ್ರಚಲಿತವಾಗಿದೆ, ಆದರೆ ಈ ಮಾತಿನಂತೆ ನಾವು ನಡೆದುಕೊಳ್ಳುವಲ್ಲಿ ಸೋಲುತ್ತಿದ್ದೇವೆ, ಇಂತಹ ವಿಚಿತ್ರ ಕಾಲದಲ್ಲಿ ದತ್ತಿದಾನಿಗಳಾದ ಶ್ರೀಮತಿ ವಿಜಯಲಕ್ಷ್ಮಿ ವಿ. ವಾಲಿಯವರು, ದಿ. ಎಸ್. ಎಸ್. ಎಲಿಗಾರರ

ಸೊಸೆಯಾಗಿ, ತಮ್ಮ ಮಾವನವರ ಹೆಸರಿನಲ್ಲಿ ದತ್ತಿ ಸ್ಥಾಪಿಸಿರುವುದು ಸಮಾಜದಲ್ಲಿ ತೀರಾ ಅಪರೂಪದಲ್ಲಿ ಅಪರೂಪ ಮತ್ತು ತುಂಬಾ ಆದರ್ಶಪ್ರಾಯವಾದ ಅನುಕರಣೀಯ ಕಾರ್ಯವಾಗಿದೆ, ಈ ಕಾರ್ಯ ನಮಗೆ ಮಾದರಿಯಾಗಬೇಕು ಎಂದರು. ಅದೇ ರೀತಿ ಬದುಕಿನಲ್ಲಿ ಸಾಕಷ್ಟು ಕಷ್ಟಗಳು ಅಕಾಲಿಕವಾಗಿ ಬಂದರೂ ಎದೆಗುಂದದೆ ಅವುಗಳನ್ನು ಎದುರಿಸಿ ಸಮಾಜದಲ್ಲಿ ತಲೆಎತ್ತಿ ಆದರ್ಶ ಬದುಕು ಸಾಗಿಸುತ್ತಿರುವ ಶ್ರೀಮತಿ ವಿಜಯಲಕ್ಷ್ಮಿ ವಿ. ವಾಲಿಯವರು ಅಕಾಲಿಕವಾಗಿ ಅಗಲಿದ ತಮ್ಮ ಪತಿಯ ಆಶಯಗಳೂ ಕೂಡ ನಿತ್ಯ ನಿರಂತರವಾಗಿ ನೆರವೇರುತ್ತಿರಲಿ ಎಂಬ ಸದ್ದುದ್ದೇಶದಿಂದ ತಮ್ಮ ಮಾವನವರ ಜೊತೆಗೆ ತಮ್ಮ ಪತಿ ದಿ. ಶ್ರೀ ಅಮರೇಶ ಎಸ್. ಎಲಿಗಾರ ಇವರ ಹೆಸರಿನಲ್ಲಿ ಸಂಸ್ಮರಣಾ ದತ್ತಿ ಪ್ರಾರಂಭಿಸಿದ ಕಾರ್ಯ ಕೂಡಾ ಮೆಚ್ಚುವಂತದ್ದು, ಇಂತಹ ವಿಶಿಷ್ಠ ದತ್ತಿಯ ಕಾರ್ಯಕ್ರಮ ತಪ್ಪದೇ ವಿದ್ಯಾವರ್ಧಕ ಸಂಘ ಪ್ರತಿ ವರ್ಷವೂ ನೆರವೇರಿಸುವುದು ಎಂದರು.

ದತ್ತಿದಾನಿ ಶ್ರೀಮತಿ ವಿಜಯಲಕ್ಷ್ಮಿ ವಿ. ವಾಲಿಯವರು ಮಾತನಾಡಿ, ತಮ್ಮ ಮಾವ ಹಾಗೂ ಪತಿಯ ಹೆಸರಿನಲ್ಲಿ ಪ್ರತಿ ವರ್ಷ ಫೆಬ್ರವರಿ ೧೬ ರಂದು ಕಾರ್ಯಕ್ರಮ ಏರ್ಪಡಿಸಿ, ಯುವ ಸಂಗೀತ/ನೃತ್ಯ ಕಲಾವಿದರಿಗೆ ಪ್ರೋತ್ಸಾಹ ನೀಡುವುದು, ಯುವ ಪ್ರತಿಭೆಗಳನ್ನು ಬೆಳಕಿಗೆ ತರುವುದು ಮುಂತಾದವುಗಳು ದತ್ತಿಯ ಆಶಯವಾಗಿದೆ ಎಂದು ವಿವರಿಸಿ, ಈ ದತ್ತಿ ಸ್ಥಾಪನೆಗೆ ಅನುವು ಮಾಡಿಕೊಟ್ಟ ಕ.ವಿ.ವ.ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ನಂತರ ಹೆಬ್ಬಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಸಂಗೀತ ಶಿಕ್ಷಕರು ಮತ್ತು ಖ್ಯಾತ ಸಂಗೀತಗಾರರಾದ ಡಾ. ಅರ್ಜುನ ವಠಾರ ಅವರು ಸೊಗಸಾಗಿ ಸಂಗೀತ ಕಚೇರಿ ನಡೆಸಿಕೊಟ್ಟರು. ಇವರಿಗೆ ಅಲ್ಲಮಪ್ರಭು ಕಡಕೋಳ ತಬಲಾ, ಶರಣಬಸವ ಮಹಾಮನೆ ವಾಯಲಿನ, ಕೃಷ್ಣಕುಮಾರ ಸುತಾರ ಹಾರ್ಮೋನಿಯಂ ಹಾಗೂ ಹೇಮಂತ ಲಮಾಣಿ ತಂಬೂರಿ ಸಾಥ್ ನೀಡಿದರು.

ಫೆಬ್ರವರಿ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ನಾಯಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು.

೯೯. **ಶ್ರೀಮತಿ ಸರಸ್ವತಿ ನಾಗಪ್ಪ ನಾಗಜ್ಜನವರ ದತ್ತಿ :** ದಾನಿಗಳು, ಶ್ರೀ ಅರವಿಂದ ನಾಗಜ್ಜನವರ

ನೊಂದ ಜೀವಗಳಿಗೆ ಸಾಂತ್ವನ ನೀಡುವ ಸತ್ವ ಕನ್ನಡ ಸಾಹಿತ್ಯದಲ್ಲಿ ಇದೆ. ಕನ್ನಡ ಸಾಹಿತ್ಯ ಮನಸ್ಸಿಟ್ಟು ಓದಿದಲ್ಲಿ ಬದುಕಿಗೆ ಉತ್ತಮ ಮಾರ್ಗದರ್ಶಕ ಸೂತ್ರಗಳು ಸಿಕ್ಕುತ್ತವೆ. ಕನ್ನಡ ಸಾಹಿತ್ಯದಲ್ಲಿ ಸಂತರ, ಶರಣರ ಮತ್ತು ದಾಸರ ಸಾಹಿತ್ಯ ವಿಶೇಷವಾದಂಥ ಸ್ಥಾನ ಹೊಂದಿದ್ದು, ಅತ್ಯಂತ ಪ್ರಭಾವಶಾಲಿ ಸಾಹಿತ್ಯ ಎಂದು ಇದು ಪ್ರಶಂಸೆಗೆ ಪಾತ್ರವಾಗಿದೆ, ದಾಸರು, ಶರಣರು ಮತ್ತು ಸಂತರು ಅಂದಾಗ ಪುರಷರಷ್ಟೇ ಪರಿಣಾಮಕಾರಿ ಉತ್ಕೃಷ್ಟ ಸಾಹಿತ್ಯವನ್ನು ಮಹಿಳಾ ಕವಯಿತ್ರಿಯರು ರಚನೆ ಮಾಡಿರುವುದು ಕಂಡು ಬರುತ್ತದೆ, ಸಂತ, ಶರಣ ಮತ್ತು ದಾಸ ಸಾಹಿತ್ಯದ ಮಹಿಳಾ ಕವಯಿತ್ರಿಯರಲ್ಲಿ ಅಕ್ಕಮಹಾದೇವಿ ಅಗ್ರಗಣ್ಯರಾಗಿ ನಿಲ್ಲುವರು ಎಂದು ಹುಬ್ಬಳ್ಳಿಯ ೨ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರಾದ ಮಾನ್ಯ ಶ್ರೀ ಸಂಜಯ ಪಿ. ಗುಡಗುಡಿಯವರು ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಾತೋಶ್ರೀ ಸರಸ್ವತಿ ನಾಗಪ್ಪ ನಾಗಜ್ಜನವರ ದತ್ತಿ ಕಾರ್ಯಕ್ರಮದ ಅಂಗವಾಗಿ ದಿನಾಂಕ **೨೫-೨-೨೦೧೯** ರಂದು ಆಯೋಜಿಸಿದ್ದ **'ಕನ್ನಡದ ಸಂತ ಕವಯಿತ್ರಿಯರು'** ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಮಾನ್ಯ ಶ್ರೀ ಸಂಜಯ ಗುಡಗುಡಿಯವರು, ಕನ್ನಡ ಸಾಹಿತ್ಯದಲ್ಲಿ ಇರುವಂತೆ ಸ್ತ್ರೀ ಪ್ರಧಾನ ಅಥವಾ ಸ್ತ್ರೀಪರ ಸಾಹಿತಿಗಳು ಎಂಬ ವರ್ಗೀಕರಣ ಇಂಗ್ಲೀಷ ಸಾಹಿತ್ಯದಲ್ಲಿಯೂ ಕಂಡು ಬರುತ್ತದೆ. ಇಂಗ್ಲೀಷಿನ ಖ್ಯಾತ ಸಾಹಿತಿಗಳಾದ ಶೇಕ್ಸ್‌ಪಿಯರ್ ಇವರ ಕೃತಿಗಳ ವಿಮರ್ಶಕರು, ಶೇಕ್ಸ್‌ಪಿಯರ್ ಅವರನ್ನು ಸ್ತ್ರೀಪರ ಮತ್ತು ಸ್ತ್ರೀಯರಿಗೆ ತಮ್ಮ ಎಲ್ಲ ಕೃತಿಗಳಲ್ಲಿಯೂ ಪ್ರಾಧಾನ್ಯ ನೀಡಿ, ತಮ್ಮ ಕೃತಿಗಳಲ್ಲಿ ಇರುವ ನಾಯಕನಿಗಿಂತಲೂ ನಾಯಕಿಯೇ ಶ್ರೇಷ್ಠ ಅಥವಾ ವೀರ ನಾಯಕಿ ಎಂಬುವಂತೆ ಬಿಂಬಿಸಿದ್ದರಿಂದ, ಅವರನ್ನು ಮಹಿಳಾ ಪರ ಸಾಹಿತಿ ಎಂದು ಕರೆಯಲಾಗುತ್ತಿದೆ, ಎಂದು ಇಂಗ್ಲೀಷ ಸಾಹಿತ್ಯ ಲೋಕ ಹೇಳುತ್ತದೆ. ಇಂದಿನ ಯುವಪೀಳಿಗೆಯಲ್ಲಿ ಓದುವ ಅಭಿರುಚಿ ಕಡಿಮೆಯಾಗಿದ್ದರಿಂದ ತಂದೆ ತಾಯಿಗಳಿಗೆ ಮಕ್ಕಳಾಗಿ ಅವರ ಪಾಲನೆ ಪೋಷಣೆ ಮಾಡುವ ನೈತಿಕ ಹೊಣೆಯಿಂದ ಯುವಪೀಳಿಗೆ ದೂರು ಸರಿಯುವಂತಾಗಿ, ತಂದೆ-ತಾಯಿಗಳು ಸರಿಯಾದ ಆಸರೆ ಮತ್ತು ಸಂರಕ್ಷಣೆ ಇಲ್ಲದೆ ವೃದ್ಧಾಶ್ರಮ ಸೇರಿಕೊಳ್ಳುವಂಥ ಅಮಾನುಷ ಪ್ರಸಂಗಗಳು ಮತ್ತು ತಂದೆ-ತಾಯಿಗಳನ್ನು ಮಕ್ಕಳು ನೋಡಿಕೊಳ್ಳಬೇಕೆಂಬ ಜವಾಬ್ದಾರಿಯನ್ನು ನೆನಪು ಮಾಡಿಕೊಟ್ಟು, ಅವುಗಳ ಪಾಲನೆ ಮತ್ತು ಅನುಷ್ಠಾನಕ್ಕಾಗಿ ಹಿರಿಯ ನಾಗರಿಕರ ಸಂರಕ್ಷಣೆಗಾಗಿ ವಿಶೇಷ ಕಾನೂನು ನಮ್ಮ ಸಮಾಜದಲ್ಲಿ ರಚನೆಯಾಗಿದ್ದು, ಸುಸಂಸ್ಕೃತ ನಾಗರಿಕ ಸಮಾಜ ಅಂತಾ ಹೇಳಿಕೊಳ್ಳುವ ನಮ್ಮ ಸಮಾಜ ತಲೆ ತಗ್ಗಿಸುವಂಥ ಸಮಯ ಬಂದದ್ದು ವಿಷಾದನೀಯ ಎಂದರು.

ಅತಿಥಿ ಉಪನ್ಯಾಸಕರಾಗಿ ಮಾತನಾಡಿದ ಖ್ಯಾತ ಕಲಾವಿದರು ಮತ್ತು ಹರಿದಾಸ ಸಾಹಿತಿಗಳೂ ಆದ ಶ್ರೀಮತಿ ಸೀತಾ ಛಪ್ಪರ ಅವರು ಮಾತನಾಡಿ, ನಮ್ಮಲ್ಲಿ ಸಂತರು, ಶರಣರು ಹಾಗೂ ದಾಸರು ಅಲ್ಲದೇ ಪ್ರಖ್ಯಾತ ಸಾಹಿತಿಗಳು ರಚಿಸಿದ ಸಾಕಷ್ಟು ಕವನಗಳು ಇಂದಿಗೂ ಬೆಳಕು ಕಂಡಿಲ್ಲ ಮತ್ತು ಪ್ರಚಾರಕ್ಕೆ ಬಂದಿಲ್ಲ, ಅಂತಹ ಕವನಗಳನ್ನ ಗುರುತಿಸಿ ಅವುಗಳಿಗೆ ಪ್ರಚಾರ ನೀಡುವುದು ಇಂದಿನ ತುರ್ತು ಅವಶ್ಯಕತೆಯಾಗಿದೆ, ಇಂದಿನಂತೆ ಹಿಂದಿನ ಸಾಹಿತಿಗಳಿಗೆ ಹೆಚ್ಚಿನ ಶಿಕ್ಷಣ ಇರಲಿಲ್ಲ, ಕೆಲವು ಸಾಹಿತಿಗಳಂತೂ ಶಾಲೆಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡದೇ ಇದ್ದರೂ ಮನೆಯಲ್ಲಿ ಮಾಡಿದ ವಿದ್ಯಾಭ್ಯಾಸ, ಸಂಸ್ಕಾರ ಮತ್ತು ಪರಿಸರದಿಂದಾಗಿ ಸಾಹಿತ್ಯ ಲೋಕದಲ್ಲಿ ಸಾಕಷ್ಟು ಅವಿಸ್ಮರಣೀಯ ಕೃತಿಗಳನ್ನು ರಚನೆ

ಮಾಡಿದ್ದಾರೆ. ಇಂದಿನಂತೆ ಯಾವುದೇ ಸೌಲಭ್ಯ ಇಲ್ಲದಿದ್ದರೂ ಕನ್ನಡ ಸಾಹಿತ್ಯ ಲೋಕದಲ್ಲಿ ಸಂತ ಕವಯಿತ್ರಿಯರಾದ ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮಮ್ಮ ರಚನೆ ಮಾಡಿದ ಕೃತಿಗಳು ಅತ್ಯಂತ ಶ್ರೇಷ್ಠ ಮತ್ತು ಮೌಲಿಕ ಕೃತಿಗಳಾಗಿವೆ, ಇಂದು ಸಮಾಜದಲ್ಲಿರುವ ಜಾತಿ ಜಾತಿಗಳ ಮಧ್ಯೆ ಇರುವ ಭೇದ-ಭಾವ, ತನ್ನ ಜಾತಿ ಮಾತ್ರ ಶ್ರೇಷ್ಠ, ತನ್ನ ದೇವರು ಮಾತ್ರ ಸರ್ವಶ್ರೇಷ್ಠ ಎಂಬ ಅಸಮಾನತೆಯ ವಿಚಾರಧಾರೆ ಅಳಿಸಿಹೋಗುವಂತೆ ಎಲ್ಲರೂ ಒಂದೇ, ದೇವನೊಬ್ಬ ನಾಮ ಹಲವು ಎಂಬ ತತ್ವ ಸಾರಿ ಹೇಳುವ ಉದಾತ್ತ ಸಾಹಿತ್ಯವನ್ನು ಹೆಳವನಕಟ್ಟೆ ಗಿರಿಯಮ್ಮ ನಮಗೆ ನೀಡಿದರೆ ನಿರಕ್ಷರಿಯಾದ ಹರಪನಹಳ್ಳಿ ಭೀಮವ್ವ ವಿಶೇಷವಾದ ಒಗಟುಗಳನ್ನು ರಚಿಸಿ, ಒಗಟುಗಳಲ್ಲಿಯೇ ಪ್ರಶ್ನೋತ್ತರ ಮಾಲಿಕೆ ಮಾಡಿ, ಅಂತಿಮವಾಗಿ ಒಗಟಿಗೆ ಉತ್ತರ ನೀಡುವಾಗ ಎಲ್ಲಾ ಒಗಟುಗಳಲ್ಲಿ ಸ್ತ್ರೀ ಮೇಲುಗೈ ಸಾಧಿಸುವಂತೆ ನೋಡಿಕೊಂಡು ಸ್ತ್ರೀವಾದಿ ಎಂದು ಗುರ್ತಿಸಲ್ಪಟ್ಟಿದ್ದಾಳೆ, ಈ ಉಭಯ ಕವಯಿತ್ರಿಯರು ಕನ್ನಡ ದಾಸ ಸಾಹಿತ್ಯ ಲೋಕದ ಶ್ರೇಷ್ಠ ಸಂತ ಕವಯಿತ್ರಿಯರು ಎಂಬುದು ಹೆಮ್ಮೆಯ ಸಂಗತಿ ಎಂದರು.

ದತ್ತಿ ದಾನಿಗಳಾದ ಅರವಿಂದ ನಾಗಜ್ಜನವರ ದತ್ತಿ ಆಶಯ ಕುರಿತು ಮಾತನಾಡಿದರು. ದಿ. ಶ್ರೀಮತಿ ಸರಸ್ವತಿ ನಾಗಪ್ಪ ನಾಗಜ್ಜನವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ, ಗೌರವ ಸಲ್ಲಿಸಲಾಯಿತು. ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ವೇದಿಕೆ ಮೇಲಿದ್ದರು.

ಪ್ರಾರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಫೆಬ್ರವರಿ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಪ್ರಫುಲ್ಲಾ ನಾಯಕ ನಿರೂಪಿಸಿದರು.

೧೦೦. **ಪ್ರೊ. ರಾಮಚಂದ್ರ ಪಾಟೀಲ ದತ್ತಿ,** ದಾನಿಗಳು: ಡಾ. ಅಶೋಕ ಆರ್. ಪಾಟೀಲ, ಬೆಂಗಳೂರು

ಕನ್ನಡ ನಾಡು ಶತಮಾನ ಕಾಲದಿಂದಲೂ ಒಂದು ಮೌಲ್ಯಯುತ ವಿವೇಕವನ್ನು ಕಟ್ಟಿಕೊಡುತ್ತಾ ಬಂದಿದೆ. ನಮ್ಮ ಆರಂಭದ ಬಹುಕೊಡ್ಡ ಲೇಖಕ, ಕನ್ನಡ ನಾಡಿಗೆ ರಾಜಮಾರ್ಗ ಹಾಕಿಕೊಟ್ಟ ಕವಿ, ಕವಿರಾಜ ಮಾರ್ಗಕಾರ ಹೇಳಿದಂತೆ ಮತ್ತೊಬ್ಬರ ಆಚಾರ, ವಿಚಾರ, ಧರ್ಮ, ಸಂಸ್ಕೃತಿ, ಪರಂಪರೆಯನ್ನು ಸಹಿಸುವುದು, ಗೌರವಿಸುವುದು, ಸುಸಂಸ್ಕೃತ ಮನಸ್ಸಿನ ಲಕ್ಷಣ. ಅದು ನಿಜವಾದ ಬಂಗಾರ, ಅವರು ಹೇಳಿದ ಮಾತಿನ ಬೆಳಕಿನಲ್ಲಿ ಮುಂದೆ ಬಂದಂತಹ ಪಂಪ, ಹರಿಹರ, ಕುವೆಂಪು ಮುಂತಾದ ಕನ್ನಡದ ಕವಿವರ್ಯರು ಈ ಮಾತನ್ನು ಮತ್ತಷ್ಟು ವಿಸ್ತೃತಗೊಳಿಸುತ್ತಾ, ಗಟ್ಟಿಗೊಳಿಸುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ ಎಂದು ಹಿರೇಮಲ್ಲೂರ ಈಶ್ವರನ್ ಪ.ಪೂ. ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರಿ. ಶಶಿಧರ ತೋಡಕರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೨-೩-೨೦೧೯** ರಂದು ಆಯೋಜಿಸಿದ್ದ ಡಾ. ಅಶೋಕ ಆರ್. ಪಾಟೀಲ, ಬೆಂಗಳೂರು ಅವರು ತಮ್ಮ ಪೂಜ್ಯ ತಂದೆಯವರ ಹೆಸರಿನಲ್ಲಿ ಇರಿಸಿದ, **ಶ್ರೀ ರಾಮಚಂದ್ರ ವ್ಹಿ. ಪಾಟೀಲ ದತ್ತಿ ಉದ್ಘಾಟನೆ ಹಾಗೂ ಭಾವಗೀತೆಗಳ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.**

ಯಾವುದೇ ಜಾತಿ, ಮತ, ಪಂಥ, ದೇಶ, ಭಾಷೆ, ಗಡಿ ಇತ್ಯಾದಿ ನೋಡದೆ, ಸಂಕುಚಿತ ಭಾವನೆ ಇಟ್ಟುಕೊಳ್ಳದೇ, ಇಡೀ ಜಗತ್ತನ್ನು ಒಂದು ಮಾಡಿ ನೋಡುವ, ಕವಿ, ಲೇಖಕರಿಂದ ಒಳ್ಳೆಯ ಸಮಾಜಮುಖಿ ಕಾವ್ಯ, ಬರಹಗಳು ಮೂಡಿಬರಲು ಸಾದ್ಯ. ಇಂತವರು ಆಡುವ ಮಾತೆ ಸರಸ್ವತಿವಾಣಿ. ಕವಿಯಾದವನು ಎಲ್ಲವನ್ನೂ ಆವರಿಸಿಕೊಂಡಿರುತ್ತಾನೆ, ಅವನ ಭಾವದಿಂದ ಯಾವದೂ ಹೊರಗೆ ಉಳಿಯಲು ಸಾಧ್ಯವಿಲ್ಲ, ಜೀವನದಲ್ಲಿ ಬರುವ ಸುಖ, ಸಂತೋಷ, ದುಃಖ, ದುಮ್ಮಾನ, ಒಳಿತು, ಕೆಡಕು ಹೀಗೆ ಸಮಾಜ ಜೀವನದ ಎಲ್ಲ ಸ್ತರಗಳನ್ನು ನೋಡಿದವನು ಸಮಾಜದ ಒಳಿಗಾಗಿ ತಮ್ಮ ಕಾವ್ಯದ ಮೂಲಕ ಶ್ರಮಿಸಬೇಕು ಎಂದ ಅವರು, ಈ ದಿಶೆಯಲ್ಲಿ ಶ್ರೀ ರಾಮಚಂದ್ರ ವ್ಹಿ. ಪಾಟೀಲರ ಕಾವ್ಯಗಳು ಅರ್ಥಪೂರ್ಣವಾಗಿವೆ, ಓದುಗರ ಮನಸ್ಸಿನಲ್ಲಿ ಉಳಿಯುವಂಥವುಗಳಾಗಿವೆ ಅವರ 'ಭಾವಸ್ಪಂಧನ' ಕವನ ಸಂಕಲನದಲ್ಲಿಯ 'ನೀ ಬಂದ ಪ್ರತಿಸಲಕ್ಕೆ' 'ಬರೆದದ್ದು ಕೊನೆತನಕ ಉಳಿಯೋದಿಲ್ಲ' ಮುಂತಾದ ಕವನಗಳ ಸಾಲುಗಳನ್ನು ವಾಚಿಸಿ, ರಾಮಚಂದ್ರ ಪಾಟೀಲರ ಕವನ ಸಂಕಲನ 'ಭಾವಸ್ಪಂದನ' ವಿವೇಕದ ವಿಸ್ತಾರವಾಗಿದ್ದು, ಇವುಗಳಿಗೆ ಭಾವಗೀತೆಗಳ ರೂಪ ನೀಡಿದಾಗ ಮತ್ತಷ್ಟು ಸೊಗಸಾಗಿ ಮೂಡಿಬರುತ್ತವೆ ಎಂದು, ರಾಮಚಂದ್ರ ವ್ಹಿ. ಪಾಟೀಲರ ಹೆಸರಿನಲ್ಲಿ ಅವರ ಪುತ್ರ ಡಾ. ಅಶೋಕ ಆರ್. ಪಾಟೀಲ ಅವರು ದತ್ತಿ ಇರಿಸಿ ಪ್ರತಿ ವರ್ಷ ಕಾರ್ಯಕ್ರಮ ಏರ್ಪಡಿಸುವಂತೆ ಮಾಡಿರುವ ಕಾರ್ಯ ಶ್ಲಾಘನೀಯ ಎಂದರು.

ದತ್ತಿ ಉದ್ಘಾಟಿಸಿ ಮಾತನಾಡಿದ, ಸಾಹಿತಿ ಮಲ್ಲಿಕಾರ್ಜುನ ಗುಮ್ಮಗೋಳ ಅವರು, ಸಾಹಿತ್ಯ, ಸಂಗೀತ, ಸಂಸ್ಕೃತಿ ಸವಿಯುವುದಕ್ಕಾಗಿ, ಕನ್ನಡ ಉಳಿಸಿ, ಬೆಳೆಸುವಲ್ಲಿ, ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಲ್ಲಿ ಪ್ರಾಚೀನ ಇತಿಹಾಸ ಕಾಲದಿಂದಲೂ ಇಂಥ ದತ್ತಿಗಳು ಪೂರಕವಾಗುತ್ತಾ ಬಂದಿರುವುದನ್ನು ಹಾಗೂ ಹಿಂದಿನ ಕಾಲದಲ್ಲಿ ರಾಜಮಹಾರಾಜರು, ಸಂಸ್ಥಾನಿಕರು, ತಮ್ಮ ತಮ್ಮ ಆಸ್ಥಾನದಲ್ಲಿ ಕವಿಗಳಿಗೆ, ಕಲಾವಿದರಿಗೆ ರಾಜಾಶ್ರಯ ನೀಡಿ ಪ್ರೋತ್ಸಾಹಿಸುತ್ತಿದ್ದುದನ್ನು ಕಾಣುತ್ತೇವೆ. ದಾನಚಿಂತಾಮಣಿ ಅತ್ತಿಮಬ್ಬೆ, ದಿಲ್ಲಿ ಸುಲ್ತಾನ ಬಹಾದ್ದೂರ ಶಾ, ಬ್ರಿಟನ್ ಅರಸ ಕಿಂಗ್ ಜಾರ್ಜ್ ಹಾಗೂ ಆಕ್ಸಬ್ರಿಜ್-

ಕ್ಯಾಂಬ್ರಿಜ್ ಮುಂತಾದವರ ಹೆಸರನ್ನು ಉಲ್ಲೇಖಿಸಿ, ದತ್ತಿ ಇತಿಹಾಸ ವಿವರಿಸುತ್ತಾ ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಕೂಡಾ ಒಂದು ಅಮೂಲ್ಯ ಕನ್ನಡ ದತ್ತಿ ಸಂಸ್ಥೆಯಾಗಿದೆ ಎಂದು, ರಾಮಚಂದ್ರ ವ್ಹಿ. ಪಾಟೀಲರ ದತ್ತಿ ನಿರಂತರವಾಗಿ ನಡೆದು ಸಾಹಿತ್ಯ, ಸಂಗೀತ ಉಳಿಸಿ, ಬೆಳೆಸಿಕೊಂಡು ಹೋಗಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ, ಶಿಕ್ಷಣ ತಜ್ಞ ಪ್ರ. ಶಿವಶಂಕರ ಹಿರೇಮಠ ಅವರು ಮಾತನಾಡಿ, ರಾಮಚಂದ್ರ ಪಾಟೀಲರು, ತಮ್ಮ ಭಾವಸ್ಪಂದನ ಕವನ ಸಂಕಲನವನ್ನು ಭಾವದಿಂದ, ಬುದ್ಧಿಯಿಂದ, ವಿವೇಕದಿಂದ ಮಹನೀಯರಿಗೆ ಅರ್ಪಿಸಿದ್ದಾರೆ. ಮಹನೀಯರೆಂದರೆ, ಶ್ರಮಿಸುವ ಮಹನೀಯರು, ಮೃಗತ್ವ ಹೋಗಿ ಮನುಷ್ಯತ್ವ ಮೂಡಿಸುವಲ್ಲಿ ಶ್ರಮಿಸುವವರು, ಗಲಭೆ ಮರೆಯಾಗಿ, ನೆಮ್ಮದಿ ಮೂಡಿಸುವಲ್ಲಿ ಶ್ರಮಿಸುವವರು, ವೈರತ್ವ ಮರೆಯಾಗಿ, ಮಿತೃತ್ವ ಮೂಡುವಲ್ಲಿ ಶ್ರಮಿಸುವ ಮಹನೀಯರಿಗೆ ಅರ್ಪಿಸಿದ್ದಾರೆ. ಇದು ಕವಿಯ ಆಶೆ ಕೂಡಾ ಆಗಿದೆ, ಆದರೆ ಇದನ್ನು ಎಷ್ಟು ಜನ ಮಹನೀಯರು ತಮ್ಮ ಜೀವನದಲ್ಲಿ ಅಳವಡಿಕೊಳ್ಳುತ್ತಾರೆ ಎಂದ ಅವರು, ಉತ್ಕೃಷ್ಟ ಸಾಹಿತ್ಯ, ಸಂಸ್ಕೃತಿ, ಚಿಂತನೆಗಳು ಇಂಥ ಉನ್ನತ ವಿಚಾರದ ಕವಿಗಳಿಂದ ಮೂಡಿಬರುತ್ತದೆ. ಆಯಾ ಕಾಲಘಟ್ಟದ ಅಗತ್ಯ, ಅನಿವಾರ್ಯತೆಗನುಗುಣವಾಗಿ, 'ಜಯಭಾರತ ಜನನಿಯ ತನುಜಾತೆ' ಹಾಗೂ ೨೦ ನೇ ಶತಮಾನದ 'ರಕ್ಷಿಸು ಕರ್ನಾಟಕ ದೇವಿ', 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಒಂದೇ ಒಂದೇ ಕರ್ನಾಟಕ ಒಂದೇ' ಮುಂತಾದ ಘೋಷವಾಕ್ಯಗಳನ್ನು ಕವಿಗಳು ನೀಡುತ್ತಾ ಬಂದಿರುವುದನ್ನು ಕಾಣುತ್ತೇವೆ, ಪಂಪ ಕವಿ ಒಂದು ಸಾವಿರ ವರ್ಷದ ಹಿಂದೆ ಹೇಳಿದ 'ಮನುಷ್ಯ ಕುಲ ಒಂದೆ' ಎಂಬುದನ್ನು ಇಂದು 'ಯುನೆಟೆಡ್ ನೇಶನ' ತನ್ನ ಘೋಷವಾಕ್ಯವನ್ನಾಗಿ ಇಟ್ಟುಕೊಂಡಿರುವುದನ್ನು ಕಾಣುತ್ತೇವೆ ಎಂದ ಅವರು, ರಾಮಚಂದ್ರ ಪಾಟೀಲರದು ವೃತ್ತಿ ಬದುಕು, ಸಾಮಾಜಿಕ ಬದುಕು, ಸಾಹಿತ್ಯಿಕ ಬದುಕಾಗಿದೆ. ಪರಿಶ್ರಮಪೂರ್ವಕ, ಶ್ರಮ ಸಂಸ್ಕೃತಿಯ ಬದುಕಾಗಿದೆ, ಅವರ ಗೀತೆಗಳು ಸರಳತೆ, ಗೇಯತೆ, ಅರ್ಥಗರ್ಭಿತವಾಗಿವೆ. ಸಮಾಜ, ದೇಶ ಕಟ್ಟುವಲ್ಲಿ ಪೂರಕವಾಗಿದೆ ಎಂದರು.

ರಾಮಚಂದ್ರ ವ್ಹಿ. ಪಾಟೀಲರು ಮಾತನಾಡಿ, ಕವಿಯಾದವನು ತನ್ನನ್ನು ತಾನು ಮೊದಲು ತಿದ್ದಿಕೊಂಡರೆ ತನ್ನ ಸಾಹಿತ್ಯದಿಂದ ಇತರರನ್ನು ತಿದ್ದಬಹುದು, ಕವಿಗೆ ಹೊರಗಿನ ವಿಮರ್ಶಕರಿಗಿಂತ, ತನ್ನ ಅಂತರಂಗದ ವಿಮರ್ಶೆ ಮುಖ್ಯ. ಕವಿತೆ ಪ್ರಾಮಾಣಿಕ ಸಂವೇದನೆಯನ್ನು ಹೊರಹಾಕುವ ಸೃಜನಶೀಲ ಕ್ರಿಯೆಯಾಗಿದ್ದು, ಮೊಗ್ಗು ಅರಳಿ ಹೂವಾಗಿ ತನ್ನ ಚೆಲುವು, ಗಂಧದ ಪರಿಮಳ ಬೀರುವ ಪರಿ, ಕವಿಗೆ ಹೊಟ್ಟೆಪಾಡಿಗೆ ಒಂದು ವೃತ್ತಿಯಿರಬೇಕು, ಕವಿತ್ವ ಪ್ರವೃತ್ತಿಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಯನಗರ ಗಾರ್ಡನ್ ವಾಯುವಿಹಾರಿಗಳ ಸಂಘದ ಸದಸ್ಯರು ರಾಮಚಂದ್ರ ವ್ಹಿ. ಪಾಟೀಲರನ್ನು ಸನ್ಮಾನಿಸಿ ಗೌರವಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಎಸ್. ಬಿ. ಗಾಮನಗಟ್ಟಿ ವಂದಿಸಿದರು.

೧೦೧. **ಶ್ರೀಮತಿ ಗೌರಮ್ಮ ಚನ್ನಪ್ಪ ಹಲಗತ್ತಿ ದತ್ತಿ :** ದಾನಿಗಳು, ಶ್ರೀಮತಿ ರತ್ನಾ ಶಂಕರ ಹಲಗತ್ತಿ

ಪ್ರತಿ ವರ್ಷ ಮಾರ್ಚ ೮ ರಂದು ಮಹಿಳಾ ದಿನಾಚರಣೆ ಪ್ರಶಸ್ತಿ ನೀಡಲು ಕಾರ್ಯಕ್ರಮ ಏರ್ಪಡಿಸಲು ದತ್ತಿ ಇರಿಸಿದ್ದಾರೆ.

೧೦೨. **ಶ್ರೀ ಯಲ್ಲಪ್ಪ ಶಿವಪ್ಪ ಸಿದ್ನಾಳ ದತ್ತಿ :** ದಾನಿಗಳು, ಶ್ರೀ ಮಹದೇವ ಯ. ಸಿದ್ನಾಳ.

ಸಾವಯವ ಕೃಷಿ ಪದ್ಧತಿ ದೇಶದ ಸಂಸ್ಕೃತಿ ಹಾಗೂ ಪರಂಪರೆಯ ಪ್ರತೀಕ. ಈ ಸಹಜ ಕೃಷಿಯ ಬಗ್ಗೆ ರೈತರಲ್ಲಿ ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆ ಬರದ ಹೊರತು ಯಶಸ್ವಿಯಾಗುವುದು ಅಸಾಧ್ಯ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಾವಯವ ಕೃಷಿ ಸಂಸ್ಥೆಯ ಮುಖ್ಯಸ್ಥರಾದ ಡಾ. ಎಂ. ಎನ್. ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೯-೩-೨೦೧೯** ರಂದು ಆಯೋಜಿಸಿದ್ದ ದಿ. ಶ್ರೀ ಯಲ್ಲಪ್ಪ ಶಿವಪ್ಪ ಸಿದ್ನಾಳ ದತ್ತಿ ಕಾರ್ಯಕ್ರಮದಲ್ಲಿ **'ಒಕಲುತನದಲ್ಲಿ ಸಾವಯವ ಕೃಷಿ'** ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಭಾರತದಲ್ಲಿ ೧೯೬೭-೭೦ ರ ಅವಧಿಯಲ್ಲಿ ಹಸಿರು ಕ್ರಾಂತಿಯ ಪರಿಣಾಮದಿಂದ ಆಹಾರೋತ್ಪಾದನೆಯಲ್ಲಿ ಗರಿಷ್ಠ ಮಿತಿ ಸಾಧಿಸಲಾಯಿತು ನಿಜ. ಆದರೆ ರೈತರು ಹೆಚ್ಚು ಉತ್ಪಾದಿಸುವ ಭರದಲ್ಲಿ ರಾಸಾಯಿನಿಕ ಗೊಬ್ಬರ, ಕೀಟನಾಶಕಗಳನ್ನು ಅತಿಯಾಗಿ ಸುರಿದು ರೈತ ಮಿತ್ರ ಸೂಕ್ಷ್ಮಾಣುಜೀವಿಗಳ ನಾಶಕ್ಕೂ ಕಾರಣರಾದರು. ಮಣ್ಣು ತನ್ನ ಮೃದುತ್ವವನ್ನು ಕಳೆದುಕೊಂಡಿತು. ರಸಗೊಬ್ಬರದ ಅತಿಯಾದ ಬಳಕೆಯಿಂದ ಕೃಷಿ ವೆಚ್ಚ ಹೆಚ್ಚಾಗಿ ರೈತರು ಸಾಲದ ಬಲೆಗೂ ಸಿಲುಕಿದರು. ಈ ವಿಷ ವರ್ತುಲದಿಂದ ಹೊರಬರಲು ರೈತರಿಗೆ ಸಾವಯವ ಕೃಷಿಯೇ ಉತ್ತಮ ಮಾರ್ಗೋಪಾಯ ಎಂದರು.

ಇತ್ತೀಚೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ೭೦ ಎಕರೆ ಜಮೀನಿನಲ್ಲಿ ಸಂಪೂರ್ಣ ಸಾವಯವ ಕೃಷಿ ಪದ್ಧತಿ ಅನುಸರಿಸಿ ರೈತಾಪಿ ಜನರಿಗೆ ನಿರಂತರ ತರಬೇತಿ, ಮಾರ್ಗದರ್ಶನ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ೧೪ ಲಕ್ಷ ರೈತರು ಸಾವಯವ ಪ್ರಾತ್ಯಕ್ಷತೆಯಿಂದ ಉತ್ಸುಕರಾಗಿದ್ದು, ಸಹಜ ಕೃಷಿಯತ್ತ ವಾಲುತ್ತಿದ್ದಾರೆ. ಈಗಾಗಲೇ ದೇಶದ

ಸಿಕ್ಕಿಂ ರಾಜ್ಯವು ಸಂಪೂರ್ಣ ಸಾವಯವ ಕೃಷಿ ರಾಜ್ಯವಾಗಿ ಪರಿವರ್ತಿತವಾಗಿದೆ. ಜಗತ್ತಿನ ೧೪೦ ಕ್ಕೂ ಹೆಚ್ಚು ದೇಶಗಳು ಇಂದು ಸಾವಯವ ಕೃಷಿ ಪದ್ಧತಿಯನ್ನು ಅನುಷ್ಠಾನದಲ್ಲಿ ತಂದಿದ್ದು ಶ್ಲಾಘನೀಯ. **"ಸಾವಯವ ಕೃಷಿ ನಮ್ಮ ಕೃಷಿ"** ಎಂಬ ಭಾವನೆ ಜನರಲ್ಲಿ ಬೆಳೆಯಬೇಕಿದೆ. ಇಡೀ ಭಾರತ ಸಾವಯವ ಕೃಷಿ ದೇಶವಾಗಬೇಕಾದರೆ ರೈತರ ಮನೋಬಲ ಹೆಚ್ಚಾಗಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಪರಿಸರವಾದಿಗಳು, ಸಾವಯವ ತಜ್ಞರಾದ ಡಾ. ಸಂಜೀವ ಕುಲಕರ್ಣಿ ಮಾತನಾಡಿ, ಮಣ್ಣಿನಲ್ಲಿ ಹುಟ್ಟಿ, ಮಣ್ಣಿನಲ್ಲಿ ಬೆಳೆದ ನಾವು ಯಾವುದೇ ಸಂದರ್ಭದಲ್ಲೂ ಮಣ್ಣು ವಿಷಕಾರಿಯಾಗಿ, ರೈತನ ಮಿತ್ರ ಎಂದು ಕರೆಯಲ್ಪಟ್ಟ ಎರೆಹುಳು ಹಾಗೂ ಇತರ ಸೂಕ್ಷ್ಮಾಣುಜೀವಿಗಳು ನಾಶವಾಗದಂತೆ ಜವಾಬ್ದಾರಿಯಿಂದ ವರ್ತಿಸಬೇಕು. ಸಾವಯವ ಕೃಷಿ ಪದ್ಧತಿಯು ದೇಶದ ಆರ್ಥಿಕತೆಯ ಬೆನ್ನೆಲುಬಾಗಬೇಕು. ಪರಿಸರ ಸ್ನೇಹಿ ಕೃಷಿ, ಸುಸ್ಥಿರ ಕೃಷಿಯಿಂದ ಮಾತ್ರ ದೇಶದ ಸಮಗ್ರ ಪ್ರಗತಿ ಸಾಧ್ಯ. ಇಂದು ಅನೇಕ ನಗರಗಳಲ್ಲಿ ಜನರು ಸಾವಯವ ಕೃಷಿ ಉತ್ಪಾದನೆಗಳ ಬಳಕೆಗೆ ಆಸಕ್ತಿ ತೋರಿಸುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಿ. ಶ್ರೀ ಯಲ್ಲಪ್ಪ ಶಿವಪ್ಪ ಸಿದ್ನಾಳ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದತ್ತಿ ದಾನಿ ಮಹದೇವ ಯಲ್ಲಪ್ಪ ಸಿದ್ನಾಳ ದತ್ತಿ ಉದ್ದೇಶ ಕುರಿತು ಮಾತನಾಡಿದರು. ಮಹಾಂತೇಶ ನರೇಗಲ್ಲ ಕಾರ್ಯಕ್ರಮ ನಿರ್ವಹಿಸಿದರು. ಕಾ.ಕಾ ಸಮಿತಿ ಸದಸ್ಯರಾದ ಮನೋಜ ಪಾಟೀಲ ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಉಪನ್ಯಾಸಕ ವೀರಣ್ಣ ಒಡ್ಡೀನ, ಎಂ. ಬಿ. ಬೇನಪ್ಪನವರ, ಮಹೇಶ ಕುಲಕರ್ಣಿ, ಪ್ರಭು ಕುಂದರಗಿ, ಶ್ರೀಮತಿ ಸುಲೋಚನಾ ಮಹದೇವ ಸಿದ್ನಾಳ, ಶ್ರೀಮತಿ ಸವಿತಾ ಕುಸುಗಲ್, ಶ್ರೀಮತಿ ಮಧುಮತಿ ಸಣಕಲ್ಲ, ಎಸ್. ಎಂ. ರಾಚಯ್ಯನವರ, ಎಸ್. ಎಚ್. ಪ್ರತಾಪ, ಶ್ರೀನಿವಾಸ ಕುಲಕರ್ಣಿ, ಆರ್. ಎಂ. ಪಡನೂರ್ ಹಾಗೂ ಸಿದ್ನಾಳ ಪರಿವಾರದವರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

೧೦೩. **ಶಿಕ್ಷಣ ತಜ್ಞ ದಿ. ಎಸ್.ಜಿ. ನಾಡಗೀರ ಸ್ಮಾರಕ ದತ್ತಿ :** ದಾನಿಗಳು, ಶ್ರೀ ಅರುಣ ಎಸ್. ನಾಡಗೀರ

ಶಿಕ್ಷಕ ವೃತ್ತಿ ಜನಮಾನಸದಲ್ಲಿ ಗೌರವ ಸ್ಥಾನ ಹೊಂದಿದ್ದು, ಶಿಕ್ಷಕರಾದವರು ವೃತ್ತಿ ಧರ್ಮವನ್ನು ಕಾಪಾಡಿಕೊಳ್ಳಬೇಕು ಹಾಗೂ ವೃತ್ತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ರಚನಾತ್ಮಕ ಹಂಬಲ ಇಂದು ಅಗತ್ಯವಾಗಿದೆ ಎಂದು ಪ್ರಖ್ಯಾತ ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿ. ಎಸ್.ಜಿ. ನಾಡಗೀರ ಸ್ಮರಣಾರ್ಥ ದಿನಾಂಕ **೧೨-೩-೨೦೧೯** ರಂದು ಆಯೋಜಿಸಿದ ದತ್ತಿ ಕಾರ್ಯಕ್ರಮದಲ್ಲಿ **'ಶಿಕ್ಷಣದಲ್ಲಿ ನೈತಿಕತೆ'** ವಿಷಯ ಕುರಿತು ಉಪನ್ಯಾಸ ನೀಡಿ, ಇಂದಿನ ವಿಜ್ಞಾನ, ತಂತ್ರಜ್ಞಾನದ ತೀವ್ರತರ ಬದಲಾವಣೆಯ ಕಾಲದಲ್ಲಿ ಶಿಕ್ಷಣದಲ್ಲಿ ನೈತಿಕತೆಯ ವಿಚಾರ ಹೆಚ್ಚು ಪ್ರಸ್ತುತವಾಗಿದೆ. ಶಿಕ್ಷಕ ವೃತ್ತಿ ಉದಾತ್ತ ಮಾನವೀಯ ಮೌಲ್ಯಗಳಿಂದ ಕೂಡಿದ್ದು, ವಿದ್ಯಾರ್ಥಿಗಳನ್ನು ತನ್ನ ಸ್ವಂತ ಮಕ್ಕಳಂತೆ ಪ್ರೀತಿಸುವ ನೈತಿಕತೆ ಅಗತ್ಯವಾಗಿದೆ. ಶಿಕ್ಷಕರಾದವರು ತಮ್ಮ ವೈಯಕ್ತಿಕ ಜೀವನದಲ್ಲಿ ಒಳ್ಳೆಯ ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು. ಸಮಾಜ ಅಪೇಕ್ಷಿಸುವ ರೀತಿಯಲ್ಲಿ ನೈತಿಕ ನೆಲೆಗಟ್ಟಿನ ಮೇಲೆ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು.

ಈ ದೇಶದ ಭವಿಷ್ಯವನ್ನು ಬದಲಿಸುವ ಶಕ್ತಿ ಶಿಕ್ಷಕರಲ್ಲಿ ಮಾತ್ರ ಇದೆ. ಇಂದು ಸಮಾಜ ಶಿಕ್ಷಕರ ಮಾರ್ಗದರ್ಶನ ಸೇವೆಯನ್ನು ನಿರೀಕ್ಷಿಸುತ್ತಿದ್ದು, ಸಮಾಜದ ನಿರೀಕ್ಷೆಯಂತೆ ಶಾಲೆಯ ಒಳಗೂ ಹಾಗೂ ಹೊರಗು ನೈತಿಕ ಪ್ರಜ್ಞೆಯಿಂದ ವ್ಯವಹರಿಸಬೇಕು. ಶಿಕ್ಷಕರಾದವರು ಉತ್ತಮ ಸಮಾಜದ ನಿರ್ಮಾತೃಗಳಾಗಿದ್ದು, ಅಪೇಕ್ಷಿತ ಮೌಲ್ಯದಂತೆ ವಿದ್ಯಾದಾನದ ವೃತದಾರಕರಾಗಿರಬೇಕು.

ಶಿಕ್ಷಕರಾದವರಿಗೆ ಪಠ್ಯ ಪುಸ್ತಕವೇ ಸರ್ವಸ್ವವಾಗಿರಬಾರದು. ಪಾಠ ಬೋಧಿಸುವಾಗ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಹಾಗೂ ಪ್ರಾಸಂಗಿಕವಾಗಿಯೂ ಪಠ್ಯಪುಸ್ತಕ ಮೀರಿ ನೈತಿಕ ವಿಚಾರಗಳನ್ನು ಸಂದರ್ಭೋಚಿತವಾಗಿ ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು. ಸತ್ಯ, ಶಾಂತಿ, ಅಹಿಂಸೆ, ಆತ್ಮಸಂಯಮದಂತಹ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳನ್ನು ಬಿತ್ತಬೇಕು. ದಿ. ಎಸ್. ಜಿ. ನಾಡಗೀರ ಗುರುಗಳು ವಿದ್ಯಾರ್ಥಿಗಳ ಸುಖದಲ್ಲಿ ತಮ್ಮ ಸುಖವೂ ಇದೆ ಎಂದು ಬಾಳಿದವರು. ಅವರಲ್ಲಿದ್ದ ಹೃದಯ ವೈಶಾಲ್ಯತೆ, ವಿದ್ಯಾರ್ಥಿಗಳ ಬಗ್ಗೆ ಇದ್ದ ಕಳಕಳಿ ಅಪಾರ. ತಾವೊಬ್ಬ ಆದರ್ಶ ಶಿಕ್ಷಕರಾಗಿ ನಮ್ಮಂತಹ ನೂರಾರು ಆದರ್ಶ ಶಿಕ್ಷಕರನ್ನು ಈ ನಾಡಿಗಿತ್ತ ಹಿರಿಯ ಚೇತನ ಶ್ರೇಷ್ಠ ಶಿಕ್ಷಣ ಚಿಂತಕರಾದ ಇವರು ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲು ಸರಕಾರಕ್ಕೂ ಸಲಹೆಗಾರರಾಗಿದ್ದರು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಉಪನ್ಯಾಸಕರಾದ ಹರ್ಷ ಡಂಬಳ ಮಾತನಾಡಿ, ನೈತಿಕ ಶಿಕ್ಷಣ ಪಠ್ಯಕ್ರಮದ ಒಂದು ಅವಿಭಾಜ್ಯ ಅಂಗವಾಗಬೇಕು. ಅಂದಾಗ ಮಾತ್ರ ವಿದ್ಯಾರ್ಥಿಗಳಲ್ಲಿ ಸಾಮರಸ್ಯ, ಕೂಡಿ ಬಾಳುವ ಗುಣ ಹಾಗೂ ವೈಚಾರಿಕ ಪ್ರಜ್ಞೆ ಬೆಳೆಸಲು ಸಾಧ್ಯವಾಗುವುದು. ನಾವು ಇಂದು ಯಾವುದಕ್ಕೆ ಹೆಚ್ಚು ಒತ್ತು ಕೊಡಬೇಕಿತ್ತೋ ಅದಕ್ಕೆ ಕನಿಷ್ಠ ಸ್ಥಾನ

ನೀಡಿದ್ದರಿಂದ ಅದರ ಕಹಿ ಫಲವನ್ನು ಅನುಭವಿಸಬೇಕಾಗುತ್ತದೆ. ಶಿಕ್ಷಣದಲ್ಲಿ ಸರ್ವಕಾಲಿಕ ಜೀವನ ಮೌಲ್ಯಗಳನ್ನು ಎಳೆಯರ ಹೃದಯದಲ್ಲಿ ಬಿತ್ತಬೇಕು. ಅಂದಾಗ ಶಿಕ್ಷಣದಲ್ಲಿ ಒಳ್ಳೆಯ ಫಲ ಸಿಗಲು ಸಾಧ್ಯ ಎಂದು ತಿಳಿಸಿದರು.

ವೇದಿಕೆಯ ಮೇಲಿನ ಗಣ್ಯರು ದಿ. ಎಸ್. ಜಿ. ನಾಡಗೀರ ಪೂಜ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ದತ್ತಿದಾನಿ ಅರಣ ಎಸ್. ನಾಡಗೀರ ವೇದಿಕೆ ಮೇಲೆ ಉಪಸ್ಥಿತರಿದ್ದರು. ಶ್ರೀಮತಿ ಕಸ್ತೂರಿ ಬಡಿಗೇರ ಪ್ರಾರ್ಥಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಸಂಘದ ಕೋಶಾಧ್ಯಕ್ಷರು ಹಾಗೂ ಮಾರ್ಚ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ವೀರಣ್ಣ ಒಡ್ಡೀನ ವಂದಿಸಿದರು.

೧೦೪. **ನಾಡೋಜ ಡಾ. ಏಣಗಿ ಬಾಳಪ್ಪ ಸ್ಮರಣೆ ದತ್ತಿ :** ದಾನಿಗಳು, ನಾಟ್ಯಭೂಷಣ ಏಣಗಿ ಬಾಳಪ್ಪ ಪ್ರತಿಷ್ಠಾನ, ಏಣಗಿ

ಹಿರಿಯ ರಂಗಕರ್ಮಿ ಏಣಗಿ ಬಾಳಪ್ಪನವರು ಶತಮಾನದ ಸಾಕ್ಷಿ ಪುರುಷ. ಕನ್ನಡ ರಂಗಭೂಮಿಯ 'ದ್ರುವತಾರೆ' ಎಂದು ಹಿರಿಯ ಸಾಹಿತಿ ಡಾ. ವೀರಣ್ಣ ರಾಜೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨೭-೩-೨೦೧೯** ರಂದು "ವಿಶ್ವರಂಗಭೂಮಿ ದಿನಾಚರಣೆ" ಅಂಗವಾಗಿ ನಾಡೋಜ ಡಾ. ಏಣಗಿ ಬಾಳಪ್ಪ ಸ್ಮರಣಾರ್ಥ ಆಯೋಜಿಸಿದ್ದ ದತ್ತಿ ಉದ್ಘಾಟನೆ, ಶಾಂತೇಶ ವಾಚನಾಲಯಕ್ಕೆ ೫ ಕೃತಿಗಳ ಸಮರ್ಪಣೆ ಹಾಗೂ ರಂಗಗೌರವ ಸಮಾರಂಭವನ್ನು ದೀಪ ಬೆಳಗಿಸುವದರೊಂದಿಗೆ ಉದ್ಘಾಟಿಸಿ ಮಾತನಾಡಿ, 'ಬಾಳಪ್ಪನವರು "ರಂಗಭೂಮಿಯ ನಡೆದಾಡುವ ವಿಶ್ವಕೋಶ"ದಂತಿದ್ದರು. ರಂಗ ಗೀತೆಗಳ ಕಣಜವಾದ ಅವರು ಕನ್ನಡ ನಾಡು ಸಂಸ್ಕೃತಿಯ ಏಳ್ಗೆಗಾಗಿ ರಂಗಭೂಮಿಯ ಮೂಲಕ ಅಪಾರ ಕೊಡುಗೆ ನೀಡಿದ ರಂಗಭೂಮಿಯ ಸವ್ಯಸಾಚಿ ಎಂದು ಕರೆಯಲಾಗಿದೆ.

ಅವರು ಕ್ರಾಂತಿಯೋಗಿ ಬಸವೇಶ್ವರ ನಾಟಕವು ವೃತ್ತಿರಂಗಭೂಮಿಯಲ್ಲಿ ಬಾಳಪ್ಪನವರ ಹೆಸರು ಚಿರಸ್ಥಾಯಿಯಾಗಿ ಉಳಿಸುವಂತೆ ಮಾಡಿದ್ದು ಒಂದು ದಾಖಲೆ. ಪ್ರತಿ ಪಾತ್ರವನ್ನು ಅನುಭವಿಸಿ ಅಭಿನಯಿಸುವ ಕಲೆ ಅವರಲ್ಲಿ ಕರಗತವಾಗಿತ್ತು. ರಂಗ ಸನ್ಯಾಸ ಸ್ವೀಕರಿಸಿದ ಬಾಳಪ್ಪನವರು ತಮ್ಮ ಸಂಸಾರವನ್ನು ಹಾಗೂ ರಂಗ ಸಂಸಾರವನ್ನು ಸಮಚಿತ್ತದಿಂದ ಕಂಡವರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಅವರ ನಾಟಕ ಕಂಪನಿಯು ಆಶ್ರಯ ನೀಡಿತ್ತು. ಹೋರಾಟಗಾರರಿಗೆ ಬಾಳಪ್ಪನವರು ಸ್ಫೂರ್ತಿ ತುಂಬಿದ ಮಹಾನ್ ಕಲಾವಿದರಾಗಿದ್ದರು ಎಂದು ತಿಳಿಸಿದರು.

ರಂಗ ಚಿಂತಕರಾದ ಡಾ. ಬಸವರಾಜ ಜಗಜಂಪಿ ರಂಗ ಚಿಂತನೆ ಮಾಡಿ, "ಏಣಗಿ ಬಾಳಪ್ಪನವರು ತಮ್ಮ ವೃತ್ತಿ ಬದುಕಿನ ಬಹುತೇಕ ಕಾಲವನ್ನು ಚಿಕ್ಕೋಡಿ ಶಿವಲಿಂಗ ಸ್ವಾಮಿಗಳಲ್ಲಿ ಕಳೆದವರಾಗಿದ್ದರು. ಬಾಳಪ್ಪನವರು ಅವರನ್ನು ಗುರು ಸದೃಶರಾಗಿಯೇ ಕಂಡರು. ಜೀವನದಲ್ಲಿ ಎದುರಾದ ಅನೇಕ ಸಮಸ್ಯೆಗಳನ್ನು ಮೆಟ್ಟಿನಿಂತ ಸಾಧನೆ ಮಾಡಿದ ಮಹಾನ ಸಾಧಕರು. ರಂಗ ಗೀತೆಗಳನ್ನು ಧ್ವನಿಸುರುಳಿ ಮಾಡಿಸಿ, ಮುಂದಿನ ತಲೆಮಾರಿಗೂ ಅನುಕೂಲವಾಗಬೇಕೆಂಬ ಹೆಬ್ಬಯಕೆ ಹೊಂದಿದ್ದರು. ಬಾಳಪ್ಪನವರು ತಮ್ಮ ವೃತ್ತಿ ಬದುಕಿನಲ್ಲಿ ಅನೇಕ ನೋವುಗಳನ್ನು ಉಂಡರೂ ಕಲಾ ರಸಿಕರಿಗೆ ಮಾತ್ರ ನಲಿವು ನೀಡಿದವರಾಗಿದ್ದರು. ಕರ್ನಾಟಕವಷ್ಟೇ ಅಲ್ಲಾ ಮಹಾರಾಷ್ಟ್ರದಲ್ಲಿಯೂ ಸಹ ಇವರ ನಾಟಕಗಳು ಹೆಚ್ಚು ಪ್ರಸಿದ್ಧಿ ಹೊಂದಿದ್ದವು. ಸರಕಾರ ಇಂತಹ ಮೇರು ನಟನಿಗೆ ಪದ್ಮಶ್ರೀ, ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸದಿರುವುದು ವಿಷಾದನೀಯ ಎಂದು ತಿಳಿಸಿದರು.

ಇನ್ನೋರ್ವ ರಂಗಚಿಂತಕ ಡಾ. ರಾಮಕೃಷ್ಣ ಮರಾಠೆ ಮಾತನಾಡಿ, ಉತ್ತರ ಕರ್ನಾಟಕದ ಸಾಂಸ್ಕೃತಿಕ ಮನಸುಗಳು ಹಾಗೂ ಜನ ಪ್ರತಿನಿಧಿಗಳು ಏಣಗಿ ಬಾಳಪ್ಪನವರ ಹೆಸರಿನಲ್ಲಿ ರಂಗ ಮಂದಿರ ನಿರ್ಮಾಣ ಮಾಡದಿರುವುದು ಖೇದಕರ. ಬಾಳಪ್ಪನವರು ನಮ್ಮ ಸಮಾಜದ ದೊಡ್ಡ ಆಸ್ತಿ, ರಂಗ ಗೀತೆಗಳು ತಮ್ಮ ಜೀವನದ ಉಸಿರು ಎಂದು ನಂಬಿದ ಅವರು ೩೦೦ ರಂಗ ಗೀತೆಗಳನ್ನು ಧ್ವನಿ ಸುರುಳಿ ಮಾಡಿಸಿ ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಬಾಲ ನಟನಾಗಿ ಸ್ತ್ರೀ ಪಾತ್ರದಾರಿಯಾಗಿ, ಗಾಯಕರಾಗಿ ಅವರಂತೆ ಅಭಿನಯಿಸಿದ ಮತ್ತೊಬ್ಬ ಕಲಾವಿದರಿಲ್ಲ, ಅವರ ರಂಗ ಯಾತ್ರೆಯ ಶಿಖರ ತಲುಪಿಸಿದ ಕಥೆ ರೋಮಾಂಚನ, ಬಾಳಪ್ಪನವರು ಕಲಾವೈಭವ ನಾಟಕದ ಕಂಪನಿಯನ್ನು ವೈಯಕ್ತಿಕ ಲಾಭಕ್ಕಾಗಿ ಕಟ್ಟದೇ ಕಲಾಸೇವೆಗಾಗಿ ಕಟ್ಟಿದ ಸಾರ್ಥಕ ಪುರುಷ ಎಂದರು.

ಹಿರಿಯ ರಂಗಕಲಾವಿದೆಯರಾದ ಬಳ್ಳಾರಿಯ ನಾಡೋಜ ಡಾ. ಸುಭದ್ರಮ್ಮ ಮನ್ಸೂರ ಏಣಗಿ ಬಾಳಪ್ಪ ಪ್ರತಿಷ್ಠಾನ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ರಂಗಗೌರವ ಸ್ವೀಕರಿಸಿ ಮಾತನಾಡಿ, 'ಬಾಳಪ್ಪನವರ ಕಲಾವೈಭವ ನಾಟ್ಯ ಸಂಘದ ಮೂಲಕ ನನಗೆ ಬಣ್ಣದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. ನನ್ನ ಬೆಳವಣಿಗೆಗೆ ಏಣಗಿ ಬಾಳಪ್ಪನಂತವರೇ ಕಾರಣ. ಅವರ ಅನುಗ್ರಹ ಮಾರ್ಗದರ್ಶನದಿಂದಲೇ ನಾನೊಬ್ಬ ಕಲಾವಿದೆಯಾಗಿ ರೂಪಗೊಳ್ಳಲು ಕಾರಣವಾಯಿತೆಂದು ಭಾವುಕತೆ ವ್ಯಕ್ತಪಡಿಸಿ ರಂಗಗೀತೆ ಪ್ರಸ್ತುತಪಡಿಸಿದರು.

ಏಣಗಿ ಬಾಳಪ್ಪ ಪ್ರತಿಷ್ಠಾನವು ಕ.ವಿ.ವ.ಸಂಘದ ಶಾಂತೇಶ ವಾಚನಾಲಯಕ್ಕೆ ಬಾಳಪ್ಪನವರ ಜೀವನಚರಿತ್ರೆಯ ೫ ಕೃತಿ ಸಮರ್ಪಿಸಿತು. ಟ್ರಸ್ಟ್ ವತಿಯಿಂದ ಸಂಘದ ಪದಾಧಿಕಾರಿಗಳನ್ನು, ಗಣ್ಯರನ್ನು ಸನ್ಮಾನಿಸಲಾಯಿತು. ಬಾಳಪ್ಪನವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನದೊಂದಿಗೆ ಗೌರವ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಬಾಳಪ್ಪನವರ ರಂಗಜೀವನದ ಸ್ಮರಣೀಯ ದಿನಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವರಾಜ ಕುಪ್ಪಸಗೌಡರ ನಿರೂಪಿಸಿದರು. ಸತೀಶ ತುರಮರಿ ವಂದಿಸಿದರು.

೧೧೫. **ಪ್ರೊ. ಎಸ್. ಎಲ್. ಸಂಗಮ ದತ್ತಿ** : ದಾನಿಗಳು, ಪ್ರೊ. ಎಸ್.ಎಲ್. ಸಂಗಮ ಅವರ ಸಂಶೋಧನಾ ವಿದ್ಯಾರ್ಥಿಗಳು

ಓದು ಮಾನವನ ಬದುಕನ್ನು ಶ್ರೀಮಂತಗೊಳಿಸುವುದು. ಓದುವ ಹವ್ಯಾಸವುಳ್ಳವರು ಎಲ್ಲಿ ಹೋದರೂ ಸಂತೋಷದಿಂದ ಇರಲು ಸಾಧ್ಯ ಎಂದು ಪ್ರಾಧ್ಯಾಪಕ ಡಾ. ಸಂಗಮನಾಥ ಲೋಕಾಪುರ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಗ್ರಂಥಾಲಯ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಗುರುಗಳಾದ ಡಾ. ಎಸ್. ಎಲ್. ಸಂಗಮ ಅವರ ಹೆಸರಿನಲ್ಲಿ ಇರಿಸಿದ ದತ್ತಿ ಅಂಗವಾಗಿ ದಿನಾಂಕ **೨೮-೩-೨೦೧೯** ರಂದು ಆಯೋಜಿಸಿದ ಕಾರ್ಯಕ್ರಮದಲ್ಲಿ **'ಓದು ಪೂಜೆಗೆ ಸಮಾನ'** ವಿಷಯದ ಕುರಿತು ಮಾತನಾಡಿ, ಓದಿನಿಂದ ನಮ್ಮ ಶಬ್ಧ ಭಂಡಾರ ಹೆಚ್ಚಾಗಿ ಜೀವನದಲ್ಲಿ ನವೋಲ್ಲಾಸ ಉಂಟಾಗುತ್ತದೆ. ಓದುವಾಗ ಶ್ರದ್ಧೆ, ಏಕಾಗ್ರತೆ ಮುಖ್ಯ. ಲೋಕಾನುಭವ ಹಾಗೂ ವ್ಯವಹಾರಿಕ ಜ್ಞಾನಗಳು ಉಂಟಾಗಬೇಕಾದರೆ ಓದು ಅತ್ಯಗತ್ಯ. ಓದುವಾಗ ವ್ಯತಾಧಾರಕರಾಗಿ ಓದಬೇಕು. ಜೀವನದ ಎಲ್ಲ ಸಮಸ್ಯೆಗಳಿಗೆ ಓದು ದಿವ್ಯ ಔಷಧಿಯಾಗಿದೆ, ಓದುವ ಹವ್ಯಾಸ ಇಲ್ಲದವನು ಎಷ್ಟೇ ಶ್ರೀಮಂತ್ರನಾಗಿದ್ದನೂ ದರಿದ್ರನೆ ಎಂದು ಹೇಳಿದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಓದಲು ನಮಗೆ ಸಮಯವಿಲ್ಲ ಎನ್ನುವವರು ನಿಜವಾಗಿ ಆತ್ಮಹತ್ಯೆ ಮಾಡಿಕೊಂಡಂತೆ, ಬುದ್ಧಿ ವಿಕಾಸಕ್ಕೆ ಓದುವುದೇ ಸಾಧನ. ಓದುವ ಹವ್ಯಾಸ ಎಲ್ಲ ಹವ್ಯಾಸಗಳಿಗಿಂತಲೂ ಸರ್ವಶ್ರೇಷ್ಠ. ಶಿಕ್ಷಕರಾದವರು ತಮ್ಮ ವೃತ್ತಿ ಜೀವನದಲ್ಲಿ ಅಧ್ಯಾಪನದ ಜೊತೆಗೆ ಅಧ್ಯಯನ ಮಾಡುವುದು ಅತೀ ಮುಖ್ಯ ಎಂದರು.

ಅಧ್ಯಕ್ಷತೆ ವಹಿಸಿದ ಗ್ರಂಥಪಾಲಕರಾದ ಡಾ. ಮಹೇಶ ಹೊರಕೇರಿ ಮಾತನಾಡಿ, ಮನುಷ್ಯನಿಗೆ ಜೀವನ ಮೌಲ್ಯ, ಬದುಕುವ ಕಲೆ, ಮಾನವೀಯತೆ ಹಾಗೂ ಪ್ರಜಾಸತ್ತಾತ್ಮಕ ಗುಣಗಳನ್ನು ಓದಿನಿಂದ ಮಾತ್ರ ಕರಗತ ಮಾಡಿಕೊಳ್ಳಲು ಸಾಧ್ಯ. ಒಳ್ಳೆಯ ಓದುಗನಿಗೆ ಸ್ನೇಹಿತರ ಅಗತ್ಯವಿಲ್ಲ. ಬರೀ ಓದುವದು ಮುಖ್ಯವಲ್ಲ. ಓದುವಾಗ ಅರ್ಥಮಾಡಿಕೊಂಡು ಓದುವುದು ಮುಖ್ಯ ಎಂದರು.

ಗ್ರಂಥಾಲಯ ವಿಜ್ಞಾನಿಗಳಾದ ಡಾ. ಎಸ್. ಎಲ್. ಸಂಗಮ ತಮ್ಮ ಸಂಶೋಧನಾ ಶಿಷ್ಯರ ಸನ್ಮಾನಕ್ಕೆ ಪ್ರತಿಕ್ರಿಯಿಸಿ ಮಾತನಾಡಿ, ಗುರು ಪರಂಪರೆಯನ್ನು ಸ್ಮರಿಸುವ ಸಂಶೋಧನಾ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ವೇದಿಕೆಯಲ್ಲಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಉಪನ್ಯಾಸಕ ವೀರಣ್ಣ ಒಡ್ಡೀನ ನಿರೂಪಿಸಿದರು. ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ವಂದಿಸಿದರು.

೧೧೬. **ಶ್ರೀ ಆರ್. ಎಸ್. ಹೂಗಾರ ದತ್ತಿ :** ದಾನಿಗಳು, ದಿ. ಶ್ರೀಮತಿ ಶೋಭನಾ ಆರ್. ಹೂಗಾರ

ಗ್ರಾಹಕರಿಗೆ ತೃಪ್ತಿಕರವಾದ ಸೇವೆ ಒದಗಿಸುವುದೇ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ನೈಜ ಕನಸು ಎಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಚೇರಮನ್ ಎಲ್ ರವೀಂದ್ರನ್ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೩೧-೩-೨೦೧೯** ರಂದು ಆಯೋಜಿಸಿದ್ದ ಬ್ಯಾಂಕಿಂಗ್ ಕ್ಷೇತ್ರದ ಭೀಷ್ಮ ಖ್ಯಾತಿಯ ದಿ. ಆರ್. ಎಸ್. ಹೂಗಾರ ದತ್ತಿ ಅಂಗವಾಗಿ ನೀಡುವ ಪ್ರತಿಷ್ಠಿತ ಆರ್. ಎಸ್. ಹೂಗಾರ ಸೇವಾರತ್ನ ಪ್ರಶಸ್ತಿ-೨೦೧೯ ಸ್ವೀಕರಿಸಿ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಅಮೋಘ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿಗೆ ನೀಡುತ್ತಿರುವ ಈ ಪ್ರಶಸ್ತಿಯು ಅಭಿನಂದನಾರ್ಹವಾಗಿದೆ.

ಬ್ಯಾಂಕ್ ಜನಸಾಮಾನ್ಯರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಅವರ ಆರ್ಥಿಕ ಉನ್ನತಿಗಾಗಿ ೪೫ ವರ್ಷಗಳಿಂದ ಸಾರ್ಥಕ ಸೇವೆಗೈಯುತ್ತಿದೆ. ಡಿಜಿಟಲ್ ಬ್ಯಾಂಕಿಂಗ್ ಅಳವಡಿಸಿಕೊಂಡ ರಾಷ್ಟ್ರದ ಕೆಲವೇ ಕೆಲವು ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕ್ ಸಹ ಒಂದು. ಮಹಿಳಾ ಸಬಲೀಕರಣ ಹಾಗೂ ಆರ್ಥಿಕ ಸದೃಢತೆಗಾಗಿ ನಮ್ಮ ಬ್ಯಾಂಕ್ ವಿಕಾಸ್ ಶಿ ಪ್ಲಸ್ ವಿಕಾಸ್‌ಗ್ರಹ ಸ್ನೇಹಿ, ವಿಕಾಸ್ ಅನ್ನಪೂರ್ಣ ಎಂಬ ಪ್ರಗತಿಪರ ಯೋಜನೆ ಜಾರಿಗೆ ತಂದ ಮಹಿಳಾ ಸ್ನೇಹಿಯಾಗಿದೆ.

ಸತತ ಬರಗಾಲದಿಂದ ಜರ್ಜರಿತರಾದ ರೈತರ ಬಾಳಿಗೆ ಸಂಜೀವಿನಿಯಾದ ವಿಕಾಸ್ ಕೃಷಿ ಸಮೃದ್ಧ ಯೋಜನೆ ಜಾರಿಗೆ ತರಲಾಗಿದೆ. ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಜಾಗತೀಕರಣದ ಈ ಸಂದರ್ಭದಲ್ಲಿ ಹೊಸ ಆಶಾಕಿರಣವಾದ ಮೊಬೈಲ್ ಬ್ಯಾಂಕಿಂಗ್, ಇ–ಕಾಮರ್ಸ್ ಯೋಜನೆ ಜಾರಿಗೆ ತರಲಾಗಿದೆ. ಕುಗ್ರಾಮಗಳಿಗೂ ಬ್ಯಾಂಕ್ ವ್ಯವಹಾರಕ್ಕಾಗಿ ವ್ಯವಹಾರ ಪ್ರತಿನಿಧಿ ನೇಮಕ ಮಾಡಲಾಗಿದೆ. ಭವಿಷ್ಯದ ಶಕ್ತಿಯಾದ ಸೌರಶಕ್ತಿ ಬಳಕೆಗೂ ನಮ್ಮ ಬ್ಯಾಂಕ್ ಶ್ರಮಿಸುತ್ತಿದೆ. ಬ್ಯಾಂಕ್ ಕೇವಲ ಲಾಭ ಗಳಿಕೆಯ ಉದ್ದೇಶ ಹೊಂದದೇ, ಸಮುದಾಯಿಕ ಕಾರ್ಯಕ್ರಮಗಳಾದ ಮಳೆಕೊಯ್ಲು, ಪರಿಸರ ಜಾಗೃತಿ, ಜಲ ಠೇವಣಿ ಯೋಜನೆ ನಮ್ಮ ಬ್ಯಾಂಕಿನ ವಿನೂತನ ಯೋಜನೆಗಳಾಗಿವೆ.

೯ ಜಿಲ್ಲೆಗಳ ಕಾರ್ಯಕ್ಷೇತ್ರ ಹೊಂದಿದ ಬ್ಯಾಂಕ್ ೬೩೬ ಶಾಖೆಗಳನ್ನು ೨೫ ಸಾವಿರ ಕೋಟಿ ವಹಿವಾಟ, ೧೪ ಸಾವಿರ ಕೋಟಿ ಠೇವಣಿ ಹೊಂದಿ, ೧೭೩೩ ಕೋಟಿ ನಿವ್ವಳ ಸಂಪತ್ತು ಹೊಂದಿದ್ದು ಒಂದು ದಾಖಲೆ ಎಂದು ಹೇಳಿ ಇದಕ್ಕೆಲ್ಲ ಗ್ರಾಹಕರು ನೀಡಿದ ಸಹಕಾರವನ್ನು ಸ್ಮರಿಸಿದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದ ದಿಗ್ಗಜರಾದ ದಿ. ಆರ್. ಎಸ್. ಹೂಗಾರ ಎಲ್ಲರಂತೆ ಬದುಕಲಿಲ್ಲ, ಎಲ್ಲರಿಗಾಗಿ ಬದುಕಿದರು. ಅವರ ವ್ಯಕ್ತಿತ್ವದಲ್ಲಿ ಕತೃತ್ವ ಶಕ್ತಿ ಇತ್ತು. ಅವರ ಜೀವನ ಭವ್ಯವಾಗಿರದೇ ದಿವ್ಯವಾಗಿತ್ತು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ ನಿವೃತ್ತ ಪ್ರಾಚಾರ್ಯ ಪ್ರೊ. ವ್ಹಿ.ವ್ಹಿ. ಹೆಬ್ಬಳ್ಳಿ ಮಾತನಾಡಿ, ಹೂಗಾರ ಅವರು ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯರಾಗಿ ಬೆಳೆದು ಸಾಧನೆಗೈದರು. ಅವರ ಕಷ್ಟದ ಜೀವನವು ಅವರಲ್ಲಿ ಶಿಸ್ತು, ಪ್ರಾಮಾಣಿಕತೆ, ಕರ್ತವ್ಯ ಪ್ರಜ್ಞೆಗಳನ್ನು ಬೆಳೆಸಿತು. ಮಮತೆಯ ಮಾತೆಯನ್ನು ದೇವತೆಯಂತೆ ಕಂಡ ಅವರ ಹೃದಯವಂತರು ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಆರ್ಥಿಕ ತಜ್ಞ ಡಾ. ಎಸ್.ಎಸ್. ಹೂಗಾರ ಮಾತನಾಡಿ, ಹೂಗಾರವರಲ್ಲಿದ್ದ ಬದ್ಧತೆ, ಕಾರ್ಯ ತತ್ಪರತೆಗಳು ಅವರನ್ನು ಅಂತಾರಾಷ್ಟ್ರೀಯ ಖ್ಯಾತ ನಾಮರನ್ನಾಗಿಸಲು ಸಾಧ್ಯವಾಯಿತು. ತಾಯಿ ನೀಡಿದ ಒಳ್ಳೆ ಸಂಸ್ಕಾರದಿಂದ ಸುಸಂಸ್ಕೃತರಾಗಿ ಬೆಳೆದು ಸಾರ್ಥಕ ಜೀವನ ನಡೆಸಿದ ಪುಣ್ಯವಂತರು ಎಂದರು.

ದಿ. ಆರ್.ಎಸ್. ಹೂಗಾರ ಅವರ ಪುತ್ರಿ ನಮ್ರತಾ ಹೂಗಾರ ದತ್ತಿ ದಾನಿಗಳ ಪರವಾಗಿ ಮಾತನಾಡಿ ತಮ್ಮ ತಂದೆಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಹೂಗಾರ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಮೂಲಕ ಮುಂದುವರೆಸುವುದಾಗಿ ಹೇಳಿದರು. ದಿ. ಆರ್.ಎಸ್. ಹೂಗಾರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಅಗಲಿದ ಮಾನನ್ಯ ಕವಿಗಳಾದ ಬಿ.ಎ. ಸನದಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ಹಾಗೂ ಉಪನ್ಯಾಸಕ ವೀರಣ್ಣ ಒಡ್ಡೀನ, ಮಹಾಂತೇಶ ನರೇಗಲ್, ಕೆ.ಟಿ. ಭಟ್, ಎ.ಎನ್. ಮುದುಕನ್ನವರ, ಉಲ್ಲಾಸ ಗುಣಗಾ, ಜಿ.ಎಸ್. ಚಿಕ್ಕಮಠ, ಜಯಶ್ರೀ ಬೀಡೀಕರ, ಶ್ರೀದೇವಿ ತೇವರಿ, ಸೀಮಾ ಕಾಮತ್, ಎಚ್.ಎ. ಪಾಟೀಲ, ವಿ.ವಿ. ಪಾಟೀಲ, ಭೀಮಪ್ಪ ಜಾಧವ, ಮಹೇಶ ಕುಲಕರ್ಣಿ, ವಾಯ್.ಸಿ. ಬಿಜಾಪುರ, ಚನಬಸಪ್ಪ ಅವರಾಧಿ ಹಾಗೂ ಹೂಗಾರ ಅಭಿಮಾನಿಗಳು ಇದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಪರಿಚಯಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು. ಪ್ರೊ. ಅಮೃತಾ ಮಡಿವಾಳರ ನಿರೂಪಿಸಿದರು.

೧೦೭. **ಶ್ರೀಮತಿ ಮಹಾಲಿಂಗವ್ವ ನಿಂಗಪ್ಪ ಸಾವಳಗಿ ದತ್ತಿ :** ದಾನಿಗಳು, ಶ್ರೀ ರಾಜೇಂದ್ರ ಹಾಗೂ ಸುರೇಶ ಸಾವಳಗಿ ಪ್ರತಿ ವರ್ಷ ಮಾರ್ಚ ೨೭ ರಂದು ಮಹಾನ್ ಮಹಿಳೆಯರ ಬಗ್ಗೆ ಉಪನ್ಯಾಸ ಏರ್ಪಡಿಸಲು ದತ್ತಿ ಇರಿಸಿದ್ದಾರೆ.

೧೦೮. **ಶ್ರೀಮತಿ ಮಾಲಿಂಗಮ್ಮ ಶ್ರೀ ಶಾಂತವೀರಪ್ಪ ಪವಾಡಶೆಟ್ಟರ ದತ್ತಿ :** ದಾನಿಗಳು, ಮಹಾದೇವಪ್ಪ ಪವಾಡಶೆಟ್ಟರ ಪ್ರತಿ ವರ್ಷ **ಮಾರ್ಚ ೩೦** ರಂದು ತಾಯಿಯ ಕುರಿತು ಮಹಿಳಾ ಮಂಡಳಗಳಿಗೆ ಸಾಂಸ್ಕೃತಿಕ ಕಾಯಕ್ರಮ ಆಯೋಜಿಸಲು ಸಂಘದಲ್ಲಿ ದತ್ತಿ ಇರಿಸಲಾಗಿದೆ.